ಗದುಗಿನ ಭಾರತ:
ಒಂದು ಸಾಂಸ್ಕೃತಿಕ ಅಧ್ಯಯನ

ಡಾ. ದೇ. ಜವರೇಗೌಡ, ಎಂ.ಎ., ಡಿ.ಲಿಟ್.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಜನವರಿ ೧೯೭೮

ಗದುಗಿನ ಭಾರತ:
ಒಂದು ಸಾಂಸ್ಕೃತಿಕ ಅಧ್ಯಯನ

ವಿಶೇಷೋಪನ್ಯಾಸ ಗ್ರಂಥಮಾಲೆ: ೨೮

ಗದುಗಿನ ಭಾರತ:
ಒಂದು ಸಾಂಸ್ಕೃತಿಕ ಅಧ್ಯಯನ

ಡಾ. ದೇ. ಜವರೇಗೌಡ, ಎಂ.ಎ., ಡಿ.ಲಿಟ್.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಜನವರಿ ೧೯೭೮

ಪ್ರಕಾಶಕರು :
ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೨೦೦೦ ಪ್ರತಿಗಳು
ಜನವರಿ ೧೯೭೮

ಬೆಲೆ
ರೂ. ೯.೦೦ (ಉತ್ತಮ ಪ್ರತಿ)
ರೂ. ೬.೦೦ (ಸಾದಾ ಪ್ರತಿ)

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಕೃತಜ್ಞತೆಯ ಎರಡು ಮಾತು

ಯಾವುದೇ ಸಂಸ್ಕೃತಿಯಾಗಲಿ, ಅದು ದಟ್ಟವಾಗಿ ಅಭಿವ್ಯಕ್ತಗೊಳ್ಳುವ ಸಮೃದ್ಧ ಮಾಧ್ಯಮವೆಂದರೆ ಸಾಹಿತ್ಯ. ಮಾನವನ ಆಂತರಂಗಿಕ ವ್ಯಾಪಾರಗಳು ಆ ಮೂಲಕ ಹೊರಹೊಮ್ಮುವಷ್ಟು ಸ್ಪಷ್ಟವಾಗಿ ಅನ್ಯಮಾಧ್ಯಮಗಳ ಮೂಲಕ ಪ್ರಕಾಶಗೊಳ್ಳಲಾರವು. ಕರ್ನಾಟಕ ಸಂಸ್ಕೃತಿಯ ಚೈತನ್ಯ ಶಿಲಾಲೇಖ ಸಂಗೀತಾದಿ ಕಲೆಗಳ ಹಾಗೂ ನಂಬಿಕೆ ಸಂಪ್ರದಾಯಗಳ ಮೂಲಕ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿದ್ದರೂ ಅದು ಕಾವ್ಯ ಮಾಧ್ಯಮದಲ್ಲಿ ಪಾಂಕ್ತವಾಗಿ ಮತ್ತು ವ್ಯಾಪಕವಾಗಿ ಪ್ರಕಟಗೊಳ್ಳುತ್ತದೆ. ಮಾನವನ ಆತ್ಮವಿಕಾಸದ ಹೆಜ್ಜೆಗಳನ್ನಿಲ್ಲಿ ಖಚಿತವಾಗಿ ಗುರುತಿಸಬಹುದು. ಸಾಹಿತ್ಯಕೃತಿಗಳನ್ನು ನಿರ್ಲಕ್ಷಿಸಿದ ಸಾಂಸ್ಕೃತಿಕ ಇತಿಹಾಸ ರಚನೆ ಅಸಮರ್ಪಕವಾಗುತ್ತದೆ. ಅಂಥ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನ ಅಪೂರ್ಣವಾಗುತ್ತದೆ.

ಪಂಪ ನಯಸೇನ ರಾಘವಾಂಕ ನಾಗಚಂದ್ರ ನಾರಣಪ್ಪ ರತ್ನಾಕರವರ್ಣಿ ನಂಜುಂಡ ಮೊದಲಾದವರ ಕಾವ್ಯಗಳಲ್ಲಿ, ವಚನ ಸಾಹಿತ್ಯದಲ್ಲಿ ಅಂತೆಯೇ ಶಾಸನಗಳಲ್ಲಿ ಸಾಂಸ್ಕೃತಿಕ ವಿಚಾರಗಳು ದಟ್ಟವಾಗಿ ಕಂಗೊಳಿಸುತ್ತವೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಕಾವ್ಯ ಶಾಸನಗಳನ್ನು ಕೂಲಂಕಷವಾಗಿ ವ್ಯಾಸಂಗಮಾಡಿದಂತಿಲ್ಲ. ಹಿಂದಿ ಭಾಷೆಯಲ್ಲಿರುವ ವಿ. ಎಸ್. ಅಗರ್‌ವಾಲರ 'ಕಾದಂಬರಿ : ಏಕ್ ಸಾಂಸ್ಕೃತಿಕ ಅಧ್ಯಯನ' ಮತ್ತು ಬಂಗಾಳಿಯಲ್ಲಿರುವ ಸುಖಮಯ ಭಟ್ಟಾಚಾರ್ಯರ 'ಮಹಾಭಾರತ್ ಕಾಲೀನ ಸಮಾಜ್' ಎಂಬ ಗ್ರಂಥಗಳ ಮೂಲಕ ನಡೆದಿರುವಂಥ ಅಧ್ಯಯನ ಕನ್ನಡದಲ್ಲಿ ನಡೆದಿಲ್ಲವೆಂದೇ ಹೇಳಬೇಕಾಗಿದೆ.* ಇದು ಅತ್ಯಗತ್ಯವಾಗಿ ಬಹುಬೇಗನೆ ಆಗಬೇಕಾದ ಕಾರ್ಯ. ಒಬ್ಬಿಬ್ಬರಿಂದ ಮುಗಿಯುವ ಕೆಲಸವಲ್ಲ. ಯಾವುದಾದರೂ ವಿಶ್ವವಿದ್ಯಾಲಯ ಈ ಯೋಜನೆಯನ್ನು ಕೈಗೆತ್ತಿಕೊಂಡು ನಾಲ್ಕಾರು ಸಂಶೋಧಕರ ಮೂಲಕ ಕಾರ್ಯಗತಗೊಳಿಸಬೇಕಾದ್ದು ಆದ್ಯಕರ್ತವ್ಯವಾಗಿದೆ.

ಇಂಥದೊಂದು ಯೋಜನೆಯನ್ನು ಪೂರೈಸಬೇಕೆಂಬ ಬಯಕೆ ಹತ್ತಾರು ವರ್ಷಗಳಿಂದ ನನ್ನ ಮನಸ್ಸಿನ ಮೂಲೆಯಲ್ಲಿ ಕಾವುಕೂತಿತ್ತು. ಅದರ ವಿಸ್ತಾರ ವ್ಯಾಪಕತೆಗಳನ್ನು ಕುರಿತು ಆಲೋಚಿಸಿದಾಗ, ಅದು ಒಬ್ಬನ ಶಕ್ತಿಗೆ ಮೀರಿದ ಕಾರ್ಯವೆಂದು ಮನವರಿಕೆಯಾಗಿ, ಅದರ ಆಸೆಯನ್ನು ಬಿಟ್ಟಿದ್ದೂ ಆಯಿತು. ರಜತ ಮಹೋತ್ಸವ ಸಮಯದಲ್ಲಿ ಮೂರು ವಿಶೇಷೋಪನ್ಯಾಸಗಳನ್ನು ನೀಡಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯದ

* ಇಂಥ ಅಧ್ಯಯನ ಡಾ. ಎಂ. ಚಿದಾನಂದಮೂರ್ತಿಯವರಿಂದ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥದ ಮೂಲಕ ಅತ್ಯಂತ ಸಮರ್ಪಕವಾಗಿ ನಡೆದಿದೆ. ಡಾ. ತಿಪ್ಪೇರುದ್ರಸ್ವಾಮಿಯವರು ತಮ್ಮ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'ಯಲ್ಲಿ ಕಾವ್ಯಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ವಿಚಾರಗಳನ್ನು ಆನುಷಂಗಿಕವಾಗಿ ಪ್ರಸ್ತಾಪಿಸಿದ್ದಾರೆ.

ಪರವಾಗಿ ನಿರ್ದೇಶಕರೂ ಸನ್ಮಿತ್ರರೂ ಆದ ಶ್ರೀ ಚೆನ್ನವೀರಕಣವಿಯವರಿಂದ ಕೋರಿಕೆಯ ರೂಪದಲ್ಲಿ ಪ್ರೇರಣೆ ಬಂದಾಗ ನನ್ನ ಆಸೆ ಮರುಕೊಳಿಸಿತು. ಸಾಂಸ್ಕೃತಿಕ ಅಧ್ಯಯನಕ್ಕೆ ಯಾವ ಗ್ರಂಥವನ್ನಾರಿಸಿಕೊಳ್ಳಬೇಕೆಂಬ ವಿಷಯದಲ್ಲಿ ಮೊದಮೊದಲು ತುಮುಲ ಗೊಂಡಿದ್ದ ಮನಸ್ಸು ಅಂತಿಮವಾಗಿ ಗದುಗಿನ ಭಾರತದ ಕಡೆಗೆ ವಾಲಿತು.

ನನಗೆ ತಿಳಿದಮಟ್ಟಿಗೆ ಪ್ರಾಚೀನ ಕಾವ್ಯವನ್ನು ಕುರಿತ ಸಾಂಸ್ಕೃತಿಕ ಅಧ್ಯಯನ ವಿಚಾರದಲ್ಲಿ ಇದೇ ಪ್ರಥಮಪ್ರಯತ್ನ. ಆದರೆ ಇದು ತಲಸ್ಪರ್ಶಿಯೂ ಕೂಲಂಕಷವೂ ಸವಿವರವೂ ಆದ ವ್ಯಾಸಂಗವಲ್ಲ. ಮೂರು ಉಪನ್ಯಾಸಗಳ ಮಿತಿಯನ್ನು ಲಕ್ಷ್ಯದಲ್ಲಿರಿಸಿ ಕೊಂಡು, ಸ್ಥೂಲಾಂಶಗಳನ್ನೂ ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿದ ಪ್ರಬಂಧವಿದು. ಇಲ್ಲಿ ಉಲ್ಲೇಖಗೊಂಡಿರುವ ಸಾಂಸ್ಕೃತಿಕ ಸಂಗತಿಗಳಲ್ಲಿ ವ್ಯಾಸನದೆಷ್ಟು, ಕುಮಾರವ್ಯಾಸನ ದೆಷ್ಟು ಎಂಬ ತೌಲನಿಕ ತಾರ್ಕಣೆಯ ವಿಧಾನದ ನಿರ್ಣಯದ ಕಡೆಗೆ ಗಮನ ಹರಿಸಿಲ್ಲ. ಮೂಲಭಾರತದಲ್ಲಿ ಉಕ್ತಗೊಂಡಿರುವ ಅನೇಕ ವಿಷಯಗಳು ಕನ್ನಡ ಭಾರತದಲ್ಲಿ ಅನು ವಾದಗೊಂಡಿವೆಯೆಂಬ ಅರಿವು ಲೇಖಕನಿಗಿದೆ. ಆದರೆ ನಾರಣಪ್ಪನ ಕಾಲದ ಸಮಾಜ—ಅಥವಾ ಆ ಸಮಾಜದ ಒಂದು ಭಾಗ—ಅಲ್ಲಿ ನಿರೂಪಣೆಗೊಂಡಿರುವ ರೂಢಿ ಸಂಪ್ರ ದಾಯ ನಂಬಿಕೆಗಳಿಗೆ ತನ್ನ ಅಂಗೀಕಾರದ ಮುದ್ರೆಯೊತ್ತಿದೆಯೆಂಬ ಪೂರ್ವಸಿದ್ಧಾಂತ ದೊಡನೆ ಪ್ರಬಂಧ ಮೊದಲಾಗುತ್ತದೆ. ಸಾಂಗ್ರಾಮಿಕ ಸಂಸ್ಕೃತಿಗೆ ಸಂಬಂಧಿಸಿದ ವಿವರ ಗಳನ್ನಿಲ್ಲಿ ಸಂಪೂರ್ಣವಾಗಿ ಕೈಬಿಟ್ಟಿದೆ. ಅವುಗಳ ಅಧ್ಯಯನವೇ ಒಂದು ಸುಪುಷ್ಟ ಪ್ರಬಂಧವಾದೀತು. ಇಲ್ಲಿ ಸಾಮಗ್ರ್ಯ ಸಿದ್ಧಿಸದಿದ್ದರೂ, ಮುಂದಿನ ಪ್ರಯತ್ನಗಳಿಗೆ ಇದು ನಾಂದಿಯಾದೀತೆಂದು ಆಶಿಸಲಾಗಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ೧೯೭೬ರ ಸೆಪ್ಟೆಂಬರ್ ೧೦, ೧೧, ೧೨ರಂದು ನಡೆದ ಮೂರು ದಿನದ ಉಪನ್ಯಾಸಗಳಿಗೆ ಕ್ರಮವಾಗಿ ಶ್ರೀ ಪಾಟೀಲ ಪುಟ್ಟಪ್ಪ, ಡಾ. ಎಂ. ಎಸ್. ಸುಂಕಾಪುರ ಮತ್ತು ಡಾ. ಬೆಟಗೇರಿ ಕೃಷ್ಣಶರ್ಮರು ಅಧ್ಯಕ್ಷಸ್ಥಾನದಲ್ಲಿದ್ದು ಪ್ರೋತ್ಸಾಹಕರವಾದ ಮಾತುಗಳನ್ನಾಡಿದರು. ಊರಿನ ವಿದ್ಯಾರ್ಥಿ ವೃಂದವಲ್ಲದೆ, ಗಣ್ಯವಿದ್ವಾಂಸರು ಪ್ರತಿದಿನವೂ ಹಾಜರಿದ್ದುದರಿಂದ ಈ ತೆರನ ಅಧ್ಯಯನ ಅವರಿಗೊಪ್ಪಿಗೆಯಾಯಿತೆಂದು ನಂಬಿಕೊಂಡಿದ್ದೇನೆ. ಶ್ರೀ ಕೆ. ಎಸ್. ದೇಶಪಾಂಡೆ ಮತ್ತು ಡಾ. ಎಂ. ಎಂ. ಕಲಬುರ್ಗಿಯವರು ನೀಡಿದ ಸಹಕಾರ ಎಂದೂ ಮರೆಯುವಂಥದಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಕರ್ನಾಟಕ ಸಂಸ್ಕೃತಿಯೇ ಮೂರ್ತಿವೆತ್ತಂತಿರುವವರೂ ಮಾನ್ಯ ಮಿತ್ರರೂ ಕುಲಪತಿಗಳೂ ಆದ ಡಾ|| ಆರ್. ಸಿ. ಹಿರೇಮಠರವರು ಕೊನೆಯದಿನ ಸಭೆ ಯಲ್ಲಿ ಉಪಸ್ಥಿತರಿದ್ದು ಈ ರೀತಿಯ ವ್ಯಾಸಂಗದ ಅಗತ್ಯತೆಯನ್ನು ಒತ್ತಿ ಹೇಳುವುದರ ಮೂಲಕ ನನ್ನ ಪ್ರಯತ್ನವನ್ನು ಮೆಚ್ಚಿಕೊಂಡರು. ಪ್ರೀತಿಪೂರ್ವಕವಾದ ಒತ್ತಾಯದಿಂದ ಭಾಷಣಮಾಡಿಸಿ, ಈ ಪ್ರಬಂಧ ಬಹುಬೇಗನೆ ಮುದ್ರಣಗೊಳ್ಳಲು ಸರ್ವಪ್ರಯತ್ನವನ್ನು ಮಾಡಿದ ವರಕವಿಗಳೂ ಸ್ನೇಹಶೀಲರೂ ಆದ ಶ್ರೀ ಚೆನ್ನವೀರಕಣವಿಯವರ ನಿರ್ವ್ಯಾಜಾ ಸಕ್ತಿ ಅಪೂರ್ವವಾದುದು. ಈ ಎಲ್ಲ ಮಹನೀಯರಿಗೆ ಮತ್ತು ಮಾತೃಸ್ಥಾನದಲ್ಲಿರುವ

ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ನನ್ನ ಅನಂತಾನಂತ ವಂದನೆಗಳೂ ಗೌರವವೂ ಸಲ್ಲಬೇಕಾಗಿದೆ.

ಎಂದಿನಂತೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಟೈಪಿಸ್ಟರಾದ ಶ್ರೀ ತ. ಚಿ. ಚಲುವೇಗೌಡರು ಗೊಣಗಿಲ್ಲದೆ ಪ್ರೀತ್ಯುತ್ಸಾಹಗಳಿಂದ ಅತ್ಯಂತ ಶೀಘ್ರವಾಗಿ ತಪ್ಪಿಲ್ಲದಂತೆ ನನ್ನ ಈ ಪ್ರಬಂಧವನ್ನು ಟೈಪು ಮಾಡಿಕೊಟ್ಟರು. ಇಷ್ಟು ಸುಂದರವಾಗಿ ಟೈಪುಮಾಡುವ ಜನ ವಿರಳ. ಅಂದವಾದ ಮುದ್ರಣಕ್ಕೆ ಹೆಸರಾದ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರು ಯಾವಾಗಲೂ ನನ್ನ ಬಗ್ಗೆ ವಿಶೇಷಾದರವುಳ್ಳವರಾಗಿ, ನನ್ನ ಕೆಲಸಕ್ಕೆ ಆದ್ಯತೆ ನೀಡುತ್ತ ಬಂದಿದ್ದಾರೆ. ಈ ಇಬ್ಬರು ಮಿತ್ರರ ಉಪಕಾರವನ್ನು ಹೃತ್ಪೂರ್ವಕವಾಗಿ ನೆನೆಯುತ್ತೇನೆ.

ಪ್ರಾಧ್ಯಾಪಕ ಭವನ ೧
ಮಾನಸಗಂಗೋತ್ರಿ, ಮೈಸೂರು **ದೇ. ಜವರೇಗೌಡ**
ಜನವರಿ ೧, ೧೯೭೭

ಪರಿವಿಡಿ

೧. **ಪ್ರವೇಶ** ೧-೨೨

ಗದುಗಿನ ಭಾರತ–ಮಹಾಭಾರತ, ಇದು ಮಹಾಕಾವ್ಯ, ಚಾರು- ಕವಿತೆಯ ಬಳಕೆಯಲ್ಲ, ಕವಿ ಸಾಮಾಜಿಕ ವ್ಯಕ್ತಿ, ಸಾಹಿತ್ಯದ ವ್ಯಾಪಕತೆ, ಸಂಸ್ಕೃತಿಯ ಸ್ವರೂಪ ಮತ್ತು ವ್ಯಾಪಕತೆ

೨. **ರಾಜಕೀಯ ಸಂಸ್ಕೃತಿ** ೨೩-೫೩

ಕ್ಷಾತ್ರಧರ್ಮ, ರಾಜಕೀಯ ಧರ್ಮ, ಯುದ್ಧಕಲೆ, ಕೆಲವು ರಾಜ ಕೀಯ ವಿಚಾರಗಳು, ಋಷಿಗಳ ದೃಷ್ಟಿಯಲ್ಲಿ ರಾಜಕೀಯ, ನೃಪರ ಗುಣಶೀಲಗಳು

೩. **ಮತೀಯ ಸಂಸ್ಕೃತಿ** ೫೪-೮೫

ಜಾತಿಸಮಸ್ಯೆ, ಬ್ರಾಹ್ಮಣರ ಅಗ್ಗಳಿಕೆ, ಮತಧರ್ಮ ಸಮನ್ವಯ, ಭಕ್ತಿಯ ಸ್ವರೂಪ, ದೈವ–ವಿಧಿ, ಕರ್ಮ, ವಿಧಿ, ಪೌರುಷವಾದ, ಧರ್ಮ–ನ್ಯಾಯ

೪. **ಸಾಮಾಜಿಕ ಸಂಸ್ಕೃತಿ** ೮೬-೧೪೮

ಸಿರಿತನ–ಬಡತನ, ಅರಿಷಡ್ವರ್ಗಗಳು, ಛಲ–ಸ್ವಾಭಿಮಾನ–ಆತ್ಮಗೌರವ, ಸತ್ಯ, ಅಹಿಂಸೆ, ಕರುಣೆ, ಪರಪೀಡೆ, ದಾನ, ಕ್ಷಮೆ, ಸ್ನೇಹ, ಕೃತಜ್ಞತೆ, ಪರನಿಂದೆ–ಪರಸ್ತುತಿ, ವಿನಯ, ಇಂಗಿತಜ್ಞತೆ, ಸಹನೆ, ಆತ್ಮಪ್ರತ್ಯಯ, ಸಾಧಾರಣ ನೀತಿ, ಸಂಬಂಧಗಳು, ಪತಿ–ಸತಿ, ಪುತ್ರವಾತ್ಸಲ್ಯ, ಭ್ರಾತೃ ವಾತ್ಸಲ್ಯ, ಗುರುಹಿರಿಯರು, ಸ್ವಾಮಿ–ಭೃತ್ಯ, ಜೋಳದ ಪಾಳಿ, ಸ್ತ್ರೀ ಸ್ವಾತಂತ್ರ್ಯ, ಸಹಗಮನ, ಬಹುಪತ್ನೀಕತ್ವ, ಲೈಂಗಿಕ ಸಂಬಂಧ ಹಾಗೂ ಸಂತಾನ ಪ್ರಾಪ್ತಿ, ವಿವಾಹ, ಸಭಾಸ್ಥಾನ, ವಿವಿಧ ವೃತ್ತಿಗಳು–ವೃತ್ತಿ ದ್ವೇಷ, ಕೃಷಿ, ವಿದ್ಯಾಭ್ಯಾಸ, ಆಟಪಾಟಗಳು, ಬಯಲಾಟ, ಉಡುಗೆ– ತೊಡುಗೆಗಳು, ಆಹಾರ ಪದ್ಧತಿ, ನಂಬಿಕೆಗಳು, ಕನಸುಗಳು, ಆಣೆ– ಮಂತ್ರ–ಮಾಟ–ಕ್ಷುದ್ರ ದೇವತೆಗಳು, ಪವಾಡಗಳು, ನಡತೆ

೫. **ಭಾಷಿಕ ಸಂಸ್ಕೃತಿ** ೧೪೯-೧೫೧

೬. **ಉಪಸಂಹಾರ** ೧೫೨-೧೫೩

ಪ್ರವೇಶ ೧

ಗದುಗಿನ ಭಾರತ—ಮಹಾಭಾರತ

ಕುಮಾರವ್ಯಾಸನೆಂದು ಪ್ರಕೀರ್ತಿತನಾಗಿರುವ ನಾರಣಪ್ಪ ಬಹುಶ್ರುತನಾದ ಮಹಾಕವಿಯೂ ಅಹುದು, ಸರ್ವದರ್ಶನ ಸಮನ್ವಯಾಚಾರ್ಯನಾದ ಯೋಗೀಂದ್ರನೂ ಅಹುದು. ಅವನು ದಾರ್ಶನಿಕನಾಗಿ, ಸಾಧಕನಾಗಿ ಲೋಕಜೀವನದ ಉದ್ದಗಲಗಳನ್ನು ಆಳ ಎತ್ತರಗಳನ್ನು ಕಂಡವನು ; ಲೌಕಿಕ ಮತ್ತು ಪಾರಮಾರ್ಥಿಕ ಮೌಲ್ಯಗಳ ಸಾಮರಸ್ಯ ಸಾಧನೆಗಾಗಿ ತನ್ನ ಯೌಗಿಕ ಮತ್ತು ಕಾವ್ಯಶಕ್ತಿಗಳನ್ನು ಅತ್ಯಂತ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡವನು ; ಲೌಕಿಕ ಮತ್ತು ಧಾರ್ಮಿಕ ಜೀವನಗಳನ್ನು ಬಿಡಿಬಿಡಿಯಾಗಿ ನೋಡದೆ, ಇಡಿ ಇಡಿಯಾಗಿ ದರ್ಶಿಸಿ, ಅವೆರಡೂ ಒಂದೇ ಜೀವನದ ಎರಡು ಮುಖಗಳೆಂಬಂತೆ ಅವುಗಳ ಸಾಮಗ್ರ್ಯವನ್ನು ಕೃತಿಯಲ್ಲಿ ಕಂಡುಕೊಂಡ ಕ್ರಾಂತದರ್ಶಿ ಋಷಿಕವಿಯವನು. ಹನ್ನೆರಡನೆಯ ಶತಮಾನದ ಬಹುಮುಖ ಕ್ರಾಂತಿಯ ಕಾಮಧೇನುವಿನ ಪೀಯೂಷ ಪಾನದಿಂದ ಪುಷ್ಟಿಗೊಂಡ ಜನಪ್ರಿಯ ಕವಿಸಾರ್ವಭೌಮನವನು. ರಾಜಾಸ್ಥಾನದ ದಂತಗೋಪುರದಲ್ಲಿ ಬಂಧಿತನಾಗದೆ, ಜನಜೀವನದಲ್ಲಿ ಲೀಲಾಜಾಲವಾಗಿ ಸ್ವತಂತ್ರವಾಗಿ ವಿಹರಿಸಿ, ನಿಸರ್ಗವ್ಯಾಪಾರಗಳನ್ನು ಬಹುಸೂಕ್ಷ್ಮ ಹಾಗೂ ಪೂರ್ಣದೃಷ್ಟಿಯಿಂದ ಈಕ್ಷಿಸಿ, ಭಕ್ತಿಪ್ರವಾಹದಲ್ಲವಗಾಹಿಸಿದುದರ ಪರಿಣಾಮವಾಗಿ ಮೂಡಿದ ದರ್ಶನವನ್ನವನು ತನ್ನ ಕಾವ್ಯದಲ್ಲಿ ಸರ್ವಜನಗ್ರಾಹ್ಯವಾಗುವಂತೆ ವಿವರಿಸಿದ್ದಾನೆ. ಪರಂಪರೆಯಿಂದ ಪಾರಾಗದೆ, ಪ್ರಗತಿಗೆ ವಿಮುಖನಾಗದೆ, ಎರಡರ ಪ್ರಯೋಜನವನ್ನು ಹದವರಿತು ಬಳಸಿಕೊಂಡ ಸಮನ್ವಯ ಕವಿ. ತಾನು ಕಂಡ ಬದುಕಿನ ಸತ್ಯವನ್ನು ಮೂರ್ತಗೊಳಿಸುವಲ್ಲಿ ಮಹಾಭಾರತದ ಕಥೆ ಅವನಿಗೆ ಅನುಕೂಲವಾಗಿ ತೋರುತ್ತದೆ. ಗೀತೋಪನಿಷತ್ತು ಪುರಾಣಾಗಮಗಳ, ಶುಕ್ರಕಾಮಂದಕಾದಿ ನೀತಿಶಾಸ್ತ್ರಗಳ, ಕಾವ್ಯನಾಟಕಾದಿಗಳ ವ್ಯಾಸಂಗದಿಂದ ಫಲಿತವಾದ ಜ್ಞಾನ, ಸಾಮಾಜಿಕ ದರ್ಶನದಿಂದ ಲಬ್ಧವಾದ ಲೋಕಾನುಭವ, ಮತ್ತು ಧ್ಯಾನಚಿಂತನಗಳ ಫಲವಾಗಿ ಸಂಕಲಿತವಾದ ತಾತ್ವಿಕತೆ ಮತ್ತು ಅಂತರ್ದೃಷ್ಟಿಗಳು ಹಳೆಯ ಕತೆಯನ್ನು ನವೀಕರಿಸಿವೆ. ಆ ಕತೆ ಜನತೆಯ ಮಹಾಮಾನಸ ಗರ್ಭದಲ್ಲಿ ನಿರಂತರವಾಗಿ ರೂಪಾಂತರಗೊಳ್ಳುತ್ತ ಆಯಾಯ ಯುಗದ ಆಶೋತ್ತರಗಳ ನಿರೂಪಣೆಯ ಮಾಧ್ಯಮವಾಗುವುದರ ಮೂಲಕ ನವ್ಯೋನವವಾಗುತ್ತ, ಮಹಾಕವಿಗಳ ಪ್ರತಿಭಾದಾನದಿಂದ ಆಗಾಗ್ಗೆ ಕಾಯಕಲ್ಪವನ್ನು ಪಡೆಯುತ್ತ, ಚಿರಂತನ ಜೀವನವಾಹಿನಿಯಾಗಿ ಸಾಗುತ್ತಿದೆ. ಎರಡು ಸಾವಿರ ವರ್ಷಗಳಿಂದ ಭಾರತೀಯರು ಅಲ್ಲಿಯ ಪಾತ್ರಗಳಲ್ಲಿ

ತಮ್ಮ ಆರಾಧ್ಯಮೂರ್ತಿಗಳನ್ನೂ, ಅಲ್ಲಿಯ ಘಟನಾವಳಿಗಳಲ್ಲಿ ಮಾನವ ಜೀವನದ ಮಹಾ ಪ್ರಸ್ಥಾನವನ್ನೂ, ಅದು ಸಾರುವ ಸಂದೇಶದಲ್ಲಿ ಬದುಕಿಗೆ ಬೇಕಾಗಿರುವ ಪೋಷಕದ್ರವ್ಯ ವನ್ನೂ ಕಾಣುತ್ತಿದ್ದಾರೆ. ಸ್ಥಿತಿಸ್ಥಾಪಕ ಸಾಮರ್ಥ್ಯದ ಮಹತ್ತಿನಿಂದಾಗಿ, ಅದು ವಿವಿಧಾಭಿ ರುಚಿ ಸಂಸ್ಕಾರಗಳ ಜನರ ಮನೋಧರ್ಮವನ್ನು ಪ್ರತಿಬಿಂಬಿಸಬಲ್ಲ ರಾಷ್ಟ್ರೀಯ ಕಾವ್ಯವಾಗು ತ್ತದೆ. ಸಮಕಾಲೀನತೆಯ ಮುದ್ರೆಯನ್ನೊತ್ತಿ, ತನ್ನ ಧ್ಯೇಯಾಸಕ್ತಿಗಳನ್ನು ನಿರೂಪಿ ಸಲನುಕೂಲವಾಗುವಂತೆ ಪಾತ್ರ ವಸ್ತು ಕ್ರಿಯೆಗಳನ್ನು ತಕ್ಕಮಟ್ಟಿಗೆ ಮಾರ್ಪಡಿಸಿಕೊಳ್ಳ ಬಹುದಾದ್ದರಿಂದ ಹಳತಿನಲ್ಲಿ ಹೊಸತನ್ನು ಸಂಗಮಗೊಳಿಸುವ ಸಾಧ್ಯತೆಯಿದ್ದುದರಿಂದ ನಾರಣಪ್ಪ ತನ್ನ ಕಾವ್ಯಕ್ಕೆ ಹಳೆಯ ಕತೆಯನ್ನಾರಿಸಿಕೊಳ್ಳುತ್ತಾನೆ.

ದಾಯಾದಿ ಕಲಹವೇ ಮಹಾಭಾರತದ ವಸ್ತು. ಉತ್ತಮ ಧರ್ಮದ ಸ್ವರೂಪವನ್ನು ನಿರೂಪಿ ಸುವುದೇ ಆ ಕಾವ್ಯದ ಮುಖ್ಯೋದ್ದೇಶ. "ಧರ್ಮಲಾಭಾತ್ ಪರಂನಸ್ಯಾತ್ ತಸ್ಮಾತ್ ಧರ್ಮಂ ಚರ ಉತ್ತಮಂ" ಎಂಬುದೇ ಅದರ ಆದೇಶ. ಅದು ಐಹಿಕ ಸುಖವನ್ನು ನಿರ್ಲಕ್ಷಿಸಿ, ಕಾಣದ ಪಾರಲೌಕಿಕ ಸುಖದ ಕಡೆಗೆ ಮಾತ್ರ ಜನಮನವನ್ನು ಸೆಳೆಯುತ್ತದೆಂದು ಭಾವಿಸಬೇಕಾ ಗಿಲ್ಲ. ಪುರುಷಾರ್ಥಗಳಲ್ಲಿ ಕಾಮಾರ್ಥಗಳಿಗೂ ಉಚಿತಸ್ಥಾನವುಂಟು. ಸುಖದ ಅಪೇಕ್ಷೆಯೇ ಕಾಮ. ಮಾನವನ ಕ್ರಿಯಾಶೀಲತೆಗೆ ಅದೇ ಮೀಟು. ಸ್ಫೂರ್ತಿ. ಅದರಿಂದಾಗಿ ಲೋಕವ್ಯವಹಾರಗಳು ನಡೆಯುತ್ತವೆ. ಅವುಗಳ ಚಾಲನೆಗೆ ಸೌಕರ್ಯಗಳು ಬೇಕು, ಧನಕನಕ ಗಳು ಬೇಕು. ಇವನ್ನು ಧರ್ಮದ ಮೂಲಕ ಗಳಿಸಬೇಕು. ಅಧರ್ಮದಿಂದ ಗಳಿಸಿದ್ದೆಲ್ಲ ಕ್ಲೇಶದಾಯಕವಾಗುತ್ತದೆ. ಧರ್ಮದ ಹದ್ದಿನೊಳಗೆ ಗಳಿಸಿದ ಅರ್ಥವಾಗಲಿ, ಅಪೇಕ್ಷಿಸಿದ ಕಾಮವಾಗಲಿ ನಿಶ್ರೇಯಸಕ್ಕೆ ಮಾರ್ಗವಾಗುತ್ತದೆ. ಧರ್ಮಸ್ವರೂಪ ವಿವರಣೆ ಕಠಿನವಾದ ಸಂಗತಿ. ಕಾಲ, ದೇಶ, ಪರಿಸರಗಳು ಅದನ್ನು ರೂಪಿಸುತ್ತವೆ, ನಿರ್ಧರಿಸುತ್ತವೆ. ಅನೇಕ ಶಾಖೋಪಶಾಖೆಗಳಿರುವ ಮಹಾವೃಕ್ಷವದು. ಸಮಾಜಜೀವನ ಬಹು ಸಂಕೀರ್ಣ ವಾದುದು. ಅದರಲ್ಲಿ ಅನೇಕ ಸಂಸ್ಥೆ ವ್ಯವಸ್ಥೆಗಳಿವೆ, ಕಟ್ಟುಪಾಡುಗಳಿವೆ, ರೀತಿನೀತಿಗಳಿವೆ, ಆಕಾಂಕ್ಷೆ ಆಸಕ್ತಿಗಳಿವೆ; ಆದ್ದರಿಂದ ತಂದೆಯ ಧರ್ಮ ಬೇರೆ, ಮಗನ ಧರ್ಮ ಬೇರೆ; ರಾಜನ ಧರ್ಮ ಬೇರೆ; ಸಚಿವನ ಧರ್ಮ ಬೇರೆ; ಇಂತೆಯೇ ಭೃತ್ಯಭರ್ತೃಸಂಬಂಧ, ಪತಿಪತ್ನಿ ಸಂಬಂಧ, ಗುರುಶಿಷ್ಯ ಸಂಬಂಧ ಭಿನ್ನವಾಗುತ್ತವೆ. ಇದರಿಂದಾಗಿ ಧರ್ಮ ಸಾಮಾನ್ಯಧರ್ಮ, ವರ್ಣಾಶ್ರಮಧರ್ಮ, ಆಪದ್ಧರ್ಮ, ರಾಜಧರ್ಮ, ಮೋಕ್ಷಧರ್ಮ ಎಂದು ಮುಂತಾಗಿ ನಾನಾ ರೂಪಗಳನ್ನು ಪಡೆಯುತ್ತದೆ. ಪ್ರತಿಯೊಬ್ಬರೂ ತಂತಮ್ಮ ಧರ್ಮವನ್ನು ನಿಷ್ಠೆ ಯಿಂದ ಪರಿಪಾಲಿಸಿದ್ದಾದರೆ, ಸಮತೋಲನ ಸಹಕಾರಗಳು ಸಮನಿಸಿ, ಲೋಕದಲ್ಲಿ ಶಾಂತಿ ನೆಲೆಗೊಳ್ಳುತ್ತದೆ. ಧರ್ಮದಂತೆ ಸತ್ಯಸ್ವರೂಪನಿರ್ಣಯವೂ ತೊಡಕಿನ ಸಮಸ್ಯೆಯಾಗು ತ್ತದೆ. ದುಷ್ಟ ವಿನಾಶ ಸಾಧ್ಯವಾಗುವುದಾದರೆ ಸುಳ್ಳು ಹೇಳಬಹುದೆ? ಆತ್ಮರಕ್ಷಣೆಗಾಗಿ ಅವಿತುಕೊಂಡಿರುವ ಸಜ್ಜನನ ಸುಳಿವನ್ನು ದುಷ್ಟನಿಗೆ ತಿಳಿಸದಿದ್ದರೆ ಅಸತ್ಯವಾಗುತ್ತದೆಯೇ? ದುಷ್ಟರನ್ನು ಮೋಸದಿಂದ ಮುಗಿಸುವುದು ಒಳ್ಳೆಯದೋ ಕೆಟ್ಟದ್ದೋ? ಪಶುವಿನ ಮಾಂಸದ ತುಣುಕೊಂದನ್ನು ಮೆದ್ದರೆ ಅಥವಾ ಯಾರೋ ಕೊಂದು ಸಿದ್ಧಪಡಿಸಿದ ಮಾಂಸವನ್ನು ಧರ್ಮ

ವ್ಯಾಧನಂಥವರು ಹೋರಾಟಮಾಡಿದರೆ ಅಹಿಂಸೆಯ ಫಲ ದೊರಕುತ್ತದೆಯೆ? ಇಂಥ ಸಮಸ್ಯೆಗಳು ಪ್ರಾಯಶಃ ಆಗಲೂ ಇದ್ದಂಥವು, ಮುಂದೆಯೂ ಮನುಷ್ಯನನ್ನೆದುರಿಸುವಂಥವು. ದಾನದಿಂದ ಆರ್ಥಿಕ ಸಮತೋಲನ ಸಾಧ್ಯ. ಶ್ರೀಮಂತ ತನ್ನ ಕುಟುಂಬಕ್ಕೆ ಬೇಕಾದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ದಾನಮಾಡಿದ್ದಾದರೆ ಸಮಾಜ ಕ್ಷೋಭೆಗೊಳಗಾಗುವುದಿಲ್ಲ. ಅರಿಷಡ್ವರ್ಗಗಳ ದಮನದಿಂದ, ಆಶಾತ್ಯಾಗದಿಂದ, ಬ್ರಹ್ಮಚರ್ಯದಿಂದ, ಶಮದಮಧೃತಿಕ್ಷಮಾದಿಗುಣಗಳಿಂದ, ನಿಷ್ಕಾಮ ಕರ್ಮದಿಂದ ವ್ಯಕ್ತಿ ಹಾಗೂ ಸಮಾಜಕ್ಕೆ ಒಳಿತಾಗುತ್ತದೆ. ಸಮಷ್ಟಿಯ ಶ್ರೇಯಸ್ಸಿಗಾಗಿ ವ್ಯಕ್ತಿಹಿತವನ್ನು ಬಲಿಗೊಡುವುದು ತಪ್ಪಾಗದು.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ತ್ಯಜೇತ್ ಕುಲಂ
ಕುಲಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್

ಇಂಥ ಮೌಲ್ಯಗಳ ನಿರೂಪಣೆ ಮಹಾಭಾರತದಲ್ಲಿ ಹೆಜ್ಜೆ ಹೆಜ್ಜೆಗೂ ಸುಳಿಯುತ್ತದೆ. ಅವುಗಳ ನಿರ್ಣಯಕ್ಕೆ ಅಲ್ಲಿಯ ಪಾತ್ರಗಳು ಸಾಧಕವಾಗಿವೆ. ಇಂತೆಡೆಯಲ್ಲೆಲ್ಲ ಶ್ರೀಕೃಷ್ಣನ ಪಾತ್ರ ಬಹು ಮಹತ್ವದ್ದಾಗಿರುತ್ತದೆ.

ಅಲೌಕಿಕ ಮತ್ತು ಧಾರ್ಮಿಕ ವಿಷಯಗಳನ್ನು ಏಕಾಖಂಡವಾಗಿ ಗ್ರಹಿಸಿ, ಏಕತ್ರ ನಿರೂಪಿಸಲು ರಾಮಾಯಣದ ಕಥೆಗಿಂತ ಮಹಾಭಾರತದ ಕಥೆ ಹೆಚ್ಚು ಸಮವಾಗಿರುವುದರಿಂದ ನಾರಣಪ್ಪ ಅದನ್ನಾರಿಸಿಕೊಂಡಿರಬೇಕು. ಮಹಾಭಾರತವನ್ನು ಇದ್ದಿದ್ದಂತೆ ಭಾಷಾಂತರ ಮಾಡುವುದು ಅವನ ಉದ್ದೇಶವಲ್ಲ. ಅವನಂಥ ಪ್ರತಿಭಾವಂತ ಕವಿಗೆ ಅಂಥ ಪ್ರಯತ್ನ ತಕ್ಕುದೂ ಅಲ್ಲ. “ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?” ಕಥಾವಸ್ತು ಮಡಕೆಗೆ ಮಣ್ಣಿದ್ದಂತೆ, ಶಿಲ್ಪಕ್ಕೆ ಶಿಲೆಯಿದ್ದಂತೆ ಕಾರಣವಸ್ತುವಷ್ಟೆ. ವಾಲ್ಮೀಕಿ ವ್ಯಾಸರಿಗಿಂತ ಮೊದಲೇ ರಾಮಾಯಣ ಭಾರತ ಕಥೆಗಳಿದ್ದುವು. ಷೇಕ್ಸ್‌ಪಿಯರ್, ಮಿಲ್ಟನ್ ಕವಿಗಳು ತಮ್ಮ ನಾಟಕಕಾವ್ಯಗಳಿಗೆ ಕಚ್ಚಾ ಸಾಮಗ್ರಿಯನ್ನು ಬೇರೆ ಆಕರಗಳಿಂದ ಪಡೆದುಕೊಂಡದ್ದುಂಟು. ಹೋಮರ್ ತನ್ನ ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳಿಗೆ ವಸ್ತುವನ್ನು ತಾನೇ ಸೃಷ್ಟಿಸಿದ್ದಲ್ಲ. ಅದನ್ನು ಮೊದಲೇ ಸಮಾಜ ಸೃಷ್ಟಿಸಿತ್ತು. ಸಾಹಿತ್ಯದ ವಸ್ತುವನ್ನು ಸಿದ್ಧಪಡಿಸಿದ್ದು ಲೋಕ; ಸಾಹಿತಿ ಅದನ್ನು ಗುರುತಿಸುತ್ತಾನೆ; ತನ್ನ ಪ್ರತಿಭೆಯನ್ನು ಸೂರೆಗೊಂಡು ಅವನು ಅದಕ್ಕೊಂದು ಕಲಾಸ್ವರೂಪವನ್ನು ದಾನಮಾಡುತ್ತಾನೆ. ಆ ಕಲೆಯ ಮಹತ್ತಿನಿಂದಾಗಿ ವಸ್ತು ಹಳೆಯದಾದರೂ, ಅದೊಂದು ನೂತನ ಕೃತಿಯೆಂಬಂತೆ ರಾರಾಜಿಸುತ್ತದೆ. ಪ್ರತಿಯೊಬ್ಬ ಮಹಾ ಕವಿಯೂ ಆ ಆ ಯುಗದ ಹಾಗೂ ಸಮಾಜದ ಶಿಶು, ಪ್ರತಿನಿಧಿ ಅಂತೆಯೇ ನಾಯಕ. ಆದ್ದರಿಂದ ವ್ಯಕ್ತಿತ್ವ ವಿಕಾಸದಲ್ಲಿ, ಮನೋಧರ್ಮದಲ್ಲಿ, ಧ್ಯೇಯಾದರ್ಶಗಳಲ್ಲಿ, ಒಲವುನಿಲವುಗಳಲ್ಲಿ, ಇಷ್ಟಾನಿಷ್ಟಗಳಲ್ಲಿ ಒಬ್ಬೊಬ್ಬರೂ ಮತ್ತೊಬ್ಬರಿಂದ ತೀರ ಭಿನ್ನ. ಇದರಿಂದಾಗಿ ಅವರು ಬಳಸಿಕೊಳ್ಳುವ ವಸ್ತು ಒಂದೆಯಾದರೂ, ದೃಷ್ಟಿ ಭಿನ್ನವಾದ್ದರಿಂದ ಸೃಷ್ಟಿಯೂ ವಿಭಿನ್ನವಾಗಬೇಕಾದ್ದು ಸಹಜ. ಈ ವಿಭಿನ್ನತೆ ಪಾತ್ರರಚನೆಯಲ್ಲಿ, ಕಥಾ ಸಂವಿಧಾನದಲ್ಲಿ, ನೂತನ ಪ್ರಕರಣ

ನಿರ್ಮಾಣದಲ್ಲಿ, ಅಲಂಕಾರಾದಿ ಕಾವ್ಯಲಕ್ಷಣಗಳ ಪ್ರಯೋಗದಲ್ಲಿ, ರೂಪಾಂಶದಲ್ಲಿ' ಇನ್ನೂ ನಾನಾ ರೀತಿಗಳಲ್ಲಿ ವ್ಯಕ್ತವಾಗುತ್ತದೆ. ವರ್ಣ ಕುಂಚ ಭಿತ್ತಿಗಳು ಒಂದೆಯಾದರೂ ಇಬ್ಬರು ಕಲಾವಿದರ ಚಿತ್ರಗಳಲ್ಲಿ ಆಡು ಆನೆಗಳ ಅಂತರವಿರುವಂತೆ ಒಂದೇ ವಸ್ತುವನ್ನು ಬಳಸಿಕೊಂಡ ಕಾವ್ಯಗಳಲ್ಲಿಯೂ ಬಹ್ವಂತರವಿರುತ್ತದೆ.

ಮೂಲ ಮತ್ತು ಕನ್ನಡ ಭಾರತಗಳೆರಡನ್ನೂ ಅಕ್ಕಪಕ್ಕದಲ್ಲಿಟ್ಟುಕೊಂಡು ತಾಳೆ ನೋಡುವಲ್ಲಿ ಒಂದು ಮಾತು ಸ್ಪಷ್ಟವಾಗುತ್ತದೆ : ಒಂದು ಮತ್ತೊಂದರ ತದ್ವತ್‌ಕೃತಿ ಯಲ್ಲವೆಂಬುದು. ಹುಲ್ಲು ಮೇದು ಹಾಲುಕೊಡುವ ಹಸುವಿನಂತೆ ಕವಿ ಮೂಲಕೃತಿಯನ್ನು ಚೆನ್ನಾಗಿ ಜೀರ್ಣಿಸಿಕೊಂಡು ನೂತನ ಸತ್ವಾಂಶವನ್ನು ನೀಡುತ್ತಾನೆ. ಕನ್ನಡ ಭಾರತ ನಾನಾ ಪುಷ್ಪಗಳಿಂದ ಸಂಗ್ರಹಿಸಿದ ಮಧು ; ಅನೇಕ ಮಧುರ ಸಾಮಗ್ರಿಗಳಿಂದ ಸಿದ್ಧವಾದ ರಸಾಯನ. ಅವನು ಪ್ರಧಾನವಾಗಿ ಭಕ್ತಕವಿ. ಅವನ ದೃಷ್ಟಿಯಲ್ಲಿ ಭಾರತ ಕೃಷ್ಣಕಥೆ. ಪಂಚಮಶ್ರುತಿ, ಆಗಮಕುಲನಾಯಕ ; ಅನೇಕ ಪುರಾಣಶಾಸ್ತ್ರಗಳ ಆಗರ ; ಭೂಭಾರ ವನ್ನಿಳಿಸುವ ಸಲುವಾಗಿ ಅವತರಿಸಿದ ಶ್ರೀಕೃಷ್ಣನೇ ಕಥಾನಾಯಕ : ಅವನು ಸ್ವತಃ ಅನೇಕ ವೈಶ್ಯರನ್ನು ಕೊಂದಿರುವನಾದರೂ, ರಾಜನಾಗದೆ, ಎಲ್ಲಿಯೂ ಯಾಜಮಾನ್ಯ ವನ್ನು ವಹಿಸಿಕೊಳ್ಳದೆ, ಇತರರನ್ನು ನಿಮಿತ್ತಮಾಡಿಕೊಂಡು, ಅಧರ್ಮವನ್ನು ತೊಡೆದು ಧರ್ಮವನ್ನು ಸಂಸ್ಥಾಪಿಸಿದ ಮಹಾನುಭಾವ. ಅವನು ಪಾಂಡವ ಪಕ್ಷಪಾತಿ. ತಾನೇನೇ ಕೆಲಸ ಮಾಡುತ್ತಿರಲಿ, ಊಟಮಾಡುತ್ತಿರಲಿ, ಪಾಂಡವರು ನೆನೆದರೆಂದರೆ, ಅವನ್ನರ್ಧಕ್ಕೇ ನಿಲ್ಲಿಸಿ, ಧಾವಿಸುವಂಥ ಭಕ್ತಕುಟುಂಬಿ. ಇದು ಉತ್ಕೃಷ್ಟ ಅದು ನಿಕೃಷ್ಟವೆನ್ನದೆ, ಭಕ್ತರ ಬಂಡಿಯ ಬೋವನಾಗಿರಲು ಸಿದ್ಧನಾಗಿರುವ, ಇವನು ಸೋದರಳಿಯ, ಅವನು ಮಾವನ ಮಾವ ಎಂಬ ಮಮಕಾರವನ್ನುಳಿದು ಧರ್ಮೋದ್ಧಾರವೊಂದೇ ಧ್ಯೇಯವಾಗುಳ್ಳ ಸ್ಥಿತ ಪ್ರಜ್ಞ. ಭಕ್ತರ ಹೃದಯದಲ್ಲಿ ಮಾತ್ರವಲ್ಲ, ದುರ್ಯೋಧನನಂಥ ಅಧರ್ಮಿಗಳ "ಹೃದಯ ದೊಳರ್ಧ ಗನ್ನದಲಿ ಸಂಧಿಯನು" ಮುರಿಯುವ, "ಭಿನ್ನನಂತಿರೆ ತೋರಿ ಭಿನ್ನಾಭಿನ್ನ ನೆನಿಸಿಯೆ ಮೆರೆವ ತಿಳಿಯಲಭಿನ್ನ"ನಾದ[1] ಮಹಾಮಹಿಮನವನು. ಭೀಷ್ಮ ವಿದುರ ದ್ರೌಪದಿ ಪಾಂಡವಾದಿ ಭಕ್ತರಿಗೆ ಕರುಣೆಯ ಕವಚವಾಗಿ ಸದಾ ಅವರ ನೆನಹಿನಲ್ಲಿದ್ದರೆ, ದುರ್ಯೋಧನ ಕರ್ಣಾದಿ ವಿರೋಧಿನಾಯಕರಿಗೆ ಸಿಂಹಸ್ವಪ್ನವಾಗಿ ತಮ್ಮಳಿವಿಗೆ ಅವನೇ ಕಾರಣನೆಂಬ ಪಿಕೀರಿನಿಂದ ಅವರ ಬದುಕನ್ನೆಲ್ಲ ಮುಸುರುತ್ತಾನೆ. ಭಾರತದಲ್ಲಿ ಚಿಳ್ಳೆಪಿಳ್ಳೆ ಮೊದಲಾಗಿ ಅವನನ್ನು ಸ್ಮರಿಸಿಕೊಳ್ಳದ, ಅವನನ್ನು ಕಾಣಲು ತವಕಗೊಳ್ಳದ, ಅವನಿಂದ ಮುಕ್ತಿಪಡೆಯಲು ಬಯಸದ ಜನರಿಲ್ಲ. ಅವನು ಪವಾಡಪುರುಷನಾಗಿರುವುದರ ಜತೆಗೆ, ಆದರ್ಶಮಾನವ, ಆದರ್ಶ ಪತಿ, ಆದರ್ಶ ಸ್ನೇಹಿತ, ಆದರ್ಶ ಬಂಧು.

ಬಸವೇಶ್ವರ ಹರಿಹರರಂಥ ಭಕ್ತಕವಿಗಳು ತೀರಿಕೊಂಡ ತರುಣದಲ್ಲಿ, ಇಡೀ ಕರ್ನಾಟಕ ಭಕ್ತಿಪ್ರವಾಹದಲ್ಲಿ ಮಿಂದು ತಣಿಯುತ್ತಿದ್ದ ಕಾಲದಲ್ಲಿ ನಾರಣಪ್ಪ ಬದುಕಿದ್ದವನು : ಆ

[1] ಉದ್ಯೋಗಪರ್ವ, ೯ ೩೧

ಪ್ರವಾಹದಲ್ಲಿ ತಾನೂ ಮಿಂದು ಸಿದ್ಧಿಯ ಪರಾಕಾಷ್ಠೆಯನ್ನು ಪಡೆದವನು. ಉಳಿದ ಮುಕ್ತಿ ಮಾರ್ಗಗಳನ್ನು ಕಡೆಗಣಿಸಲಿಲ್ಲವಾದರೂ, ಭಕ್ತಿಮಾರ್ಗವನ್ನಪ್ಪಿಕೊಂಡ ಸಾಧಕನರೇಣ್ಯ. ಭೀಷ್ಮನ ಪ್ರತಾಪ, ವಿದುರನ ವಿವೇಕೋನ್ಮಾದ, ಧರ್ಮರಾಯನ ಅನನ್ಯಶರಣತೆ, ಅರ್ಜುನನ ಸ್ನೇಹ, ಕುಂತಿಯ ವಾತ್ಸಲ್ಯ, ದ್ರೌಪದಿಯ ಗಾಢಪ್ರೇಮ ಇವೇ ಮೊದಲಾದುವು ಭಕ್ತಿಯ ನಾನಾ ಕವಲುಗಳಾಗಿ ಪರಿಣಮಿಸುತ್ತವೆ. ಅಷ್ಟೇ ಅಲ್ಲ, ದುರ್ಯೋಧನನ ಛಲ ಹಾಗೂ ಕರ್ಣನ ದಾನಶೂರತ್ವಗಳೂ ಭಕ್ತಿಯ ಅಗೋಚರ ಮುಖಗಳೆಂದೇ ತಿಳಿಯ ಬೇಕಾಗುತ್ತದೆ. "ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ" ಎನ್ನುವ ಸುಯೋಧನನ ಎದೆಯ ಮಿಡಿತ ಮತ್ತು "ಮರಣದ ಹೊತ್ತು ಕೃಷ್ಣನ ಕಾಬ ಸುಕೃತಫಲ"[1] ಎನ್ನುವ ಕರ್ಣನ ಮನೋದಾರ್ಢ್ಯಗಳು ಭಕ್ತಿಯ ಪ್ರತೀಕಗಳೇ ಸರಿ. ಸಾಂಖ್ಯ ಕರ್ಮಜ್ಞಾನ ರಾಜಯೋಗಗಳೆಲ್ಲ ಭಕ್ತಿಮಾರ್ಗದಲ್ಲಿ ಪರ್ಯವಸಾನವಾಗುತ್ತವೆನ್ನುವುದೇ ಕವಿಯ ಮತ.

ಇಂಥ ಧ್ಯೇಯಾದರ್ಶಗಳನ್ನು ಕಣ್ಮುಂದಿರಿಸಿಕೊಂಡ ಕವಿಯ ಬಮಕಿಗೆ ಕೆಲವು ನಂಬಿಕೆ ಗಳು, ತಿಳಿವಳಿಕೆಗಳು ಮತ್ತು ಸಂಪ್ರದಾಯಗಳು ಅವಲಂಬನವಾಗಿ ನಿಲ್ಲುವುದು ಸಹಜ. ಸಮಕಾಲೀನಪ್ರಜ್ಞೆಯೊಂದಿಗೆ ಮೇಳವಿಸಿದ ಈ ನಂಬಿಕೆಗಳು ಅವನು ತನ್ನ ಕೃತಿಯಲ್ಲಿ ಮಾಡಿಕೊಂಡಿರುವ ಮಾರ್ಪಾಡುಗಳಿಗೆ ಕಾರಣವಾಗುತ್ತವೆ. ಮೂಲಭಾರತದ ಮೊದಲಲ್ಲಿ ಬರುವ ಅನೇಕ ವಿವರಗಳು ಮತ್ತು ಕಥೆಗಳು ಇಲ್ಲಿ ಲುಪ್ತವಾಗಿವೆ. ಮತ್ಸ್ಯಗಂಧಿ ಮತ್ತು ಭೀಷ್ಮರ ವೃತ್ತಾಂತಗಳು ಮೊಟಕಾಗಿವೆ. ಮೂಲದಲ್ಲಿ ಅಧ್ಯಾಯಗಟ್ಟಳೆ ಹರಿಯುವ ಅಂಬೆಯ ಕಥೆ ಇಲ್ಲಿ ಮೂರೂವರೆ ಪದ್ಯಗಳಲ್ಲಿ ಮುಕ್ತಾಯವಾಗುತ್ತದೆ. ಅಲ್ಲಿ ಆಕೆ ಅಗ್ನಿಪ್ರವೇಶಮಾಡಿದರೆ, ಇಲ್ಲಿ ತಪೋನಿರತಳಾಗುತ್ತಾಳೆ. ಕೇವಲ ಸೂಚನೆಯಷ್ಟರಿಂದಲೇ ಏಕಲವ್ಯನ ಕಥೆ ಪರಿಸಮಾಪ್ತಿ ಹೊಂದುತ್ತದೆ. ವಸ್ತ್ರಾಪಹರಣ ಸಂದರ್ಭದಲ್ಲಿ ದ್ರೌಪದಿ ಯನ್ನು ಅರಮನೆಗೊಯ್ಯುವಂತೆ ಆಜ್ಞಾಪಿಸುವವನು ಇಲ್ಲಿ ದುರ್ಯೋಧನ, ಅಲ್ಲಿ ಕರ್ಣ. ಅಲ್ಲಿಯ ಉಪಾಖ್ಯಾನಗಳು ಇಲ್ಲಿ ಎರಡು ಮೂರು ಪದ್ಯಗಳಲ್ಲಿಯೇ ಸಂಗ್ರಹಗೊಳ್ಳುತ್ತವೆ. ಯಕ್ಷಪ್ರಶ್ನೆ ಪ್ರಕರಣದಲ್ಲಿಯೂ ಕತ್ತರಿಪ್ರಯೋಗವಿದೆ. ಯುಧಿಷ್ಠಿರ ಜೂಜಾಟದಲ್ಲಿ ಹಣ ಸಂಪಾದಿಸಿ, ವಿರಾಟನಿಗೆ ತಿಳಿಯದಂತೆ ತಮ್ಮಂದಿರಿಗೆ ಹಂಚುತ್ತಿದ್ದನೆಂದೂ, ರಾಜನು ತಿಂದು ಮಿಕ್ಕ ಭೋಜ್ಯಗಳನ್ನು ಭೀಮ ಇತರ ಪಾಂಡವರಿಗೆ ವಿನಿಯೋಗಿಸುತ್ತಿದ್ದನೆಂದೂ, ಅಂತೆಯೇ ಇತರರು ಪರಸ್ಪರ ಸಹಾಯಕರಾಗಿದ್ದರೆಂದೂ ಮೂಲದಲ್ಲಿ ಉಕ್ತಗೊಂಡಿರುವ ವಿಷಯಗಳು ಇಲ್ಲಿ ಕಾಣೆಯಾಗಿರುವುದು ಅತ್ಯುಚಿತವಾಗಿದೆ. ಕೃಷ್ಣ ವಿದುರನ ಮನೆಯಲ್ಲಿ ಒಕ್ಕುಡಿತೆ ಹಾಲು ಕುಡಿದು ತಣಿದು, ಮಿಕ್ಕುದನ್ನು ದುರ್ಯೋಧನನ ಅರಮನೆ ಮುಂದೆ ಹರಿಯಿಸಿದ ಪ್ರಸಂಗ ಮೂಲದಲ್ಲಿಲ್ಲ. ಮೊದಲೇ ತನ್ನ ಜನ್ಮರಹಸ್ಯವನ್ನರಿತುಕೊಂಡಿದ್ದ ಕರ್ಣ ಭೇಟಿಯ ಸಂದರ್ಭದಲ್ಲಿ ತಾಯಿಯನ್ನು ಹೀಯಾಳಿಸುವ ವಿಷಯ ಇಲ್ಲಿಲ್ಲ. ಇಂತೆಯೇ ಹಲವಾರು ಪ್ರಸಂಗಗಳನ್ನು ಕವಿ ಬಹುಪರಿಣಾಮಕಾರಿಯಾಗಿ ಮಾರ್ಪಡಿಸಿ

---

1 ಉದ್ಯೋಗಪರ್ವ, ೯-೭೫

ಕೊಂಡಿದ್ದಾನೆ. ಈ ಮಾರ್ಪಾಡು ಮುಖ್ಯವಾಗಿ ಸಂಗ್ರಹ, ಲುಪ್ತನ, ಮತ್ತು ಸಂಕಲನಗಳ ಮೂಲಕ ನಡೆದು, ಕೆಲವು ಕಡೆ ಕಥೆಯ ಜಾಡನ್ನು ಬದಲಾಯಿಸುವುದಲ್ಲದೆ, ಪಾತ್ರಗಳ ವಿಕಾಸಕ್ಕೆ ತುಂಬ ಸಹಾಯವಾಗುತ್ತದೆ.

ಇದು ಮಹಾಕಾವ್ಯ

ಗದುಗಿನ ಭಾರತ ಯುಗಪ್ರವರ್ತಕ ಮಹಾಕಾವ್ಯವೆಂದು ಅನೇಕ ವಿದ್ವಾಂಸರು ಪ್ರಶಂಸಿಸಿದ್ದಾರೆ. "ಕನ್ನಡ ಕಾವ್ಯಸೃಷ್ಟಿಯ ಕಾಮನಬಿಲ್ಲಿನಲ್ಲಿ ಈತನ ನೆಲೆ ನಟ್ಟನಡು, ನೆತ್ತಿಯ ಮುಡಿ. ಹಳೆಯ, ಹೊಸಕನ್ನಡದ ತಲೆಯ ಕಿರೀಟ. ಹಳ್ಳಿಹಳ್ಳಿಯಲ್ಲಿ ಅಂದೂ ಇಂದೂ ಗಮಕಶಿರೋಮಣಿಗಳಿಂದ ನಾಡುನಾಡೇ ಮೊಳಗಿ ರೋಮಾಂಚನಗೊಳ್ಳುವಂತೆ ರಸವನ್ನ, ಇಂಪನ್ನ, ಲಯವನ್ನ, ತಾನವನ್ನ, ಮಾತಿನ ಹರಹನ್ನ, ಛಂದಸ್ಸಿನ ಕುಣಿತವನ್ನ, ಲೀಲಾಜಾಲವಾಗಿ ಹೊಮ್ಮಿಸಿ ಹರಿಯಿಸಿದ ಮಾಟಗಾರ. ಕನ್ನಡದ ಹೊಸಹುಟ್ಟಿನಲ್ಲಿ ಹೊಸಮಾರ್ಗಕ್ಕೆ ಹೊಸಶಕ್ತಿಗೆ ದಿಕ್ಸೂಚಿ, ಧ್ರುವತಾರೆ." "ಕಲಿಯದವರಿಗೂ ಕಾಮಧೇನುವಾಗಿ ಕನ್ನಡನಾಡಿನ ಜನಜೀವನದ ಹೃದಯವೇದಿಕೆಯಲ್ಲಿ ಅಗ್ರಸ್ಥಾನಸ್ಥ ಮಹಾ ಅಧ್ಯಕ್ಷನಾಗಿದ್ದಾನೆ."ಜಗತ್ತಿನ ಮಹಾಕಾವ್ಯಗಳಲ್ಲೆಲ್ಲ ಕೆಲವು ಸರ್ವಸಾಧಾರಣವಾದ ಲಕ್ಷಣಗಳನ್ನು ಗುರುತಿಸಬಹುದಾದರೂ, ಜನ್ಮದೇಶ ಕಾಲಸ್ಥಿತಿಗಳಿಗನುಗುಣವಾಗಿ, ಮಹಾಕಾವ್ಯ ಲಕ್ಷಣಗಳು ವ್ಯತ್ಯಾಸಗೊಳ್ಳುವುದು ಸಹಜ. ಲಕ್ಷಣಗಳನ್ನು ಪಟ್ಟಿಮಾಡಿ, ಅವುಗಳಿಂದ ಎಲ್ಲ ಕಾವ್ಯಗಳನ್ನಳೆಯುವುದು ಅಸಹಜತೆಯ ಕುರುಹಾಗಿ, ದುರ್ವಿದಗ್ಧರ ಮಾರ್ಗವಾಗುತ್ತದೆ. ಅಷ್ಟೇ ಅಲ್ಲ, ಪಂಪ ಹರಿಹರ ಕುಮಾರವ್ಯಾಸರನ್ನು ಒಂದೇ ಗಜಗಡ್ಡಿಯಿಂದ ಅಳೆಯುವುದು ಸಹ ಧಾರ್ಷ್ಟ್ಯದ ವಿಷಯವಾಗುತ್ತದೆ. ಕಾವ್ಯಾಂಶ ರೂಪಾಂಶ ಚಿಂತನಾಂಶಗಳಲ್ಲಿ, ವಸ್ತು ಪಾತ್ರ ಕ್ರಿಯೆ ಮತ್ತು ದಾರ್ಶನಿಕಾಂಶಗಳಲ್ಲಿ ಮಹತ್ತು ಬೃಹತ್ತುಗಳ ಸಿದ್ಧಿಯನ್ನು ಪಡೆದಂಥ ಕೃತಿಯೇ ಮಹಾಕಾವ್ಯವೆಂದು ಒಟ್ಟಿನ ಮೇಲೆ ಹೇಳಿಬಿಡಬಹುದು.

ಜಗತ್ತಿನ ಮಹಾಕಾವ್ಯಗಳಿಗೆ ಹೊಯ್‌ಕಯ್ಯಾಗಿ ನಿಲ್ಲಬಲ್ಲ ಕೃತಿ ಗದುಗಿನ ಭಾರತ. ಒಬ್ಬರು ಮತ್ತೊಬ್ಬರಿಗೆ, ಅವರು ಮಗುದೊಬ್ಬರಿಗೆ ಹೀಗೆ ಪರಂಪರೆಯಿಂದ ಹೇಳುವ ಕತೆಯಿದು. ಇಲ್ಲಿ ಸೃಷ್ಟಿಯ ವರ್ಣನೆಯಿದೆ, ಸುರಲೋಕ ಭೂಲೋಕಗಳ ವಿವರವಿದೆ. ಮೇಲಾಗಿ ಇಲ್ಲಿಯವರು ಆಗಾಗ್ಗೆ ಅಲ್ಲಿಗೂ ಹೋಗಿಬರುತ್ತಾರೆ. ಪರಂಪರೆ ಪ್ರಗತಿಗಳ, ಹಳತು ಹೊಸತುಗಳ ಮತ್ತು ಮರ್ತ್ಯಾಮರ್ತ್ಯಗಳ ಸಮ್ಮಿಳನವನ್ನಿಲ್ಲಿ ಕಾಣಬಹುದು. ಸರ್ವಮತಧರ್ಮದರ್ಶನ ತತ್ವಗಳ ಸಮನ್ವಯ ಪ್ರಯತ್ನವಿಲ್ಲಿ ನಡೆದಿದೆ. ಇತರ ರಸಗಳು ಉಚಿತವಾಗಿ ಬರುವುವಾದರೂ ವೀರ ಮತ್ತು ಶಾಂತರಸಗಳಿಗೆ ಇಲ್ಲಿ ಪ್ರಾಧಾನ್ಯ. ಕೃಪ ದ್ರೋಣ ಕರ್ಣ ಮೊದಲಾದ ವ್ಯಕ್ತಿಗಳ ಅಸಾಧಾರಣ ಜನನ ವಿಧಾನಗಳೂ, ದಿವ್ಯಾಸ್ತ್ರ ಸಂಪಾದನೆ, ಅಕ್ಷಯವಸ್ತ್ರ ಅಕ್ಷಯಾನ್ನ ಪ್ರಸಂಗ, ವಿಶ್ವರೂಪದರ್ಶನದಂಥ ಅಮಾನುಷ ಸಂಗತಿಗಳೂ ನಿರೂಪಣೆಗೊಂಡಿವೆ. ಗುರುಹಿರಿಯರು ಶಾಪಾನುಗ್ರಹ ಸಮರ್ಥರು. ವಿರಾಟ ಉತ್ತರ ಉತ್ತರೆ ಸುಭದ್ರೆ ಮೊದಲಾದ ಕೆಲವು ವ್ಯಕ್ತಿಗಳನ್ನು ಬಿಟ್ಟರೆ ಭೀಮಾರ್ಜುನ

ದುರ್ಯೋಧನ ಭೀಷ್ಮ ದ್ರೋಣ ಕರ್ಣ ಧರ್ಮರಾಯ ದ್ರೌಪದಿ ಅಭಿಮನ್ಯು ಮುಂತಾದ ವ್ಯಕ್ತಿಗಳು ಅಸಾಮಾನ್ಯ ಶಕ್ತಿಸಾಮರ್ಥ್ಯಗಳಿಂದ ಸಾಧಾರಣರಿಗಿಂತ ಬಲು ಎತ್ತರದಲ್ಲಿ ನಿಂತವರು. ಲೋಕಸಂಗ್ರಹ ಮತ್ತು ಧರ್ಮಸಂಸ್ಥಾಪನೆ ಇಲ್ಲಿಯ ಎಲ್ಲ ಸಾಧನೆಗಳ ಮತ್ತು ಯುದ್ಧ ಪ್ರಯತ್ನಗಳ ಗುರಿ. ಉಪವಾಸ ಸತ್ಯಾಗ್ರಹದಿಂದ ಹಿಡಿದು ಯುದ್ಧದವರೆಗೆ ಧರ್ಮ ಸಾಧನೆಯ ವಿಧಾನಗಳು ಚಾಚಿಕೊಂಡಿವೆ. ದೇವಮಾನವ ಸಂಬಂಧ ಗಾಢವಾಗಿದ್ದು, ಯುದ್ಧ ಸಂದರ್ಭದಲ್ಲಿ ದೇವತೆಗಳು ಪಕ್ಷ ಪ್ರತಿಪಕ್ಷಗಳಿಗೆ ಪ್ರೋತ್ಸಾಹ ನೀಡುವುದುಂಟು. ಪಾಂಡವರ ವನವಾಸ ಧರ್ಮರಾಯನ ಅಧ್ಯಾತ್ಮ ಸಾಧನೆಗೂ, ಭೀಮಾರ್ಜುನರ ಲೌಕಿಕ ಸಾಹಸಕ್ಕೂ ಸನ್ನೆಯಾಗುತ್ತದೆ. ಅವರ ತೀರ್ಥಯಾತ್ರೆ ಹೊಸ ದೇಶಗಳ ಪರಿಚಯಕ್ಕೂ ಜನರ ಸಂಪರ್ಕಕ್ಕೂ ಸಾಧನವಾಗುತ್ತದೆ. ಋಷಿಜನಸಂಸರ್ಗವೇ ಅವರಿಗೊಂದು ಶಿಕ್ಷಣ ವಾಗುತ್ತದೆ. ಇಲ್ಲಿ ತ್ರಿಮೂರ್ತಿಗಳಿಗೆ ವಿಶೇಷ ಪ್ರಾಶಸ್ತ್ಯವಿರುವಂತೆ ದುರ್ಗಿಯಕ್ಷೇಶ್ವರಿ ಯರಿಗೂ, ಭೂತಭೇತಾಳಗಳಿಗೂ ತಕ್ಕಮಟ್ಟಿನ ಬೆಲೆಯುಂಟು. ಮಾನವ ಸಾಹಸದ ಪರಾಕಾಷ್ಠೆಗೆ ಪ್ರತೀಕವಾಗಿ ರಾಜಸೂಯ ಯಾಗ ನಡೆಯುತ್ತದೆ. ಆಖ್ಯಾನೋಪಾಖ್ಯಾನ ಗಳೂ ತತ್ವಬೋಧೆಯೂ ಇಡೀ ಗ್ರಂಥವನ್ನು ವ್ಯಾಪಿಸಿವೆ. ಕೆಲಮಟ್ಟಿಗೆ ಜನಪದ ನಂಬಿಕೆಗಳೂ ಸಂಪ್ರದಾಯಗಳೂ, ಸಮಾಜದ ಆಶೆ ಆಕಾಂಕ್ಷೆಗಳೂ ಇಲ್ಲಿ ನಿರೂಪಣೆ ಗೊಂಡಿವೆ. ನಾಟಕೀಯತೆ ಈ ಕಾವ್ಯದ ಪ್ರಧಾನ ಲಕ್ಷಣವಾಗಿದೆ. ಅಷ್ಟೇ ಏಕೆ, ಇದೊಂದು ನಾಟಕಗಳ ಗುಚ್ಛವಿರಬೇಕೆನಿಸುತ್ತದೆ. ಸಭಾಸ್ಥಾನವೋ, ಅರಣ್ಯವೋ ಲಗ್ನಮಂದಿರವೋ ಸಂಗ್ರಾಮಭೂಮಿಯೋ, ಎಲ್ಲೆಂದರಲ್ಲಿ ಜನ ಸೇರಿದ ಕಡೆ ಸಂಭಾಷಣೆಗೆ ನಿಲುಗಾಲವಿಲ್ಲ. ನಡುನಡುವೆ ಕತೆಗಳು ಸಂಭಾಷಣೆಗಳು ಬರದಿದ್ದಲ್ಲಿ ಯುದ್ಧವರ್ಣನೆ ತುಂಬ ಬೋರಾಗುತ್ತಿತ್ತು. ಇಲ್ಲಿಯಂತೆ ಭಾಮಿನಿ ಷಟ್ಪದಿಯ ಸರ್ವಸಾಮರ್ಥ್ಯವನ್ನು ಸೂರೆಗೊಂಡದ್ದು ಬೇರೆ ಕಡೆ ಕಾಣುವುದಿಲ್ಲ. ಪಂಪನನಂತರ, ವಚನಕಾರರನಂತರ ಕನ್ನಡ ಭಾಷೆಯ ಅಕ್ಷಯಸತ್ವವನ್ನು ಕೊಳ್ಳೆಹೊಡೆದ ಕೀರ್ತಿ ಈ ಕಾವ್ಯಕ್ಕೆ ಸಲ್ಲಬೇಕು. ಸಮ ಕಾಲೀನ ಜನಜೀವನ ಪ್ರದರ್ಶನಕ್ಕಿಂತಲೋ ಮಾನವಸ್ವಭಾವದ ವಿಶ್ವರೂಪದರ್ಶನಕ್ಕೂ ಇದು ಕೈಮರವಾಗಿದೆ. ಕವಿಯ ದೃಷ್ಟಿಯಿಂದ ಕೃಷ್ಣ ಕಥಾನಾಯಕ ನಿಜ. ಆದರೆ ಕಥೆಯ ಕ್ರಿಯೆ ಹಾಗೂ ಘಟನೆಗಳ ದೃಷ್ಟಿಯಿಂದ ಧರ್ಮರಾಯನಲ್ಲ—ಪಾಂಡವರೈವರೂ ಕಥಾ ನಾಯಕರು. ಕಥಾನಾಯಿಕೆಯಂತು ದ್ರೌಪದಿ. ಅಂತೆಯೇ ಪ್ರತಿನಾಯಕರು ದುರ್ಯೋಧ ನಾದಿ ಚತುಷ್ಟಯರು. ಪ್ರತಿನಾಯಿಕೆಯೊ? ಇಲ್ಲ. ಇರಬೇಕಾದ್ದಿಲ್ಲ. ಲೋಕಾನುಭವ ಸಂಪನ್ನನೂ ಪ್ರತಿಭಾಶ್ರೀಮಂತನೂ ಕ್ರಾಂತದರ್ಶಿಯೂ ಆದ ಕವಿಯ ಸಮಗ್ರ ವ್ಯಕ್ತಿತ್ವದ ಅಖಂಡಸ್ವರೂಪದ ಮೂರ್ತಿಮಂತೆಯೇ ಮಹಾಕಾವ್ಯ. "ಪೃಥಿವಿಯ ನಾನಾ ತೀವ್ರ ಅನುಭವಗಳಿಂದ ಕೂಡಿ ತುಂಬಿದ ವಸ್ತು ; ಮಹಾ ಮನುಷ್ಯತ್ವದ ಮೇಲೆ ಕಾಲೂರಿ ನಿಂತು ದೇವತ್ವದ ಕಡೆಗೆ ಕೈ ಎತ್ತಿರುವ ಎತ್ತರದ ಪಾತ್ರಗಳು ; ತಟ್ಟತಳದಿಂದ ಎದ್ದು ನಭದವರೆಗೆ ಚಿಮ್ಮಿರುವ ರಾಗಜ್ವಾಲೆಗಳು ; ಹೊಸಹೊಸದಾಗಿ ಉಕ್ಕಿಬರುವ ಹಿರಿಯರ್ಥ ವನ್ನು ಕಿರಿಯದರಲ್ಲಿ ಧ್ವನಿಗೆಯ್ಯುವ ಗಭೀರವಾಣಿ ; ಅನಿರ್ವಚನೀಯವಾದ ಸ್ವಾಭಾವಿ

ಕತೆ: ಕಲೆಯೆಂದು ಕಾಣಿಸದಿದ್ದರೂ ಚೇತೋಹಾರಿಯಾದ ಕಲೆ."[1] ಈ ಸೂತ್ರಗಳು ಅಕ್ಷರಶಃ ಗದುಗಿನ ಭಾರತಕ್ಕನ್ವಯಿಸುತ್ತವೆ.

ಚಾರುಕವಿತೆಯು ಬಳಕೆಯಲ್ಲ

ಕುಮಾರವ್ಯಾಸ ತನ್ನ ಕಾವ್ಯದ ಸ್ವರೂಪವನ್ನು ವಿವರಿಸುತ್ತ "ಚಾರುಕವಿತೆಯು ಬಳಕೆಯಲ್ಲ, ವಿಚಾರಿಸುವಡಳವಲ್ಲ" ಎಂದು ಸ್ಪಷ್ಟಪಡಿಸಿದ್ದಾನೆ. ಅವನ ಪ್ರಕಾರ ಈ ಕಾವ್ಯ "ಪಂಚಮ ಶ್ರುತಿ" "ಹಲವು ಜನ್ಮದ ಪಾಪರಾಶಿಯ ತೊಳೆವ ಜಲ." "ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮವಿಚಾರಮಾತ್ರವನು." ಇದನ್ನು ಭಕ್ತಿಯಿಂದ "ಕೇಳ್ವಾನರರ ದುರಿತಾಂಕುರದ ಬೇರಿನ ಬೇಗೆ"ಯಾಗುತ್ತದೆ. ಇದರಲ್ಲಿ ಒಂದಕ್ಷರ ಕೇಳಿದವರಿಗೂ "ವೇದಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ, ಕೃಚ್ಛ್ರಾದಿ ತಪಸಿನ ಫಲವು, ಜ್ಯೋತಿಷ್ಟೋಮ ಯಾಗಫಲ, ಮೇದಿನಿಯನೊಲಿದಿತ್ತ ಫಲ,ವಸ್ತ್ರಾದಿ ಕನ್ಯಾದಾನ ಫಲ" ಗಳು ಲಭಿಸುತ್ತವಂತೆ. ಇಲ್ಲಿಯ ಹಲವುಮಾತುಗಳು ಉತ್ಪ್ರೇಕ್ಷೆಯಿಂದ ಕೂಡಿರುವುದಾದರೂ ಭಾರತೀಯ ದೃಷ್ಟಿಯಲ್ಲಿ ಕಾವ್ಯದ ಫಲ ಮಹತ್ವಗಳೇನೆಂಬುದನ್ನು ವಿಶದಪಡಿಸುತ್ತವೆ. ಕವಿರಾಜಮಾರ್ಗಕಾರ ಕಾವ್ಯದ ಧ್ಯೇಯಾದರ್ಶಗಳನ್ನು ಉಲ್ಲೇಖಿಸಿ ಮುಂದಿನವರಿಗೆ ಮಾರ್ಗದರ್ಶನ ಮಾಡಿದ್ದಾನೆ.

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ
ಖೋಪಾತ್ತ ಮಿದೆಂದರಿಪುಗು
ಮಾ ಪರಮಕವಿ ಪ್ರಧಾನರಾ ಕಾವ್ಯಂಗಳ್

ಲೌಕಿಕ ಪಾರಮಾರ್ಥಿಕ ಸಂಗತಿಗಳ ಧರ್ಮಾಧರ್ಮ ವಿಷಯಗಳ ತಾರ್ಕಣೆ ಮಹಾಕಾವ್ಯಗಳ ಗುರಿಯಾಗಿರಬೇಕೆಂಬುದು ಅವನ ಮತ. ಪಂಪ ಮಹಾಕವಿ ಸಹ ಉತ್ಪ್ರೇಕ್ಷೆಯ ಸೋಂಕಿಲ್ಲದಂತೆ ಕಾವ್ಯಫಲವನ್ನು ಬಲು ಸೊಗಸಾಗಿ ಪ್ರತಿಪಾದಿಸಿದ್ದಾನೆ.

ಕವಿತೆಯೊಳಾಸೆಗೆಯ್ದ ಫಲಮಾವುದೊ ಪೂಜೆನೆಗಳೆ ಲಾಭಮೆಂ
ಬಿವೆ ವಲಂ ಇಂದ್ರಪೂಜೆ ಭುವನಸ್ತುತಮಪ್ಪ ನೆಗಳ್ತೆ ಮುಕ್ತಿ ಸಂ
ಭವಿಸುವ ಲಾಭಮೆಂಜಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ? ಪೆರರೀವುದೇಂ ಪೆರರ ಮಾಡುವುದೇಂ ಪೆರರಿಂದಮಪ್ಪುದೇಂ

ಜಿನಸ್ತುತಿಯಿಂದ ಧರ್ಮವನ್ನೆತ್ತಿ ಹಿಡಿಯುವುದರಿಂದ ಪ್ರೇಯಸ್ಸು ಶ್ರೇಯಸ್ಸುಗಳೆಲ್ಲ ಸಂಪ್ರಾಪ್ತವಾಗುತ್ತವೆಂದು ಅವನು ಖಚಿತಪಡಿಸಿದ್ದಾನೆ. ಆಸೇತು ಹಿಮಾಚಲ ಪರ್ಯಂತ ಕವಿಗಳು ಮೀಮಾಂಸಕರು ಮತ್ತು ವಿಮರ್ಶಕರೆಲ್ಲ ಪೂರ್ವೋಕ್ತ ಕಾವ್ಯಧ್ಯೇಯ ಫಲ

---

[1] ಡಾ. ಎಸ್. ವಿ. ರಂಗಣ್ಣ, ಹೊನ್ನಶೂಲ, ಪು. ೬.

ಗಳನ್ನು ಒಪ್ಪಿಕೊಂಡಿದ್ದಾರೆ. ಕಾವ್ಯಫಲಗಳನ್ನೆಲ್ಲ ಒಂದೆಡೆ ಸಬುದಿಸಿರುವ ಮುಮ್ಮಟನ ರಚನೆಯೊಂದನ್ನು ನೋಡಬಹುದು.

ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ
ಸದ್ಯಃ ಪರನಿರ್ವೃತಯೇ ಕಾಂತಾಸಂಮಿತ ತಯೋಪದೇಶಯುಜೇ

ಯಶಸ್ಸು ಧನಗಳು ಕವಿಗೂ, ವ್ಯವಹಾರಜ್ಞಾನ ಮತ್ತು ಉಪದೇಶಗಳು ಸಹೃದಯನಿಗೂ, ಪರಮಾನಂದ ಮತ್ತು ಅಮಂಗಳ ಪರಿಹಾರ ಉಭಯರಿಗೂ ಲಭಿಸುವ ಪ್ರಯೋಜನ ಗಳೆಂದು ತಿಳಿಯಬೇಕಾಗಿದೆ. ಈ ಎಲ್ಲ ಪ್ರಯೋಜನಗಳು ಒಂದೆ ಮಟ್ಟದವಲ್ಲ, ನಿಜ. ಪರಮಾನಂದ ವ್ಯವಹಾರಜ್ಞಾನ ಮತ್ತು ಉಪದೇಶಗಳು ಮಾತ್ರ ಮುಖ್ಯವಾದುವು. "ಕಾವ್ಯಂ ಆನಂದಾಯ ಯಶಸೇ ಕಾಂತಾತುಲ್ಯತಯಾ ಉಪದೇಶಾಯ" ಎಂದು ಹೇಮ ಚಂದ್ರ ಹೇಳುವಲ್ಲಿಯೂ ಮೂರು ಅಂಶಗಳ ಮೇಲೆ ಒತ್ತಿರುವುದನ್ನು ಗಮನಿಸಬಹು ದಾಗಿದೆ. ಸತ್ ಕಾವ್ಯದಿಂದ ವ್ಯವಹಾರಜ್ಞಾನವನ್ನಾಗಲಿ ಉಪದೇಶವನ್ನಾಗಲಿ ನಿರೀಕ್ಷಿಸ ಕೂಡದು, ಪರಮಾನಂದವೆ ಅದರ ಪರಮಗಂತವ್ಯವೆಂದು ಅಭಿಪ್ರಾಯಿಸುವ ವಿದ್ವಾಂಸರೂ ಇಲ್ಲದಿಲ್ಲ. ಸಂಗೀತ ಚಿತ್ರ ಮತ್ತು ಶಿಲ್ಪಕಲೆಗಳಿಂದ ಒದಗಬಹುದಾದ ಫಲ ಆನಂದ ವೊಂದೇ. ಅವು ಬಳಸುವ ಪರಿಕರ ಮಾಧ್ಯಮಗಳಿಂದ ಆನಂದವನ್ನಲ್ಲದೆ ಉಪದೇಶವನ್ನು ಅಧಿಕ ಪ್ರಮಾಣದಲ್ಲಿ ನಿರೀಕ್ಷಿಸಲಾಗದು. ಕವಿ ಬಳಸುವ ಮಾಧ್ಯಮ ಮಾತು. ಮಾತಿನ ಮೂಲಕ ಸ್ವರ್ಗವನ್ನಾದರೂ ಸೂರೆಗೊಳ್ಳಬಹುದು. ಮಾತಿಗೆಂತೋ ಕವಿಗೂ ಅಂತೆಯೇ ಒಂದು ಸಾಮಾಜಿಕ ಕರ್ತವ್ಯವಿದೆ. ಕವಿ ತಾನು ಮಾತಾಡುವುದಲ್ಲದೆ, ಇತರರಿಂದಲೂ ಮಾತಾಡಿಸುತ್ತಾನೆ. ಇಡೀ ಜಗತ್ತೇ ಅವನ ಕಾವ್ಯದ ಪರಿಕರವಾಗುತ್ತದೆ. ಸಮಾಜದ ಮತ್ತು ಮಾನವಸ್ವಭಾವದ ನಿಚ್ಚಳವಾದ ಸ್ವರೂಪ ಕಾವ್ಯದಲ್ಲಿ ಅಭಿವ್ಯಕ್ತಗೊಳ್ಳುವಂತೆ ಮತ್ತೆಲ್ಲಿಯೂ ಸಾಧ್ಯವಿಲ್ಲ. ನಾಲ್ಕು ಜನರ ಮುಂದೆ ಹೇಳಿಕೊಳ್ಳಲಾಗದ ಸ್ವಂತದ ಅಥವಾ ಅನ್ಯಪರವಾದ ಕ್ಷುದ್ರ ಸಂಗತಿಗಳನ್ನು ಕೃತಿಯಲ್ಲಿ ಲೀಲಾಜಾಲವಾಗಿ ಮೆರೆಸುತ್ತಾನೆ. ಸಮಾಜದ ಹುಳುಕುಗಳಿಗೆ ಭೂತಗನ್ನಡಿ ಹಿಡಿದು ತೋರಿಸಲು ಇದೊಂದು ಸುರಕ್ಷಿತ ಸಬಲ ಮಾಧ್ಯಮ. ಒಬ್ಬ ವ್ಯಕ್ತಿಯ ಕುಂದುಕಂದುಗಳನ್ನು ಯಾರೂ ಇಲ್ಲದಾಗ ಅವನಿಗೆ ನೇರ ವಾಗಿ ತೋರಿಸಿಕೊಟ್ಟಿದ್ದಾದರೆ ತಂದೆಯಾದರೂ ಸರಿಯೆ, ನಿರಾತಂಕವಾಗಿ ಜೀವಿಸುವಂತಿಲ್ಲ. ಆದರೆ ಕವಿ ಅವನ್ನು ತ್ರೈಕ್ಷಿಸಿದನೆನ್ನೋಣ. ಯಾರೂ ಅವನನ್ನು ಪ್ರಶ್ನಿಸುವಂತಿಲ್ಲ. ಅದಕ್ಕಾ ಗಿಯೇ ಅವನನ್ನು ಅನಭಿಷಿಕ್ತ ಶಾಸಕನೆಂದು ಶೆಲ್ಲಿ ಮಹಾಶಯ ಹೆಸರಿಸಿದ್ದು. ಅವನು ಕೇವಲ ಶಾಸಕನಲ್ಲ : ಅವನು ಪ್ರಜಾಪತಿಯೂ ಅಹುದೆನ್ನುವುದು ಆನಂದವರ್ಧನನ ಮತ.

ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ
ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ
ಭಾವಾನಚೇತನಾನಪಿ ಚೇತನವಚ್ಚೇತನಾನಚೇತನವತ್
ವ್ಯವಹಾರಯತಿ ಯಥೇಷ್ಟಂ ಸುಕವಿಃ ಕಾವ್ಯೇ ಸ್ವತಂತ್ರತಯಾ

ಶಾಸಕನಾದವನಿಗೆ ಉಪಾಧಿ ಉಸಹತಿ ಪರೀಷಹಗಳಿಲ್ಲದಿಲ್ಲ. ಆದ್ದರಿಂದ ಆನಂದವರ್ಧನ ಕವಿಯನ್ನು ಪ್ರಜಾಪತಿಯೆಂದು ಕರೆದಿರುವುದು ಉಚಿತವಾಗಿದೆ. "ನಿರವಧಿಯಾದ ಬ್ರಹ್ಮಸೃಷ್ಟಿಯೇ ಕವಿಸೃಷ್ಟಿಗೆ ಆಧಾರ"[1] ನಿಜ. ಆದರೆ ಅದು ಬ್ರಹ್ಮಸೃಷ್ಟಿಯಿಂದ ತೀರ ಭಿನ್ನವಾದುದು; ವಾಸ್ತವಕ್ಕಿಂತಲೂ ವಾಸ್ತವವಾದುದು. ಎ. ಸಿ. ಬ್ರಾಡ್ಲೆ ಹೇಳುವಂತೆ ಕಾವ್ಯಜಗತ್ತು ವಾಸ್ತವ ಜಗತ್ತಿನ ಒಂದು ವಿಭಾಗವೂ ಅಲ್ಲ, ಅದರ ನಕಲೂ ಅಲ್ಲ; ಅದು ಸರ್ವಸ್ವತಂತ್ರವೂ ಸ್ವಸಂಪೂರ್ಣವೂ ಸ್ವಾಯತ್ತತಾತ್ಮಕವೂ ಆದ ಪ್ರತ್ಯೇಕ ಜಗತ್ತು; ಅದನ್ನು ಪ್ರವೇಶಿಸುವಾಗ ವಾಸ್ತವ ಜಗತ್ತಿನ ನೀತಿನಿಯಮ ಸಂಪ್ರದಾಯಗಳನ್ನು ತಾತ್ಕಾಲಿಕವಾಗಿಯಾದರೂ ಒತ್ತಟ್ಟಿಗಿರಿಸಿ, ನೂತನ ಜಗತ್ತಿನ ಶಾಸನಗಳನ್ನು ಪರಿಪಾಲಿಸಬೇಕಾಗುತ್ತದೆ.[2] ಆದರೆ ನೂತನ ಜಗತ್ತು ವಾಸ್ತವ ಜಗತ್ತಿಗೆ ತೀರ ವಿರುದ್ಧವೆಂದಾಗಲೀ, ಎರಡಕ್ಕೂ ಏನೇನೂ ಸಂಬಂಧವಿಲ್ಲವೆಂದಾಗಲೀ ಭಾವಿಸಕೂಡದು. ಸ್ಪೈಕಿಂಗ್ ಮಂಗಳಗ್ರಹದಲ್ಲಿಳಿದರೂ ಅದರ ನಿಯಂತ್ರಣದ ಹೊಣೆಗಾರಿಕೆ ಭೂಮಿಯ ಮೇಲಿರುವ ಪ್ರಯೋಗಶಾಲೆಗೆ ಸಂಬಂಧಿಸಿದ್ದು. ಕವಿ ಸಮಾಜವನ್ನು ಸಾಕ್ಷೀಪ್ರಜ್ಞೆಯಿಂದ ನೋಡುವವನಾದರೂ, ಅವನಲ್ಲಿಯೇ ಭದ್ರವಾಗಿ ಕಾಲೂರಿದ್ದಾನೆನ್ನುವುದನ್ನು ಮರೆಯುವಂತಿಲ್ಲ. ಸುತ್ತಮುತ್ತಣ ಪರಿಸರವನ್ನು ಕುತೂಹಲದಿಂದ, ಸಹಾನುಭೂತಿಯಿಂದ, ಸೂಕ್ಷ್ಮದೃಷ್ಟಿಯಿಂದ ವೀಕ್ಷಿಸಿದಾಗ, ಪ್ರತಿಭೆಯ ಮೂಲಕ ಅದರ ಅಂತರಂಗವನ್ನು ಪ್ರವೇಶಿಸಿದಾಗ ಕವಿಯ ಹೃದಯದಲ್ಲೇಳುವ ತರಂಗಗಳು, ಮೂಡುವ ಪ್ರತಿಕ್ರಿಯೆಯೇ ಕಾವ್ಯವಾಗುತ್ತದೆ. "ಸಾಹಿತಿ ತನ್ನ ನಾಡಿನ ಮತ್ತು ತನ್ನ ಸಮಾಜದ ರಸಸ್ಯಂದಿಯಾದ ರಸನೆಯಾಗಬೇಕು; ಅವುಗಳ ಕಿವಿಯಾಗಬೇಕು, ಅವುಗಳ ಕಣ್ಣಾಗಬೇಕು, ಅವುಗಳ ಹೃದಯವಾಗಬೇಕು; ಅವನು ಸಮಕಾಲೀನ ಯುಗವಾಣಿಯೂ ಆಗಬೇಕು" ಎನ್ನುವ ಗಾರ್ಕಿ ಹೇಳಿಕೆ[3] ಗಮನಾರ್ಹವಾದುದು.

ಕವಿ ಸಾಮಾಜಿಕ ವ್ಯಕ್ತಿ

ಕವಿಯೂ ಸಾಮಾಜಿಕ ವ್ಯಕ್ತಿ. ಆತ್ಮಾಭಿವ್ಯಕ್ತಿಯ ಬಯಕೆಯ ಜತೆಗೆ ಸಾಮಾಜಿಕ ಮೌಲ್ಯಗಳು ಹಾಗೂ ಮಾನವಕಲ್ಯಾಣಾಕಾಂಕ್ಷೆ ಕಾವ್ಯದ ಉಗಮಕ್ಕೆ ಪ್ರೇರಕಶಕ್ತಿ

---

[1] ತೀ. ನಂ. ಶ್ರೀಕಂಠಯ್ಯ, ಭಾರತೀಯ ಕಾವ್ಯಮೀಮಾಂಸೆ, ಪುಟ 196

[2] For it's nature is to be not a part, nor yet a copy of the real world, but to be a world by itself independent, complete, autonomous ; and to possess it fully you must enter that world, conform to its laws, and ignore for the time the beliefs, aims and particular conditions which belong to you in the other world of reality—A. C. Bradley, *Oxford Lectures on Poetry*, p. 5.

[3] The writer is the emotional mouth-piece of his country and of his class, he is their ear, their eye and their heart ; he is the voice of his time —*Literature and Life*, A selection from the writings of Maxim Gorki, p. 53

ಗಳಾಗುತ್ತವೆ. ಹೂ ತಳಿರು ಹಕ್ಕಿ ಮೊದಲಾದ ನೈಸರ್ಗಿಕ ವಸ್ತುಗಳನ್ನು ಕಂಡಾಗ ಕವಿಯ ಹೃದಯ ಹಿಗ್ಗುವಂತೆ, ಅವನ ಮನಸ್ಸು ಚಿಂತನಶೀಲವಾಗುವಂತೆ, ಮಾನವನ ಆಗು ಹೋಗುಗಳು ಮತ್ತು ಸಾಮಾಜಿಕ ಸಂಗತಿಗಳು ಅವನ ಬುದ್ಧಿಭಾವಗಳನ್ನು ಪ್ರಚೋದಿಸು ತ್ತವೆ. ಕಥೆ ಕಾದಂಬರಿ ನಾಟಕಗಳಿರಲಿ, ಭಾವಗೀತೆಗಳ ಉಗಮಕ್ಕೂ ಸಮಾಜವೇ ಪ್ರಚೋದಕಶಕ್ತಿಯಾಗುತ್ತದೆ. "ಕುರುಡು ಕಾಂಚಾಣ" "ನಾನು ಬಡವಿ" "ಇಂದಿನ ದೇವರು" "ಕಲ್ಕಿ"ಗಳ ಅವತಾರಕ್ಕೆ ಪ್ರೇರಣೆ ದೊರಕಿದ್ದು ಸಮಾಜದಿಂದೆಂಬುದು ಸುಸ್ಪಷ್ಟ. ಸಾಮಾಜಿಕ ಸಮಸ್ಯೆಗಳನ್ನು ಕುರಿತ ಕವಿಯ ಬೌದ್ಧಿಕ ಹಾಗೂ ಭಾವಾತ್ಮಕ ಪ್ರತಿ ಕ್ರಿಯೆಯ ಫಲವೇ ಅಂಥ ಕವನಗಳು. ತನ್ನ ಸುತ್ತಮುತ್ತಣ ಪರಿಸರದಲ್ಲಿ ಕಾಣುವ ಸೊಗಸುಗಳನ್ನು ಮೆಚ್ಚುವಂತೆಯೇ ಹೊಲಸು ಮೋಸ ಜಡತನಗಳನ್ನು ಕಂಡು ರೊಚ್ಚಿ ಗೇಳುತ್ತಾನೆ; ದೀನದಲಿತರ ಬಗ್ಗೆ ಕನಿಕರಗೊಳ್ಳುತ್ತಾನೆ. ಹಿಂದಿನ ಮತ್ತು ಇಂದಿನ ಪರಿಸ್ಥಿತಿಯನ್ನನುಲಕ್ಷಿಸಿ, ಸಮಾಜದ ಮುಂದಿನ ಗತಿಯನ್ನು ನಿರ್ಧರಿಸುತ್ತಾನೆ. ಋಷಿ ಯಾಗಿ ಪ್ರವಾದಿಯಾಗಿ ನೇತಾರನಾಗಿ ಲೋಕಾಭ್ಯುದಯ ವಿಷಯದಲ್ಲಿ ಆಸಕ್ತಿವಹಿಸು ತ್ತಾನೆ. ಸೋಕ್ರಟೀಸ್, ಅರಿಸ್ಟಾಟಲ್, ಸಿಸಿರೋ, ಬುದ್ಧ, ಬಸವೇಶ್ವರ, ಗಾಂಧಿ ಮೊದಲಾದವರು ಲೋಕಕಲ್ಯಾಣಕರವಾದ ಚಿಂತನೆಯಿಂದಾಗಿ ಜಗದ್ವಂದ್ಯರಾದರು. ಅಲೆಕ್ಸಾಂಡರ್, ಸೀಸರ್, ನೆಪೋಲಿಯನ್, ಘಸ್ನಿ ಮಹಮದ್, ಕಾನಿಷ್ಕಾದಿ ಚಕ್ರವರ್ತಿ ಯೋಧರರ ನೆನಪು ಮಸಕಾದರೂ ಅವರು ಮಾತ್ರ ಚಿರಂತನಪ್ರಭೆಯ ಧ್ರುವತಾರೆ ಗಳಂತೆ ರಾರಾಜಿಸುತ್ತಾರೆ. ವಾಲ್ಮೀಕಿ ವ್ಯಾಸ ಹೋಮರ್ ಮಿಲ್ಟನ್ ಗಯಟೆ ಮೊದಲಾದ ಕವಿಗಳೂ ಆ ವರ್ಗಕ್ಕೆ ಸೇರಿದವರು. ನಕ್ಕುನಗಿಸುವ, ಆನಂದಪರವಶರಾಗಿ ಇತರರನ್ನು ಆನಂದಪರವಶರನ್ನಾಗಿ ಮಾಡುವ ಮೋಡಿವಿದ್ಯೆಯೊಂದೇ ಅವರ ಗುರಿಯಾಗಿರಲಿಲ್ಲ. ಕಾವ್ಯ ಬಾಳಬಟ್ಟೆಯ ಪರಮಾಗಮವಾಗಬೇಕೆಂದು, ತಮ್ಮ ಶಕ್ತಿಸರ್ವಸ್ವವನ್ನು ಅದಕ್ಕಾಗಿ ನಿವೇದಿಸಿದರು. ಸಾಹಿತ್ಯದಲ್ಲಿ ಮಣ್ಣಿನ ವಾಸನೆ ಎರಚಬೇಕೆಂದು ಇತ್ತೀಚಿನವರು ಹೇಳು ವುದರ ಅರ್ಥವೇನು? ವಿಲಿಯಂ ಹೆನ್ರಿ ಹಡ್ಸನ್ ಸಾಹಿತ್ಯ ವಸ್ತುವನ್ನು ಐದು ಗುಂಪು ಗಳಾಗಿ ವಿಂಗಡಿಸುತ್ತಾನೆ: ೧) ಸಾಹಿತಿಯ ಪೂರ್ಣ ವ್ಯಕ್ತಿತ್ವವನ್ನು ರೂಪಿಸುವ ವೈಯಕ್ತಿಕಾನುಭವಗಳ ಮೊತ್ತ; ೨) ವೈಯಕ್ತಿಕ ಜೀವನದ ಗಡಿಯನ್ನು ದಾಟಿ, ಇಡೀ ಜನಾಂಗಕ್ಕನ್ವಯವಾಗುವ ಸಾವು ಬದುಕುಗಳ, ಪುಣ್ಯ ಪಾಪಗಳ, ದೇವಮಾನವ ಸಂಬಂಧದ, ಇಂದು ಮುಂದುಗಳನ್ನು ಕುರಿತ ಮನುಕುಲದ ಅನುಭವ ಸಂಪತ್ತು; ೩) ಸಾಮಾಜಿಕ ಜೀವನದ ಆಗುಹೋಗುಗಳ ಮತ್ತು ಸಮಸ್ಯೆಗಳ ಹಿನ್ನೆಲೆಯಲ್ಲಿ ವ್ಯಕ್ತಿಗೂ ಸೋದರಮಾನವನಿಗೂ ಹಾಗೂ ಸಮಾಜಕ್ಕೂ ಇರುವ ಸಂಬಂಧಗಳು; ೪) ನಮಗೂ ಪ್ರಾಕೃತಿಕ ಜಗತ್ತಿಗೂ ಇರುವ ಬಾಂಧವ್ಯ; ೫) ಮತ್ತು ವಿವಿಧ ಕಲಾ ಮತ್ತು ಸಾಹಿತ್ಯ ಪ್ರಕಾರಗಳ ಮೂಲಕ ಸೃಜಿಸಲು ಮತ್ತು ಅಭಿವ್ಯಕ್ತಿಸಲು ಮಾನವ ಮಾಡುವ ಪ್ರಯತ್ನ ಗಳು. ಈ ವರ್ಗೀಕರಣದ ಆಧಾರದ ಮೇಲೆ ನಿರ್ಣಯಿಸಬಹುದಾದ ಸಂಗತಿಯೆಂದರೆ ಸಾಹಿತ್ಯಕ್ಕೆ ಹೊರತಾದ ವಸ್ತುವಿಲ್ಲವೆಂಬುದು; ಸಾಹಿತ್ಯ ಸಮಾಜದ ಪ್ರತಿಬಿಂಬವಷ್ಟೇ

ಅಲ್ಲ, ಉತ್ಪನ್ನವೆಂಬುದು. ಕೈಗಾರಿಕಾಕ್ರಾಂತಿ, ವಿಜ್ಞಾನ ಮತ್ತು ಯಂತ್ರವಿಜ್ಞಾನಗಳ ವೈಭವ ವಿಕ್ಟೋರಿಯಾ ಯುಗದ ಸಾಹಿತ್ಯದ ದಿಕ್ಕನ್ನೂ, ಹನ್ನೆರಡನೆಯ ಶತಮಾನದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿ ಆ ಯುಗದ ಕನ್ನಡ ಸಾಹಿತ್ಯದ ಪಥವನ್ನೂ, ರಷ್ಯಾದ ಆರ್ಥಿಕ ಮತ್ತು ರಾಜಕೀಯ ಕ್ರಾಂತಿ ಇಪ್ಪತ್ತನೆಯ ಶತಮಾನದ ಸಾಹಿತ್ಯದ ಅಂತಸ್ಸತ್ವವನ್ನೂ ಬದಲಾಯಿಸಿದುವೆಂಬುದೆ ಈ ಸಿದ್ಧಾಂತಕ್ಕೆ ಸಾಕ್ಷಿಯಾಗಿದೆ. ಸಾಹಿತ್ಯದ ಉಗಮ ವಿಕಾಸಗಳಿಗೆ ಜಾನಾಂಗಿಕ ಪ್ರಭಾವ (Race), ಪರಿಸರಪ್ರಜ್ಞೆ (Milieu) ಮತ್ತು ಯುಗಧರ್ಮಗಳು ಪ್ರೇರಕವಾಗುತ್ತವೆಂಬ ಟೇನನ[1] (Taine) ಸೂತ್ರ ಬಹು ಮಟ್ಟಿಗೆ ಅಂಗೀಕಾರಾರ್ಹವಾದದ್ದೆಂದು ತಿಳಿಯಬಹುದಾಗಿದೆ. ಜಾನಾಂಗಿಕ ಪ್ರಭಾವ ವನ್ನು ಪರಂಪರೆಯೆಂದು ಕರೆಯಬಹುದು. ಆನುವಂಶೀಯ ಮನೋಧರ್ಮವೇ ಅದು. ರಾಜಕೀಯ ಸಂಸ್ಥೆಗಳು, ಸಾಮಾಜಿಕ ವ್ಯವಸ್ಥೆಗಳು, ಆರ್ಥಿಕ ಸಂಗತಿಗಳು, ಸುತ್ತ ಮುತ್ತಣ ವಾತಾವರಣದಲ್ಲಿ ಕಾಣುವ ಎಲ್ಲ ವಿಚಾರಗಳ ಮೊತ್ತ ಪರಿಸರವಾಗುತ್ತದೆ. ರಾಷ್ಟ್ರ ಜೀವನದ ವಿಕಾಸಮಾರ್ಗದ ನಿರ್ದಿಷ್ಟ ಸಮಯದ ಅಂತಸ್ಸತ್ವ ಯುಗಧರ್ಮವಾಗುತ್ತದೆ. ಗುರುವನ್ನು ಮೀರಿಸುವ ಶಿಷ್ಯನಂತೆ ಪ್ರತಿಭಾನ್ವಿತ ಕವಿ ಸಮಾಜದ ಶಿಶುವಾದರೂ, ಅದನ್ನು ರೂಪಿಸಬಲ್ಲ ಅದಕ್ಕೆ ಮಾರ್ಗದರ್ಶನ ನೀಡಬಲ್ಲ ಮಹಾಚೈತನ್ಯವುಳ್ಳವನಾದ್ದರಿಂದ ಮೇಲಣ ಗುಣತ್ರಯಗಳ ಜತೆಗೆ ಕವಿಪ್ರತಿಭೆಯೂ ಸೇರಿದರೆ ಆ ಸೂತ್ರ ಸಮರ್ಪಕವಾಗುತ್ತದೆ. ಸೃಷ್ಟಿಕಾರಕವಾದ ಪ್ರತಿಭೆಗೆ ಅವು ಆಹಾರ ಸಾಮಗ್ರಿಗಳೆಂದರೂ ಒಪ್ಪುತ್ತದೆ.

ಮೇಲೆ ನಿರೂಪಿಸಿದ ಸಂಗತಿಗಳು ಕವಿಯ ಪ್ರತಿಭಾಮೂಷೆಯನ್ನು ಪ್ರವೇಶಿಸಿ ಹೊರಗೆ ಬರುವಾಗ ವಾಸ್ತವಲೋಕದ ವಾಸನೆಗಳಿಂದ ಪಾರಾಗುತ್ತವೆ. ಕವಿ ಭಾಷೆಯ ಐಂದ್ರ ಜಾಲಿಕ ಕ್ರಿಯೆಯಿಂದಾಗಿ, ರೂಪಪರಾವರ್ತನ ಸಾಮರ್ಥ್ಯದಿಂದಾಗಿ ಅವು ನೂತನರೂಪ ವನ್ನು ಪಡೆಯುತ್ತವೆ; ಅವನ ಪ್ರತಿಭೆಯು ಮಾಯಾದೀಪ ಹೊಸ ಆವರಣವನ್ನು ಸೃಷ್ಟಿಸುತ್ತದೆ. ಅಲ್ಲಿ ಕಾಣುವುದು ಬಾಹ್ಯಜಗತ್ತಿನ ಪ್ರತಿಬಿಂಬವೆನ್ನುವುದಕ್ಕಿಂತ ಅದರ ಪರಿಣಾಮಮುದ್ರೆ (impression) ಎನ್ನಬಹುದು. ಆದ್ದರಿಂದಲೇ ಸಾಹಿತ್ಯ ಒಬ್ಬೊಬ್ಬರ ಮನಸ್ಸಿನ ಮೇಲೆ ಅವರವರ ಅಭಿರುಚಿ ಮನೋಧರ್ಮಗಳಿಗನುಗುಣವಾಗಿ ನಾನಾರೀತಿಯಲ್ಲಿ ಪರಿಣಾಮವನ್ನುಂಟುಮಾಡಿ, ಆ ಸಂಬಂಧವಾದ ಲಕ್ಷಣಗಳ ವೈವಿಧ್ಯಕ್ಕೆ ಕಾರಣವಾಗಿರುವುದು. "ಕಾವ್ಯ ಜೀವನ ವಿಮರ್ಶೆ"[2] ಎಂದೊಬ್ಬರು ಹೇಳಿದರೆ "ಗೇಯಾತ್ಮಕ ವಾದ ಆಲೋಚನೆ"[3] ಎಂದು ಮತ್ತೊಬ್ಬರು ನುಡಿಯುತ್ತಾರೆ; "ಸಕಲ ಜ್ಞಾನದ ಉಸಿರು ಮತ್ತು ಅಂತರಾತ್ಮವೇ ಕಾವ್ಯ" ಎಂಬುದು ಮತ್ತೊಂದು ಮತ,[3] "ಛಂದೋಬದ್ಧವಾದ ಭಾಷೆಯಲ್ಲಿ ಕಲ್ಪನಾತ್ಮಕವಾದ ಭಾವಾಲೋಚನೆಗಳ ಅಭಿವ್ಯಕ್ತಿಯ ಮೂಲಕ ಆನಂದ ವುಂಟುಮಾಡುವ ಕಲೆಯೇ ಕಾವ್ಯ"[3] ಎಂದು ಮಗುದೊಬ್ಬರು ಉಲಿಯುತ್ತಾರೆ. ಲೋಕ

---

[1] W. H. Hudson, *An Introduction to the Study of Literature*, pp. 40–41.
[2] Ibid, p. 83.
[3] Ibid, p. 84.

ಸಂಗತಿಗಳ, ವಸ್ತುಗಳ ಅಥವಾ ಮಾನವಸಮಾಜದ ನಿಜಸ್ವರೂಪದ ಅರಿವು ಗರುಡ ದೃಷ್ಟಿಯ ಕವಿಗೆ ಮಾತ್ರ ಸಾಧ್ಯ. ಅವನ ಪ್ರಖರವಾದ ಅಂತರ್ದೃಷ್ಟಿಗೆ ನಿಲುಕದ ಜೀವನಧರ್ಮವಿಲ್ಲ, ಅವನ ಪ್ರತಿಭೆಯ ಕ್ಷಕಿರಣ ಭೇದಿಸದ ವಸ್ತುವಿಲ್ಲ. ಅವನಿಗೆ ಭೌತಿಕ ರೂಪರೇಷೆಗಳಿಗಿಂತ ಮಿಗಿಲಾಗಿ ಅಂತರಂಗದ ವಿಲಾಸಗಳು ಮುಖ್ಯ. ವಿಶ್ಲೇಷಣೆಗಿಂತ ಸಂಶ್ಲೇಷಣೆಯಲ್ಲಿ, ದ್ವೈತಕ್ಕಿಂತ ಅದ್ವೈತದಲ್ಲಿ, ವಿಭಿನ್ನತೆಗಿಂತ ಸಮನ್ವಯದಲ್ಲಿ ಖಂಡತೆ ಗಿಂತ ಅಖಂಡತೆಯಲ್ಲಿ ಅವನಿಗೆ ಸದಾನುರಕ್ತಿ. ಲೋಕಹೃದಯ ಅವನ ಆತ್ಮಾಭಿವ್ಯಕ್ತಿಯ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. "ಕವಿಯ ಹೃದಯವೊಂದು ವೀಣೆ, ಲೋಕವದನು ಮಿಡಿವುದು" "ವೀರನಾರಾಯಣನೆ ಕವಿ, ಲಿಪಿಗಾರ ಕುಮಾರವ್ಯಾಸ" ಲೋಕದ ಬೊಬ್ಬೆ ಹೆಬ್ಬೊಬ್ಬೆಗಳು, ನೋವುನಲಿವುಗಳು, ಕಾಕುಕೇಕೆಗಳು, ನರಳುಚೀರುಲಿಗಳು ಅವನ ಹೃದಯದಲ್ಲಿ ಮಾರ್ದೊಳಗುತ್ತವೆ. ಅವನ ಪ್ರತಿಭಾಚಕ್ಷುವಿಗೆ ಭೂತಭವಿಷ್ಯತ್ತುಗಳೆರಡೂ ಸ್ಪಷ್ಟವಾಗಿ ಗೋಚರಿಸುತ್ತವೆ. ಸಮಾಜ ಮುಂದೆ ಸಾಗಬೇಕಾದ ದಾರಿ ಅವನಿಗೆ ಸುಸ್ಪಷ್ಟ. ಅವನ ಕಾವ್ಯಪರಂಪರೆಯ ಸತ್ವವನ್ನರಗಿಸಿಕೊಂಡು, ಸಮಕಾಲೀನ ಆಶೋತ್ತರಗಳಿಗೆ ನಾಲಗೆಯಾಗುವಂತೆ ಭವಿಷ್ಯಗತಿಗೆ ಕಣ್ಣಾಗುತ್ತದೆ. ಅವನ ಆಚಾರ್ಯಮತಿಗೆ ಹೊಳೆಯದ ಶ್ರೇಷ್ಠಾದರ್ಶಗಳಿಲ್ಲ, ಅರಿವಾಗದ ಶುದ್ಧಾಕಾಂಕ್ಷೆಗಳಿಲ್ಲ. ಬಿಂಬಗ್ರಾಹಕದಂತಿರುವ ಅವನ ಮನಸ್ಸಿನಲ್ಲಿ ಸುತ್ತಮುತ್ತಣ ಜನ—ಮನಸ್ಸಿನ ಕ್ರಿಯೆಗಳೆಲ್ಲ ಅಚ್ಚೊತ್ತುವುದರಿಂದ, ಅವನ ಕಾವ್ಯ ಸಾಮೂಹಿಕ ಸೃಷ್ಟಿಯೇ ಆಗುತ್ತದೆ. ಎಲ್ಲಿಂದಲೋ ತೇಲಿಬಂದ ಗಾನ, ಯಾರ ಬಾಯಿಂದಲೋ ಹೊರಹೊಮ್ಮಿದ ಗಾದೆ, ನೆರೆಯ ಜನ ಆಡಿದ ಮಾತು ಮಾಡಿದ ಮಾಟ, ಎಂದೋ ಮನಸ್ಸಿನೊಳಗೆ ನುಸುಳಿ ಮೂಲೆಯಲ್ಲಿ ಅವಿತುಕೊಂಡಿದ್ದ ಹತ್ತು ಜನರ ಅನುಭವಪುಂಜ ಕವಿವ್ಯಾಸನ ಮೂಲಕ ಮೂರ್ತಸ್ವರೂಪವನ್ನು ತಾಳುತ್ತವೆ. ಲೋಕ ಕವಿಯನ್ನು ಸೃಷ್ಟಿಸುತ್ತದೆ; ಕವಿ ಹೊಸ ಲೋಕವನ್ನು ಸೃಷ್ಟಿಸುತ್ತಾನೆ. ಸಾಮಾಜಿಕ ಸಂಗತಿ ಗಳಾಗಲಿ, ತಾತ್ವಿಕ ವಿಷಯಗಳಾಗಲಿ, ವೈಜ್ಞಾನಿಕ ವಿಚಾರಗಳಾಗಲಿ, ಯಾವುದೇ ಆಗಲಿ ಅವು ಕವಿಯ ಅನುಭವವಾಗಿ ವಿಶಿಷ್ಟರೀತಿಯಲ್ಲಿ ಹೊರಹೊಮ್ಮಿದರೆ ಮಾತ್ರ ಸಾಹಿತ್ಯವೆಂಬ ಅಭಿಧಾನಕ್ಕೆ ಯೋಗ್ಯವಾಗುತ್ತವೆ; ಇಲ್ಲವಾದರೆ ಅವುಗಳಿಗೆ ಬೇರೆ ಹೆಸರು ಸಲ್ಲಬೇಕಾಗು ತ್ತದೆ. ಎಂಥ ವಸ್ತುವೇ ಆಗಲೀ ಕವಿವಾಣಿಯ ಮೂಲಕ ಕಾಣಿಸಿಕೊಂಡಾಗ ಆಸ್ವಾದ್ಯ ವಾಗುತ್ತದೆಂಬುದನ್ನು ದಶರೂಪಕಕಾರ ಕೆಳಗಿನ ಪದ್ಯದಲ್ಲಿ ರಮ್ಯವಾಗಿ ವಿವರಿಸಿದ್ದಾನೆ:

ರಮ್ಯಂ ಜುಗುಪ್ಸಿತಮುದಾರಮಥಾಪಿ ನೀಚಂ
ಉಗ್ರಂ ಪ್ರಸಾದಿ ಗಹನಂ ವಿಕೃತಂ ಚ ವಸ್ತು
ಯದ್ವಾಪ್ಯವಸ್ತು ಕವಿಭಾವಕ ಭಾವ್ಯಮಾನಂ
ತನ್ನಾಸ್ತಿ ಯನ್ನ ರಸಭಾವಮುಪೈತಿ ಲೋಕೇ (೪ ೮೫)

ಕಲೆಗಾಗಿ ಕಲೆ ಎನ್ನುವ ಸಿದ್ಧಾಂತವಾಗಲಿ, ಕಾವ್ಯ ವಾಸ್ತವ ಜಗತ್ತಿನ ಪ್ರತಿರೂಪ ವಾಗಿರಬೇಕೆನ್ನುವ ಸೂತ್ರವಾಗಲಿ, ಬೇರಾವ ಸೂತ್ರವೇ ಆಗಲಿ ಒಂದೊಂದೂ ಬಿಡಿಬಿಡಿ

ಯಾಗಿ ಸಂಪೂರ್ಣ ಸತ್ಯವೆನ್ನಲಾಗದು. ಬ್ರಹ್ಮಸೃಷ್ಟಿಯಂತೆ ಸಾಹಿತ್ಯ ಸೃಷ್ಟಿಯೂ ಬಹು ಸಂಕೀರ್ಣವಾದುದು. ಆದ್ದರಿಂದ ಒಂದು ಸೂತ್ರದಲ್ಲಿ ಸಾಹಿತ್ಯದ ಸ್ವರೂಪಲಕ್ಷಣಗಳನ್ನು ಪೂರ್ಣವಾಗಿ ಹಿಡಿದಿಡಲು ಸಾಧ್ಯವಾಗದು. ಎಲ್ಲ ಸೂತ್ರಗಳ ಅಥವಾ ಸಿದ್ಧಾಂತಗಳ ಸಮನ್ವಯದ ಮೂಲಕ ಮಾತ್ರ ಸಾಹಿತ್ಯದ ಸಮಗ್ರಸ್ವರೂಪವನ್ನು ಗ್ರಹಿಸಬೇಕಾಗುತ್ತದೆ. ಮಾನವ ಜೀವನದ ಪರಿಧಿಯಲ್ಲಿಯೇ, ಮನುಕುಲದ ಕಲ್ಯಾಣಕ್ಕಾಗಿಯೇ ಬಳಕೆಯಾಗುವ ಧರ್ಮ, ತತ್ವ, ದರ್ಶನ ಮೊದಲಾದ ವಿಷಯಗಳೂ ಸಾಹಿತ್ಯದ ವಸ್ತುವಾಗುತ್ತವೆನ್ನುವುದನ್ನು ಪ್ರಾಚೀನ ಕಾವ್ಯಗಳ ಅಧ್ಯಯನಾವಸರದಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಂಥ ಕೃತಿಗಳನ್ನು ಕಾವ್ಯಶ್ರೇಣಿಯಲ್ಲಿ ಸೇರಿಸದ ವಿಮರ್ಶಕ ಮಹಾಶಯರು ವಿರಳವೇನಲ್ಲ. ಅವರ ಅಭಿಪ್ರಾಯವನ್ನು ಪುರಸ್ಕರಿಸುವುದಾದರೆ ರಾಮಾಯಣ ಮಹಾಭಾರತ ಮೊದಲಾದ ಗ್ರಂಥಗಳಲ್ಲಿ ಹಲವು ಭಾಗಗಳು ಉಪೇಕ್ಷಾರ್ಹವಾಗುತ್ತವೆ. "ಅವರ (ಮಹಾಕವಿಗಳ) ಕೃತಿಗಳು ನಿತ್ಯಸತ್ಯಗಳನ್ನು ಮತ್ತು ಚಿರಂತನ ಪುರುಷಾರ್ಥಗಳನ್ನು ಅಭಿವ್ಯಕ್ತಗೊಳಿಸುವ ಪ್ರತಿಮಾ ವಿಧಾನದ ಸೃಜನೆಗಳಾಗಿವೆ. ಅವು ಹೊರನೋಟಕ್ಕೆ ವೈಯಕ್ತಿಕವಾದ ವ್ಯಷ್ಟಿಸೃಷ್ಟಿಗಳಾಗಿ ತೋರಿದರೂ ಒಳಹೊಕ್ಕು ನೋಡಿದರೆ ಶಕ್ತಿಮಯವಾದ ಸಮಷ್ಟಿಪ್ರಜ್ಞೆಯ ಆವಿರ್ಭಾವಗಳಾಗಿರುತ್ತವೆ. ಅಲ್ಲಿ ಸಹೃದಯನಿಗೆ ಒದಗುವ ಭಾವಸಂವಾದ ಮತ್ತು ರಸಾನುಭವಗಳಿಗೆ ನಿತ್ಯಸತ್ಯದ ಮತ್ತು ಶಾಶ್ವತ ಪುರುಷಾರ್ಥದ ದರ್ಶನ ದೀಪ್ತಿಯ ಆಧ್ಯಾತ್ಮಿಕವಾದ ಚಿರಂತನ ಪ್ರಯೋಜನವಿರುತ್ತದೆ. ಆ ಕಾರಣದಿಂದಲೆ ಅವು ಮಹಾಕಾವ್ಯಗಳೆಂದೂ ಚಿರಕೃತಿಗಳೆಂದೂ ಪೂಜ್ಯ ಸ್ಥಾನದಲ್ಲಿ ನಿಲ್ಲುತ್ತವೆ. ಅವು ಯುಗಶಕ್ತಿಯ ಪ್ರತೀಕಗಳಾಗುತ್ತವೆ. ಯುಗಮಾನಸ ಪ್ರತಿಭಾ ಪ್ರಣಾಳಿಕಾ ಸ್ವರೂಪವಾಗಿರುವ ಮಹಾಕವಿ ಕಲ್ಪನೆಯ ಆಲವಾಲಗಳಲ್ಲಿ ಅತೀತದಿಂದ ಅವತರಿಸುವ ದೇವತಾ ಚೈತನ್ಯ ಪ್ರವಾಹಗಳಿಗೆ ಸಾಮಾನ್ಯ ಮರ್ತ್ಯ ಪ್ರಜ್ಞಾಗ್ರಾಹ್ಯವಾಗುವಂತೆ ರೂಪಧಾರಣೆ ಮಾಡಿಸುವ ಗುರುಗಳಾಗುತ್ತವೆ."[1]

ಸೃಷ್ಟಿಯ ನಿಜಸ್ವರೂಪವನ್ನರಿಯಲು ಯೋಗಿ ವಾಸ್ತವ ಜಗತ್ತನ್ನು ಸಂಪೂರ್ಣವಾಗಿ ಮರೆತು, ಅದರಿಂದ ವಿಚ್ಛೇದನಗೊಂಡು, ಅಂತರ್ಮುಖಿಯಾಗುತ್ತಾನೆಂದು ತಿಳಿದವರು ಹೇಳುತ್ತಾರೆ. ಅಂದರೆ ಅವನು ಬೇರೊಂದು ಪ್ರಪಂಚವನ್ನು ಹೋಗುತ್ತಾನೆಂದೇ ಹೇಳಬೇಕಾಗುತ್ತದೆ. ಇಲ್ಲವಾದರೆ ಬಾಹ್ಯಜಗತ್ತಿನ ತಾಕುನೂಕುಗಳು, ಗೊಂದಲ ಗಲಿಬಿಲಿಗಳು, ಭ್ರಾಂತಿ ಮೋಹಗಳು, ಕಷ್ಟ ಕ್ಲೇಶಗಳು, ಇಂತೆಯೇ ನೂರಾರು ಸಾವಿರಾರು ವಿಷಯಗಳು ಮಾನವನ ಮನಸ್ಸನ್ನು ಗಾಬರಿಗೊಳಿಸಿ, ಹರಿದು ಹರಿದು ಜೂಲು ಮಾಡುತ್ತವೆ. ಎಲ್ಲಿಯ ವರೆಗೆ ಮನುಷ್ಯ ಲೋಕವ್ಯವಹಾರಗಳಲ್ಲಿ ತಲ್ಲೀನನಾಗಿ, ಅಲ್ಲಿಯ ಸುಖದುಃಖಗಳಲ್ಲಿ ಪಾಲ್ಗೊಳ್ಳುತ್ತಾನೆಯೋ, ಅಲ್ಲಿಯ ತನಕ ಶಾಶ್ವತ ಸತ್ಯಗಳ ನೆಲೆಬೆಲೆಗಳು ಅವನಿಗೆಟುಕುವುದಿಲ್ಲ. ತಾನಿರುವ ಸಮಾಜದಲ್ಲಿ ಏನೋ ಅವ್ಯವಸ್ಥೆ, ಏನೋ ನ್ಯೂನತೆ, ಏನೋ ಅತೃಪ್ತಿ

[1] ಕುವೆಂಪು, ರಸೋವೈಸಃ, ಪು. ೧೫–೧೬

ಎದ್ದು ಕಾಣುವಂತಿದ್ದು, ಅಲ್ಲಿ ನಡೆಯುವ ಘಟನಾವಳಿಗಳಲ್ಲಿ ಕಾರ್ಯಕಾರಣ ಸಂಬಂಧ
ವಾಗಲೀ ಆನುಪೂರ್ವಿಯಾಗಲೀ ಲುಪ್ತವಾದಂತಿದ್ದು, ಎಂಥದೋ ಮಾಯಾವರಣ
ಸುತ್ತಲೂ ಕವಿದಂತಿದ್ದು, ದಿಗ್ಭ್ರಮೆಯಾಗಿ ಅವನಿಗೆ ವಸ್ತುಸ್ಥಿತಿಯ ಅರಿವು ಸ್ಪಷ್ಟವಾಗಿರು
ವುದಿಲ್ಲ; ಅವನ ತಾರತಮ್ಯ ವಿವೇಕ ಕದಡಿಹೋಗುತ್ತದೆ ಅಥವಾ ಬತ್ತುತ್ತದೆ. ಅವನ
ಪಕ್ಷಪಾತ ಮನೋಭಾವ, ವೈಯಕ್ತಿಕಾಭಿರುಚಿ, ಆನುವಂಶಿಕ ವಾಸನೆ, ಪೂರ್ವಸಂಸ್ಕಾರ,
ಹಿತಾಹಿತಸಂಬಂಧಗಳು, ಎಲ್ಲ ರೀತಿಯ ಲೌಕಿಕ ಬಂಧನಗಳು ಅವನ ವಿವೇಕವನ್ನು ಸತ್ಯ
ದರ್ಶನ ಸಾಮರ್ಥ್ಯವನ್ನು ಮತ್ತು ಅವನ ಧರ್ಮಬುದ್ಧಿಯನ್ನು ಮೊಂಡುಗೊಳಿಸುತ್ತವೆ.
ಪರಿಚಿತಾವರಣ ಭಗ್ನತೆಯಿಂದ ಮಾತ್ರ ಅವನ ಮನಸ್ಸು ಪ್ರಸನ್ನವಾಗುತ್ತದೆ, ದೃಷ್ಟಿ
ಶುಚಿಯಾಗುತ್ತದೆ, ವಿವೇಕ ಪ್ರಖರವಾಗುತ್ತದೆ. ಸುಪರಿಚಿತ ಭೌತಿಕ ಪ್ರಪಂಚದಲ್ಲಿ
ಕಾಣದ ಏಕಾಖಂಡತೆ, ಸಮನ್ವಯ ಸಾಮರಸ್ಯಗಳು, ಮತ್ತು ಯಥಾರ್ಥಜ್ಞಾನದೃಷ್ಟಿ
ಗಳು ಕಾವ್ಯಪ್ರಪಂಚದಲ್ಲಿ ಸ್ಪಷ್ಟವಾಗಿ ಕುರುಹುದೋರುತ್ತವೆ. ಅದನ್ನು ಪ್ರವೇಶಿಸಿದ
ಕೂಡಲೇ ಅವನು ಭೌತಿಕ ಪ್ರಪಂಚವನ್ನು ಮರೆಯುತ್ತಾನೆ. ಅಲ್ಲಿಯ ಸುಖದುಃಖಗಳಿಂದ,
ಮೋಹಪಾಶದಿಂದ ವಿಮುಕ್ತನಾಗುತ್ತಾನೆ. ಕಾವ್ಯಗಂಗೆಯಲ್ಲಿ ರಸ ಸ್ನಾತನಾಗಿ ಹಿಂದಿರುಗು
ವಾಗ ಅವನು ನೂತನ ವ್ಯಕ್ತಿಯಾಗಿ ಕಂಗೊಳಿಸುತ್ತಾನೆ. ನೂತನ ಸಂಸ್ಕಾರದಿಂದ ಅವನ
ಅಭಿರುಚಿ ಮನೋಧರ್ಮ ಜೀವನ ದೃಷ್ಟಿಗಳು ಮಾರ್ಪಾಡಾಗುತ್ತವೆ. ಆದ್ದರಿಂದಲೇ
ಕಾವ್ಯ ಎಂತು ಆತ್ಮಾಹ್ಲಾದಕಾರಿಯೋ ಅಂತೆಯೇ ಆತ್ಮೋದ್ಧಾರಕಾರಿಯೂ ಅಹುದು
ಎಂದು ಹೇಳುವುದು. ಆದ್ದರಿಂದ ಹದವಾಗಿ ಬೆರೆತ ರುಚಿಶುಚಿಗಳನ್ನುಳ್ಳ ಕೃತಿ ಮಾತ್ರ
ಶ್ರೇಷ್ಠ ಕಾವ್ಯವೆಂಬ ಹೆಸರಿಗೆ ಪಾತ್ರವಾಗುತ್ತದೆ.

ಸಾಹಿತ್ಯದ ವ್ಯಾಪಕತೆ

ಮಾನವಿಕ ಧಾರ್ಮಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳು ತಂತಮ್ಮಷ್ಟಕ್ಕೇ ಸ್ವಯಂ
ಪೂರ್ಣ; ಒಂದೊಂದು ಕ್ಷೇತ್ರವೂ ಸೀಮಾರೇಖೆಯನ್ನು ರಚಿಸಿಕೊಳ್ಳುತ್ತದೆ. ಆದರೆ
ಸಾಹಿತ್ಯವೃಕ್ಷದ ಬೇರು ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿ, ಅವುಗಳ ಸಾರಸತ್ವವನ್ನು ಹೀರಿ
ಕೊಂಡು, ಗಗನೋನ್ನತವಾಗಿ ವಿಶ್ವ ವಿಶಾಲವಾಗಿ ಬೆಳೆಯುತ್ತದೆ. ಆದ್ದರಿಂದಲೇ ಸಾಹಿತ್ಯ
ಜ್ಞಾನಕೇಂದ್ರವಾಗುವಂತೆ ಜ್ಞಾನಪರಿಧಿಯೂ ಆಗುತ್ತದೆಂಬ ಅಭಿಪ್ರಾಯ ಚಲಾವಣೆ
ಯಲ್ಲಿವೆ. ವಿಜ್ಞಾನ, ತಂತ್ರವಿಜ್ಞಾನ ಮತ್ತು ಮಾನವಿಕ ಶಾಖೆಗಳು ಪರಸ್ಪರ ಪೂರಕ
ವಾಗಿ, ಸಾಂಸ್ಕೃತಿಕ ಪರಂಪರೆಯನ್ನು ಕಾಯ್ದುಕೊಂಡು, ಅದನ್ನು ಪೋಷಿಸುತ್ತ, ಅದರ
ವಿಕಾಸಕ್ಕೆ ಪ್ರೇರಕಶಕ್ತಿಗಳಾಗಿರುವಂತೆಯೇ ಸಾಹಿತ್ಯವೂ ಆ ನಿಟ್ಟಿನಲ್ಲಿ ಸಾಗುತ್ತಿದೆ;
ಅಷ್ಟೇ ಅಲ್ಲ, ಅವುಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ವಿಜ್ಞಾನಕ್ಕೂ ಒಂದು
ಮಿತಿಯುಂಟು; ಅದೂ ಭೇದಿಸಲಾರದ ಎಡೆಗಳಲ್ಲಿಯೂ ಸಾಹಿತ್ಯ ನುಸ್ನುಗ್ಗುತ್ತದೆ.
ಮೇಲಾಗಿ ಅವುಗಳ ವ್ಯವಹಾರ ಪ್ರಧಾನತಃ ಮಾನವನ ಬಾಹ್ಯಜೀವನಕ್ಕೆ ಸಂಬಂಧಿಸಿ
ದುವು. ಅವನ ಅಂತರಂಗಿಕ ಜೀವನವನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಮಾಧ್ಯಮ

ವೆಂದರೆ ಕಾವ್ಯ. "ನಿರ್ದಿಷ್ಟ ಚೌಕಟ್ಟಿನಲ್ಲಿ ಜ್ಞಾನದ ಸಾರ್ವಭೌಮತ್ವವನ್ನೊಪ್ಪಿಕೊಳ್ಳಬೇಕಾಗುತ್ತದೆ; ಆದರೆ ಚೌಕಟ್ಟಿನಾಚೆ ಅದು ಮೂಕವಾಗುತ್ತದೆಂಬ ಸಂಗತಿ ಅನುಭವ ಮತ್ತು ತರ್ಕದಿಂದ ಗಮ್ಯವಾಗುತ್ತದೆ."[1] ಆಗ ಮಾನವ ಅಂತಃಸ್ಫೂರ್ತಿಯನ್ನು ನೆಮ್ಮಿಕೊಳ್ಳಬೇಕಾಗುತ್ತದೆ. ಕಾವ್ಯಜ್ಞಾನದ ಅನುಭವವನ್ನೂ ಅಂತಃಸ್ಫೂರ್ತಿಯಿಂದ ಸಿದ್ಧವಾದ ಅನುಭವವನ್ನೂ ಬಳಸಿಕೊಳ್ಳುತ್ತದೆ. ಆದ್ದರಿಂದ ಸಂಸ್ಕೃತಿಯ ವಿಶ್ವರೂಪವನ್ನು ಪ್ರಕಟಿಸುವ ಸಬಲ ಸಾಧನಗಳಲ್ಲಿ ಸಾಹಿತ್ಯ ಬಹುಮುಖ್ಯವಾದದ್ದೆಂದು ಗಣಿಸಬಹುದಾಗಿದೆ.

ಸಂಸ್ಕೃತಿಯ ಸ್ವರೂಪ ಮತ್ತು ವ್ಯಾಪಕತೆ

ಸಂಸ್ಕೃತಿ ಎಂಬುದೊಂದು ಅಮೂರ್ತಕಲ್ಪನೆ. ಪ್ರಕೃತಿಯಲ್ಲದ್ದು, ಅದರಿಂದ ಭಿನ್ನವಾದದ್ದು ಅಥವಾ ಪರಿಷ್ಕಾರದಿಂದ ಅದೇ ರೂಪಾಂತರಗೊಂಡದ್ದು ಸಂಸ್ಕೃತಿಯಾಗುತ್ತದೆ. ಮೊದಲೇ ಇದ್ದದ್ದು ಅಥವಾ ದೇವರಿಂದ ಸೃಷ್ಟಿಗೊಂಡದ್ದು ಪ್ರಕೃತಿ; ಮನುಷ್ಯ ಸೃಷ್ಟಿಸಿದ್ದು ಅಥವಾ ಪರಿಷ್ಕರಿಸಿದ್ದು ಸಂಸ್ಕೃತಿ. ತನಗೆ ಬೇಕಾದಂತೆ ಮನುಷ್ಯ ಪ್ರಕೃತಿಯನ್ನು ಬಳಸಿಕೊಳ್ಳುವಾಗ ಸಂಸ್ಕೃತಿಯ ಉದಯವಾಗುತ್ತದೆ. ಅಂದರೆ ಪ್ರಕೃತಿಯ ಮತ್ತೊಂದು ರೂಪವೇ ಸಂಸ್ಕೃತಿ. ಲ್ಯಾಟಿನ್ ಭಾಷೆಯಲ್ಲಿ Cultus ಎಂದರೆ ಗೌರವಿಸು, ಆರಾಧಿಸು, ಸೇವಿಸು, ಪೂಜಿಸು ಎಂದು ಅರ್ಥ. ಆದಿಮಾನವನ ಕಾಲದಲ್ಲಿ ಅವನ ಎಲ್ಲ ಕ್ರಿಯೆಗಳೂ ಆರಾಧನಾರೂಪದಲ್ಲಿರುತ್ತಿದ್ದುವು. ನೈಸರ್ಗಿಕ ಶಕ್ತಿಗಳನ್ನೊಲಿಸಿಕೊಂಡದ್ದಾದರೆ ಅನಿಷ್ಟಗಳು ತೊಲಗಿ, ತನ್ನ ಆವಶ್ಯಕತೆಗಳು ಪೂರೈಸುತ್ತವೆಂದು ಅವನು ನಂಬಿಕೊಂಡಿದ್ದನು. ಬರಬರುತ್ತ ಭೂದೇವಿಯ ಆರಾಧನೆ ಕೃಷಿ ಎಂಬ ಅರ್ಥ ಪಡೆಯುತ್ತದೆ. ಜೀವನದ ಎಲ್ಲ ಕ್ಷೇತ್ರಗಳಿಗೂ ಕೃಷಿ ಎನ್ನುವ ಪದ ಬೆಳೆಸು, ಪರಿಷ್ಕರಿಸು, ವೃದ್ಧಿಸು, ಉನ್ನತಗೊಳಿಸು ಎಂಬರ್ಥದಲ್ಲಿ ಅನ್ವಯವಾಗುತ್ತದೆ. ಮಾನವ ಮನಸ್ಸಿನ ಶಕ್ತಿಯನ್ನು ಕಂಡುಕೊಂಡನಂತರ ಅದರ ಕೃಷಿಯ ಕಡೆಗೆ, ಅಂದರೆ ಅಂತರಂಗ ವ್ಯವಸಾಯದ ಕಡೆಗೆ ಅವನ ಗಮನ ಹರಿಯುತ್ತದೆ. ಅವನ ಆಂತರಿಕ ಸಂಸ್ಕಾರ ಅವನ ಬಾಹ್ಯಕ್ರಿಯೆಗಳಲ್ಲಿ, ವ್ಯವಸಾಯೋಪಕರಣಗಳ ತಯಾರಿಕೆಯಲ್ಲಿ, ಜೀವನೋಪಾಯಗಳ ಸಾಧನೆಯಲ್ಲಿ, ಸಾಮಾಜಿಕ ಸಂಘಟನೆಯಲ್ಲಿ ಆಡಳಿತ ವ್ಯವಸ್ಥೆಯಲ್ಲಿ, ರಾಜಕೀಯಾರ್ಥಿಕ ವಿಚಾರಗಳಲ್ಲಿ, ಮತೀಯ ವ್ಯವಹಾರಗಳಲ್ಲಿ, ಆಚಾರ ಸಂಪ್ರದಾಯಗಳಲ್ಲಿ, ಯಂತ್ರತಂತ್ರಗಳಲ್ಲಿ, ವಾಸ್ತುಶಿಲ್ಪದಲ್ಲಿ, ಕಲಾಪ್ರಕಾರಗಳಲ್ಲಿ, ದಾರ್ಶನಿಕ ಸಂಗತಿಗಳಲ್ಲಿ, ಯುದ್ಧ ಕ್ರೀಡೆಗಳಲ್ಲಿ, ನೈಸರ್ಗಿಕ ಶಕ್ತಿಗಳ ನಿಯಂತ್ರಣದಲ್ಲಿ, ವ್ಯಾಪಾರ ವಾಣಿಜ್ಯಗಳಲ್ಲಿ, ವಿಜ್ಞಾನ ಕೈಗಾರಿಕೆಗಳಲ್ಲಿ, ಭೋಗೋಪಕರಣಗಳಲ್ಲಿ, ಇನ್ನೂ ಅಸಂಖ್ಯವಿಧಾನಗಳಲ್ಲಿ ಹೊರಹೊಮ್ಮುತ್ತದೆ. ಈ ಸಿದ್ಧಿಗಳನ್ನು Culture ಮತ್ತು Civilisation ಎಂಬ ಮಾತುಗಳಿಂದ ನಿರ್ದೇಶಿಸು

---

[1] Experience and logic teach man that within definite limits knowledge is supreme; but beyond them nothing can be done by rationally founded practical exertions—B. Malinowski, *Encyclopaedia of Social Sciences*, p. 635.

ವುದುಂಟು. ಈ ಎರಡು ಮಾತುಗಳಿಗೆ ಸಂವಾದಿಯಾಗಿ ಸಂಸ್ಕೃತಿ ಮತ್ತು ನಾಗರಿಕತೆ ಎಂಬ ಪದಗಳು ಚಾಲ್ತಿಯಲ್ಲಿವೆ. ಧರ್ಮದ ಕ್ರಿಯಾತ್ಮಕರೂಪವೇ ಕರ್ಮವಾಗುವಂತೆ, ಸಂಸ್ಕೃತಿ ಕ್ರಿಯೆಯ ರೂಪವನ್ನು ಪಡೆದಾಗ ನಾಗರಿಕತೆಯಾಗುತ್ತದೆ. ಮನುಷ್ಯ ಸುಖವಾಗಿ ಬಾಳಬೇಕಾದರೆ ಮನೆ ಬೇಕು, ಮಠ ಬೇಕು, ಬಟ್ಟೆ ಬೇಕು, ಆಹಾರ ಸಾಮಗ್ರಿಗಳು ಬೇಕು; ಅನಂತರ ಮತ್ತೂ ಅನೇಕ ಭೋಗ ಸಾಮಗ್ರಿಗಳು ಬೇಕು; ಕಾರು ಬೇಕು, ರೈಲು ಬೇಕು, ಅಡುಗೆ ಯಂತ್ರಗಳೂ ಬೇಕು. ಆಹಾರ ಪಾನೀಯಗಳಲ್ಲಿಯೂ ಮುದ್ದೆ ರೊಟ್ಟಿ ನೀರಾದರೆ ಸಾಲದು; ದೋಸೆ ಇಡ್ಲಿ ಕಜ್ಜಾಯ ಹೋಳಿಗೆ, ಇನ್ನೂ ಏನೇನೋ ಬೇಕು. ಮನೆಯಾದನಂತರ ಮಂಚ ಬೇಕು, ಗೋಡೆಗಳನ್ನಲಂಕರಿಸಲು ಚಿತ್ರಗಳು ಬೇಕು. ಸಂಗೀತ ಕೇಳಲು ರೇಡಿಯೋ ಬೇಕು, ಜ್ಞಾನ ಹೆಚ್ಚಿಸಿಕೊಳ್ಳಲು ಗ್ರಂಥಗಳು ಬೇಕು. ಇವು ಬೇಸರವಾದಾಗ ಏಕಾಂತ ಬೇಕು. ಮತ್ತೆ ಅರಣ್ಯವಾಸ ಅಗತ್ಯವಾಗಿ ಕಂಡೀತು. ಅನೇಕ ವೈಚಿತ್ರ್ಯಗಳನ್ನು ಸೃಷ್ಟಿಸಿದ, ಅವುಗಳಿಂದ ತೃಪ್ತವಾಗದ ಮನಸ್ಸು ತನ್ನ ಮತ್ತು ಜಗತ್ತಿನ ಸಂಬಂಧವನ್ನು ಕುರಿತು ಯೋಚಿಸುತ್ತದೆ. ಆಗ ಉತ್ತಮ ಸಮಾಜದ, ಉದಾತ್ತ ಜೀವನದ, ಲೋಕೋತ್ತರಸಿದ್ಧಿಯ ಕಲ್ಪನೆ ಅವನ ಮನಸ್ಸಿನಲ್ಲಿ ಮೂಡುತ್ತದೆ. ಅಂತರಂಗ ಕೃಷಿಯ ಫಲವಾಗಿ ಹೊರಹೊಮ್ಮಿದ ಭಾವನೆಗಳು ಅವನ ವರ್ತನೆಯಲ್ಲಿ ಅವನ ನುಡಿಯಲ್ಲಿ. ಅವನ ನಾನಾ ಕ್ರಿಯೆಗಳಲ್ಲಿ ಮೈದೋರುತ್ತವೆ. ಆ ನಾನಾ ಕ್ರಿಯೆಗಳು ವಿಜ್ಞಾನ, ಕೈಗಾರಿಕೆ, ರಾಜಕೀಯ ವ್ಯವಹಾರ, ನಾಗರಿಕತೆ ಮೊದಲಾದ ಹೆಸರು ಪಡೆಯುತ್ತವೆ. ಅವು ಸಂಸ್ಕೃತಿಯ ಭಿನ್ನ ಭಿನ್ನ ರೂಪಗಳಾದರೂ, ನಾಗರಿಕತೆಗೂ ಸಂಸ್ಕೃತಿಗೂ ನಡುವೆ ಗಡಿರೇಖೆ ಎಳೆಯುವುದು ಕಠಿನವಾದರೂ, ತತ್ತ್ವನಿಷ್ಠ ಭಾವಾತ್ಮಕ ಆಲೋಚನೆಗಳ ಮತ್ತು ಅನುಭವಗಳ ಮೊತ್ತವನ್ನು ಸಂಸ್ಕೃತಿಯೆಂದು ಕರೆಯುವುದುಂಟು. ಒಬ್ಬ ಹಳ್ಳಿಗ ಕ್ರಾಪು ಬಿಟ್ಟುಕೊಂಡು, ಕೋಟು ಷರಾಯಿ ತೊಟ್ಟುಕೊಂಡು, ಕಡುಕು ಮುರಿಗಳನ್ನು ತೊರೆದು ಗಡಿಯಾರ ಕಟ್ಟಿಕೊಂಡು, ಸೈಕಲ್ಲಿನ ಮೇಲೆ ಪೇಟೆಗೆ ಬಂದಾಗ ಅವನು ನಾಗರಿಕನೆಂದು ಸಂಬೋಧಿಸುವುದುಂಟು; ಸರ್ವಾಲಂಕಾರಭೂಷಿತನಾದ ಪಟ್ಟಣಿಗ ಅಶ್ಲೀಲವಾಗಿ ಮಾತಾಡುತ್ತ, ಪರಸ್ತ್ರೀ ಕಡೆಗೆ ಹುಬ್ಬು ಹಾರಿಸುತ್ತ, ಬಡವರನ್ನು ಹಿಂಸಿಸುತ್ತ ಅದ್ಧೂರಿಯ ಬಾಳು ನಡೆಸುತ್ತಿದ್ದರೆ, ಅವನನ್ನು ಅಸಂಸ್ಕೃತನೆಂದು ಕರೆಯಬೇಕಾಗುತ್ತದೆ. ದೀನದಲಿತರಿಗಾಗಿ ಮನಕರಗದ, ಕಣ್ಣೀರು ಹರಿಸದ ಮಾನವ ಅಸಂಸ್ಕೃತನೆಂದು ವಿವೇಕಾನಂದರು ಹೇಳುತ್ತಾರೆ. ಮಾನವ ಕಲ್ಯಾಣಕ್ಕಾಗಿ ದೀನದಲಿತೋದ್ಧಾರಕ್ಕಾಗಿ ಪ್ರಾಣ ತ್ಯಾಗಕ್ಕೂ ಸಿದ್ಧರಾಗಿದ್ದ ಯೇಸು ಬುದ್ಧ ಬಸವೇಶ್ವರ ಗಾಂಧೀಜಿ ಲಿಂಕನ್ ಲೆನಿನ್ ಮೊದಲಾದ ದೇವಮಾನವರು ಉಚ್ಚ ಸಂಸ್ಕೃತಿಯ ಅವತಾರ ಸ್ವರೂಪರಾಗಿದ್ದಾರೆ.

ಸಂಸ್ಕೃತಿಯೆಂಬುದು ಪರಂಪರಾಗತವಾದುದು; ಅದೊಂದು ಸಾಮಾಜಿಕ ಕಲ್ಪನೆ; ಅಂತೆಯೇ ಸಾಮುದಾಯಿಕ ಸೃಷ್ಟಿ. ಅದರ ಸೃಷ್ಟಿಗೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಕಾರಣ. ಪ್ರತಿಭಾವಂತನೂ ಚಿಂತನಶೀಲನೂ ಕ್ರಾಂತದರ್ಶಿಯೂ ಆದ ಉಪನಿಷತ್ತಿನ ಋಷಿಯೋ ಸೋಕ್ರಟೀಸನೋ, ಕೃಷ್ಣನೋ, ಸಂತಪಾಲನೋ, ಮಹಮ್ಮದನೋ,

ಶ್ರೇಷ್ಠವ್ಯಕ್ತಿಯೆಂದು ಗಣ್ಯನಾದ ವ್ಯಕ್ತಿಯೊಬ್ಬ ತನ್ನ ನಡೆನುಡಿಗಳ ಮೂಲಕ ಆದರ್ಶ ಜೀವನದ ಸ್ವರೂಪವನ್ನು ಪ್ರಕಾಶಪಡಿಸುತ್ತಾನೆ. ಇತರರು ಅದನ್ನನುಸರಿಸುತ್ತಾರೆ. ಅನುಸರಣೆಯಿಂದ ಅದಕ್ಕೆ ಮೆರುಗೂ, ಸ್ಥಿರತೆಯೂ, ವ್ಯಾಪಕತೆಯೂ ಸಮನಿಸುತ್ತವೆ.

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಾಃ
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ

ಲೋಕ ಅನುಸರಿಸದ ವರ್ತನೆ ಅಥವಾ ಭಾವನೆ ಅದೆಷ್ಟೇ ಮೋಜಿನದಾಗಿರಲಿ ನಿಶ್ಶೇಷವಾಗಿ ನಾಶವಾಗುತ್ತದೆ. ಬಹುಜನಸಮ್ಮತಿಯಿಂದ ಮತ್ತು ಪುನರಾವರ್ತನೆಯಿಂದ ಮಾತ್ರ ಅದು ಜೀವಂತವಾಗಿ ಉಳಿಯುತ್ತದೆ, ನವ್ಯೋನವವಾಗಿ ವಿಕಾಸಹೊಂದುತ್ತದೆ. ಅದು ಸಮಾಜ ಜೀವನದಲ್ಲಿ ಓತಪ್ರೋತವಾಗಿ ಹೆಣೆದುಕೊಂಡಾಗ ಮೂಲಕರ್ತನ ಹೆಸರು ಸಂಪೂರ್ಣ ಮರೆತುಹೋಗಿ, ಅದು ಸಮಾಜದ ಸ್ವತ್ತಾಗುತ್ತದೆ.

ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ

ಎಂಬ ಬಸವೇಶ್ವರರ ಬೋಧನೆ ಭಾರತೀಯ ಜೀವನದ ಆದರ್ಶವಾಗಿದೆ. ಬಸವೇಶ್ವರರು ಹೇಳಿದ್ದೆಂದು ಅವಕ್ಕೆ ಗೌರವವಿದೆ, ನಿಜ. ಆದರೆ ಜೀವನದ ಶ್ರೇಯಸ್ಸಿಗಾಗಿ ಅದು ಅನಿವಾರ್ಯವೆಂಬ ಕಾರಣದಿಂದ ಲೋಕ ಅದನ್ನು ಅನುಷ್ಠಾನಗೊಳಿಸುತ್ತದೆ. ಹೀಗಾಗಿ ಅದು ವಿಶ್ವಸತ್ಯದ ಮಟ್ಟಕ್ಕೇರುತ್ತದೆ. ಇದನ್ನೇ ಸಂಸ್ಕೃತಿಯೆಂದು ಕರೆಯುವುದು. ಅದು ಆಲೋಚನೆಗೆ ಗಹನತೆಯನ್ನೂ, ದೃಷ್ಟಿಗೆ ವಿಶಾಲತೆಯನ್ನೂ, ಭಾವನೆಗೆ ದೃಢತೆಯನ್ನೂ, ಆಚಾರವಿಚಾರ ಕ್ರಿಯೆಗಳಿಗೆ ಪ್ರೇರಣೆಯನ್ನೂ, ಜೀವನಕ್ಕೆ ಬೆಳಕನ್ನೂ ಕರುಣಿಸುತ್ತದೆ.

ಸಂಸ್ಕೃತಿ ಇದ್ದಕ್ಕಿದ್ದಂತೆ ಹುಟ್ಟಿಕೊಂಡದ್ದಲ್ಲ. ಅದರ ಬೇರುಗಳು ಪ್ರಪ್ರಾಚೀನತೆಯ ಅಜ್ಞಾತಗರ್ಭದಲ್ಲಿ ಹುದುಗಿವೆ. ಅದು ಆದ್ಯಂತಗಳಿಲ್ಲದ ಜೀವಸತ್ವ. ಅದು ಮಾನವನ ಉಗಮದೊಂದಿಗೆ ಪ್ರಾರಂಭವಾಗಿ, ಅವನಿರುವತನಕ ಉಳಿಯುವಂಥದು. ಜೀವನ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಮತ್ತು ಉದಾತ್ತಗೊಳಿಸುವಲ್ಲಿ, ಮಾನವ ಊರ್ಧ್ವಮುಖ ಯಾತ್ರೆಯನ್ನು ಕೈಕೊಂಡಿದ್ದಾನೆನ್ನುವುದು ಸುಸ್ಪಷ್ಟ. ಪಶುತ್ವದಿಂದ ಮಾನವತ್ವಕ್ಕೇರಿ, ಅಲ್ಲಿಂದ ದೇವತ್ವಕ್ಕೇರುವ ಸನ್ನಾಹದಲ್ಲಿ, ಪೂರ್ಣತ್ವವನ್ನು ಸಾಧಿಸಬೇಕೆನ್ನುವ ಅಭೀಪ್ಸೆಯಲ್ಲಿ ಬಹು ದೀರ್ಘಕಾಲದ ಸಾಮೂಹಿಕ ವ್ಯವಸಾಯದ ಪರಿಣಾಮವಾಗಿ, ಸಂಸ್ಕೃತಿ ವಿಕಾಸಗೊಳ್ಳುತ್ತಿದೆ. ತಾನು ಹುಟ್ಟಿದಾಗ ಪ್ರಪಂಚ ಯಾವ ಪರಿಸ್ಥಿತಿಯಲ್ಲಿತ್ತೋ, ಅದಕ್ಕಿಂತ ಉತ್ತಮವಾದ ಸ್ಥಿತಿಯಲ್ಲಿ ಅದನ್ನು ಬಿಟ್ಟುಹೋಗಬೇಕೆನ್ನುವ ಬಯಕೆಯೇ ಸಂಸ್ಕೃತಿ ವಿಕಾ

ಸಕ್ಕೆ ಪ್ರೇರಕವಾಗುತ್ತವೆಂದು ಮಾಥ್ಯೂ ಆರ್ನಾಲ್ಡ್ ಹೇಳುತ್ತಾನೆ. "ಮನುಷ್ಯ ಅನಿವಾರ್ಯವಾಗಿ ಸಂಸ್ಕೃತಿಯ ನಿರ್ಮಾಣದಲ್ಲಿ ತೊಡಗುತ್ತಾನೆ. ಪ್ರಗತಿ ಅವನ ಸಹಜ ಲಕ್ಷಣ. ಅವನ ಜೀವದ್ರವ್ಯದಲ್ಲಿರುವ ಚಾಲನಶಕ್ತಿ ಅವನು ಬೇಡವೆಂದರೂ ಮುಂದಕ್ಕೆ ನೂಕುತ್ತದೆ."[1] ಚೈತನ್ಯವಿದ್ದೆಡೆಯಲ್ಲೆಲ್ಲ ಪ್ರಗತಿ ಇದ್ದೇ ತೀರಬೇಕು. ಇದ್ದಲ್ಲಿಯೇ ಇರುವುದು ಜಡತ್ವದ ಚಿನ್ಹೆ. ಮಾನವನ ಭೌತಿಕ ಕ್ಷುಧೆಯನ್ನು ತಣಿಸಬಹುದು; ಅವನ ಅಭೌತಿಕ ಅಥವಾ ಮಾನಸಿಕ ಕ್ಷುಧೆಯನ್ನು ಮಾತ್ರ ಎಂದೆಂದಿಗೂ ತೃಪ್ತಿಪಡಿಸಲಾಗದು. ಅವನನ್ನು ಪಶುತ್ವದಿಂದ ಪಾರುಮಾಡುವ ಆಧ್ಯಾತ್ಮಜೀವನದ ಕವಲುಗಳಾದ ಬೌದ್ಧಿಕ, ಧಾರ್ಮಿಕ ಮತ್ತು ನೈತಿಕ ಶಕ್ತಿಗಳ ಅಭಿವ್ಯಕ್ತಿಯೇ ಸಂಸ್ಕೃತಿಯಾಗುತ್ತದೆ. ಅದು ಅವನ ವ್ಯಕ್ತಿತ್ವವನ್ನು ಬೆಳೆಸುತ್ತದೆ; ಜೀವನದ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಜನ ಒಟ್ಟಿಗೆ ಬಾಳುವಂತೆ ಪ್ರೇರಿಸುತ್ತದೆ. ಸಹಬಾಳ್ವೆಗೆ ಅತ್ಯವಶ್ಯವಾಗಿರುವ ಸ್ವಾರ್ಥತ್ಯಾಗವನ್ನು, ಧರ್ಮಬುದ್ಧಿಯನ್ನು ಬೋಧಿಸುತ್ತದೆ. ಕೌಟುಂಬಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಐಕ್ಯಕ್ಕೆ ಸಾಂಸ್ಕೃತಿಕ ಮೌಲ್ಯಗಳ ಅರಿವು ಅತ್ಯಗತ್ಯ. ಶ್ರದ್ಧಾನಿಷ್ಠೆಗಳು ಭಾವನಾತ್ಮಕವಾದ ಸಂಬಂಧಗಳು, ಧೈರ್ಯ ಸಾಹಸ ಮರುಕ ಅನುಕಂಪ ಮೊದಲಾದ ದೈವೀಗುಣಗಳು ಸಂಸ್ಕೃತಿಯ ಮಂದಾರವೃಕ್ಷದಲ್ಲಿ ಅರಳಿರುವ ಹೂಗಳು. ಆಸುರೀಶಕ್ತಿಗಳ ದಮನ ಅದರಿಂದ ಮಾತ್ರ ಸಾಧ್ಯ.

ಸಂಸ್ಕೃತಿ ಎಂಬ ಪದವನ್ನು ಜೀವನಕ್ಷೇತ್ರದ ಸರ್ವಸಿದ್ಧಿಗಳಿಗೂ ಬಳಸುವ ಪರಿಪಾಠ ರೂಢಿಯಲ್ಲಿದೆ. "ಮಾನವಕುಲವಿಜ್ಞಾನದ ವಿಶಾಲವಾದ ಹಿನ್ನೆಲೆಯಲ್ಲಿ ಪರಿಕಿಸುವಾಗ ಸಂಸ್ಕೃತಿ ಅಥವಾ ನಾಗರಿಕತೆ ಸಂಕೀರ್ಣವಿಷಯಗಳ ಮೊತ್ತವಾಗುತ್ತದೆ. ಜ್ಞಾನ, ನಂಬಿಕೆಗಳು, ಕಲೆಗಳು, ನೀತಿಗಳು, ಕಾನೂನುಗಳು, ಆಚಾರಗಳು, ಒಂದು ಸಮಾಜದ ಸದಸ್ಯನಾಗಿ ಮನುಷ್ಯ ಪಡೆಯಬಹುದಾದ ರೂಢಿ ಹಾಗೂ ಸಾಮರ್ಥ್ಯಗಳು—ಇವೆಲ್ಲ ಸಂಸ್ಕೃತಿಯ ವಲಯದಲ್ಲಿ ಬರುತ್ತವೆಂದು ಒಂದು ಅಭಿಪ್ರಾಯವುಂಟು.[2] "ಪೂರ್ವಜರಿಂದ ಪಡೆದ ಕಲಾವಸ್ತುಗಳು, ಲೇಸುಗಳು, ಆಸ್ತಿಗಳು, ಯಂತ್ರತಂತ್ರವಿಧಾನಗಳು, ಭಾವನೆಗಳು, ಸಂಪ್ರದಾಯಗಳು ಮತ್ತು ಮೌಲ್ಯಗಳು ಸಾಂಸ್ಕೃತಿಕ ಸಂಗತಿಗಳೆಂದು ಗಣನೆಗೊಳ್ಳುತ್ತವೆ"[3] ಎಂಬುದು ಮತ್ತೊಂದು ಮತ. ಮತ, ಧರ್ಮ, ಕಲೆ, ಭಾಷೆ,

---

1 Man builds culture because he cannot help it; there is a drive in his protoplasam that carries him forward even against his will—Quoted by Melville and J. Herskovits in their *Cultural Anthropology*, p. 111.

2 Culture or civilisation, taken in its wide ethnographic sense, is that complex whole which includes knowledge, belief, art, morals, law, custom, and any other capabilities and habits acquired by man as a member of society—E.B. Tylor, *Primitive culture*, p. 1.

3 Culture comprises inherited artefacts, goods, technical processes, ideas, habits and Values—B. Malinowski in *Encyclopaedia of Social Sciences*, p. 621.

ಆರ್ಥಿಕ ವ್ಯವಸ್ಥೆ, ರಾಜಕೀಯ ಸಂಘಟನೆ, ಸಾಮಾಜಿಕ ಸಂಸ್ಥೆಗಳು, ಯಂತ್ರತಂತ್ರಗಳು, ವಿಜ್ಞಾನ, ಮಾನವನ ಅಂತರಂಗ ವಿಚಾರಗಳು—ಇವು ಸಂಸ್ಕೃತಿಯ ಮೂಲಸ್ಥಾನಗಳೆಂದು ಅನೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಇವನ್ನು ಮತ್ತೆ ಭೌತಿಕ ಮತ್ತು ಅಭೌತಿಕಗಳೆಂದು ವರ್ಗೀಕರಿಸಬಹುದು. ವಿದ್ವಾಂಸರ ಪ್ರಕಾರ ಸಂಸ್ಕೃತಿಯ ವಲಯದಲ್ಲಿ ಸೇರಬಹುದಾದ ಸಂಗತಿಗಳನ್ನು ಗಮನಿಸಿದಾಗ ಅದು ಅನೇಕ ವಸ್ತುಗಳು ಕೂಡಿ ಸಿದ್ಧಗೊಂಡ ರಸಪಾಕ ಅಥವಾ ರಸಾಯನವೆಂದು ಹೇಳಬಹುದು.

ಒಟ್ಟಿನಲ್ಲಿ ಸಂಸ್ಕೃತಿಯೆಂಬುದು ಜೀವನಧರ್ಮವೆಂದು ಹೇಳಿದಂತಾಯಿತು. ಶ್ರೀರಾಮನ ವ್ಯಕ್ತಿತ್ವ ನಿರೂಪಣೆಯಲ್ಲಿ ವಾಲ್ಮೀಕಿ ಸಂಸ್ಕೃತಿಯ ಆದರ್ಶವನ್ನು ಸ್ಪಷ್ಟಪಡಿಸಿದ್ದಾನೆ.[1] ನಡೆನುಡಿಗಳ ಸೊಗಸೇ ಸಂಸ್ಕೃತಿ. "ಅದು ಭಾವಸೌಂದರ್ಯ ಮತ್ತು ಶೀಲಸೌಂದರ್ಯ.... ಸಂಸ್ಕೃತಿಯಲ್ಲಿ ಜೀವನಸಂದರ್ಭಗಳ ಯುಕ್ತಾಯುಕ್ತ ವಿವೇಚನೆ ಒಂದು ಅಂಶ; ವಸ್ತುಗಳ ತಾರತಮ್ಯಗಣನೆ ಇನ್ನೊಂದಂಶ; ಆತ್ಮಶೋಧನೆ ಆತ್ಮಸಂಯಮಗಳು ಮತ್ತೊಂದಂಶ. ಹೀಗೆ ನಾನಾ ವಿಜ್ಞಾನ ನಾನಾ ವಿವೇಕಗಳ ಸಮಾವೇಶದ ಫಲಿತಾಂಶ ಸಂಸ್ಕೃತಿ" ಎಂದು[2] ಡಿ.ವಿ.ಜಿ. ನುಡಿದಿದ್ದಾರೆ. "ಈ ಸಂಸ್ಕೃತಿ ಜನರ ಕಲೆಗಳಲ್ಲಿ, ಅವರ ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ಆಚಾರ ಸಂಪ್ರದಾಯಗಳಲ್ಲಿ ಮತ್ತು ಅವರ ಮತದಲ್ಲಿ ಸುಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಇವುಗಳ ಮೊತ್ತ ಸಂಸ್ಕೃತಿಯಾಗುವುದಿಲ್ಲ. ಮನುಷ್ಯನೆಂಬ ವ್ಯಕ್ತಿ ಅಂಗಾಂಗಗಳು ಕೂಡಿ ಸಿದ್ಧವಾದ ದೇಹಕ್ಕಿಂತ ಮಿಗಿಲಾದವನು. ಅಂತೆಯೇ ಕಲೆ ಸಂಪ್ರದಾಯ ಮತ್ತು ಮತೀಯ ನಂಬಿಕೆಗಳ ಸಂಗಮವೇ ಸಂಸ್ಕೃತಿಯಲ್ಲ; ಅವನ್ನೆಲ್ಲ ಮೀರಿರುವಂಥಾದ್ದು ಅದು" ಎಂದು[3] ಹೇಳಿದ ಟಿ. ಎಸ್. ಎಲಿಯಟ್ ಮೇಲು ಕೀಳುಗಳೆಂದು ಸಂಸ್ಕೃತಿಯನ್ನು ಎರಡು ದರ್ಜೆಗಳಾಗಿ ವಿಂಗಡಿಸುತ್ತಾನೆ. ಕಲಾವಿದನ ಮತ್ತು ದಾರ್ಶನಿಕನ ಸಂಸ್ಕೃತಿಗೂ ರಾಜಕೀಯ ವ್ಯಕ್ತಿಯ ಹಾಗೂ ಕಾರ್ಮಿಕನ ಸಂಸ್ಕೃತಿಗೂ ನಡುವೆ ವ್ಯತ್ಯಾಸವಿದೆ ನಿಜ. ಆದರೆ ಒಂದು ಮೇಲು ಮತ್ತೊಂದು ಕೀಳು ಎಂಬ ಗಣನೆ ಸರಿಯಲ್ಲವೆಂದು ತೋರುತ್ತದೆ. ಗಾಂಧೀ ಜೀವನವನ್ನು ಕುರಿತು ಶ್ರೇಷ್ಠ ಕಾವ್ಯವೊಂದನ್ನು ರಚಿಸಿದ ಕವಿ ಶುದ್ಧ ಲಫಂಗನಾಗಿರಬಹುದು. ಯಾರೂ ಕಾಣದೆಡೆ ತಿಂದು ಬನ್ನಿ ಎಂದು ಗುರು ಕೊಟ್ಟ ಬಾಳೆಹಣ್ಣುಗಳನ್ನು ತಿಂದುಬಂದ ಪಂಡಿತರ ಸಂಸ್ಕೃತಿ ಮೇಲೊ, ತಿನ್ನದೆ ಬಂದ

---

[1] ಅಯೋಧ್ಯಾಕಾಂಡ, ಸ. 1, ಶ್ಲೋ 10–30.

[2] ಸಂಸ್ಕೃತಿ, ಪು. 14–15.

[3] That culture is made visible in their arts, in their social system, in their habits and customs, in their religion. But these things added together do not constitute the culture...But just as a man is something more than an assemblage of the various constituent parts of his body, so a culture is more than the assemblage of its arts, customs and religious beliefs...Now there are of course higher culture. and lower cultures—*Notes Towards the Definition of Culture by* T. S. Eliot, p. 120.

ಕನಕದಾಸರ ಸಂಸ್ಕೃತಿ ಮೇಲೋ? ಸದಾ ಭಗವನ್ನಾಮಸ್ಮರಣೆಯಲ್ಲಿರುತ್ತಿದ್ದ ನಾರದನಿಗಿಂತ, ಬೆಳಗಿನಿಂದ ಸಂಜೆಯತನಕ ದುಡಿಯುತ್ತ, ಮಲಗಿಕೊಳ್ಳುವಾಗ ಒಮ್ಮೆ ಭಗವಂತನನ್ನು ನೆನೆದುಕೊಳ್ಳುತ್ತಿದ್ದ ರೈತ ನಾರಾಯಣನಿಗೆ ಹೆಚ್ಚು ಮೆಚ್ಚಿನವನಾಗುತ್ತಾನೆಂದು ಒಂದು ಕತೆಯಿದೆ. ಆ ರೈತನ ಸಂಸ್ಕಾರ ಉಚ್ಚತಮವಾದದ್ದಲ್ಲವೆ? ಗುಲಾಬಿ, ಮಲ್ಲಿಗೆ, ಸಂಪಗೆ, ಪಾದರಿ, ಜಾಜಿ ಮೊದಲಾದ ಹೂವುಗಳ ವಾಸನೆಗಳಲ್ಲಿ ವ್ಯತ್ಯಾಸ ತೋರುವುದಾದರೂ, ಅವುಗಳಲ್ಲಿ ಒಂದು ಮೇಲು ಒಂದು ಕೀಳು ಎನ್ನುವಂತಿಲ್ಲ.

ಕಲಾಪ್ರಕಾರಗಳಲ್ಲಿ, ಅದರಲ್ಲಿಯೂ ಸಾಹಿತ್ಯದಲ್ಲಿ ಸಂಸ್ಕೃತಿ ಸಾಂದ್ರವಾಗಿ ವ್ಯಕ್ತಗೊಳ್ಳುತ್ತದೆ. ರಾಮಾಯಣ ಭಾರತದಂಥ ಗ್ರಂಥಗಳು ಸಮಕಾಲೀನ ಜೀವನಕ್ಕೆ ಕನ್ನಡಿಯಾಗಿರುವಂತೆ, ಭವಿಷ್ಯಜೀವನಕ್ಕೆ ಮುನ್ನುಡಿಯೂ ಆಗುತ್ತವೆ. ಅವು [illegible] ತತ್ತ್ವದರ್ಶಿಗಳಿಗೆ ಅಕ್ಷಯ ಖನಿಗಳಾಗಿವೆ. ಎರಡುಸಾವಿರ ವರ್ಷಗಳಿಂದ ಅವಿಚ್ಛಿನ್ನವಾಗಿ ಭಾರತೀಯ ಜೀವನವನ್ನು ರೂಪಿಸುತ್ತಿರುವ ಆ ಕೃತಿಗಳೂ, ಅಲ್ಲಿ ಹೆಪ್ಪುಗಟ್ಟಿರುವ ಸಂಸ್ಕೃತಿಯೂ ಇನ್ನೂ ಹಳಸಿಲ್ಲ. ಅಲ್ಲಿ ಪ್ರತಿಪಾದನೆಗೊಂಡಿರುವ ಜೀವನಧರ್ಮ ಮೀಮಾಂಸೆ ಇಂದಿಗೂ ಜನಮನ್ನಣೆಗೆ ಪಾತ್ರವಾಗಿದೆ. ಕಥೆ ಪ್ರಾಚೀನವಾದುದಾದರೂ ಸರ್ವಜನಾದರಣೀಯವಾಗಿದೆ. ಅಲ್ಲಿಯ ಘಟನೆಗಳು ತಮ್ಮ ಸುತ್ತಮುತ್ತಣ ಪ್ರಪಂಚದಲ್ಲಿ ನಡೆಯುತ್ತಿರುವಂತೆ, ಅಲ್ಲಿಯ ಪಾತ್ರಗಳು ತಮ್ಮ ಕಣ್ಮುಂದೆ ಸುಳಿಯುತ್ತಿರುವಂತೆ ಸಾಮಾನ್ಯ ಜನ ಭಾವಿಸಿದ್ದಾರೆ. ಅಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ಅವರಿಗೆ ನಿಕಟ ಪರಿಚಯದವರಾಗಿದ್ದಾರೆ. ಅವರ ದೃಷ್ಟಿಯಲ್ಲಿ ಆ ಕಥೆ ಎಂದೋ ನಡೆದು ಮುಗಿದುಹೋದದ್ದಲ್ಲ, ಇಂದಿಗೂ ನಡೆಯುತ್ತಿರುವಂಥದು. ಈ ಹೊತ್ತಿಗೂ ಪ್ರತಿನಿತ್ಯ ಕುರುಕ್ಷೇತ್ರ ಯುದ್ಧ ನಡೆಯುತ್ತಿದೆ; ತಮ್ಮ ಬಳಿಯ ಜನರಲ್ಲಿ ದುರ್ಯೋಧನ ಶಕುನಿ ಕರ್ಣರನ್ನು, ಭೀಮಾರ್ಜುನ ದ್ರೌಪದಿಯರನ್ನು ಕಾಣುತ್ತಿದ್ದಾರೆ. ಸಮಕಾಲೀನ ಪ್ರಜ್ಞೆಯ ಪ್ರಕಾಶನಕ್ಕೆ ಜನತೆಯ ಜೀವನಕ್ಕೆ ಜೀವಾತುವಾಗಿರುವ ಅಂಥ ಕಥೆ ಸಮರ್ಥ ಮಾಧ್ಯಮವಾಗಬಲ್ಲುದೆಂದು ಅರಿತಿದ್ದರಿಂದಲೇ ಭಾರತೀಯ ಸಾಹಿತಿಗಳು ಅದನ್ನು ತಮ್ಮ ಕಾವ್ಯ ಕಾದಂಬರಿ ನಾಟಕಾದಿ ಸಾಹಿತ್ಯ ಪ್ರಕಾರಗಳಿಗೆ ಸಲೀಸಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಕುಮಾರವ್ಯಾಸ ಭಾರತವನ್ನು ಬಳಸಿಕೊಂಡು ತನ್ನ ಕಾವ್ಯವನ್ನು ನಿರ್ಮಿಸಿದ್ದು. ಅಲ್ಲಿ ಪ್ರೋಕ್ತವಾಗಿರುವ ಧರ್ಮ, ಮತ್ತು ಚಿತ್ರಿತವಾಗಿರುವ ಸಮಾಜ ತನ್ನ ಸುತ್ತಮುತ್ತಣ ಜನಕ್ಕೆ ಹಿಡಿಸಿದುದರಿಂದ, ಅವರು ಅವುಗಳನ್ನನುಸರಿಸುತ್ತಿದ್ದುದರಿಂದ, ಆ ಧರ್ಮ ಆ ಸಮಾಜಗಳೇ ಶ್ರೇಯಸ್ಕರವಾದುವೆಂದೂ ಅವುಗಳ ಅನುಸರಣೆಯಿಂದ ಮಾತ್ರ ನಾಡು ಸಮಾಜ ಕುಟುಂಬಗಳ ಕಲ್ಯಾಣಸಾಧನೆ ಸಾಧ್ಯವೆಂದೂ ಕವಿ ನಂಬಿಕೊಂಡು, ಆ ಕಥೆ ತನ್ನ ಕಾಲದಲ್ಲಿ ತನ್ನ ಕಣ್ಮುಂದೆ ನಡೆಯಿತೆನ್ನುವಷ್ಟರ ಮಟ್ಟಿಗೆ ಸ್ಪಷ್ಟವಾಗಿ ಕಾವ್ಯವನ್ನು ರಚಿಸಿದ್ದಾನೆ. ಆದ್ದರಿಂದಲೇ ಆಧುನಿಕ ಕವಿ ಹಾಡಿದ್ದು "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು" ಎಂದು. ಗದುಗಿನಭಾರತ ವ್ಯಾಸಭಾರತಕ್ಕೆ ಬಹುಪಾಲು ಋಣಿಯಾಗಿದ್ದರೂ, ಕಾವ್ಯದುದ್ದಕ್ಕೂ ಸಮಕಾಲೀನ [illegible]ಯನ್ನು ಹರಿಸಿ, ವಸ್ತು

ಪ್ರಾಚೀನವಾದರೂ ಅದನ್ನು ನಡಸುವ ಸ್ಫೂರ್ತಿಸತ್ವಗಳು ಅರ್ವಾಚೀನವಾದುದರಿಂದ, ಅದು ಸ್ವತಂತ್ರ ಕೃತಿಯೆಂಬಂತೆ ರಾರಾಜಿಸುತ್ತಿದೆ. ವ್ಯಾಸ ಭಾಸ ಕಾಳಿದಾಸ ಪಂಪ ಹಾಗೂ ವಚನಕಾರರ ಸತ್ವ, ನಾರಣಪ್ಪನ ಸ್ವತ್ವ ಪ್ರತಿಭಾಶ್ರೀಮಂತಿಕೆ ಮತ್ತು ಕನ್ನಡದ ಮಹಿಮೆಗಳ ತ್ರಿವೇಣೀಸಂಗಮದಿಂದ ಈ ಕಾವ್ಯಕ್ಕೆ ಮಹತ್ತು ಬೃಹತ್ತುಗಳು ಸಮನಿಸಿವೆ. ಕಾವ್ಯಶರೀರದ ನಾಳನಾಳಗಳಲ್ಲಿ ಅನುಸ್ಯೂತವಾದ ಭಾರತೀಯ ಸಂಸ್ಕೃತಿಯ ಅನುರಣವನ್ನಾಲಿಸಬಹುದು. ಪೂರ್ವಕವಿಸೂರಿಗಳ ಪ್ರಭಾವ ಮುದ್ರೆಯಿಂದ ಈ ಕಾವ್ಯ ಪಾರಾಗಿಲ್ಲ; ನಿಜ. ಆದರೂ ಸದ್ಯಕ್ಕೆ ಅದನ್ನೆಲ್ಲ ಮರೆತು ಇಲ್ಲಿ ಚಿತ್ರಿತವಾಗಿರುವ ಸಂಸ್ಕೃತಿ ನಾರಣಪ್ಪನ ಕುಂಚದಿಂದ ಮೂಡಿದ್ದೆಂದೇ ತಿಳಿದು, ಮುಂದಿನ ಅಧ್ಯಯನವನ್ನು ಕೈಗೊಂಡದ್ದಾಗಿದೆ.

೨. ರಾಜಕೀಯ ಸಂಸ್ಕೃತಿ

ಕ್ಷಾತ್ರಧರ್ಮ

ಗದುಗಿನ ಭಾರತದಲ್ಲಿ ಉಲ್ಲೇಖಗೊಂಡಿರುವ ಸಾಂಸ್ಕೃತಿಕ ವಿಚಾರಗಳ ಪೈಕಿ ಪೂರ್ವಾಚಾರ್ಯರಿಂದ ಹಾಗೂ ಸಮಕಾಲೀನ ಸಮಾಜದಿಂದ ನಾರಣಪ್ಪಪಡೆದದ್ದೆಷ್ಟು,ಅವನ ಸ್ವಂತದ್ದೆಷ್ಟು ಎನ್ನುವ ದೀರ್ಘ ಸಂಶೋಧನೆಯಾಗಲಿ ತೌಲನಿಕ ವ್ಯಾಸಂಗವಾಗಲಿ ಸದ್ಯದ ಅಧ್ಯಯನದ ಗುರಿಯಲ್ಲ. ವಾಲ್ಮೀಕಿಯಂಥ ಮಹಾಕವಿಯಾದರೂ ಪರಂಪರೆ ಹಾಗೂ ಸಮಾಜಗಳಿಗೆ ನಾನಾವಿಧಗಳಲ್ಲಿ ಋಣಿ ಎಂಬ ಸಂಗತಿ ನಿರ್ವಿವಾದವಾದುದು. ಬಾಹ್ಯಾವರಣದ ನೀರುಗೊಬ್ಬರಗಳನ್ನುಂಡು ಜೀರ್ಣಿಸಿಕೊಂಡು ಹೊರವಾಗಿ ಬೆಳೆದು ಸಮೃದ್ಧವಾಗಿ ಹೂಹಣ್ಣುಗಳನ್ನು ಬಿಡುವ ವೃಕ್ಷದಂತೆ ಕವಿ ಹೊರಗಿನ ಸಾಮಗ್ರಿಯನ್ನು ಪ್ರತಿಭಾವಿದ್ಯುತ್ ಸಂಸ್ಪರ್ಶದಿಂದ ತನ್ನದು ಮಾಡಿಕೊಂಡು ನೂತನ ಜಗತ್ತನ್ನು ಸೃಷ್ಟಿಸುತ್ತಾನೆ. ಹಾಗೆ ಬಾಹ್ಯ ಪದಾರ್ಥವನ್ನು ಬಳಸಿಕೊಳ್ಳುವಲ್ಲಿ ತನಗಹಿತವೆನಿಸಿದ್ದನ್ನು, ತನಗೆ ಪರಿಚಯವಿರುವ ಸಮಾಜಕ್ಕೆ ಒಗ್ಗದುದನ್ನು ತಿರಸ್ಕರಿಸುತ್ತಾನೆ. ಅಂದ ಮೇಲೆ ಗದುಗಿನ ಭಾರತದಲ್ಲಿ ವಿವರಣೆಗೊಂಡಿರುವ ಸಾಂಸ್ಕೃತಿಕ ಸಂಗತಿಗಳಲ್ಲಿ ಕೆಲವು ಶಾಶ್ವತ ಮೌಲ್ಯಗಳನ್ನೊಳಗೊಂಡಿರುವ ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಸತ್ಯಗಳೆಂದೂ, ಮತ್ತೆ ಕೆಲವು ಯಾವುದೋ ಒಂದು ಕಾಲದ ಸಮಾಜವಿಭಾಗಕ್ಕೆ ಸೀಮಿತವಾದ ಗುಣಗಳೆಂದೂ ತಿಳಿಯಬೇಕಾಗುತ್ತದೆ. ಈ ಹಿಂದೆ ಹೇಳಿದಂತೆ ಧರ್ಮದ ಸ್ವರೂಪನಿರ್ಣಯ ಸುಲಭಸಾಧ್ಯವಲ್ಲ. ಒಂದು ಕಾಲದಲ್ಲಿ ಅತ್ಯುಪಯುಕ್ತವಾಗಿದ್ದ ವರ್ಣಾಶ್ರಮಪದ್ಧತಿ ಮತ್ತೊಂದು ಕಾಲಕ್ಕೆ ಅತ್ಯಪಾಯಕಾರಿಯಾಗಿ ಪರಿಣಮಿಸಬಹುದು; ಹುಲಿಯ ಮತ್ತು ಹುಲ್ಲೆಯ ಧರ್ಮ ಎಂತು ಭಿನ್ನವೋ ಜಲಾಗ್ನಿಗಳ ಧರ್ಮ ಅಂತೆಯೇ ಪರಸ್ಪರ ವಿರುದ್ಧವಾಗಿ ತೋರುವುದುಂಟು. ಧರ್ಮವ್ಯಾಧನ ಧರ್ಮವೊಂದಾದರೆ ಧೌಮ್ಯನದು ಮತ್ತೊಂದಾಗುತ್ತದೆ. ಇಲ್ಲಿ ಮೇಲು ಕೀಳುಗಳ ಪ್ರಶ್ನೆ ಸಹ ಉದ್ಭವಿಸುವುದಿಲ್ಲ. ಆದ್ದರಿಂದ ಗದುಗಿನ ಭಾರತದಲ್ಲಿ ತೋರುವ ಸಂಸ್ಕೃತಿಯ ಅನೇಕಾಂಶಗಳು ಈ ಕಾಲಕ್ಕೆ ಹೊಂದದಿರಬಹುದೆಂಬುದನ್ನು ಮರೆಯುವಂತಿಲ್ಲ.

ಕ್ಷಾಮ ರೋಗ ಭೂಕಂಪಗಳಂತೆ ಯುದ್ಧಗಳೂ ನೈಸರ್ಗಿಕ ಘಟನೆಗಳೆಂಬಂತೆ ಇತಿಹಾಸಪೂರ್ವ ಕಾಲದಿಂದ ನಡೆಯುತ್ತಿವೆ. ರಕ್ತಸಿಕ್ತವಾಗದ ನೆಲವೇ ಇಲ್ಲವೆಂದರೂ ತಪ್ಪಾಗಲಾರದು. ಹೆಣ್ಣು ಹೊನ್ನು ನೆಲ ಮತ್ತು ಆಳಿಕೆಗಳಲ್ಲಿ ಒಂದಲ್ಲ ಒಂದು ಸಂಗ್ರಾಮಗಳಿಗೆ ಕಾರಣವಾಗುತ್ತವೆ. ನಾಯಕರಿಬ್ಬರ ಪ್ರತಿಷ್ಠೆಗಾಗಿ ಕೋಟಿ ಕೋಟಿ ಜನ ರಣಮಾರಿಗೆ ದೇಹಗಳನ್ನರ್ಪಿಸಬೇಕಾಗುತ್ತದೆ. ಧರ್ಮದ ಹೆಸರಿನಲ್ಲಿ ದಾಯಾದಿ ಕಲಹ ಬೃಹತ್

ಸ್ವರೂಪವನ್ನು ತಳೆದು ಹದಿನೆಂಟಕ್ಷೋಹಿಣಿ ಸೈನ್ಯವನ್ನೂ ಅತಿರಥ ಮಹಾರಥರನ್ನೂ ಬಾಲವೃದ್ಧರನ್ನೂ ಆ ಕಾಲದ ಶ್ರೇಷ್ಠವ್ಯಕ್ತಿಗಳನ್ನೂ ನುಂಗಿಕೊಳ್ಳುತ್ತದೆ. ಯುದ್ಧಗಳು ಕ್ಷತ್ರಿಯಕುಲವನ್ನು ಸೃಜಿಸಿದುವೋ ಅಥವಾ ಕ್ಷತ್ರಿಯಕುಲ ಯುದ್ಧಗಳಿಗೆ ಕಾರಣವಾಯಿತೋ ತಿಳಿಯದು. ಆದರೆ ಯುದ್ಧ ಆ ಕುಲದ ಪ್ರಧಾನವೃತ್ತಿಯಾಗುತ್ತದೆ. ಜೀವನದ ಸರ್ವ ಸಾಧನೆಗಳ ಗುರಿಯಾಗುತ್ತದೆ. ಸಾವಿಲ್ಲದ ಮನೆಯಿಲ್ಲವೆಂಬಂತೆ ಯುದ್ಧವಿಲ್ಲದ ಮಹಾಕಾವ್ಯಗಳಿಲ್ಲ; ಯುದ್ಧಸಮೃದ್ಧವಾದ ವೀರಗೀತೆಗಳೇ ಮಹಾಕಾವ್ಯಗಳಿಗೆ ಮೂಲವೆಂದರೂ ತಪ್ಪಾಗದು. ರಕ್ತಪಿಪಾಸುಗಳಿಗೆ ಅದೊಂದು ಕ್ರೀಡೆಯಾಗಿದೆ. ಸಾಧುಸಂತರು ಮೇಲಿಂದ ಮೇಲೆ ಪ್ರೇಮಾಹಿಂಸೆತ್ಯಾಗಗಳ ಬಗ್ಗೆ ಪ್ರಚಾರ ನಡೆಸಿರುವುದುಂಟು; ಶಾಂತಿದೂತರು ಶಾಂತಿಸಂದೇಶವನ್ನು ಜಗತ್ತಿನ ಮೂಲೆಮೂಲೆಗೂ ಕೊಂಡೊಯ್ದದ್ದುಂಟು; ವಿಶ್ವಸಂಸ್ಥೆಗಳು ಯುದ್ಧಸ್ತಂಭನಕ್ಕಾಗಿ ಹಲವು ತೆರನ ಲಾಗಪಟ್ಟುಗಳನ್ನು ಹಾಕಿದ್ದುಂಟು. ಆದರೂ ಲೋಕ ಸದಾ ರಣರಂಗದ ಕರಾಳಛಾಯೆಯಲ್ಲಿ ಮೃತ್ಯುವಿನ ಕರಿನೆರಳಿನಲ್ಲಿ ನಿದ್ದೆ ಮಾಡಬೇಕಾಗಿದೆ. ಕೆಲವು ದೇಶಗಳಲ್ಲಿ ಹುಟ್ಟಿದ ಮಕ್ಕಳೆಲ್ಲರೂ ಕಡ್ಡಾಯವಾಗಿ ಸೈನಿಕ ಶಿಕ್ಷಣ ಪಡೆಯಬೇಕಾಗಿದೆ. ಆಂಗ್ಲರ ಆಗಮನಕ್ಕೆ ಮುಂಚೆ ಭರತಖಂಡದ ಅನೇಕ ರಾಜ್ಯಗಳಲ್ಲಿ ಅಂಥದೇ ಪರಿಸ್ಥಿತಿಯಿತ್ತೆಂಬುದು ಶಾಸನ ಹಾಗೂ ಯುದ್ಧಗೀತೆಗಳಿಂದ ವೇದ್ಯವಾಗುತ್ತದೆ.

ರಣಪಲಾಯನ ಹೊಲ್ಲ ಓ ನನ್ನ ನಲ್ಲ
ಹಿಮ್ಮೆಟ್ಟಿ ನೀಸಮುವೆ ಸುಖಭಂಗವೆನಗೆ
ಚಪ್ಪಾಳೆ ಬಡಿಯುವರು ಗೆಳತಿಯರು ಕೂಡಿ
ಕಡೆ ನೋಟ ಸಹ ಹೊರಳಿಸರು ನನ್ನ ಕಡೆಗೆ[1]

ಗದಾಯುದ್ಧದ ಮುಂದಿನ ಪದ್ಯವನ್ನೂ ಗಮನಿಸಬಹುದು:

ಮಣಿಕನಕಂ ವಸ್ತು ಭೂ
ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡ
ರ್ಗುಣಮನೆ ಮೆಚ್ಚುವುದು ಶಸ್ತ್ರ
ವ್ರಣಮುಂ ನಿಸ್ಣಂತೆ ಮೆಚ್ಚುವುದಿಜೀವಬೆಡಂಗಾ ॥ (2–7)

ರಾಜಸ್ಥಾನದ ತರುಣಿಯರು ತಮ್ಮ ಪತಿಗಳನ್ನು ಹುರಿದುಂಬಿಸಿ ರಣರಂಗಕ್ಕೆ ಕಳಿಸುತ್ತಿದ್ದ ರೀತಿಯಿದು. ಯುದ್ಧವೊಂದು ಕಲೆಯಾಗಿ ಸಾಂಸ್ಕೃತಿಕ ಜೀವನದ ಒಂದು ಭಾಗವಾಗಿತ್ತು. ಬಂಧುಹತ್ಯೆ ಮಹಾಪಾತಕವೆಂದು ಅರ್ಜುನ ಬಿಲ್ಲುಬಾಣಗಳನ್ನು ಕೆಳಗಿರಿಸಿ ಕೈಕಟ್ಟಿಕೊಂಡು ಕುಳಿತಾಗ ಶ್ರೀಕೃಷ್ಣ:

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ[2]

---

[1] Devendra Satyarthi, *Meet My People*, p. 64.   [2] ಭಗವದ್ಗೀತಾ, ೨-೩೭.

ಎಂದು ಅರ್ಜುನನ ಬೆನ್ನುತಟ್ಟಿ ಉಬ್ಬಿಸುತ್ತಾನೆ. ಶರೀರ ಕ್ಷಣಿಕವಾದದ್ದು; ಗೆದ್ದರೆ ಲಕ್ಷ್ಮಿ, ಸತ್ತರೆ ಸುರಾಂಗನೆಯರು ಲಭಿಸುವಾಗ ಯುದ್ಧಕ್ಕಂಜಬೇಕಾಗಿಲ್ಲವೆಂದು ಧರ್ಮಶಾಸ್ತ್ರಗಳು ಮತ್ತು ಶಿಲಾಶಾಸನಗಳು, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಸಾರುತ್ತವೆ.[1] ಮಹಾಭಾರತದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಯುದ್ಧಗಳು ಆಕ್ರಮಿಸಿಕೊಂಡಿವೆ: ಯುದ್ಧ ಪಂಚಕದ ಜತೆಗೆ ಗೋಗ್ರಹಣ ಸಮಯದಲ್ಲಿ ನಡೆಯುವ ಯುದ್ಧವಿದೆ; ಹಿಡಿಂಬ ಬಕ ಅಂಗಾರವರ್ಮ ಜರಾಸಂಧ ಶಿಶುಪಾಲ ಕಿರ್ಮೀರ ಜಟಾಸುರ ಕೀಚಕಾದಿ ದುಷ್ಟರನ್ನು ಸಂಹರಿಸುವಾಗ ಯುದ್ಧಗಳು ಅನಿವಾರ್ಯ; ಅರ್ಜುನ ಖಾಂಡವದಹನ ಕಾಲದಲ್ಲಿ ದೇವೇಂದ್ರನೊಡನೆ, ಸುರಲೋಕಕ್ಕೆ ಹೋಗಿದ್ದಾಗ ಮಹೇಂದ್ರನ ಪರವಾಗಿ ನಿವಾತ ಕವಚರೊಡನೆ, ಘೋಷಯಾತ್ರೆಯ ಕಾಲದಲ್ಲಿ ಚಿತ್ರರಥನೊಡನೆ, ಪಾಶುಪತಾಸ್ತ್ರ ಸಂಪಾದನಾವಸರದಲ್ಲಿ ಶಿವನೊಡನೆ ಯುದ್ಧವೆಸಗುತ್ತಾನೆ. ದ್ರೌಪದಿಯ ಸ್ವಯಂವರ ಸಮಯದಲ್ಲಿ ಕೌರವಾದಿ ದೊರೆಗಳೊಡನೆ ಪಾಂಡವರು ಬಿಲ್ಲಿಗೆ ಬಾಣ ಹೂಡಬೇಕಾಗುತ್ತದೆ. ರಾಜಸೂಯಯಾಗದ ಪೂರ್ವದಲ್ಲಂತೂ ದಿಗ್ವಿಜಯ ಕೈಗೊಳ್ಳಲೇಬೇಕು. ಭಾರತದ ಕಥೆಗೆ ನೇರವಾಗಿ ಸಂಬಂಧ ಹೊಂದಿರದಿದ್ದರೂ ಉಲ್ಲೇಖಗೊಂಡಿರುವ ತ್ರಿಪುರದಹನದ ಕತೆಯಿದೆ. ಕ್ಷಾತ್ರಧರ್ಮವೊಂದೇ ಧರ್ಮವೆನ್ನುವಂತೆ ಈ ಪ್ರಕರಣಗಳಿಂದ ಭಾಸವಾಗುತ್ತದೆ. ಆದ್ದರಿಂದಲೇ ನಾರಣಪ್ಪ ಭಾರತದ ಹೆಗ್ಗುಣಗಳನ್ನು ಪ್ರಸ್ತಾಪಿಸುವಾಗ "ಅರಸುಗಳಿಗಿದು ವೀರ" ಎಂದು ಉಗ್ಗಡಿಸಿ, ವೀರಕ್ಕೆ ಅಗ್ರಸ್ಥಾನವನ್ನು ಅನುಗ್ರಹಿಸುತ್ತಾನೆ. "ಸಂಗರಕೆ ಕರೆಯೆ ಕಾದುವುದು....ಮಹೀಶರ ಪರಮಧರ್ಮವಲೇ"[2] ಎಂದು ಧರ್ಮರಾಯ ಧೌಮ್ಯಾದಿ ಮಂತ್ರಿಗಳೊಡನೆ. "ಧರಣಿ ನುಂಗುವಳಿಬ್ಬರನು, ಸಂಗರವ ಜಯಿಸದ ನೃಪನ, ದೇಶಾಂತರವ ಚರಿಸದ ಪಂಡಿತನ ಇದು ಶಾಸ್ತ್ರಸಿದ್ಧವಲೆ"[3] ಎಂದು ವಿದುರ ಧೃತರಾಷ್ಟ್ರನಿಗೆ ಹೇಳುವಲ್ಲಿ ಕ್ಷತ್ರಿಯರು ಯುದ್ಧಕ್ಕಾಗಿಯೇ ಹುಟ್ಟಿದವರು ಎಂಬ ಭಾವನೆ ಸಾತ್ವಿಕರ ಮನಸ್ಸಿನಲ್ಲಿಯೂ ತುಂಬಿಕೊಂಡಿತ್ತೆಂಬುದು ಸ್ಪಷ್ಟ. ಕ್ಷತ್ರಿಯರಾಗಿದ್ದೂ ನೆಲಕ್ಕಾಗಿ ಕೈಯೊಡ್ಡುವುದು ಹೇಡಿತನ; ಅದು ನೃಪಧರ್ಮವಲ್ಲವೆಂದು ಕೃಷ್ಣ ಸಂಧಾನಸಮಯದಲ್ಲಿ ದುರ್ಯೋಧನ ತನ್ನ ನಿಲವನ್ನು ಸ್ಪಷ್ಟಪಡಿಸುತ್ತಾನೆ: "ಸಂಧಿ ವೀರಕ್ಷತ್ರಿಯರ ಮತವೇ, ಬೇಡುವರೆ ಪಾರ್ಥಿವರು"[4] ಸಂಜಯನ ಮೂಲಕ ಹೇಳಿ ಕಳಿಸುತ್ತಾನೆ. ಬಾಯ್ಬಲಿತನದ ಪ್ರದರ್ಶನ ಹೇಡಿಗಳ ಲಕ್ಷಣವೆಂದೂ "ಬಾಯ್ಬಡಿಕತನವಿದು ಗುರುವರಂಗವೆ ಕಡುಹನಾಲಗೆಯರುಹಲೇತಕೆ ಕೈಯ ಧನುವಿರಲು"[5] ಎಂದೂ ಯುದ್ಧಕಾಲದಲ್ಲಿ ವೀರರು ಪರಸ್ಪರ ಮೂದಲಿಸುತ್ತಾರೆ. "ಆಹವದೊಳೋಸರಿಸಿದರೆ ಭಟಸಾಹಸಕ್ಕೆ ಕಲೆ ಹೊದ್ದದೇ"[6] "ಆಳುತನಕಾಭರಣವೇ ಮಾತಾಳಿತನ?"[7]; "ಇರಿತ

---

[1] ಜಿತೇನಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ। ಕ್ಷಣ ವಿಧ್ವಂಸಿನಿಃ ಕಾಯೇಃ ಕಾ ಚಿಂತಾ ಮರಣೇರಣೇ. [2] ಗದುಗಿನ ಭಾರತ, ಸ ೧೬-೨೫; [3] ಉ ೩-೨೨; [4] ಉ ೨-೩೮; [5] ದ್ರೋ ೧೨-೩೯; [6] ಭೀ ೮-೩೧; [7] ಕ ೪-೩೧

ಮುನ್ನವೊ ಸುಭಟರಿಂಗೆ ಬೊಬ್ಬಿರಿತಮುನ್ನವೊ ?"[1] "ಕೆಡೆ ನುಡಿಯ ನುಡಿದರೆ ದಿಟ್ಟರೆಂಬರೆ ವೀರರಾದವರು ?"[2] "ಠಕ್ಕಿನ ಠೌಳಿಯಾಟವೆ ಕದನ ?"[3] "ಬಂಜೆನುಡಿಯಲಿ ಬಯ್ದಡಧಿಕನೆ ?"[4] "ವಿಜಯಸಿರಿ ವಾಚಾಟರಿಂಗೆ ಮೆಚ್ಚುವಳೆ ?"[5] ಈ ಪ್ರಶ್ನಾವಳಿಗಳಿಂದ ಯೋಧರ ಗುಣಾವಗುಣಗಳು ಪ್ರಕಟವಾಗುತ್ತವೆ. 'ದಂಡಿನಲ್ಲಿ ಸೋದರಮಾವನೆ ?' ಎಂಬೊಂದು ಗಾದೆ ಇಂದಿಗೂ ಸಾಮಾನ್ಯರ ನಾಲಿಗೆಯಲ್ಲಿ ಕುಣಿಯುತ್ತಿದೆ. ದಂಡಿಗೆ ಹೋದನಂತರ ಇವನು ಭಾವ, ಇವನು ಮಾವ, ಇವನು ಗುರು, ಇವನು ಪಿತಾಮಹ ಎಂಬ ಭಾವನೆಯಿಂದ ಮುಕ್ತನಾದವನೇ ನಿಜವಾದ ಯೋಧನೆನಿಸಿಕೊಳ್ಳುತ್ತಾನೆ. ಅಂಥ ಮೋಹಪಾಶಗಳಿಗೊಳಗಾಗುವವನು ಸಂಗ್ರಾಮ ಮುಖವನ್ನೇ ನೋಡಬಾರದು. "ಶೌರ್ಯದ ಮೋರೆಗೇಕೈ ಮರುಕ ?"[6] ಎಂದು ಪಾರ್ಥ ಕರ್ಣನನ್ನು ಮೂದಲಿಸುತ್ತಾನೆ. ಶಲ್ಯನಿಗೂ ಸೋದರಳಿಯಂದಿರಾದ ನಕುಲ ಸಹದೇವರಿಗೂ ಕೈ ಕೈ ಮಿಲಾಯಿಸಿದಾಗ "ಮೆರೆಯಿ ಮದವನು ಮಾವತನವದು ಹೊರಗಿರಲಿ"[7] ಎಂದು ಶಲ್ಯ ಅವರನ್ನು ಕೆರಳಿಸುತ್ತಾನೆ. ಶಿಖಂಡಿಯೊಡನೆ ಯುದ್ಧ ಮಾಡುವುದಿಲ್ಲವೆಂದು ಭೀಷ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಳಿಸಿದಾಗ ಅರ್ಜುನ ಬಾಣಪ್ರಯೋಗ ಮಾಡಲಾರದೆ ಹಿಂಜರಿಯುತ್ತಾನೆ. ಆಗ ಭೀಷ್ಮ

> ಖೇದವೇಕೆಲೆ ಮಗನೆ ನಿನ್ನೋ। ಪಾದಿಯಲಿ ಸುಚರಿತ್ರನಾವನು
> ಮೇದಿನಿಯೊಳಾ ಮಾತು ಸಾಕೈ ಕ್ಷತ್ರಧರ್ಮವನು
> ಆದರಿಸುವುದೆ ಧರ್ಮ[8]

ಎಂದೂ ಅರ್ಜುನನನ್ನೆಚ್ಚರಿಸುತ್ತಾನೆ. ಅರ್ಜುನನ ಸಾಹಸದಿಂದಾಗಿ ಗಂಧರ್ವನಿಂದ ಬಿಡುಗಡೆ ಹೊಂದಿ, ಅವಮಾನ ಸಹಿಸಲಾರದೆ ವೈರಾಗ್ಯಪರನಾಗಿ ಮೂಲೆ ಹಿಡಿದು ದುರ್ಯೋಧನನನ್ನು ಕುರಿತು ಭೀಷ್ಮ ಪ್ರಾಯೋಪವೇಶ ಕ್ಷತ್ರಿಯ ಧರ್ಮವಲ್ಲವೆಂದೂ "ನೃಪಧರ್ಮವನು ಬಿಡಬೇಡ, ಸಮರದ ನೆಮ್ಮಿ ಸಾವುದು ಗುಣವು ಗರುವರಿಗೆ"[9] ಎಂದೂ ಬೋಧಿಸುತ್ತಾನೆ. ಅಂತೆಯೇ ಗೋಗ್ರಹಣಸಮರದಲ್ಲಿ ಅರ್ಜುನ ತನಗೆ ಗೌರವ ಸಲ್ಲಿಸಿದಾಗ ದ್ರೋಣ,

> ವಿನಯವುಚಿತವೆ ತತ್ತ ಸಮರದ। ಮೊನೆಯೊಳಾರಿದಿರಾದಡಿರಿವುದು
> ಜನಪರಿಗೆ ಕರ್ತವ್ಯವದು[10]

ಎಂದು ಅವನ ಮನಸ್ಸಿನ ಆತಂಕವನ್ನು ಕೊನೆಗಾಣಿಸುತ್ತಾನೆ. ರಣರಂಗದಲ್ಲಿ ಪಲಾಯನ ಸೂತ್ರಹಿಡಿದ ಕ್ಷತ್ರಿಯರನ್ನು ಕುರಿತು "ಓಡಿ ಬದುಕುವ ಹುಲು ಪರಿಯತನ ಹೆಮ್ಮೆಯೆ ಕ್ಷತ್ರಿಯರ ಮಕ್ಕಳಿಗೆ"[11] ಎಂದು ದ್ರೋಣ ಹಂಗಿಸುತ್ತಾನೆ. ಹುಟ್ಟಿದಂದಿನಿಂದಲೇ ಸಿಂಹದ ಮರಿ ಬೇಟೆಯಾಟವನ್ನು, ಮೀನು ಈಜನ್ನು ಕಲಿಯುವಂತೆ ಅಭಿಮನ್ಯುವಿನಂಥ ಹಸು

---

[1] ಕ ೧೧-೪೬; [2] ದ್ರೋ ೧೫-೬೬; [3] ಕ ೧೪-೧೭; [4] ಗ ೭-೩೪; [5] ಸ ೧೩-೪೭; [6] ಕ ೨೪-೩೧; [7] ಶ ೨-೪೬; [8] ಭೀ ೧೦-೨೧; [9] ಅ ೨೧-೪೫; [10] ವಿ ೮-೩೨; [11] ದ್ರೋ ೨-೩೮

ಗೂಸುಗಳು ಯುದ್ಧಕಲೆಯಲ್ಲಿ ನಿಷ್ಣಾತರಾಗುತ್ತಾರೆ. ಅವರಿಗೆ ರಣರಂಗವೊಂದು ಕ್ರೀಡಾಂಗಣ. ಪದ್ಮವ್ಯೂಹ ಭೇದನ ಸಮಯದಲ್ಲಿ ತನ್ನನ್ನು ಹಸುಳೆಯೆಂದು ವ್ಯಂಗ್ಯ ವಾಗಿ ಕರೆದ ಕರ್ಣಾದಿ ವೀರರಿಗೆ "ಮಗುವು ತಾನಹೆ ತನ್ನ ಬಾಣಕೆ ಮಗುವುತನ ಬೇರಿಲ್ಲ"[1] "ಬಾಲತನವೇನೂಣೆಯವೆ, ಕಟ್ಟಾಳುತನವಾಭರಣವವನಿಪಾಲಸುತರಿಗೆ"[2] ಎಂದು ಅಭಿಮನ್ಯು ಮಾರೇಟು ಕೊಡುತ್ತಾನೆ. ಯೋಧರ ಮಾತು ಮಾರುಮಾತು ಗಳಂತಿರಲಿ ಅವರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಜತೆಯಲ್ಲಿರುತ್ತಿದ್ದ ಭಟ್ಟರು ಮತ್ತು ಪಾಠಕರು ರಣಾಂಗಣದಿಂದ ಹಿಮ್ಮೆಟ್ಟುವ ಸೈನಿಕರನ್ನು ಜಡಿದು "ಧುರಕೆ ಮನವಳುಕಿದರೆ, ಹೆಜ್ಜೆಯ ತೆರುಪಿದೊಡೆ, ಕುಲಕೋಟಿ ಕೋಟಿಗೆ ನರಕವೆಂದು"[3] ಎಚ್ಚರಿಸುತ್ತಾರೆ. ರಣ ಪಲಾಯನದ ಪಾಪ ಒಬ್ಬನಿಗೆ ಸಂಬಂಧಿಸಿದ್ದಲ್ಲ, ಸ್ವರ್ಗದಲ್ಲಿರುವ ಅವನ ಹಿರಿಯರು ಮತ್ತು ಬಂಧುಗಳು ಸಹ ನರಕವನ್ನನುಭವಿಸಬೇಕಾಗುತ್ತದೆ.

ಹಿಂದಿನ ಕಾಲದಲ್ಲಿ ಯುದ್ಧ ಜನನಿಯಂತ್ರಣ ಸಾಧನಗಳಲ್ಲೊಂದಾಗಿತ್ತು. ಭೂಭಾರ ವನ್ನಿಳುಹುದರ ಜತೆಗೆ ಧರ್ಮ ಸಂಸ್ಥಾಪನೆ ಆಗಿನ ಯುದ್ಧಗಳ ಗುರಿಯಾಗಿತ್ತು. ಧರ್ಮಾಭ್ಯುದಯಕ್ಕಾಗಿ ನಡೆಯುವ ಯುದ್ಧದಲ್ಲಿ ಮರೆ ಮೋಸ ಠಕ್ಕುಠೌಳಿಗಳಿರಕೂಡ ದೆಂಬುದು ಆಗಿನವರ ಮತವಾಗಿತ್ತು. ಚತುರೋಪಾಯಗಳಲ್ಲಿ ಮೊದಲನೆಯ ಮೂರು ಫಲಕಾರಿಯಾಗದಿದ್ದಾಗ ಮಾತ್ರ ಯುದ್ಧ ನಡೆಯುತ್ತಿತ್ತು. ಅದರಿಂದ ರಕ್ತಪಾತವೊದಗು ತ್ತದೆ, ಸಂಸ್ಕೃತಿ ವಿನಾಶವಾಗುತ್ತದೆ, ನಾಡಿನ ಆತ್ಮತೇಜಸ್ಸಿನಂತಿರುವ ಯುವಶಕ್ತಿ ಹಾಳಾಗುತ್ತದೆ, ಕೆಲವು ವೇಳೆ ಮಾನವನಿಗೆ ತಗದ ರೀತಿಯಲ್ಲಿಯೂ ವರ್ತಿಸಬೇಕಾಗು ತ್ತದೆ ಎಂಬ ತಿಳಿವಳಿಕೆ ಭೀಷ್ಮದ್ರೋಣ ಪಾಂಡವರಂಥ ಸಜ್ಜನರಲ್ಲಿ ವಿಶೇಷ ಪ್ರಮಾಣ ದಲ್ಲಿತ್ತು. ವ್ಯಕ್ತಿ ಎಷ್ಟೇ ಪ್ರಬಲನಾಗಿರಲಿ, ಶಸ್ತ್ರಾಸ್ತ್ರಸಂಪನ್ನನಾಗಿರಲಿ, ಅವನಲ್ಲಿ ಮಾನವೀಯ ಗುಣಗಳಿರುವುದಾದರೆ, ಯುದ್ಧದಂಥ ಸಂಕಟ ಪರಿಸ್ಥಿತಿ ಪ್ರಾಪ್ತವಾದಾಗ, ಅವನ ಮನಸ್ಸು ಭಾವತುಮುಲಗಳ ರಣರಂಗವಾಗುತ್ತದೆ. ಕುರುಕ್ಷೇತ್ರ ಕದನ ಮೊಟ್ಟ ಮೊದಲು ಅವರ ಹೃದಯದಲ್ಲಿ ನಡೆಯುತ್ತದೆ. ಧರ್ಮಾಧರ್ಮನಿರ್ಣಯ ವಿಷಯದಲ್ಲಿ ಅವರಿಗೆ ಅನಿಶ್ಚಯತೆಯುಂಟಾಗುತ್ತದೆ. ಯುದ್ಧವನ್ನು ತಪ್ಪಿಸಲು ಭೀಷ್ಮದ್ರೋಣರು ರಣಪಿಪಾಸುಗಳಾದ ಕೇಡುಗರಿಗೆ ನಾನಾರೀತಿಯಲ್ಲಿ ಬುದ್ಧಿವಾದ ನೀಡುತ್ತಾರೆ. ವನವಾಸ ಅಜ್ಞಾತವಾಸಗಳಲ್ಲಿ ಸತ್ತು ಸುಣ್ಣವಾಗಿದ್ದರೂ, ಧರ್ಮ ತಮ್ಮ ಕಡೆಗಿದ್ದರೂ ಒಬ್ಬಿಬ್ಬರು ಹೊರತಾಗಿ ಉಳಿದ ಪಾಂಡವರು ಯುದ್ಧ ಕೂಡದೆಂದೂ, ದಾಯಾದಿ ಕಲಹ ಕುಲಕ್ಷಯ ಕಾರಣವೆಂದೂ, ತಮಗೆ ಅರ್ಧರಾಜ್ಯ ಬೇಡ, ಐದೂರುಗಳು ದೊರೆತರೆ ಸಾಕೆಂದೂ ಸಂಧಿ ಯನ್ನೇ ಸಾಧಿಸಿದು ಬರಬೇಕೆಂದೂ ಕೃಷ್ಣನಲ್ಲಿ ವಿನಂತಿಮಾಡಿಕೊಳ್ಳುತ್ತಾರೆ. "ಅಳಿವ ಪ್ಪೊಡಲಿದು, ಅವನಿಸಾಗರವಳಿಯಲುಳಿವುದು ಕೀರ್ತಿ, ಸೋದರರೊಳಗೆ ಹೊಯ್ದಾಡಿ ಕೆಟ್ಟರುಯೆಂಬ ದುರಿಯಶದ"[4] "ಅವರ ಮೇಲೆಮಗಾವ ಮನಮುನಿಸಿಲ್ಲ ಸಂಧಿಯ

---

1 ದ್ರೋ ೫-೩೦; 2 ದ್ರೋ ೫-೪೧; 3 ಕ ೨೧-೨೦; 4 ಉ ೬-೪

ಘಟಿಸಿ"[1] "ಉಚಿತಾನುಚಿತದನುವರಿದು ಹದನ ನೀನೇ ಬಲ್ಲೆ"[2] ಎಂದು ಧರ್ಮರಾಯ ತನ್ನೊಳಗನ್ನು ಹೊರಪಡಿಸುವಲ್ಲಿ ಆಶ್ಚರ್ಯವಿಲ್ಲ. ಅವನು "ಧರ್ಮದ ಜಾಡ್ಯದಲಿ ಮೈಮರೆದು."

ಒತಲು ಬೀಳಲಿ ಮೋಹು ತಮ್ಮಡಿ । ರತನಿಯಲಿ ಹಾಯಿಕ್ಕಿ ಹೋಗಲಿ
ನುತದಿ ಮುನಿಯಲಿ ಬಸಿದು ಬೀಳಲಿ ಧರಣಿ ಕುರುಪತಿಗೆ
ಎಡೆಯು ಉಳಿವಿವಣಾಗುಹೋಗಿನ । ಗೊಡವೆಯೆನಗಿಲ್ಲೆನ್ನ ಸತ್ಯದ
ಸುಡಿಗೆ ಹಾದರವಿಲ್ಲದಂತಿರೆ ಕರುಣಿಸುವುದು[3]

ಎಂದು ವೇದವ್ಯಾಸಮುನಿಯ ಸಮ್ಮುಖದಲ್ಲಿ ಕೃತ ಸಂಕಲ್ಪನಾಗಿ, ದುರ್ಯೋಧನನಿಂದ "ಎಲೆ ನಪುಂಸಕ ಧರ್ಮಸುತ"[4] ಎಂದು ಅನ್ನಿಸಿಕೊಳ್ಳಲು ತಯಾರಾಗಿದ್ದ ಅವನ ಶಾಂತಿ ಸಂಧಾನ ಸನ್ನಾಹದಲ್ಲಿ ಹೆಚ್ಚಳವೇನೂ ಕಾಣಿಸುವುದಿಲ್ಲ. ಆದರೆ "ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ". ದ್ರೌಪದಿಯು ಮಾನಸಂರಕ್ಷಣಾರ್ಥವಾಗಿ "ಎಮ್ಮಣ್ಣ ನಾಜ್ಞೆಯ ಗೆರೆಯದಾಂಟಿಡೆ ದಾಂಟಿಸೆನು ಹೋಗು"[5]

ಬಸುರ ಬಗಿದೆನು ಕೀಚಕನ ನಸು । ಮಿಸುಕಿದೊಡೆ ವೈರಾಟನಂಶವ
ಹೆಸರ ತೊಡೆವೆನು ನಮ್ಮನರಿದೊಡೆ ಕೌರವವ್ರಜವ
ಕುಸುರಿದರಿವೆನು ಭೀಮಕಷ್ಟವ । ನೆಸಗಿಪನು ಪಾಯೆಂದರಾದೊಡೆ
ಮುಸುಡನಮರಾದ್ರಿಯಲಿ ತೀವೆನು ದೇವಸಂತತಿಯ[6]

ಎಂದು ಮುಂತಾಗಿ ಹಲವು ಬಾರಿ ಘುಡುಘುಡಿಸಿದ ಭೀಮಸೇನ "ಸೋದರರ ವಧೆಗೊಡ ಬಡುವನಲ್ಲ....ಕರ್ಕಶಭರದ ಕದನದಲೇನು"[7] "ಅದು ಪುರಾಕೃತ ಕರ್ಮದವಶೇಷ.... ಕೌರವರಗಡುಮಾಡಿದರೆಂಬ ಚಿತ್ತದ ದುಗುಡವಿಂದೆನಗಿಲ್ಲ ಸಂಧಿಯ ರಚಿಸಿ"[8] ಎಂದು ಹೇಳುವಾಗ ಕೃಷ್ಣ ದ್ರೌಪದಿಯರಿಗೂ ಸಹ ಆಶ್ಚರ್ಯವಾಗಿರಬೇಕು. ದೇವಾಸುರರನ್ನು ಗೆದ್ದು, ತ್ರೈಲೋಕ್ಯವಿಜಯಿ ಎಂಬ ಬಿರುದು ಹೊತ್ತ ಅರ್ಜುನನ ತೊಳಲಾಟವಂತು ಕುರುಕ್ಷೇತ್ರದಲ್ಲಿ ಉಭಯ ಸೈನ್ಯಗಳ ಮುಂದೆ ನಿಂತಾಗ ಸುಸಂವೇದ್ಯವಾಗುತ್ತದೆ. "ಕೆಟ್ಟ ಕಾಯಕದ ಸುಖಕಳುಪಿ, ಒಡಹುಟ್ಟಿದರ ಕೈಯಾರ ಕೊಂದರೆ ಮುಟ್ಟದೇ ಕಡುಪಾಪ"[9] "ಕೋಲಮೊನೆಯಲಿ ಕೊಂದು, ನೆತ್ತರಗೂಳನುಂಬವೊಲಖಿಳ ರಾಜ್ಯದ ಮೇಲೆ ಸೊಗಸುವ ಸಿರಿಯನೊಲ್ಲೆನು, ಕೊಲುವನಲ್ಲ"[10]

ಬಲುಹನೀನೋಡುವರೆ ಪರಮಂ । ಡಳಿಕರನು ತಂದೊಡ್ಡು ಬಳಿಕೆ
ನ್ನಳವನೀಕ್ಷಿಸು ಸೆಡೆದೆನಾದಡೆ ನಿಮ್ಮ ಮೈದುನನೆ
ಕೊಲುವೆನೆಂತ್ತೆ ಭೀಷ್ಮರನು ಮನ । ವಳುಕದೆಂತ್ತೈತಪ್ಪುವೆನು ಗುರು
ಗಳಿಗೆ ಕೃಪಗುರುಸುತರನಿರಿವುದಾವ ನಯ[11]

---

[1] ಉ ೬-೬ ; [2] ಉ ೭-೩ ; [3] ಆ ೪-೧೨ ; [4] ಗ ೨-೩೬ ; [5] ವಿ ೩-೬೭ ; [6] ವಿ ೩-೬೮.
[7] ಉ ೬-೯ ; [8] ಉ ೬-೧೦ ; [9] ಭೀ ೩-೨೮ ; [10] ಭೀ ೩-೪೪ [11] ಭೀ ೩-೪೨

ಎಂದು ಬಿಲ್ಲನ್ನವನು ಕೆಳಗೆ ಬಿಸಾಡುತ್ತಾನೆ. "ಕೊಳುಗುಳದೊಳೋಡಿದರೆ ಹೆಜ್ಜೆಗೆ ಫಲ ಮಹಾಪಾತಕವು,ಮುಂದಣಿಗೊಲಿದು ಹೆಜ್ಜೆಯನಿಡಲು ಹಜ್ಜೆಯೊಳಶ್ವಮೇಧಫಲ"[1]ಎಂದು ಉತ್ತರನನ್ನು ರೇಗಿಸಿದ ಅರ್ಜುನನ ಸ್ಥಿತಿಯೇ ಹೀಗಾದಾಗ ಅವನನ್ನು ಪ್ರಚೋದಿಸಿ, ಧರ್ಮಸೂಕ್ಷ್ಮವನ್ನು ಬೋಧಿಸಿ, ಯುದ್ಧಕ್ಕಣಿಗೊಳಿಸಲು ಕೃಷ್ಣಗೀತೋಪದೇಶ ಮಾಡ ಬೇಕಾಗುತ್ತದೆ; ತನ್ನೆಲ್ಲ ಯುಕ್ತಿ ಸಾಹಸವನ್ನು ಬಳಸಬೇಕಾಗುತ್ತದೆ. ಯುದ್ಧಭೂಮಿ ಯಲ್ಲಿ ಧರ್ಮಸಂಕಟ ಅರ್ಜುನನನ್ನು ಪದೇ ಪದೇ ಪೀಡಿಸುತ್ತದೆ. ಕರ್ಣನ ತೇರು ಭೂಮಿಯಲ್ಲಿ ಹೂತುಕೊಂಡಾಗ ಅವನ ಹೃದಯ ಕನಿಕರದ ಕೊಳವಾಗುತ್ತದೆ; ಧೈರ್ಯ ಪರಾರಿಯಾಗುತ್ತದೆ. ಅವನಿಗೆ ವೈರಿ ಕೌರವನಲ್ಲ, ಕರ್ಣ. "ಕೌರವನ ಮೇಲಿಲ್ಲದಗ್ಗದ ವೈರವೀತನಮೇಲೆ ನಮಗಪಕಾರಿಯಿವನು....ವೈರವುಪಶಮಿಸಿತು, ಯುಧಿಷ್ಠಿರ ವೀರ ನಿಂದಿಸ್ಮುಡಿಯ ನೇಹದ ಭಾರವಣೆ ತೋರುವ್ರದು"[2] ಎಂದು ರಾಗ ತೆಗೆಯುತ್ತಾನೆ;

> ಧರೆಯ ಬಿಡುವೆವು ಕುರುಪತಿಗೆ। ವರುಪರೊಡಹುಟ್ಟಿದರು ವಿಪಿನಾಂ
> ತರದೊಳಗೆ ಭಜಿಸುವೆವು ನಿನ್ನನು ಭಾವಶುದ್ಧಿಯಲಿ
> ತೆರಳುವಿ ಸಿರಿಗೋಸುಗವು ಸೋ। ದರನ ಕೊಲುವೆನೆ ಕೃಷ್ಣ ಕರುಣಿಸು
> ಕರುಣಿಸಕಟಾ ಕೃಷ್ಣ ಕರುಣಿಸು ಕರ್ಣನಾರು[3]

ಎಂದು ಸೆರೆಗೊಡ್ಡಿ ಬೇಡಿಕೊಳ್ಳುತ್ತಾನೆ. ವೀರದ ಜತೆಗೆ ವಿವೇಕ ಮೇಳಗೊಂಡಾಗ ಮಾತ್ರ ವ್ಯಕ್ತಿ ಕೈಗೊಂಡ ಕಾರ್ಯಗಳೆಲ್ಲ ಧರ್ಮದ ಚೌಕಟ್ಟಿನೊಳಗೆ ಜರುಗುತ್ತವೆ. ವಿವೇಕ ಮುಸುಳಿ, ಮನಸ್ಸು ಭಾವುಕತೆಗೆ ಶರಣಾದಾಗ ವೀರ ಕರುಣೆಗೋ ದೌಷ್ಟ್ಯಕ್ಕೋ ಸೆರೆಯಾಗುತ್ತದೆ.

ರಾಜಕೀಯ ಧರ್ಮ

ಶ್ರೀಕೃಷ್ಣನಂತೆ ಭೀಷ್ಮದ್ರೋಣರಂತೆ ಲೋಕದ ವ್ಯಾಮೋಹವನ್ನು ತೊರೆದವರಿಗೆ ಮಾತ್ರ ಧರ್ಮಸ್ವರೂಪ ಸ್ಪಷ್ಟವಾಗಿ ಹೊಳೆಯುತ್ತದೆ. ಅವರಿಲ್ಲದಿದ್ದರೆ ಅಧರ್ಮದ ಜತೆಗೆ ಧರ್ಮವೂ ಸಂಪೂರ್ಣ ನಾಶವಾಗಿ ಭರತಸಂತತಿಯೂ ನಿರ್ನಾಮವಾಗುತ್ತಿತ್ತೆಂದು ತೋರುತ್ತದೆ. ಬೇಡನಿಗೆ ಹಕ್ಕಿ ಬೇಕು, ಹಾವಿಗೆ ಕಪ್ಪೆ ಬೇಕು, ಗರುಡನಿಗೆ ಹಾವುಬೇಕು, ಹುಲಿಗೆ ಹಸುಬೇಕು ; ಒಂದು ಮತ್ತೊಂದನ್ನು ತಿಂದು ಬದುಕಬೇಕಾಗಿದೆ. ಸಜ್ಜನರನ್ನು ಹಿಂಸಿಸುವ ದುಷ್ಟರನ್ನು ಶಿಕ್ಷಿಸಬೇಕೆ ಬೇಡವೆ? ಒಲೆಯ ಬಳಿ ಚಳಿ ಕಾಯಿಸಿಕೊಳ್ಳು ತ್ತಿರುವ ಹಾವನ್ನು ಕೊಲ್ಲಬಹುದೆ? ಹೊಲದಲ್ಲಿ ಜೋಳ ತಿನ್ನಲು ಬರುವ ಗಿಣಿಗಳನ್ನು ಸಾಯಿಸಬಹುದೆ? ಇಲ್ಲಿ ಯಾವ ಹಿಂಸೆ ಸಹ್ಯ,ಯಾವುದು ಅಸಹ್ಯ,ಲೋಕಹಿತ ಪರಹಿತಗಳ ದೃಷ್ಟಿಯಿಂದ ಯಾವ ವಿಧಾನ ಗ್ರಾಹ್ಯ, ಯಾವುದು ತ್ಯಾಜ್ಯ ಎಂಬುದನ್ನು ಮನುಷ್ಯ ಯೋಚಿಸಬೇಕಾಗುತ್ತದೆ. ವಿವೇಕವಿಲ್ಲದಾಗ ವಿಷಮಪರಿಸ್ಥಿತಿಯಲ್ಲಿ ಆಲೋಚನಾಶಕ್ತಿ

---

[1] ವಿ ೬-೨೨ ; [2] ಕ ೨೭-೨೪ ; [3] ಕ ೨೬-೨೮

ಮತ್ತು ಅಂತರ್ದೃಷ್ಟಿಗಳೆರಡೂ ಗೈರುಹಾಜರಿಯಾಗುವುದುಂಟು. ಧರ್ಮದಿಂದ ಅಧರ್ಮವನ್ನು ಅಹಿಂಸೆಯಿಂದ ಹಿಂಸೆಯನ್ನು ಗೆಲ್ಲುವುದೇ ಧರ್ಮ. ಆದರೆ ತಂದೆ ತಾಯಿ ಗುರು ಹಿರಿಯರ ಮಾತನ್ನು ಕೇಳದ ದುರ್ಯೋಧನ ಸಾಮ ದಾನ ಭೇದಗಳಿಗೆ, ವಿನಯಕ್ಕೆ, ಸಾತ್ವಿಕತೆಗೆ ಮಣಿಯುವುದಿಲ್ಲವೆಂಬ ಸಂಗತಿ ಲೋಕಸಂವೇದ್ಯ. ತನ್ನನ್ನು ತಾನು ತಿದ್ದಿಕೊಳ್ಳಲು, ಅರಿಬಲವನ್ನರಿಯಲು, ಕೃಷ್ಣನ ಮಹಿಮೆಯನ್ನು ತಿಳಿಯಲು ಅವನಿಗೆ ದೊರೆತ ಅವಕಾಶಗಳು ಒಂದಲ್ಲ, ಎರಡಲ್ಲ, ಹಲವಾರು. ದ್ರುಪದನನ್ನು ಗೆಲ್ಲದಿದ್ದಾಗ ದ್ರೌಪದೀ ಸ್ವಯಂವರ ಸಂದರ್ಭದಲ್ಲಿ, ರಾಜಸೂಯಯಾಗದಲ್ಲಿ, ಘೋಷಯಾತ್ರಾ ಸಮಯದಲ್ಲಿ, ಗೋಗ್ರಹಣ ಪ್ರಕರಣದಲ್ಲಿ ಅವನು ತನ್ನ ಪರಾಕ್ರಮದ ಮಿತಿಯನ್ನರಿಯಬಹುದಿತ್ತು. ಪಾಶುಪತಾಸ್ತ್ರ ಪಡೆಯುವಲ್ಲಿ, ಗಂಧರ್ವಬಂಧನದಿಂದ ತನ್ನನ್ನು ಪಾರುಮಾಡುವಲ್ಲಿ, ಜಯದ್ರಥನ ಸೊಕ್ಕು ಮುರಿಯುವಲ್ಲಿ ಅವನು ಅರ್ಜುನನ ಸತ್ವಾತಿಶಯವನ್ನು ಗ್ರಹಿಸಬಹುದಿತ್ತು; ಅಂತೆಯೇ ಹಿಡಿಂಬ ಬಕಾಸುರ ಜಟಾಸುರಾದಿ ರಾಕ್ಷಸ ಸಂಹಾರದಲ್ಲಿ ಭೀಮನ ಪ್ರತಾಪವನ್ನು ತೂಗಿಕೊಳ್ಳಬಹುದಿತ್ತು. "ಸತಿಯರಲಿ ನಿಮ್ಮವ್ವೆ ಸುಪತಿವ್ರತೆ, ಮಹಾಖಳ ನೀನು, ಬೀಜ ಸ್ಥಿತಿಯಲೂಣೆಯವಿಲ್ಲ, ನಿನ್ನಯ ಬುದ್ಧಿ ದೋಷವಿದು",[1] "ಉಂಡು ಬದುಕುವ ಬಹಳ ಭಾಗ್ಯರ ಕಂಡಸೂಯಂಬಡುವ ಖಡ್ಡರ ಭಂಡರೆನ್ನದೆ ಲೋಕ ನಿನಗಿದು ಸಾಮ್ಯವಲ್ಲ"[2] "ದುರುಳತನವಿದುಬೇಡ ಖುಲ್ಲರ ನೆರವಿಯೊಳಗಾಡಿದೊಡೆ ತಪ್ಪದು ನರಕ"[3] ಎಂದು ಧೃತರಾಷ್ಟ್ರ ನಾನಾ ವಿಧವಾಗಿ ಅವನಿಗೆ ಬುದ್ಧಿವಾದ ಹೇಳಿಯಾಯಿತು; "ಕೌರವನು ಮಗನೇ ಮೃತ್ಯುವಲ್ಲಾ ಭರತಸಂತತಿಗೆ"[4] ಎಂದು ಮಗ ಕೇಳುವಂತೆ ವಿದುರ ನೊಡನೆ ನುಡಿದದ್ದಾಯಿತು. "ನೃಪ ನೀನಿಟ್ಟ ಕಿಚ್ಚಿದು ಪಾಪಿ ಮಗನನು ಹುಟ್ಟಿದಂದೇ ಬಿಸುಡದಾದೆವು ಬಾಳುಗೇಡಿಯನು"[5] ಎಂದು ಹೆತ್ತ ತಾಯಿ ಗಾಂಧಾರಿಯೂ ಅಂದದ್ದಾಯಿತು. "ದೈವ ಬಲ್ಲವರಲ್ಲಿ, ನೀವೇ ದೈವಹೀನರು, ಧರ್ಮಪರರವರೈವರೂ ಸತ್ಪುರುಷ ಶೀಲರು ನೀವಧಾರ್ಮಿಕರು"[6] "ಸೋದರರೊಳಗೆ ಸಂಪ್ರತಿಯಾಗಿ ಬದುಕುವುದು"[7] ಎಂದು ಭೀಷ್ಮನೂ, "ನೀವ್ ನಿರ್ದೈವರವರಗ್ಗಳ ಸದ್ದೈವರು ಕೆಟ್ಟರಿನ್ನೇನು"[8] "ಅಸುರರಲಿ ಸುರರಲಿ ಭುಜಂಗ ಪ್ರಸರದಲಿ ಭೀಮಾರ್ಜುನರ ಸೈರಿಸುವರುಂಟೇ ಕೆಟ್ಟರಿನ್ನೇನು"[9] ಎಂದು ದ್ರೋಣನೂ ಬಗೆ ಬಗೆಯಾಗಿ ಉಪದೇಶಿಸಿದ್ದಾಯಿತು. ತನ್ನ ಹಿತವನ್ನು ಬಯಸಿದ ವಿದುರನಂತು ಅವನ ದೃಷ್ಟಿಯಲ್ಲಿ ನೀತಿ ಮರುಳನಾದ.

ಮೂರ್ಖತನದ ಪರಮಾವಧಿಯನ್ನು ಮುಟ್ಟಿದ ದುರ್ಯೋಧನ ಕೃಷ್ಣನ ಮಹಿಮಾತಿಶಯವನ್ನು ತಿಳಿದಿದ್ದೂ ಯುದ್ಧಕ್ಕೆ ಕಾಲ್ಕೆರೆದದ್ದು ಅವನ ದೌಷ್ಟ್ಯಕ್ಕೆ ನಿದರ್ಶನವಾಗಿದೆ. ಜರಾಸಂಧಾದಿ ಲೋಕಕಂಟಕರನ್ನು ಭೀಮಾರ್ಜುನರಿಂದ ಕೊಲ್ಲಿಸಿ, ಚತುರ್ದಿಕ್ಕುಗಳ ರಾಜಾಧಿರಾಜರಿಂದ ಕಪ್ಪಕಾಣಿಕೆಗಳನ್ನು ತರಿಸಿ, ಯಾಗಕಂಟಕನಾದ ಶಿಶುಪಾಲನನ್ನು ತಾನೇ ಕೊಂದು, ಪಾಂಡವರ ರಾಜಸೂಯಯಾಗ ಯಶಸ್ವಿಯಾಗಿ ನೆರವೇರುವಂತೆ

---

[1] ಸ ೧೨-೪೮; [2] ಸ ೧೨-೪೯; [3] ಉ ೯-೫೦; [4] ಉ ೯-೪೭; [5] ಉ ೯-೪೯; [6] ಭೀ ೧-೨೩ [7] ಭೀ ೧೦-೩೦; [8] ಭೀ ೧-೧೨; [9] ಭೀ ೧-೧೩

ಅನುಗ್ರಹಿಸಿದವನು ಶ್ರೀಕೃಷ್ಣ; ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿ ಅಕ್ಷಯವರವನ್ನು ಕರುಣಿಸಿ ಅವಳ ಮಾನವನ್ನು ಕಾಯ್ದು, ದುರ್ಯೋಧನನ ಮುಖಕ್ಕೆ ಮಸಿ ಬಳಿದವನು ಅವನೇ; ದೂರ್ವಾಸಾತಿಥ್ಯ ಪ್ರಕರಣದಲ್ಲಿ ಪಾಂಡವರನ್ನು ಕಷ್ಟದಿಂದ ಪಾರುಮಾಡಿದವನೂ ಅವನೇ: ಕಂಸ ಕಾಲಯವನಾಗಿ ದೈತ್ಯರನ್ನು ಕೊಂದು ಧರ್ಮಾವತಾರನೆಂದೂ, ಮಹಾಬಲಶಾಲಿಯೆಂದೂ, ಲೋಕೈಕವೀರನೆಂದೂ, ಮಹಾರಾಜನೀತಿಜ್ಞನೆಂದೂ, ಅಷ್ಟೇ ಅಲ್ಲ ಪರಮಾತ್ಮನೆಂದೂ ಅವನ ಕೀರ್ತಿ ಸರ್ವವ್ಯಾಪಿಯಾಗಿತ್ತು. ಅವನು ರಾಜನೂ ಅಲ್ಲ, ಕ್ಷತ್ರಿಯನೂ ಅಲ್ಲ; ಗೋವ್ರಗಳಂತಿದ್ದ ಅವರನ್ನು ಪಾಲಿಸುತ್ತಿದ್ದ ಗೋಪಾಲ. 'ಪಾಂಡವನುಮ ಪ್ರಾಣಾಯಿ' ಎಂಬ, ನಂಬಿದವರಿಗೆ ತನ್ನ ತಿತ್ತಿಹನೆಂಬ ಬಿರುದುಗಳನ್ನು ಪಡೆದ ಭಕ್ತಕುಟುಂಬಿ ಅವನು. ಕೃಷ್ಣನ ಹಿರಿಮೆಯನ್ನು, ಅವನ ಶಕ್ತಿ ಸಾಮರ್ಥ್ಯಗಳನ್ನು ಕಣ್ಣಾರೆ ಕಂಡಿದ್ದವನು ದುರ್ಯೋಧನ. ಸಂಧಾನಕ್ಕಾಗಿ ಬಂದ ಶ್ರೀಕೃಷ್ಣನನ್ನು ದುರ್ಯೋಧನನ ಕಡೆಯವರು ಕಟ್ಟಲು ಹವಣಿಸಿದಾಗ "ದನುಜವೈರಿಯ ಕಟ್ಟುವೈ, ಕೃಷ್ಣನನು ಬಿಗಿವೈ ದಿಟ ಮಗನೆ ಹೆತ್ತೆನಗೆ ಹರುಷವನಿತ್ತೆ"[1] ಎಂದು ಗಾಂಧಾರಿ ಕಳವಳಗೊಂಡರೆ "ದುರುಳ ಮಗನೇ ಕೃಷ್ಣರಾಯನ ಕೆರಳಿಚುವರೇ ಯಾದವರು ನಮಗೆರವಾಗರೆ?"[2] ಎಂದು ಧೃತರಾಷ್ಟ್ರ ಮಗನನ್ನು ಭಂಗಿಸಿದನು. ರಾಜಸೂಯಯಾಗ ಸಮಯದಲ್ಲಿಯೇ ಭೀಷ್ಮ ಕೃಷ್ಣನ ಮಹಿಮೆಯನ್ನು ಕೊಂಡಾಡಿದ್ದ. "ಕೆಡಿಸದಿರು ಧೃತರಾಷ್ಟ್ರ ಕುಲದಲಿ ಕೊಡಲಿಯನು ನೀ ಹಿಡಿದು....ಕುಲಗಡಿಯನಿವ ಮುಂದರಿಯ, ನೀವಿಂತೊಡಬಡಿಸಿ ಪಾಂಡವರ ಸ್ವಾಮ್ಯವನೀಸಿಕೊಡಿ"[3] ಎಂದು ಕೃಷ್ಣ ಧೃತರಾಷ್ಟ್ರನ ಮೂಲಕ ಅವನ ಮಗನಿಗೆ ಎಚ್ಚರಿಕೆ ನೀಡಿದ. "ಈ ಹರಿಯ ನುಡಿಗೇಳು, ದೈವದ ಮೋಹತಪ್ಪಿದ ಬಳಿಕ ಸುಭಟರ ಸಾಹಸಿಕೆ ಹುರುಳಿಲ್ಲ, ನಂಬದಿರೆನ್ನ ಬಲುಹುಗಳ"[4] ಎಂದು ಭೀಷ್ಮನೂ, "ನೆಲನ ಬೇಡುವ ಪಾಂಡವರ ಭುಜಬಲದೊಳಗೆ ಕುಂದಿಲ್ಲ, ನೀತಿಯ ತಿಳುಹಲ್ಯೆತಂದ ಸುರರಿಪು ಸಾಮಾನ್ಯ ಬಳನಲ್ಲ"[5] ಎಂದು ದ್ರೋಣನೂ ತಮ್ಮ ಅಂತರಂಗವನ್ನು ಬಹಿರಂಗಪಡಿಸಿ, ಮುಂದಿನ ದುಷ್ಪರಿಣಾಮಗಳ ಬಗ್ಗೆ ಅವನಿಗೆ ಮುನ್ಸೂಚನೆ ಕೊಟ್ಟದ್ದೂ ಆಯಿತು.

ಆದರೆ ಛಲ ದುರ್ಯೋಧನನ ಅರಿವನ್ನು ತಲೆಕೆಳಗುಮಾಡುತ್ತದೆ. ಪಾಂಡವರು ಹಗೆಗಳು; ಅಂತೆಯೇ ಅವರ ಗೆಳೆಯರೂ ಅವನಿಗೆ ಹಗೆಗಳೇ. ಪಾಂಡವರ ಮೇಲಣ ಸೇಡು ಕೃಷ್ಣನ ಮೇಲಣ ಸೇಡಾಗಿ ಬೆಳೆಯುತ್ತದೆ. "ಸಿಧಾನಸಲರಿ ನಮಗೆ ಮುರವೈರಿಯುಲ್ಲದೆ ಪಾಂಡುನಂದನರೇ"[6] ಎಂದು ಖಚಿತಪಡಿಸುತ್ತಾನೆ. ಮೇಲಾಗಿ ಸ್ವಾಭಿಮಾನ ಅವನ ಮೊಂಡು ಧೈರ್ಯಕ್ಕೆ ಸಾಣೆಯಾಗುತ್ತದೆ, ಅವನ ಅವಿವೇಕಕ್ಕೆ ಚಾಟಿಯಾಗುತ್ತದೆ. ಅದು ಎಂದೆಂದಿಗೂ ಸೋಲೊಪ್ಪಿಕೊಳ್ಳುವುದಿಲ್ಲ. ಸೇಟನ್ನಿನಂತೆ ದೈವಶಕ್ತಿಯನ್ನು ಪ್ರಶ್ನಿಸುತ್ತಾನೆ, ಪ್ರತಿಭಟಿಸುತ್ತಾನೆ. "ಭೂರಿದನುಜರನೊರಸಿದನು, ಕೈಯಾರ ಬಳಿಕರ್ಜುನನ

1 ಉ ೯-೪೮; 2 ಉ ೯-೫೦; 3 ಉ ೯-೨೪; 4 ಉ ೯-೨೫; 5 ಉ ೯-೨೬;
6 ಉ ೯-೪೧

ಕೈಯಲಿ ಕೌರವರ ಕೊಲಿಸುವನು"[1] "ಕಾವನಾತನೆ, ಕೊಲುವನಾತನೆ, ಸಾವೆನಾತನ
ಕೈಯ ಬಾಯಲಿ, ನೀವು ಪಾಂಡವರೊಡನೆ ಸುಖದಲಿ ರಾಜ್ಯವಾಳುವುದು, ಸಾವನಾ
ನಂಜಡೊಡೆ ಬದುಕುವ ನೀವು ಚಿಂತಿಸಲೇಕೆ"[2] ಎಂದು ದಿಟ್ಟತನದಿಂದ ಹಿರಿಯರ ಬೋಧನೆ
ಯನ್ನು ಹಂಗಿಸುತ್ತಾನೆ. "ಕರೆದು ಮೂರಡಿ ನೆಲನ ಧಾರೆಯನೆರೆದ ಬಲಿ ತಳಕಿಳಿದನ್,
ಎನ್ನೀ ಧರೆಯೊಳೈದೂರುಗಳನಿತ್ತೆನಗಾವ ಪದವಹುದು"[3] ಎಂದು ಕೃಷ್ಣನನ್ನು ಮೂದ
ಲಿಸುತ್ತಾನೆ. "ಈತನಂತರ್ಯಾಮಿ," "ಎನ್ನ ಹೃದಯದೊಳಿರ್ದು ಮುರಿವನು ಗನ್ನದಲಿ
ಸಂಧಿಯನು"[4] "ಇಳಿದನವನಿಗೆ ಧಾರುಣಿಯ ಹೊರೆಗಳೆಯಲೋಸುಗವಿಲ್ಲಿ ನಮ್ಮೊಳ
ಗೊಳಗೆ ವೈರವ ಬಿತ್ತಿ ಬರಿಕೈವನು ಮಹಾಬಲನ"[5] ಎಂಬ ಕಟುಸತ್ಯ ಅವನಿಗೆ ತಿಳಿಯು
ದಿರಲಿಲ್ಲ. ಅಗ್ನಿಜ್ವಾಲೆ ಪತಂಗಗಳನ್ನಾಕರ್ಷಿಸುವಂತೆ, ಒಂದು ಕಡೆ ಯುದ್ಧ. ಮತ್ತೊಂದು
ಕಡೆ ಕೃಷ್ಣ ಅವನನ್ನು ಸೆಳೆಯುತ್ತಾರೆ. "ಧರೆಯೊಳಗೆ ಕಡುಮೂರ್ಖರಿವರಿಬ್ಬರು ಕಣಾ;
ದುರಿಯೋಧನನು ದಶಶಿರನು; ಗೋಗ್ರಹಣದಲಿ ವನಭಂಗದಲಿ ಮುಂಕೊಂಡು,ಅರಿನೃಪರ
ಸತ್ವಾತಿಶಯದುಬ್ಬರದ ಬಲುಹನು ಕಂಡು, ಕಂಡೆಚ್ಚರದೆ ಮರುಳಹುದುಚಿತವೇ?"[6] ಎಂದು
ವಿದುರ ಧೃತರಾಷ್ಟ್ರನನ್ನು ಪ್ರಶ್ನಿಸುತ್ತಾನೆ. ಮೂರ್ಖರು ಅವರಿಬ್ಬರೇ ಅಲ್ಲ; ಅವರಿಗಿಂತ
ಹಿಂದೆಯೂ ಮೂರ್ಖರಿದ್ದರು. ಇಂದೂ ಇದ್ದಾರೆ, ಧರೆಯಿರುವತನಕ ಇರುತ್ತಾರೆ. ಇದು
ಸಾರ್ವಕಾಲಿಕ ಸತ್ಯ. ಅಪಘಾತಗಳು ಗೊತ್ತಿದ್ದೂ ಜನ ರೈಲು ವಿಮಾನ ಪ್ರಯಾಣವನ್ನು
ನಿಲ್ಲಿಸಿಲ್ಲ; ಕುಡಿತದ ಕೆಡುಕು ತಿಳಿದಿದ್ದರೂ ಅದು ಸಮಾಜದಿಂದ ತಿರಸ್ಕೃತವಾಗಿಲ್ಲ;
ಹೊಟ್ಟೆ ನೋವಿದ್ದರೂ ಚಕ್ಕುಲಿ ತಿನ್ನಬೇಕು, ಕಾಫಿ ಕುಡಿಯಬೇಕು; ಕಾಮಾದಿ ಅರಿ
ಷಡ್ವರ್ಗಗಳ ದುಷ್ಪರಿಣಾಮಗಳು ಗೊತ್ತಿದ್ದರೂ ಮನುಷ್ಯ ಅವುಗಳಿಗೆ ಜೋತು ಬೀಳು
ತ್ತಾನೆಯೇ ಹೊರತು, ಅವುಗಳಿಂದ ಪಾರಾಗಲು ಪ್ರಯತ್ನಿಸುವುದಿಲ್ಲ. ಇರುಳು ಕಂಡ
ಬಾವಿಗೆ ಹಗಲು ಬೀಳುವುದೇ ಅವನ ಸಹಜ ಪ್ರವೃತ್ತಿಯಾಗಿದೆ. ಅವನಿಗೆ ಹಿರಿಯರ
ಬೋಧೆಯಾಗಲಿ, ಅನುಭವಿಗಳ ತಿಳಿವಳಿಕೆಯಾಗಲಿ ಹಿಡಿಸುವುದಿಲ್ಲ. ಮಾನವನ ಇತಿಹಾಸ
ಕಾಳಗಗಳ ಸರಮಾಲೆ. ಯುದ್ಧದ ಕಿಚ್ಚು ತನ್ನೊಳಗೆ ಬಿದ್ದವರನ್ನಲ್ಲದೆ, ನೋಡುತ್ತ
ನಿಂತವರನ್ನೂ ಬಾಚಿ ತಬ್ಬಿಕೊಳ್ಳುತ್ತದೆ. ಒಂದೊಂದು ಯುದ್ಧದಲ್ಲಿ ಸತ್ತ ಜನಸಂಖ್ಯೆಯು,
ಆದ ನಷ್ಟದ ವಿವರಗಳು ಕಣ್ಮುಂದಿದ್ದರೂ, ಹಿರೋಷಿಮಾ ನಾಗಸಾಕಿಗಳ ಘೋರದುರಂತ
ಕಥೆ ಕಾದ ಕಾಲಾಯಸದಂತೆ ಕಿವಿಯನ್ನು ಕೊರೆಯುತ್ತಿದ್ದರೂ, ಸೈನ್ಯದ ಜಡಾವಣೆ
ಯಾಗಲಿ, ಶಸ್ತ್ರಾಸ್ತ್ರಗಳ ತಯಾರಿಕೆಯಾಗಲಿ ಸ್ಥಗಿತಗೊಂಡಿಲ್ಲ. ಎಷ್ಟು ವಿಶ್ವಸಂಸ್ಥೆಗಳು
ಹುಟ್ಟಿದರೂ ಪ್ರಪಂಚದಲ್ಲಿ ಅಶಾಂತಿ ಸಂಪೂರ್ಣವಾಗಿ ಕೊನೆಗಾಣುವುದಿಲ್ಲ; ಪ್ರಪಂಚ
ಸರ್ಕಾರವೆಂಬುದು ಮರೀಚಿಕೆಯಾಗಿಯೇ ಉಳಿಯುತ್ತದೆ. ಹೀಗಿರುವಾಗ ಕುರುಕ್ಷೇತ್ರ
ಯುದ್ಧ ಅನಿವಾರ್ಯವೆಂಬುದು ದುರ್ಯೋಧನನ ಜಾತಕ ಬಲ್ಲವರಿಗೆಲ್ಲ ಗೊತ್ತು. ಅವನ
ಛಲ ಮತ್ತು ಸ್ವಾಭಿಮಾನಗಳಲ್ಲಿಯೇ ಅವನ ದುರಂತ ನೆಲಸಿದೆ. ಅವನ ದುರ್ಯೋಧನತ್ವ
ದಲ್ಲಿಯೇ ಅವನ ಅಸಾಮಾನ್ಯ ವ್ಯಕ್ತಿತ್ವ ಅಡಕಗೊಂಡಿದೆಯೆಂದು ಹೇಳಬಹುದು. ಶಕ್ತಿ

[1] ಉ ೬ ೨೧; [2] ಉ ೬ ೨೨; [3] ಉ ೯. ೩೨; [4] ಉ ೯. ೭೧; [5] ಉ ೯ ೬೩; [6] ಉ ೩. ೧೭

ಸಾಮರ್ಥ್ಯಗಳಲ್ಲಿ ಅವನಿಗೆ ಸಮನಾದವರು ಪಾಂಡವರಲ್ಲೊಬ್ಬರೂ ಇಲ್ಲ. ಅವನನ್ನು ಕೊನೆಗಾಣಿಸಬೇಕಾಗಿದ್ದರೆ ಶ್ರೀಕೃಷ್ಣ ತನ್ನೆಲ್ಲ ಶಕ್ತಿಯುಕ್ತಿ ಮಂತ್ರತಂತ್ರಗಳನ್ನು ಬಳಸಬೇಕಾಯಿತು; ಕೆಲವು ವೇಳೆ ಕಪಟೋಪಾಯಗಳಿಗೂ ಶರಣುಹೋಗಬೇಕಾಯಿತು. “ಇವರ್ಗಳಿನೀ ಭಾರತಂ ಲೋಕಪೂಜ್ಯಂ” ಎಂದು ಹೇಳಿ ಪಂಪ, ಕೌರವನನ್ನು ಅಗ್ರಸ್ಥಾನದಲ್ಲಿ ನಿಲ್ಲಿಸಿದ್ದು ಅತ್ಯುಚಿತವಾಗಿದೆ. ಕುಮಾರವ್ಯಾಸನ ಮುಂದಿನ ಪದ್ಯ ದುರ್ಯೋಧನನ ಗೌರವಾರ್ಥವಾಗಿ ರಚಿಸಿದ ಸ್ಮಾರಕಸ್ತೂಪವಾಗಿದೆ :

ಮಣಿದು ಬದುಕುವನಲ್ಲ ಹಗೆಯಲಿ। ಸೆಣಸಿ ಬಿಸುಡುವನಲ್ಲ ದಿಟ ಧಾ
ರುಣಿಯ ಸಿರಿಗಳುಪುವವನಲ್ಲಳುಕಿಲ್ಲ ಕಾಯದಲಿ
ರಣಮಹೋತ್ಸವವೆಮ್ಮ ಮತಕೈ। ವಣಿಸಿ ಹೊಯ್ದಾಡುವೆನು ಕೃಷ್ಣನ
ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ[1]

ಕೊನೆಕೊನೆಗೆ ಅವನು ಯುದ್ಧ ಮಾಡಿದ್ದು ನೆಲಕ್ಕಾಗಿಯಲ್ಲ, ಅಧಿಕಾರಕ್ಕಾಗಿಯಲ್ಲ, ನೃಪಧರ್ಮ ಸಂರಕ್ಷಣೆಗಾಗಿ, ಕೃಷ್ಣನ ಮೇಲಿನ ಸೆಣಸಿಗಾಗಿ, ಕೈವಲ್ಯಸಾಧನೆಗಾಗಿ. ಕಾದಿ ಕೊಲ್ಲುವುದು ಅರ್ಜುನನ ಧರ್ಮವಾದರೆ, ಅದು ದುರ್ಯೋಧನನ ಧರ್ಮವೂ ಆಗಬೇಕಷ್ಟೆ. ಸಂಧಾನಕ್ಕೆ ಹೊರಡುವ ಮುನ್ನ ಶ್ರೀಕೃಷ್ಣ ದುರ್ಯೋಧನನ ಸ್ವಭಾವವನ್ನರಿತವನಾದ್ದರಿಂದ “ಕಾಳಗವನೇ ಬಲಿದು ತಹೆನಿನಿಸರೇಳಿಲವಮಾಡಿಸಿಡೆ ರಿಪುಗಳ ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯಲಿ”[2] ಎಂದು ದ್ರೌಪದಿಗೆ ಆಶ್ವಾಸನೆ ನೀಡುತ್ತಾನೆ.

ಧರ್ಮದ ಹೆಸರಿನಲ್ಲಿ ನಡೆದ ಯುದ್ಧವಾದ್ದರಿಂದ ಗೀತಾಚಾರ್ಯ ಕುರುಕ್ಷೇತ್ರವನ್ನು ಧರ್ಮಕ್ಷೇತ್ರವೆಂದು ಕರೆದಿರಬೇಕು. ಒಂದು ಗುರಿಮುಟ್ಟಲು ಅನೇಕ ದಾರಿಗಳುಂಟು. ಗುರಿಯಷ್ಟೇ ದಾರಿಯೂ ಶುದ್ಧವಾಗಿರಬೇಕೆಂದು ಗಾಂಧೀಜಿ ಹೇಳಿದ್ದು ಮಾತ್ರವಲ್ಲ, ನಡೆಯುತ್ತಿದ್ದುದೂ ಉಂಟು. ಕಾಲಪರಿಸರಗಳಿಗನುಗುಣವಾಗಿ ಸಾಧನ ಮಾಧ್ಯಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಒಂದೊಂದು ಸಮಸ್ಯೆ ಒಂದೊಂದು ತೆರ ; ಒಂದೊಂದಕ್ಕೂ ಒಂದೊಂದು ತೆರನ ಪರಿಹಾರ ಅತ್ಯವಶ್ಯ. ಬಯಲುಸೀಮೆಯ ಯುದ್ಧಕ್ಕೂ ಗುಡ್ಡಗಾಡಿನ ಯುದ್ಧಕ್ಕೂ ತಂತ್ರ ಹಾಗೂ ಯಂತ್ರಸಾಧನಗಳಲ್ಲಿ ವ್ಯತ್ಯಾಸ ಅನಿವಾರ್ಯ. ಪಾಂಡವರ ಕಡೆ ನ್ಯಾಯವಿತ್ತು ; ಧರ್ಮವಿತ್ತು ನಿಜ. ಆದರೂ ದುರ್ಯೋಧನನನ್ನವರು ಜಯಿಸಬೇಕಾದರೆ ಶ್ರೀಕೃಷ್ಣನ ಸಲಹೆಯಂತೆ ಅನೇಕ ಕಪಟೋಪಾಯಗಳನ್ನು ಹೂಡಬೇಕಾಗುತ್ತದೆ. ಸಂಧಿಮುರಿದು ಬಿದ್ದಾಗ ಕೃಷ್ಣ ಕುಂತಿಯರು ಕರ್ಣನಿಗೆ ಅವನ ಜನನವೃತ್ತಾಂತವನ್ನು ತಿಳಿಸಿ, ಅವನ ಎದೆಗೋಟೆಗೆ ಲಗ್ಗೆ ಹಾಕಿ, ಮನಸ್ಸನ್ನು ಛಿದ್ರಗೊಳಿಸಿ, ಶಕ್ತಿಯನ್ನು ಜಾಳುಗೊಳಿಸುತ್ತಾರೆ. ಯುದ್ಧದಲ್ಲಿ ಭೀಷ್ಮನ ಕೈ ಮಿಗಿಲಾದಾಗ ಅವನನ್ನು “ಸಾವದಲಿ ಮುರಿಯಲು ಬೇಕು” ಎಂದು ಕೃಷ್ಣ ರಾತ್ರಿಯ ವೇಳೆ ಪಾಂಡವರನ್ನು ಅವನರಮನೆಗೆ ಕೊಂಡೊಯ್ದು “ಅರಿಯೆನುಚಿತವನೆನ್ನ ಭಾರದ ಹೊರಿಗೆ ನಿಮ್ಮದು ಕೃಷ್ಣನದು ನಾವರಿ

[1] ಉ ೧೦. ೭೫ ; [2] ಉ ೭. ೧೨

ದರೆಯು ಮೇಣ್ ಮರೆದರೆಯು ರಕ್ಷಕರು ನೀವೆಮಗೆ"[1] ಎಂದು ಅವರಿಂದ ಹೇಳಿಸುತ್ತಾನೆ. ತನ್ನನ್ನು ಕೊಲ್ಲುವ ಉಪಾಯವನ್ನು ಭೀಷ್ಮನೇ ಪಾರ್ಥನಿಗರುಹುತ್ತಾನೆ. ಒಂದು ರೀತಿಯಲ್ಲಿ ಸುಳ್ಳು ಹೇಳಿಸಿಯೇ ದ್ರೋಣನನ್ನವರು ಕೊಲ್ಲಬೇಕಾಗುತ್ತದೆ. ಬ್ರಾಹ್ಮಣವೇಷದಿಂದ ಕೃಷ್ಣ ಕರ್ಣನ ಅಮೃತಕಲಶವನ್ನು ಕಸಿದುಕೊಂಡದ್ದಲ್ಲದೆ, ರಥ ಚಕ್ರ ಹೂತು, ಸಾರಥಿಯಿಲ್ಲದೆಯೆ ನಿಸ್ಸಹಾಯಕನಾಗಿದ್ದಾಗ, ಅವನನ್ನು ಕೊಲ್ಲುವಂತೆ ಅರ್ಜುನನನ್ನು ಪ್ರಚೋದಿಸುತ್ತಾನೆ. "ಎಸು ಮರುಳೆ ಗಾಂಡೀವಿಯಾಪತ್ತೆಸಗಿದಾಗಳೆ ಹಗೆಯ ಗೆಲುವುದು ವಸುಮತೀಶರನೀತಿ ತೊಡು ತೊಡು ದಿವ್ಯಮಾರ್ಗಣವ"[2] ಎಂದು ಕೃಷ್ಣ ಅರ್ಜುನನನ್ನು ಚಮ್ಮಟಿಗೆಯಿಂದ ತಿವಿದು, ತನ್ನ ರಾಜನೀತಿಪ್ರಜ್ಞೆ ಮೆರೆಯುತ್ತಾನೆ. ಕೃಷ್ಣ ಶತ್ರುಗಳನ್ನು ಧ್ವಂಸಮಾಡಿದ್ದೇ ಹೀಗೆ. ಆ ವಿಷಯ ಅರ್ಜುನನಿಗೂ ಗೊತ್ತು.

> ಕಾಲಯವನನುಪಾಯದಿಂದವೆ। ಬೀಳಿಸಿದೆ ಮಾಗಧನನಾ ಪರಿ
> ಸೀಳಿಸಿದೆ ಭೀಷ್ಮಾದಿಗಳ ಸೋಲಿಸಿದೆ ಸಾಮದಲಿ
> ಥಾಳಸತಿ ಡೊಂಕಣಿಯ ಶಕ್ತಿನ। ತಾಳಿಕಾರನು ನಿನ್ನ ಮಾಯೆಯ
> ಹೇಳಲಮ್ಮೆನು ಕೃಷ್ಣ ಕರುಣಿಸು ಕರ್ಣನಾರು[3]

ಎಂದವನು ಹಂಬಲಿಸುವಲ್ಲಿ ಕೃಷ್ಣನ ನಿಜಸ್ವರೂಪ ಬಯಲಾಗುತ್ತದೆ. "ಹರಿಯ ಬಲುಹುಂಟಾದಡೆಯು ಧಿಕ್ಕರಿಸಬಾರದು ರಾಜಮಂತ್ರವ" ಎಂದು ಭೀಷ್ಮನೇ ನುಡಿಯುತ್ತಾನೆ. ಭೀಮ ದುರ್ಯೋಧನನ ಗದೆಯಿಂದ ಹೊಡೆತ ತಿಂದು ತಿರೆಗೆ ಬಿದ್ದಾಗ, "ನೀವು ಮೊದಲಲಿ ಬೆಸಸಿದಿರಿ, ಮಾಯಾವಿಗಳ ಮಾಯೆಯಲಿ ಗೆಲುವುದು ದೈವಕೃತಿಯಿದು ರಾಜಮಂತ್ರದ ಸಾರತರವೆಂದು"[4] ಈಗ ದುರ್ಯೋಧನನನ್ನು ಕೊಲ್ಲುವ ಉಪಾಯ ಯಾವುದಿದೆ ಎಂದು ಅರ್ಜುನ ಕೃಷ್ಣನನ್ನು ಬೇಡುತ್ತಾನೆ. ಕೃಷ್ಣನ ಸೂಚನೆಯಂತೆ ಭೀಮ ಗದಾಯುದ್ಧದ ಧರ್ಮವನ್ನು ಧಿಕ್ಕರಿಸಿ, ಕೌರವನ ತೊಡೆಗೆ ಗದಾಪ್ರಹಾರ ಮಾಡುತ್ತಾನೆ. "ಅಸುರಾಂತಕನ ಕಪಟದ ಮಂತ್ರವೇ ಬಾಧಕವಿದಲ್ಲದೆ ನಿಮಗೆ ಸೋಲುವುದುಂಟೆ ಕುರುಸೇನೆ?"[5] ಎಂದು ದ್ರೋಣ ಪಾಂಡವಸೇನಾನಾಯಕರನ್ನು ಕುರಿತು ಉಗ್ಗಡಿಸುತ್ತಾನೆ. ಪಾಂಡವರ ತಲೆಗಳನ್ನು ತಂದುಕೊಡುವುದಾಗಿ ಅಶ್ವತ್ಥಾಮ ಪ್ರತಿಜ್ಞೆ ಮಾಡಿದಾಗ "ಬಕನ ಧರ್ಮಸ್ಥಿತಿಯ ಮೊಲು ದೇವಕಿಯಮಗ ಕಾದಿಹನಲೇ, ಕೌಳಿಕನ ಸಿದ್ಧನ ಕೃತಿಯನಾರಿಗೆ ಮೀರಬಹುದು"[6] ಎಂದು ದುರ್ಯೋಧನ ಕೃಪಕೃತವರ್ಮರ ಮುಂದೆ ನುಡಿಯುತ್ತಾನೆ. "ಕೈತವದ ಶಿಕ್ಷಾಗುರು"[7] ಎಂದು ಅವನು ಕೃಷ್ಣನಿಗೆ ಕೊಟ್ಟ ಬಿರುದು.

ಯುದ್ಧ ಕಲೆ

ಯುದ್ಧಕಲೆಯಲ್ಲಿ ಶಸ್ತ್ರಾಸ್ತ್ರ ತಂತ್ರಮಾತ್ರವಲ್ಲ, ಯುಕ್ತಿತಂತ್ರವೂ ಸೇರುತ್ತದೆ. ಹಗೆಯ ಬಲಾಬಲಗಳನ್ನು ಸ್ಥಿತಿಗತಿಗಳನ್ನರಿತುಕೊಂಡ, ಅವುಗಳಿಗೆ ತಕ್ಕಂತೆ ಮುದ್ದರೆಯು

---

1 ಭೀ ೭-೧೯ ; 2 ಕ ೨೬-೧೯ ; 3 ಕ ೨೬-೨೬ ; 4 ಅ ೭-೪೪ ; 5 ದ್ರೋ ೧೫-೩೭ ; 6 ಗ ೮ ೬೦ ; 7 ಉ ೮-೪೭

ವುದೇ, ಮುಖ್ಯವಾಗಿ ಹಗೆಯನ್ನು ಗೆಲ್ಲುವುದೇ ಯುದ್ಧದ ಪರಮನೀತಿ. ರೋಗಾಗ್ನಿಶತ್ರು ಮೂಲಗಳನ್ನು ಸಂಪೂರ್ಣವಾಗಿ ಉಚ್ಚಾಟಿಸದೆ, ಶೇಷಗಳಿಗವಕಾಶ ಕೊಟ್ಟರೆ ಅವು ಮತ್ತೆ ಕಾಳ್ಗಿಚ್ಚಿನಂತೆ ಹಬ್ಬುತ್ತವೆಂದು ತಿಳಿದವರು ಹೇಳುತ್ತಾರೆ. ಕಾಠಿನ್ಯ ನಿರ್ದಯತೆಗಳು ಯೋಧನ ಪರಮಲಕ್ಷಣಗಳು. ಈ ದೃಷ್ಟಿಯಿಂದ ಅರ್ಜುನನಲ್ಲ, ದುರ್ಯೋಧನ ಶ್ರೇಷ್ಠ ಯೋಧ. ಹುಟ್ಟಾಬೆಳೆಯ ಅವನು ಪಾಂಡವರನ್ನು ನಿಶ್ಶೇಷಗೊಳಿಸಬೇಕೆಂದು ಪ್ರಯತ್ನಿಸು ತ್ತಾನೆ. ತನ್ನ ಸಂಕಲ್ಪ ಸಿದ್ಧಿಗಾಗಿ ಅವನು ಎಂಥ ಅಕಾರ್ಯಕ್ಕಾದರೂ ಸಿದ್ಧ. ಚಿಕ್ಕಂದಿನಲ್ಲಿ ಭೀಮನನ್ನು ವೈಮರೆಯಿಸಿ ಕೈಕಾಲುಗಳನ್ನು ನೇಣುಗಳಿಂದ ಬಿಗಿಸಿ, ಮಡುವಿಗೆ ಹಾಕಿ ಸುತ್ತಾನೆ; ವಿಷದ ಹಾವುಗಳಿಂದ ಕಚ್ಚಿಸುತ್ತಾನೆ; ಘೋರ ವಿಷ ಬೆರಸಿದ ಕಜ್ಜಾಯ ಗಳನ್ನು ತಿನ್ನಿಸುತ್ತಾನೆ; ಮುಂದೆ ಅರಗಿನ ಮನೆಯಲ್ಲಿ ಪಾಂಡವರನ್ನಿರಿಸಿ, ಬೆಂಕಿ ಹಚ್ಚಿಸಿ, ಅವರನ್ನು ಧ್ವಂಸಮಾಡಲು ಹವಣಿಸುತ್ತಾನೆ; ಕಪಟದ್ಯೂತದಲ್ಲಿ ಪಾಂಡವರ ಆಸ್ತಿಪಾಸ್ತಿ ಗಳನ್ನು ಕಸಿದುಕೊಂಡು, ನಾನಾ ರೀತಿಗಳಿಂದ ಅವಮಾನಗೊಳಿಸಿ, ಕಾಡಿಗಟ್ಟುತ್ತಾನೆ; ವನವಾಸ ಸಮಯದಲ್ಲಿಯೂ ಸುಮ್ಮನಿರದೆ ದೂರ್ವಾಸನ ಮೂಲಕ ಅವರ ವಿನಾಶ ಸಾಧಿ ಸಲು ಯತ್ನಿಸುತ್ತಾನೆ; ಕೊನೆಗೆ ದೌತ್ಯಕ್ಕಾಗಿ ಬಂದ ಶ್ರೀಕೃಷ್ಣನನ್ನು ಬಂಧಿಸುವಂತೆ ತನ್ನವರಿಗೆ ಆಜ್ಞೆಮಾಡುತ್ತಾನೆ. ಕರ್ಣ ದ್ರೋಣಾದಿನಾಯಕರು ಅಭಿಮನ್ಯುವನ್ನು ಮೋಸದಿಂದ ಕೊಲ್ಲುತ್ತಾರೆ. ಕೌಳಿಕ ಕಲೆಯಲ್ಲಿ ಅವನು ಕೃಷ್ಣನನ್ನು ಮೀರಿಸುತ್ತಾನೆ. ಕೃಷ್ಣ, ದುರ್ಯೋಧನನ ಹೂಟ ಆವುಟಗಳಿಗೆ ಸರಿಯಾಗಿ ಮದ್ದರೆಯದೆ, ಧರ್ಮರಾಯನ ಗೊಡ್ಡುನೀತಿಯನ್ನಾಗಲೀ, ಅರ್ಜುನನ ಹ್ಯಾಮ್ಲೆಟ್ ವರ್ತನೆಯನ್ನಾಗಲೀ ಆಶ್ರಯಿಸಿ ದ್ದರೆ, ದುರ್ಯೋಧನ ಪಾಂಡವರನ್ನು ಸೋಲಿಸಿ, ಮತ್ತೆ ಕಾಡಿಗಟ್ಟುತ್ತಿದ್ದನು; ಅಧರ್ಮ ನಾಶ ಖಂಡಿತ ಸಾಧ್ಯವಾಗುತ್ತಿರಲಿಲ್ಲ. ಅವನು ಕಂಸ ಶಿಶುಪಾಲ ಜರಾಸಂಧಾದಿ ದೈತ್ಯ ರನ್ನು ಕೊಂದದ್ದು ಸಾರ್ಥಕವಾಗುತ್ತಿರಲಿಲ್ಲ. ಅವನಂತು ಪ್ರಾರಂಭ ಜೀವನದಿಂದ ಅಂತ್ಯದ ವರೆಗೆ ಅಪ್ರತಿಮ ರಾಜನೀತಿಯನ್ನು ಮೆರೆದದ್ದುಂಟು. ಕೆಲಕಾಲ ಜರಾಸಂಧಾದಿ ರಾಕ್ಷಸರಿಗಂಜಿ, ದ್ವೀಪದಲ್ಲಡಗಿಕೊಂಡದ್ದೂ ಉಂಟು. ಅವನು ಚಕ್ರಹಿಡಿದು ಅರಿಶಿರಗಳನ್ನು ಚೆಂಡಾಡದಿದ್ದರೂ, ಯುದ್ಧದಲ್ಲೆಲ್ಲ ಅವನದೇ ಪ್ರಭಾವ; ಶತ್ರುಗಳ ಲಕ್ಷ್ಯದಲ್ಲಿದ್ದದ್ದೂ ಅವನೇ. ರಾಕ್ಷಸರನ್ನು ಕೊಲ್ಲಬೇಕಾದರೆ ದೇವರು ಕೆಲವು ವೇಳೆ ಮಾನವ ರೂಪವನ್ನು ಬಿಟ್ಟು, ಕೂರ್ಮಮತ್ಸ್ಯಾದಿ ಪ್ರಾಣಿರೂಪವನ್ನು ತಳೆದದ್ದೂ ಉಂಟು. ಜಗತ್ತನ್ನೇ ದಹಿಸ ಬಲ್ಲ ಸಾಮರ್ಥ್ಯವುಳ್ಳದ್ದು ಸುದರ್ಶನ; ಕೃಷ್ಣ ಅದನ್ನೊಮ್ಮೆ ಭೀಷ್ಮನ ಮೇಲೆ ಎತ್ತಿದ್ದೂ ಉಂಟು; ಸೈಂಧವ ವಧೆಯ ಕಾಲದಲ್ಲಿ ಬಳಸಿಕೊಂಡದ್ದೂ ಉಂಟು. ಒಂದೇ ಏಟಿಗೆ ಕೌರವಬಲವನ್ನು ನಿರ್ನಾಮಗೊಳಿಸುವ ಸಾಮರ್ಥ್ಯ ಅವನಿಗಿತ್ತು. ಆದರೆ ಮಾನವ ಲೋಕದಲ್ಲಿ ಮಾನವ ರೀತಿಯಲ್ಲಿಯೇ ಯುದ್ಧಮಾಡುವುದಗತ್ಯವಿತ್ತು. ದುರ್ಯೋಧನ ಸಲಿಲಸ್ತಂಭವಿದ್ಯೆಯ ಬಲದಿಂದ ನೀರೊಳಗಡಗಿದ್ದಾಗ "ಆವುದಿಲ್ಲಿಯ ವಿಧಿಯ ಸಮರ ವ್ಯಾವಹಾರಿಕ ವಿಷಯ" ಎಂದು ಧರ್ಮರಾಯ ಕೃಷ್ಣನನ್ನು ಪ್ರಶ್ನಿಸುತ್ತಾನೆ. "ನೃಪವರರ ಪದ್ಧತಿ ಕಂಟಕದಿನುತ್ತರಿಸುವುದು ಕಂಟಕವ, ಮಾಯಾವಿಗಳ ವಿದ್ಯೆಗಳ ಪರಿಹರಿಸುವುದು

ಮಾಯೆಯಿಂ, ಪ್ರತಿ ಗರಳದಲಿ ಗರಳವನು, ಮಾಯಾಪರರು ಮಾಯೋಪಾಯವಧ್ಯರು"[1] ಎಂದು ಉತ್ತರವಿತ್ತು, ತಾನು ಹಿಂದೆ ಶತ್ರುಗಳನ್ನು ಜಯಿಸಿದ ಕ್ರಮಗಳನ್ನು ತಿಳಿಸುತ್ತಾನೆ. "ಸಮರಸೊಳಗೆ ಸೃಗಾಲನೃಪನಾಕ್ರಮಿಸಿದನು ಠಕ್ಕಿನಲಿ, ಮಾಯಾತಿಮಿರವನು ಮಾಯೆಯಲಿ ಗೆಲಿದೆವು"[2] "ಕೃತಮಾಯರನು ಮಾಯಾಪ್ರಪಂಚದಲಿ, ಘಾತಕರನು ಘಾತಕರನು ಠಕ್ಕಿನ ಠೌಳಿಕಾರರನವರ ವಿದ್ಯೆಯಲಾಳಿಗೊಂಡಡೆ ದೋಷವಿಲ್ಲ"[3] "ದ್ಯೂತವ್ಯಗಯಾ ವ್ಯಸನವಿವು ನೃಪಜಾತಿಗಾದ ವಿನೋದ, ಕಪಟ ದ್ಯೂತವಿದು ನೃಪಧರ್ಮವೇ ಮಾಯಾಭಿಯೋಗದಲಿ ಸೋತಿರಿಳೆಯನು"[4] ಎಂದು ರಾಜನೀತಿಯನ್ನುಪದೇಶಿಸಿ, ಹಳೆಯ ಕಥೆಯನ್ನು ನೆನೆಸಿಕೊಟ್ಟು, ಪಾಂಡವರನ್ನು ಹುರುಪುಗೊಳಿಸುತ್ತಾನೆ. ತ್ರಿಕಾಲಜ್ಞಾನಿಯ ಪೂರ್ಣ ದೃಷ್ಟಿಗೆ ಪಾಪಪುಣ್ಯಗಳ ಸ್ವರೂಪ ತಿಳಿಯುವಂತೆ ಸಾಮಾನ್ಯರಿಗೆ ಕಷ್ಟ. ಚಾಮುಂಡಿ ಬೆಟ್ಟದ ಮೇಲೆ ನಿಂತವನಿಗೆ ಮೈಸೂರು ನಗರದ ಸಮಗ್ರದೃಶ್ಯ ಗೋಚರಿಸುವಂತೆ, ನಗರದ ಬೀದಿಗಳಲ್ಲಿ ಓಡಾಡುವವನಿಗೆ ಗೋಚರಿಸುವುದಿಲ್ಲ. ಮಹಾಭಾರತವನ್ನು ಪೂರ್ಣವಾಗಿ ವ್ಯಾಸಂಗಮಾಡಿದನಂತರ ತಪ್ಪು ಪಾಂಡವರದೋ ಕೌರವರದೋ ಎಂಬ ತೀರ್ಮಾನಕ್ಕೆ ಬರಲು ಸಾಮಾನ್ಯರಿಗೆ ಶಕ್ಯವಾಗಬಹುದು. ಯುದ್ಧಾಂತ್ಯದಲ್ಲಿ ಮೊದಲು ಅರ್ಜುನನ ನ್ನಿಳಿಸಿ, ಅನಂತರ ಕೃಷ್ಣ ಇಳಿದ ಕೂಡಲೇ ರಥ ಉರಿದುಹೋಗುತ್ತದೆ. ಆಗ ಅರ್ಜುನ "ನೀವು ಬಲ್ಲಿರಿ ದೇವ, ನೀ ಮಾಯಾವಿ, ಮಾಯಾಪಾಶಬದ್ಧರು, ನಾವು ಬಲ್ಲೆವೆ ನಿಮ್ಮನು"[5] ಎಂದು ಕೃಷ್ಣನ ಚರಣತಲದಲ್ಲಿ ಮೈಯ್ಯಿಕ್ಕುತ್ತಾನೆ. ಏಕಮೇವಾದ್ವಿತೀಯ ಮಿತ್ರನಾಗಿ, ಹಲವಾರು ವರ್ಷ ಜತೆಯಲ್ಲಿ ಕಾಲಕಳೆದಿದ್ದರೂ ಅರ್ಜುನನಿಗೆ ಕೃಷ್ಣನ ರಹಸ್ಯ ಪಾರಮಾರ್ಥಿಕ ಮಟ್ಟದಲ್ಲಾಗಲಿ, ಲೌಕಿಕಮಟ್ಟದಲ್ಲಾಗಲಿ ಇಡಿಯಾಗಿ ಅರ್ಥವಾಗುವುದಿಲ್ಲ. ಅರ್ಜುನನ ಪಾಡೇ ಹೀಗಾದರೆ ಸಾಮಾನ್ಯರ ಗತಿಯೇನು? ಲೌಕಿಕಮಟ್ಟದಲ್ಲಿ ಈ ಮಾತು ಸತ್ಯಸ್ಯ ಸತ್ಯವೆನ್ನುವುದಂತು ಸಮಕಾಲೀನ ಘಟನೆಗಳಿಂದ ಯಾರಿಗಾದರೂ ವೇದ್ಯವಾಗದಿರದು. ಮುಳ್ಳನ್ನು ಮುಳ್ಳಿಂದಲೇ ತೆಗೆಯಬೇಕು, ಯುದ್ಧದ ಧರ್ಮವೇ ಬೇರೆ, ಸಂಸಾರ ಧರ್ಮವೇ ಬೇರೆ ಎನ್ನುವ ವಿಷಯ ಮೇಲಿನ ವಿವರಣೆಯಿಂದ ಖಚಿತವಾಗುತ್ತದೆ.

ಹಿಟ್ಲರನಂತೆ ಅಧಿಕಾರದ ಅಮಲೇರಿದ ಜನ ನಡಸುವ ಯುದ್ಧ ಪ್ರಜಾಹಾನಿಗೆ, ಸಂಸ್ಕೃತಿವಿನಾಶಕ್ಕೆ ಹಾದಿಯಾಗುತ್ತದೆಂಬುವಕ್ಕೆ ಇತಿಹಾಸದಲ್ಲಿ ಸಾಕಷ್ಟು ನಿದರ್ಶನಗಳಿವೆ. ಅಲೆಕ್ಸಾಂಡರ್, ನೆಪೋಲಿಯನ್, ಘಸ್ನಿಮಹಮ್ಮದರು ದಿಗ್ವಿಜಯ ಯಾತ್ರೆ ಕೈಕೊಂಡದ್ದು ಸ್ವಪ್ರತಿಷ್ಠೆಗಾಗಿ, ಸಾಹಸ ಪ್ರವೃತ್ತಿಯ ತೀಟೆಯನ್ನು ತೀರಿಸಿಕೊಳ್ಳುವುದಕ್ಕಾಗಿ. ಒಂದಾನೊಂದು ಕಾಲದಲ್ಲಿ ದಿಗ್ವಿಜಯ ಯಾತ್ರೆ ನೃಪಧರ್ಮಗಳಲ್ಲೊಂದೆಂಬ ಭಾವನೆ ಎಲ್ಲೆಲ್ಲೂ ಪ್ರಬಲವಾಗಿದ್ದುದುಂಟು. ಭರತಖಂಡದಲ್ಲಿಯೂ, ಎಲ್ಲ ಅಲ್ಲದಿದ್ದರೂ, ಕೆಲವು ಜನ ಆ ಧರ್ಮವನ್ನೊಪ್ಪಿಕೊಂಡಿದ್ದರೆನ್ನುವುದಕ್ಕೆ ದಸರಾ ಮಹೋತ್ಸವವೇ ಸಾಕ್ಷಿಯಾಗಿದೆ. ಆ ಧರ್ಮದ ಹಿನ್ನೆಲೆಯಲ್ಲಿ ಪಾಳೆಯಗಾರಿಕೆಯ ಮನೋಭಾವವಿತ್ತೇ ಹೊರತಾಗಿ ಶ್ರೀ

---

[1] ಗ ೫.೬; [2] ಗ ೫.೧೦; [3] ಗ ೫.೧೦; [4] ಗ ೫.೧೨; [5] ಗ ೮ ೫೨

ಸಾಮಾನ್ಯನ ಕ್ಷೇಮಕಾತರತೆಯಿರಲಿಲ್ಲವೆಂಬುದು ಮಾತ್ರ ಸುಸ್ಪಷ್ಟ. ಹಿಂದಿನ ಕಾಲದಲ್ಲಿ ಸಾಮಾನ್ಯರನ್ನು ಸಂಕಟಕ್ಕೀಡುಮಾಡುತ್ತಿದ್ದ ಎರಡು ಸಂಗತಿಗಳೆಂದರೆ, ಗೋಗ್ರಹಣ ಮತ್ತು ಸ್ತ್ರೀಯಪಹರಣ. ಇವೆರಡೂ ನೃಪರು ಮಾಡಬಾರದಂಥ ಹೇಯಕೃತ್ಯಗಳು. ಉತ್ತರನಂಥವನು ಹೇಳುತ್ತಾನೆ "ಪೊಡವಿಪತಿಗಳು ಬಂದು ತುರುಗಳ ಹಿಡಿವರೇ, ಲೋಕದಲಿ ಅಧಮರ ಬಡಮನದ ಮನ್ನೆಯರ ಮೈಸಿರಿ ಕೌರವನೊಳಾಯ್ತು"[1] ಎಂದು. "ನಮ್ಮರಸ ನಯದಪ್ಪಿದನು ತುರು ಸೆರೆವಿಡಿವರೇ ನೃಪರು?"[2] ಎಂದು ದುರ್ಯೋಧನನ ಸೈನಿಕರೇ ಒದರಾಡುತ್ತಾರೆ. ಅಂಥ ಅಕಾರ್ಯಕ್ಕೆ ಕೈಹಾಕುವವರು ನೀಚರು, ಕಳ್ಳರು ಮತ್ತು ಸಣ್ಣಪುಟ್ಟ ಪಾಳೆಯಗಾರರು. ಇಂಥ ಕಳ್ಳತನ ಸರ್ವೇಸಾಮಾನ್ಯವಾಗಿದ್ದ ಕಾಲದಲ್ಲಿ ಅವನ್ನು ತಡೆಗಟ್ಟಲು ಪ್ರಾಣಾರ್ಪಣೆಗೂ ಸಿದ್ಧವಾಗಿರುತ್ತಿದ್ದ ವೀರರು ಊರೂರಿನಲ್ಲಿಯೂ ಸಿಗುತ್ತಿದ್ದರು. ಅವರಿಂದ ಸಾಧ್ಯವಾಗದಿದ್ದುದನ್ನು ದೊರೆಗಳೇ ಪರಿಹರಿಸಬೇಕಾಗಿತ್ತು. ಲತೆ, ಸ್ತ್ರೀ, ಪಂಡಿತರು ಅನ್ಯಾಶ್ರಯಿಗಳು; ಅವರು ಅಬಲರಾದ್ದರಿಂದ ಆ ಆಶ್ರಯ ತಪ್ಪಿದಾಗ ಅವರ ಭವಿಷ್ಯವೇ ಹಾಳಾಗುತ್ತದೆ; ಅದರಲ್ಲಿಯೂ ಸ್ತ್ರೀ ಪರರ ಪಾಲಾದದ್ದಾದರೆ, ವರ್ಣಸಾಂಕರ್ಯವುಂಟಾಗಿ, ಕುಲಕ್ಷಯವಾಗುತ್ತದೆಂಬ ನಂಬಿಕೆ ಚಾಲ್ತಿಯಲ್ಲಿದ್ದ ಪ್ರಾಚೀನ ಸಮಾಜದಲ್ಲಿ "ಹೆಣ್ಣಿನ ಹರಿಬ" ಮೀಸೆಯುಳ್ಳವರ ಹೊಣೆಗಾರಿಕೆಯಾಗಿತ್ತು. ವನಿತಾಪಹರಣವಾಗಲಿ, ಮಾನಭಂಗವಾಗಲಿ, ಸಜ್ಜನರ ಅದರಲ್ಲಿಯೂ ರಾಜರ ಯೋಗ್ಯತೆಗೆ ತಕ್ಕುದಾಗಿರಲಿಲ್ಲ. "ಧರೆಗೆ ಕಟ್ಟಭಿಮಾನ ಹೆಂಡಿರ ಹರಿಬವಾ ಹರಿಬದಲಿ ಕೆಡಹುದರಿಯನವಗಡಿಸಿದೊಡೆ ಸಾವರು ಪಂಥವುಳ್ಳವರು"[3] ಎಂದು ದ್ರೌಪದಿಯೇ ಹೇಳಿಕೊಳ್ಳಬೇಕಾಯಿತು. ಅವಳು ಪಟ್ಟಪಾಡು, ಅನುಭವಿಸಿದ ಅಪಮಾನ, ಸಹಿಸಿದ ದುಃಖ ಸೀತೆ ದಮಯಂತಿಯರಿಗೂ ಪ್ರಾಪ್ತವಾಗಲಿಲ್ಲ. ಅಷ್ಟು ಕಷ್ಟಗಳಿಂದ ನವೆದ ಸ್ತ್ರೀಯರು ಜಗತ್ತಿನ ಕಾವ್ಯಗಳಲ್ಲಿಯೇ ವಿರಳ. ಅವಳಿಗಿದ್ದ ಆಸರೆ ಪಾಂಡವರ ಭುಜಬಲವಲ್ಲ, ಕೃಷ್ಣನ ಎದೆಯೊಲುಮೆ. ಅವಳಂಥ ದಿಟ್ಟೆ, ಅಂತೆಯೇ ಕೃಷ್ಣಭಕ್ತೆ ಕಾವ್ಯಲೋಕದಲ್ಲಿಯೇ ಅಪರೂಪ. ತನ್ನ ಗೋಳನ್ನು ತೋಡಿಕೊಂಡಾಗ ಎಂದಾದರೊಮ್ಮೆ ಭೀಮ ರೋಷಭೀಷಣನಾಗಿ, ಕೀಚಕನಂಥ ಪಾಪಿಗಳನ್ನು ಮಾರಣಹೋಮದಲ್ಲಿ ಬಲಿಯೆರೆದದ್ದುಂಟು; "ಎಮ್ಮಯ ಮಡದಿಗನ್ಯರು ಮನವಿಡಲು ಬಳಿಕಡಗುದರಿವೆನೆನುತ್ತ"[4] ಕಳನೊಳಗೆ ರಿಂಗಣಗುಣಿದದ್ದುಂಟು. ತಾವು ದ್ರೌಪದಿಗೆ ಕೊಟ್ಟ ಕೋಟಲೆಗಾಗಿ ದುರ್ಯೋಧನ ದುಶ್ಶಾಸನರು ತಕ್ಕ ಶಾಸ್ತಿಯನ್ನನುಭವಿಸಬೇಕಾಯಿತು. ಶರಣಾಗತ ರಕ್ಷಣೆಯೂ ನೃಪರ ಕರ್ತವ್ಯಗಳಲ್ಲೊಂದು. ದುರ್ಯೋಧನನಂಥ ಶತ್ರುವಾದರೂ ಪ್ರಾಣಭಿಕ್ಷೆ ಯಾಚಿಸುವುದಾದರೆ. ತಥಾಸ್ತು ಎನ್ನಬೇಕಾದ್ದು ಸದ್ಧರ್ಮವೆಂಬ ಸಂಗತಿ ಅವನನ್ನು ಗಂಧರ್ವ ಧರ್ಮರಾಯನ ಮುಂದೆ ತಂದು ಕೆಡಹಿದಾಗ ಪ್ರಕಟವಾಗುತ್ತದೆ. "ಮಾನಭಂಗವೆ ಬರಲಿ, ಮೇಣಭಿಮಾನವಾಲಿಂಗಿಸಲಿ ಚರಣವೊಳಾನತರ ಪಾಲಿಸುವುದೇ ಕ್ಷತ್ರಿಯರ ಧರ್ಮವಿದು"[5] ಎಂದು ಧರ್ಮರಾಯ

---

1 ವಿ ೫-೨೧; 2 ವಿ ೭-೩೫; 3 ಉ ೬-೨೪; 4 ಭೀ ೫-೧೩; 5 ಅ ೨೧-೩

ಅವನಿಗೆ ಉಪದೇಶ ಮಾಡುತ್ತಾನೆ. ಸ್ವಲ್ಪ ಮುಂಚೆ ಅವನು ಭೀಮನಿಗೂ ಅದೇ ಉಪದೇಶ ನೀಡಿದ್ದ.

ಆವನಾಗಲಿ ಬೇಡಿದಂಗೊಲಿ। ದೀವುದೇ ನೃಪಧರ್ಮ ಹಗೆಕೆಳೆ
ಯಾವನಾಗಲಿ ಸೆಣಸಿದೊಡೆ ಕಾದುವದೆ ನೃಪನೀತಿ
ಆವನಾಗಲಿ ಶರಣುವೊಕ್ಕರೆ। ಕಾವುದೇ ಕ್ಷತ್ರಿಯರ ಮತವಿಂ
ತಾವುದುಚಿತವು ಭೀಮ ನೀ ಹೇಳು[1]

ಎಂದು ಪ್ರಶ್ನಿಸುತ್ತಾನೆ. ವಾದಕ್ಕಾಹ್ವಾನ ನೀಡಿದಾಗ ಸಿದ್ಧನಾಗಬೇಕಾದ್ದು ಪಂಡಿತನ ಧರ್ಮ, ಯುದ್ಧಕ್ಕಾಹ್ವಾನ ಬಂದಾಗ ಎದುರಿಸಬೇಕಾದ್ದು ರಾಜರ ಧರ್ಮ. ಪಂಪ ರನ್ನರ ಕಾಲದಲ್ಲಿಯೂ ಇಂಥದೇ ಕ್ಷಾತ್ರಧರ್ಮ ರೂಢಿಯಲ್ಲಿತ್ತೆನ್ನುವುದಕ್ಕೆ ಮುಂದಿನ ಪದ್ಯವೇ ನಿದರ್ಶನ:

ತುಱುಗೋಳೊಳ್ ಪೆಣ್ಬುಯ್ಯಲೊಳ್। ಇಱಿವೆಸದೊಳ್ನಂಟನೆಡಱಿಕೊಳಊರಳಿವಿನೊಳಂ
ತಱಿಸಂದು ಗಂಡುತನಮೆನೆ। ನೆಱೆದಪನಂ ಗಂಡನಲ್ಲನೆಂತುಂ ಷಂಡಂ ॥[2]

ಎಲ್ಲ ಕಾಲಗಳಲ್ಲಿಯೂ ಯುದ್ಧಸಮಯದಲ್ಲಿ ಸರ್ವರೂ ಗಮನಿಸಬೇಕಾದ ಕೆಲವು ಕಟ್ಟುಪಾಡುಗಳಿರುತ್ತವೆ. ದೌತ್ಯವಿನಿಮಯದ ನಂತರ, ಗೊತ್ತಾದ ದಿನ ಸಮರ ಪ್ರಾರಂಭವಾಗುತ್ತದೆ. ನಿರ್ದಿಷ್ಟ ಸ್ಥಳಗಳಲ್ಲಿ ಯುದ್ಧ ನಡೆಯುವುದೇ ಹೊರತು, ಇತರ ವಸತಿಗಳಿಗೆ ಅದು ಪಸರಿಸುವುದಿಲ್ಲ. ಕೊನೆಗೆ ಗೂಡಾರಗಳಲ್ಲಿ ವಾಸಿಸುತ್ತಿದ್ದ ಸ್ತ್ರೀಶಿಶುಗಳಿಗೆ ಯಾವ ತೊಂದರೆಯೂ ಸಂಭವಿಸುವುದಿಲ್ಲ. ಪಾಠಕರು, ವಾದ್ಯಗಾರರು, ಭಟ್ಟರು, ವೈದ್ಯರು, ಚಮರಿಧಾರಿಗಳೇ ಮೊದಲಾದ ಸೈನ್ಯೇತರ ಸೇವಾವರ್ಗದ ಜನ ಎಲ್ಲೆಂದರಲ್ಲಿ ಓಡಾಡಬಹುದಿತ್ತು. ವಾದ್ಯದೊಂದಿಗೆ ವೀರಗಾಥೆಗಳನ್ನು ಹಾಡಿ ಸೈನಿಕರನ್ನುತ್ತೇಜಿಸುವುದು ಭಟ್ಟರ ಕರ್ತವ್ಯಗಳಲ್ಲೊಂದು. "ಧುರಕೆ ಮನವಳುಕಿದರೆ, ಹಜ್ಜೆಯತಿರುಪಿದೊಡೆ, ಕುಲಕೋಟಿ ಕೋಟಿಗೆ ನರಕವೆಂದು"[3] ಭಟ್ಟರು ಎಚ್ಚರಿಸುತ್ತಾರೆ...."ಏತಕೀ ಸೂಳೆಯರು ಕ್ಷತ್ರಿಯ ಜಾತಿಯಲಿ ಜನಿಸಿದರು ಶಿವಶಿವ ಪೂತು ಗಂಡಿಗ"[4] ಎಂದು ವಂದಿಜನ ಗರ್ಜಿಸುತ್ತಾರೆ. ನಾಯಕರು ಪ್ರತಿದಿನ ಬೆಳಗ್ಗೆ ರಣರಂಗಕ್ಕೆ ಹೊರಡುವಾಗ ದೇವಗುರು ವಿಪ್ರರಿಗೆ ಸಂಭಾವನೆ ಸಲ್ಲಿಸಿ,[5] ಯಾಚಕರಿಗೆ ಮನದಣಿಯುವಂತೆ[6] ಧನಕನಕರತ್ನಾದಿಗಳನ್ನು ಹಂಚುತ್ತಾರೆ; ತಾವೂ ಸುಗಂಧದ್ರವ್ಯಗಳನ್ನು ಪೂಸಿಕೊಂಡು, ರಾವುತರಿಗೆ ಆರೋಹಕರಿಗೆ ರಥಿಕರಿಗೆ—ಸಕಲರಿಗೆ—ಯಕ್ಷಕರ್ದಮವನ್ನು ನೀಡುತ್ತಾರೆ;[7] ಯೋಧರರಿಗೆ ವೀರಕಂಕಣಗಳನ್ನು ತೊಡಿಸುತ್ತಾರೆ.

ಕುಡಿತೆಯಲಿ ಕರ್ಪುರರಸ ಸುರಿಸುರಿ। ದೊಡನೆ ಸಾದು ಜವಾಜಿಲೇಪನ
ಮುಡಿಯ ಹೊಸಹೂಗಳಸು ವರಗಂಧಾನುಲೇಪನದ
ಉಡುಗೊರೆಯ ಮಣಿಮಯ ರನ್ನದ ತೊಡಿಗೆಗಳಲಾ ಪಟುಭಟರನಂ
ಗಡದಬನ್ನಿಸಿ ಮಿಗೆ ಮನ್ನಿಸಿದನಾ ಸಮಯದಲಿ[8]

[1] ಅ ೨೦ ೧೫; [2] ಗದಾಯುದ್ಧ ೨ ೩೧; [3] ಕ ೨೧-೨೦; [4] ಕ ೧೪-೩೭; [5] ಕ ೮ ೨೦; [6] ಕ ೮ ೧೮; [7] ೧೯-೪; [8] ಕ ೧೨ ೧೨

ಇದು ದುರ್ಯೋಧನ ಯುದ್ಧರಂಗಕ್ಕೆ ಹೊರಡುವಾಗಿನ ಚಿತ್ರ.

ವೀರಸೇಸೆಯನಿಕ್ಕಿ ರಾಯನ । ನಾರಿ ಪರಸಿದಳಖಿಳ ವಿಪ್ರರ
ಚಾರು ಚಾತುರ್ವೇದ ಮಂಗಳಸೂಕ್ತ ಘೋಷದಲಿ
ತೀರಸೇರಿಪನಸುರರಿಪು ಸಹಿ । ತಾರುಭಟೆಯಲಿ ಸೂಕಿದವು ರತು
ನಾರತಿಯ ತಳಿಗೆಗಳು ಪರಕಾಂತಾ ಕದಂಬದಲಿ[1]

ಇಂಥ ಸನ್ಮಾನ ಗೌರವ ಪ್ರೋತ್ಸಾಹಗಳು ಎಲ್ಲ ನಾಯಕರಿಗೂ ದೊರೆಯುವಂಥವು. ಅಷ್ಟೇ ಅಲ್ಲ. ಯುದ್ಧಮಧ್ಯದಲ್ಲಿ ವೀರರು ಪ್ರತಿಕಕ್ಷಿಗಳಿಗೆ ವೀಳೆಯ ನೀಡುವ, ಕಸ್ತೂರಿ ಜವಾಜಿ ಮೊದಲಾದ ಲೇಪನಗಳನ್ನೊದಗಿಸುವ ಪರಿಪಾಠವೂ ಉಂಟು.

ರಾತ್ರಿ ಕಾಲದಲ್ಲಿ ಸಾಮಾನ್ಯವಾಗಿ ಕಾಳಗ ನಡೆಯುವುದಿಲ್ಲ. ಆಗ ಸೈನಿಕರೆಲ್ಲ ವಿಶ್ರಾಂತಿ ಪಡೆಯುತ್ತಾರೆ–ಇತರ ಕರ್ಮಚಾರಿಗಳು ತೂತುಬಿದ್ದ ಲೋಹದ ಸೀಸಕಗಳನ್ನು ಬಲಿಸುವ, ಹೋಳಾದ ಕವಚಗಳನ್ನು ಹೊಲಿಸುವ, ಬಾಹುರಕ್ಷೆಯ ಬಿರುಕನ್ನು ಬೆಸೆಯುವ, ಕಳಚಿದ ಆಯುಧಗಳನ್ನು ಕೀಲಿಸುವ ಖಡ್ಗಾದಿ ಕೈದುಗಳಿಗೆ ಕಾವುಗಳನ್ನು ಜೋಡಿಸುವ,ಅಂತೆಯೇ ಪ್ರಾಣಿಗಳ ಕೆಟ್ಟ ತೊಡುಗೆಗಳನ್ನು ಸರಿಪಡಿಸುವ, ತೇರುಗಳ ಮುರಿದ ಭಾಗಗಳನ್ನು ರಿಪೇರಿ ಮಾಡುವ ಕಾಯಕದಲ್ಲಿ ನಿರತರಾಗುತ್ತಾರೆ. ಅಂತೆಯೇ ವೈದ್ಯರು ಕುದುರೆಗಳ ಹರಿದ ಕೊರಳನ್ನು ಬಿಗಿವ, ಉರದೊಳು ಮುರಿವ ಬಾಣದ ಕೀಲ್ವ, ಹೊಟ್ಟೆಯ ನಿರಿಗರುಳನೊಳ ಗಿಕ್ಕಿ ಹೊಲಿಸುವ. ಮದ್ದುಗಳನಿಡಿವ, ಉರಿವ ಸೇಕದ ನಸ್ಯದೊಳು ಹದನರಿವ, ಅವುಗಳ ವೇದನೆಯನ್ನು ಎಚ್ಚರಿಕೆಯಿಂದ ಸಂತೈಸುವ ಆನೆಗಳ "ಒಡಲಿನೊಳು ಮುರಿದಿದ್ದ ಸಬಳದ ನುಡಿಯಲೀಯದೆ ಕೀಳ್ವ, ಮದ್ದನು ಗಿಡಿವ, ಜೇವಣಿಗೆಯೊಳು ಸಪ್ರಾಣಿಸುವ ದುರ್ವ್ರಣವ ತೊಡೆದು ಕಟ್ಟುವ" ಕೆಲಸದಲ್ಲಿ ಇರುಳು ಕಳೆಯುತ್ತಾರೆ. ಮತ್ತೊಂದೆಡೆ

ಬಾದಣಿಸಿದೇರುಗಳ ಬಾಯೊಳು । ಕಾದ ಬಾರಂಗಿಗಳನಳತೆಗೆ
ಕೋದ ವಾಮದೊಳೆಯ್ದೆ ಹಿಡಿದರು ತೈಲಧಾರೆಗಳ
ಆದ ವೈಗಂಡಿಯೊಳು ರಕುತವ । ಶೋಧಿಸುತ ಹಳದುಪ್ಪವನು ತೊಡೆ
ದಾದರಿಸಿದುದು ವೈದ್ಯ ಸಂತತಿ ವೀರಭಟರುಗಳ

ಹದಿನೆಂಟಕ್ಷೋಹಿಣಿ ಸೈನ್ಯದ ಕ್ಷೇಮಕಾರ್ಯಗಳ ನಿರ್ವಾಹಕ್ಕಾಗಿ ಎರಡು ಕಡೆಯೂ ದೊಡ್ಡ ದೊಡ್ಡ ಕಾರಾಗಾರಗಳೂ, ಆಸ್ಪತ್ರೆಗಳೂ ಇದ್ದಿರಬೇಕೆಂದು ಈ ವಿವರಣೆಗಳಿಂದ ವಿದಿತ ವಾಗುತ್ತದೆ. ಬಾಣಾಘಾತದಿಂದಾದ ಗಾಯಗಳಿಗೆ ಸೂಕರನ ತುಪ್ಪನನ್ನು ಬಳಿದು, ತೈಲಧಾರೆಗಳನ್ನು ಹರಿಸುತ್ತಾರೆ. ಕುಮಾರವ್ಯಾಸ ತಾನು ನೋಡಿದ್ದ ರಣರಂಗದ ದೃಶ್ಯ ಗಳನ್ನು ಕಣ್ಣಿಗೆ ಕಟ್ಟುವಂತೆ ಬಿಡಿಸಿದ್ದಾನೆ; ಕಣ್ಣಲ್ಲಿ ನೋಡಿದ್ದು ಅನುಭವವಾಗಿ, ಕಾವ್ಯ ಪ್ರಣಾಳಿಕೆಯಲ್ಲಿ ಹರಿದು, ಘನೀಭೂತವಾಗಿ ಮೂರ್ತಿವೆತ್ತಿರುವುದನ್ನು ಗಮನಿಸಿದಾಗ ಅವನ ಅಸದೃಶ ವೀಕ್ಷಣಸಾಮರ್ಥ್ಯವೂ, ಅಭಿವ್ಯಕ್ತಿಕೌಶಲವೂ ಓದುಗರನ್ನು ದಂಗು ಬಡಿಸುತ್ತವೆ.

1 ಭೀ ೫ ಪದ್ಯ ೩೬ರಿಂದ ೪೨ರ ವರೆಗೆ

ಯುದ್ಧ ಆಚರಣೆಯಲ್ಲಿರುವಾಗ ಎರಡು ಪಕ್ಷದವರೂ ಕೆಲವು ಶಾಸ್ತ್ರೋಕ್ತವಾದ ಸತ್ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸಬೇಕೆನ್ನುವುದು ತಿಳಿದವರ ಮತ. ತನ್ನ ರಥ ಹೂತುಕೊಂಡಾಗ 'ನಾಡೆ ಬಲ್ಲಿರಿ ಶಸ್ತ್ರಹೀನರ ಕೂಡೆ, ವಾಹನಹೀನರಲಿ ಕೈಮಾಡಲನುಚಿತವೆಂಬ ಮಾರ್ಗವನು" ಎಂದು ಕರ್ಣ ಮಾತಾಡಿಸುವಾಗ ಅರ್ಜುನ ಕನಿಕರ ತೋರಿಸುತ್ತಾನೆ. "ಜಲವ ಹೊಕ್ಕನ, ಹುಲ್ಲ ಕಚ್ಚಿದ ಖಳನ, ತರುಗಿರಿ ಶಿಖರದಲಿ ಕಾಲ್ದೋಳಸಿದನ, ವಲ್ಮೀಕಸಂಗತನನು ನಿರಾಯುಧನ, ಕೊಲುವುದನುಚಿತ"[1] ಎಂಬ ಶಾಸ್ತ್ರವನ್ನು ಭೀಮ ಸಹ ಬಲ್ಲ. ಆದರೆ ಶಾಸ್ತ್ರ ನಿಯಮಗಳಿಗೂ ಅಪವಾದಗಳುಂಟು. ದುರ್ಯೋಧನನ ವಿಷಯದಲ್ಲಿ ಶಾಸ್ತ್ರಮರ್ಯಾದೆಯನ್ನು ಮೀರಬಹುದೆಂದು ಅವನು ವಾದಿಸುತ್ತಾನೆ. ಭೀಮ ಮೂರ್ಛೆ ಹೊಂದಿದಾಗ, ದುರ್ಯೋಧನ "ಮಡಿದವನ ಹೊಯ್ಯೆನು"[2] ಎಂದು ಧನಂಜಯಾದಿ ಸಹೋದರರನ್ನು ಯುದ್ಧಕ್ಕಾಹ್ವಾನಿಸುತ್ತಾನೆ. ನಿಯಮಾಚರಣೆಗಿಂತ ನಿಯಮಭಂಗವೇ ಸರ್ವಸಾಧಾರಣ ಸಂಗತಿಯಾಗಿದ್ದಿರಬೇಕೆಂಬ ವಿಷಯ ಅಶ್ವತ್ಥಾಮನ ಕೊನೆಯಿರುಳಿನ ಕಗ್ಗೊಲೆಯಿಂದ ಸ್ಪಷ್ಟವಾಗುತ್ತದೆ.

ಕೆಲವು ರಾಜಕೀಯ ವಿಚಾರಗಳು

ಸರ್ವಕಾಲಗಳಲ್ಲಿಯೂ ಲೋಕವನ್ನಾಳುವ ವ್ಯವಹಾರಶಕ್ತಿ ಎಂದರೆ ರಾಜಕೀಯ. ಅದು ಮಾನವನ ಉಳಿದೆಲ್ಲ ವ್ಯವಹಾರಗಳನ್ನು ನಿಯಂತ್ರಿಸುತ್ತದೆ. ಲೋಕಕಲ್ಯಾಣ ಧರ್ಮಾಭ್ಯುದಯಗಳೆರಡೂ ಅದರ ಮೂಲಕವೇ ಸಾಧನೆಯಾಗಬೇಕಾಗಿದೆ. ಶಾಸನಗಳನ್ನು ರಚಿಸಿ, ದಂಡವನ್ನನುಗೊಳಿಸಿ, ದುಷ್ಟರನ್ನು ದಟ್ಟಿಸಿ, ಶಿಷ್ಟರನ್ನು ಪತಿಕರಿಸಿ, ಆರ್ಥಿಕಶಕ್ತಿಯನ್ನು ಬೆಳಸಿ, ಸಾಮಾಜಿಕ ವ್ಯವಸ್ಥೆಯನ್ನು ಸರಿಯಾಗಿ ರೂಪಿಸಿ, ನಾಡಿನ ಹಿತಕ್ಕೆ ಧಕ್ಕೆಯೊದಗದಂತೆ ಪ್ರತಿಯೊಬ್ಬ ವ್ಯಕ್ತಿಯೂ ಸ್ವಧರ್ಮಾನುಗುಣವಾಗಿ ನ್ಯಾಯವಾಗಿ ಸ್ವತಂತ್ರವಾಗಿ ಬಾಳುನಡೆಸಲು ತಕ್ಕುದಾದ ವಾತಾವರಣವನ್ನು ನಿರ್ಮಿಸಬೇಕಾದ್ದು ರಾಜಕೀಯ ಶಕ್ತಿಯ ಆಣೆಗುರಿಯಾಗಿರಬೇಕು. ಕೆಲವು ವೇಳೆ ರಾಜಕೀಯಶಕ್ತಿ ದುರ್ಯೋಧನನಂಥ ದುರ್ಜನರನ್ನು ವರಿಸುವುದುಂಟು; ಶಿಷ್ಟರನ್ನು ಉಪೇಕ್ಷಿಸುವುದುಂಟು. ಸಾವಿರ ಗೋಸಂಕುಲಕ್ಕೆ ಒಂದೇ ಒಂದು ಹುಲಿ ಸಾಕು; ಕೋಟಿ ಶಿಷ್ಟರ ಹಿಂಸ್ರಕಾರ್ಯಕ್ಕೆ ಒಬ್ಬಾನೊಬ್ಬ ದುಷ್ಟ ಸಾಕು. "ವೀರಭೋಜ್ಯಾವಸುಂಧರಾ" ಎಂಬ ಶಿಷ್ಟವಚನವುಂಟು. ಜ್ಞಾನಬಲ, ಧರ್ಮಬಲ ಅಥವಾ ಗುಣಬಲ ಇದ್ದವನಲ್ಲ, ಬಾಹುಬಲವಿದ್ದವನು ರಾಜನಾಗುತ್ತಿದ್ದನೆಂಬುದಕ್ಕೆ ಜಾಗತಿಕ ಇತಿಹಾಸದಲ್ಲಿ ರಾಶಿಗಟ್ಟಳೆ ನಿದರ್ಶನಗಳು ದೊರೆಯುತ್ತವೆ. ಭೀಷ್ಮನಂಥ ಮಹಾತ್ಮರು, ವಿದುರ ದ್ರೋಣರಂಥ ಜ್ಞಾನವೃದ್ಧರು, ಸತ್ವಸಾರಾವತಂಪೆತಾಯಿ ನೆಂಟರಿಷ್ಟರು ರಾಜಕೀಯಶಕ್ತಿಗೆ ಮಣಿದು, ಷಂಡತನವನ್ನಾದರಿಸಬೇಕಾಗುತ್ತದೆ; ಪಾಂಡವರಂಥ ಧರ್ಮಿಷ್ಠರು ಪಡಬಾರದ ಕಷ್ಟಗಳನ್ನನುಭವಿಸಿಯೂ, ಕೌರವರನ್ನು ಸೋಲಿಸಿಯೂ "ಅಂತು ಇಂತು ಕುಂತಿಮಕ್ಕಳಿಗೆ ರಾಜ್ಯವಿಲ್ಲ" ಎಂಬ

---

[1] ಗ ೫ ೨೮ ; [2] ಗ ೭–೩೭

ಲೋಕವಾಣಿಗೆ ನಿದರ್ಶನವಾಗಬೇಕಾಗುತ್ತದೆ. ಕೊನೆಗೆ ಲೋಕದ ತಂಟೆಯೇ ಬೇಡ ವೆಂದು ವನಾಂತರದ ಗುಹೆಗಳಲ್ಲಿ ವಾಸಿಸುವ ಋಷಿಗಳಿಗೂ ರಾಜಕೀಯದ ಬಿಸಿ ತಪ್ಪಿದ್ದಲ್ಲ. ದುರ್ಯೋಧನನಂಥ ದೃಪ್ತೋನ್ಮತ್ತ ಛಲವಾದಿ ಸ್ವಾಭಿಮಾನಿಗೆ, ಕರ್ಣ ಶಕುನಿಯರಂಥ ಸ್ವಂತ ಮನೆಯಿಲ್ಲದೆ ಅನ್ಯಾಶ್ರಯದಲ್ಲಿ ಬದುಕುವ ಅಸಂತೃಪ್ತ ನಿರಾಶಾ ಪಿಶಾಚರಿಗೆ, ದುಶ್ಶಾಸನನಂಥ ಲಂಡ ಭಂಡರಿಗೆ ರಾಜಕೀಯ ಚೆನ್ನಾಗಿ ಒಗ್ಗುತ್ತದೆ. ಆದ್ದರಿಂದಲೇ ರಾಜಕೀಯ ನೀಚನ ಕೊನೆಯ ಆಸರೆ ಅಥವಾ ನಿಲ್ದಾಣವೆಂಬ ಮಾತು ಬಳಕೆಗೆ ಬಂದಿರಬೇಕು. ಜನ ನೀಚರಾಗಿ ರಾಜಕೀಯಕ್ಕೆ ಸೇರುತ್ತಾರೆಯೋ, ರಾಜಕೀಯಕ್ಕೆ ಸೇರಿದನಂತರ ನೀಚರಾಗುತ್ತಾರೆಯೋ ಗೊತ್ತಿಲ್ಲ. ಕೌರವರ ಮತ್ತು ಅವರ ಮಿತ್ರರ ಕೀರ್ತನ ಹುಟ್ಟಿನಿಂದಲೇ ಅವರ ಜನ್ಮಕ್ಕಂಟಿಕೊಂಡು ಬಂದ ಚಾಳಿ. ಆದರೆ ಲೋಕ ಕಲ್ಯಾಣವನ್ನೂ ಪ್ರಜಾಕ್ಷೇಮವನ್ನೂ ರಕ್ಷಿಸಬೇಕಾದ ರಾಜಕೀಯ ಕೆಟ್ಟದ್ದಲ್ಲ. ಅಧಿಕಾರ ಜನರನ್ನು ಕೆಡಿಸುತ್ತದೆ. ಆ ಪ್ರವಾಹಕ್ಕೆ ಭೀಷ್ಮ ದ್ರೋಣರಂಥ ಪಡಗಳು ಅತ್ಯವಶ್ಯ. ಹೊಳೆ ದಡವನ್ನು ಮೀರಿದಾಗ ಕೃಷ್ಣಶಕ್ತಿ ನಿಯಂತ್ರಿಸಬೇಕಾಗುತ್ತದೆ. ವಾದ ವಿವಾದ ಗಳು, ಕ್ರಿಯೆ ಪ್ರತಿಕ್ರಿಯೆಗಳು, ನೀತಿ ನಿಯಮಗಳು, ಸಂಧಾನ ಸಂಘರ್ಷಗಳು, ಆಘಾತ ಪ್ರತ್ಯಾಘಾತಗಳು, ಮುಷ್ಟಾಮುಷ್ಟಿ ಹಣಾಹಣಿಗಳು, ಕೋಪ ಸಹನೆಗಳು, ಸತ್ಯಾಗ್ರಹ ಕಾರಾಗೃಹವಾಸಗಳು, ಗುಂಡು ಬಲಗಳು ಸೈನ್ಯ ಪೋಲೀಸುಗಳು, ಬುದ್ಧಿಜೀವಿಗಳು ಬುದ್ಧಿಗುಲಾಮರು, ಅಂತರ್ಯುದ್ಧ ಬಾಹ್ಯಸಂಗ್ರಾಮಗಳು, ವಾಮ ಹಾಗೂ ಋಜು ಮಾರ್ಗಗಳು, ಶಾಂತಿಕ್ರಾಂತಿಗಳು, ಉಪದೇಶ ಪ್ರಚಾರಗಳು, ಅಧ್ಯಾಪಕ ವಿದ್ಯಾರ್ಥಿ ಗಳು, ರೈತ ಕಾರ್ಮಿಕರು, ಕವಿಋಷಿ ಸಂತರು, ಜ್ಞಾನಿವಿಜ್ಞಾನಿಗಳು, ಮಂತ್ರಿಶಾಸಕರು, ಹೊರಗಿನವರು ಒಳಗಿನವರು, ಕಾಡು ಮೇಡು ಸೇರಿದವರು. ಚುನಾವಣೆಗಳು, ತುರ್ತು ಪರಿಸ್ಥಿತಿಗಳು, ಕೊನೆಗೆ ಕ್ಷಾಮಡಾಮರ ಪ್ರವಾಹ ಭೂಕಂಪಗಳು, ನೈಸರ್ಗಿಕ ಹಾಗೂ ಅಲೌಕಿಕ ಶಕ್ತಿಗಳು—ಒಂದೇ ಎರಡೇ, ನೂರಾರು ಸಾವಿರಾರು ಕೋಟಿ ಕೋಟಿ ಶಕ್ತಿಗಳು, ಕ್ರಿಯೆಗಳು ರಾಜಕೀಯವನ್ನು ನಡೆಸಬೇಕಾಗುತ್ತದೆ, ನಿಯಂತ್ರಿಸಬೇಕಾಗು ತ್ತದೆ. ರಾಜಕೀಯ ಸರ್ವರ ಆಸ್ತಿಯಾಗಿ, ಎಲ್ಲರ ಆಸಕ್ತಿಗಳು ಅದರಲ್ಲಿ ಅಡಕಗೊಂಡಿರು ವುದರಿಂದ ಹೇಡಿಯಾಗಲಿ ಧೀರನಾಗಲಿ, ಕಾವಿಧಾರಿಯಾಗಲಿ ಖಾಕಿಧಾರಿಯಾಗಲಿ, ಕರಣಿಕನಾಗಲಿ ಅಧಿಕಾರಿಯಾಗಲಿ, ಪತ್ರಿಕಾಕರ್ತನಾಗಲಿ ವಾಣಿಜ್ಯೋದ್ಯಮಿಯಾಗಲಿ, ಸೂತ್ರಧಾರನಾಗಲಿ ಪಾತ್ರಧಾರನಾಗಲಿ, ವಕೀಲನಾಗಲಿ, ನ್ಯಾಯಾಧಿಪತಿಯಾಗಲಿ ಪ್ರತಿ ಯೊಬ್ಬರೂ ತಂತಮ್ಮ ಸ್ಥಿತಿಗತಿ ಶಕ್ತಿಗನುಗುಣವಾಗಿ ನಾಡಿನ ಹಿತದೃಷ್ಟಿಯಿಂದ ರಾಜ ಕೀಯ ಸಂಸ್ಕೃತಿ ಮತ್ತು ಸಂಸ್ಥಿತಿಗಳಿಗಾಗಿ ಕೈಲಾದಷ್ಟು ಕಾಣಿಕೆಯನ್ನೋ ಸೇವೆಯನ್ನೋ ಸಲ್ಲಿಸಬೇಕಾದ್ದು ಧರ್ಮ. ಹಿಂದೆ ಇಂದು ಮುಂದೆ, ಯಾವಾಗಲೂ, ಎಲ್ಲೆಲ್ಲಿಯೂ ಅದನ್ನು ಬಿಟ್ಟು ಯಾವ ಲೌಕಿಕ ವ್ಯವಹಾರಗಳೂ ನಡೆಯುವಂತಿಲ್ಲ, ಧರ್ಮ ಸಂಸ್ಥಾಪನೆಯೂ ಸಾಧ್ಯವಾಗುವಂತಿಲ್ಲ. ಅದರೊಳಗೆ ರಾಡಿರಂಪ ಎಂದೂ ಇದ್ದದ್ದೇ. ಅವು ಎಲ್ಲಿಲ್ಲ? ಅದರಿಂದ ತಪ್ಪಿಸಿಕೊಂಡು ಹೋಗುವುದಂತು ಸಾಧ್ಯವಿಲ್ಲ. ಅದರೊಳಗಿದ್ದುಕೊಂಡೇ ಪೈಗೆಲ್ಲ

ಅದರ ಕೆಸರುಂಟಿಸಿಕೊಂಡೇ, ಅದರ ನಾತವನ್ನು ಸಹಿಸಿಕೊಂಡೇ ಭೀಷ್ಮ ದ್ರೋಣ ವಿದುರಾದಿ ಮಹಿಮಾಪಂತರು ಅದನ್ನು ಹಸನುಗೊಳಿಸಲು, ಧರ್ಮಕ್ಕೆ ನೆರವಾಗಲು ಪ್ರಯತ್ನಿಸಿದರು. ಅವರಿಲ್ಲದಿದ್ದರೆ ಪಾಂಡವರೂ ಉಳಿಯುತ್ತಿರಲಿಲ್ಲ, ಕೃಷ್ಣನ ಉದ್ದೇಶವೂ ನೆರವೇರುತ್ತಿರಲಿಲ್ಲ.

ಆಗಿನ ಕಾಲದ ಋಷಿಗಳು—ಈಚಿನ ಯೋಗೀಂದ್ರ ನಾರಣಪ್ಪನೂ ಸೇರಿಕೊಂಡು—ರಾಜಕೀಯದಿಂದ ಸಂಪೂರ್ಣವಾಗಿ ವಿಮುಖರಾಗಿರಲಿಲ್ಲ; ಒಂದಲ್ಲ ಒಂದು ರೀತಿಯಲ್ಲಿ ಪ್ರೇಕ್ಷಕರಾಗಿಯೋ ಸಾಕ್ಷಿಗಳಾಗಿಯೋ ಉಪದೇಶಕರಾಗಿಯೋ ಸಲಹೆಗಾರರಾಗಿಯೋ ಕತೆಗಾರರಾಗಿಯೋ ಪ್ರೋತ್ಸಾಹಕರಾಗಿಯೋ ಅದರಲ್ಲಿ ಪಾಲ್ಗೊಂಡಿದ್ದವರು. ಶಕುನಿ ದುರ್ಯೋಧನನಿಗೆ ರಾಜನೀತಿ ಬೋಧಿಸಿದರೆ, ಧೌಮ್ಯ ನಾರದ ಭೀಷ್ಮರು ಪಾಂಡವರಿಗೆ, ವಿದುರ ಸನತ್ಸುಜಾತರು ಧೃತರಾಷ್ಟ್ರನಿಗೆ ಧಾರ್ಮಿಕ ಸಂಗತಿಗಳನ್ನೋ ರಾಜನೀತಿಯನ್ನೋ ಬೋಧಿಸುತ್ತಾರೆ. ಈ ಬೋಧನೆಯಿಂದಲೇ ಅವರಿಗಿದ್ದ ಆಸಕ್ತಿಗಳು ಸ್ಪಷ್ಟವಾಗುತ್ತವೆ. ರಾಜಮಂತ್ರದಲ್ಲಿ ಕೃಷ್ಣ ಪ್ರವೀಣ. ಅವನ ಸಲಹೆಯ ಮೇರೆಗೆ ಪಾಂಡವರು ಭೀಷ್ಮ ದ್ರೋಣ ಕರ್ಣ ಶಲ್ಯರನ್ನೊಲಿಸಿಕೊಂಡು, ತಮ್ಮ ಇಷ್ಟಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ರಾಜ್ಯಸಂಪಾದನೆಗೆ ಮೊದಲು ಸಾಮವನ್ನೇ ಬಳಸಬೇಕು; ಶಿಷ್ಟರನ್ನು ಕಳಿಸಿ ಸಂಧಾನ ನಡಸಬೇಕೆಂಬುದು ಕೃಷ್ಣನ ಸಲಹೆ. "ನಿಮ್ಮನ್ನು ತೆಗೆತೆಗೆದು ಕಲಿಮಾಡಿ ಬಿಡುವರು ಖುಲ್ಲರಾವವರು"[1] ಅಂಥವರನ್ನು ಸಂಧಾನಕ್ಕೆ ಕಳಿಸಿದ್ದಾದರೆ ಒಳ್ಳೆಯದಾಗದು ಎಂದು ನುಡಿಯುತ್ತಾನೆ.

> ಕಳುಹುವುದು ಶಿಷ್ಟರನು ಧರಣೀತಳವ ಬೇಡಿಸುವಲ್ಲಿ ಸಾಮವ
> ಬಳಸುವುದು ಭೀಷ್ಮಾದಿಗಳ ಕಟ್ಟುವುದು ವಿನಯದಲಿ
> ತಿಳಿವುದಾತನ ನೆಲೆಯನಲ್ಲಿಂ। ಬಳಿಕ ನಯವಿಲ್ಲೆಂದಡಾಹವ
> ದೊಳಗೆ ಕೈದೋರುವುದು ತನ್ನ ಮತ[2]

ಎಂದು ಹೇಳುವಾಗ ಅವನು ಎಲ್ಲ ಕಾಲಕ್ಕೂ ಅನ್ವಯಿಸುವ ನೀತಿಯನ್ನು ವ್ಯಕ್ತಪಡಿಸಿದ್ದಾನೆ. ಭೀಷ್ಮನನ್ನು ಶಸ್ತ್ರಾಸ್ತ್ರ ಸಾಮರ್ಥ್ಯದಿಂದ ಗೆಲ್ಲಲು ಸಾಧ್ಯವಾಗದಿದ್ದಾಗ "ಅಗಜಿತನ ಸಾವುದಲಿ ಮುರಿಯಲುಬೇಕು"[3] "ದಂಡನಯ ತರುಬಿದರೆ ಗುಣದಲಿ ಖಂಡಿಸುವುದಿದಿರಾದ ತರುಗಳು ದಿಂಡುಗೆಡೆವುವು ತೊರೆಗೆ ಮಣಿದವರೇಗೆಕು ಬದುಕುವುದು"[4] ಎಂದು ಹೇಳಿ ಅವನು ರಾತ್ರಿಯ ವೇಳೆ ಧರ್ಮರಾಯನನ್ನು ಭೀಷ್ಮನ ಬಳಿ ಕರೆದೊಯ್ಯುತ್ತಾನೆ. ಭೀಷ್ಮ ಅವರನ್ನು ವಿನಯದಿಂದ ಸತ್ಕರಿಸುತ್ತಾನೆ; ಹೇಳಿದ್ದನ್ನು ಕೇಳಿಸಿಕೊಳ್ಳುತ್ತಾನೆ; ಅವರ ಬಗ್ಗೆ ಸಹಾನುಭೂತಿಯನ್ನು ಸಹ ವ್ಯಕ್ತಪಡಿಸುತ್ತಾನೆ. ಜತೆಗೆ ಅವರಿಗೊಂದು ಬುದ್ಧಿವಾದವನ್ನು ತಿಳಿಸುತ್ತಾನೆ:

---

[1] ಭೀ: ೬-೧೮; [2] ಉ ೧-೫; [3] ಭೀ ೭-೧೨; [4] ಭೀ ೭-೧೪

ಅರಿಯ ಬೀಡಿದು ರಾಯನನುಜರು । ಮರುಳರುಚಿತಾನುಚಿತಗೇಡಿಗ
ಳಿರುಳು ದೊರೆಗಳು ನೀವನಾಲೋಚಿತವಚೈತಹರೆ
ಹಿರಿಯ ಬಲುಹುಂಟಾದಡೆಯು ಧಿಕ್ಕರಿಸಬಾರದು ರಾಜಮಂತ್ರವ ।

ಇದು ಧರ್ಮರಾಯನಿಗೆ ಕೊಟ್ಟ ಎಚ್ಚರಿಕೆ. ದೈವಬಲದಲ್ಲಿ ಭೀಷ್ಮನಿಗೆ ಅಪಾರವಾದ ನಂಬಿಕೆ. ಆದರೂ ಇರುಳಿನಲ್ಲಿ ಶತ್ರುಗಳ ಬೀಡಿಗೆ ಬರಬಾರದೆನ್ನುವ ವಿಷಯವನ್ನು ನೆಪವಾಗಿಟ್ಟುಕೊಂಡು, ಪುರುಷಕಾರವನ್ನು ಮರೆಯಬಾರದು; ಅದಕ್ಕೆ ಸಹಾಯವಾಗುವ ರಾಜಮಂತ್ರವನ್ನು ಧಿಕ್ಕರಿಸಬಾರದು. ಯಾವಾಗಲೂ ಧರ್ಮ ಧರ್ಮ ಎಂದು ಕೈಕಟ್ಟಿಕೊಂಡಿರಲಾಗದು; ಲೌಕಿಕ ವ್ಯವಹಾರದಲ್ಲಿ ತೊಡಗಿರುವಾಗ ರಾಜಮಂತ್ರವನ್ನು ಬಳಸಲೇಬೇಕು ಎಂದು ಮಾರ್ಮಿಕವಾಗಿ ನುಡಿಯುತ್ತಾನೆ. ಯಾರೆಷ್ಟು ತಿಳಿವಳಿಕೆ ಹೇಳಿದರೂ ಧರ್ಮಜಡನಾದ ಧರ್ಮರಾಯನ ಜಾಯಮಾನಕ್ಕೆ ಯುಕ್ತಿ ಎನ್ನುವುದು ಹೊರಗು. ಹಿರಿಯರ ಆಜ್ಞೆಯೆಂದು ಜೂಜಿಗೆ ಹೋಗುತ್ತಾನೆ; ಸೋದರರ ಕೊಲೆ ಬೇಡವೆಂದು ಸಂಧಿ ಬೇಕೆನ್ನುತ್ತಾನೆ; ತಮ್ಮಲ್ಲಿ ಯಾರನ್ನಾದರೂ ದ್ವಂದ್ವ ಯುದ್ಧಕ್ಕೆ ಆರಿಸಿಕೊಳ್ಳಬಹುದೆಂದು ದುರ್ಯೋಧನನಿಗೆ ಸೂಚಿಸುತ್ತಾನೆ; ಸನಿಹದಲ್ಲಿದ್ದ ಕೃಷ್ಣ "ನಮ್ಮೊಳೊಬ್ಬನ ವರಿಸು ವಿಗ್ರಹಕೆಂದು ನಮ್ಮನು ಕೊಂದೆ"[2] ಎಂದು ಬೇರೆ ಕರೆದು ಗರ್ಜಿಸಿದಾಗ ಮಗುವಿನಂತೆ "ನಿಮ್ಮ ಮುಂದಗ್ಗಳಿಯತನವೇನುಗಿಲ್ಲ, ನಿಮ್ಮಡಿಗಳ ಸುಧಾಕರುಣಾವಧಾನವೆ ವಜ್ರಕವಚವಲಾ"[3] ಎಂದು ಸುಲಭವಾಗಿ ಹೇಳಿಬಿಡುತ್ತಾನೆ. ದುರ್ಯೋಧನನನ್ನು ಗಂಧರ್ವ ಹಿಂಗಟ್ಟು ಮುರಿಕಟ್ಟಿ ಹಿಡಿದುಕೊಂಡು ಹೋದಾಗ, ಮನೆಯ ಹಾವನ್ನು ಹದ್ದು ಹಿಡಿದರೆ ವ್ಯಥೆಯೇಕೆಂದು ತೆಪ್ಪಗಿರದೆ, ಅವನನ್ನು ಬಿಡಿಸುವ ಸಲುವಾಗಿ ಅರ್ಜುನನನ್ನು ಕಳಿಸುತ್ತಾನೆ. "ಪರರ ಕಲಹಕೆ ನಾವು ನೂರೈವರುಗಳಂತಃಕಲಹಕದು ನೂರ್ವರು ವಿಚಾರಿಸಲೈವರಾವು"[4] ಎಂದವನು ಕಾರಣವೊಡ್ಡಿ ನುಣ್ಣಗೆ ಜಾರಿಕೊಳ್ಳುತ್ತಾನೆ. "ಕೈದು ಮುರಿದೊಡೆ ಹಗೆಗೆ ತನ್ನಯ ಕೈದು"[5] ಕೊಡುವಂಥ ಮನಸ್ಸಿನವನು. ಅವನ ಅಂಥ ಸ್ವಭಾವವನ್ನು ಕಂಡೇ ಪಿತಾಮಹ ಮುನ್ನೆಚ್ಚರಿಕೆ ನೀಡಬೇಕಾಗುತ್ತದೆ.

ದುರ್ಯೋಧನ ಸ್ವಾಭಿಮಾನಿಯಾದರೂ ಛಲಗಾರನಾದರೂ ಒಮ್ಮೊಮ್ಮೆ ರಾಜಮಂತ್ರಜ್ಞತೆ ಹಾಗೂ ನಯಜ್ಞತೆಗಳನ್ನು ಮೆರೆಯುತ್ತಾನೆ. ಶಲ್ಯನನ್ನು ಕರ್ಣನಿಗೆ ಸಾರಥಿಮಾಡಬೇಕಾದರೆ ತನ್ನ ನಯವಿನಯಗಳನ್ನೆಲ್ಲ ಖರ್ಚುಮಾಡುತ್ತಾನೆ. ಖೂಳರ ಜತೆ ಸೇರಿ ಖೂಳನಾದ ಕೌರವನನ್ನು ಬಯ್ದು ಶಲ್ಯ ಧಿಮ್ಮನೆದ್ದು ನಿಂತಾಗ ದುರ್ಯೋಧನ ತಾನೂ ಎದ್ದು ನಿಲ್ಲುತ್ತಾನೆ; ಸೆರಗ ಹಿಡಿಯುತ್ತಾನೆ: ಗುಣದಲಿ ನುಡಿದು ಕೂರಿಸಿ, ವಿನಯದಲಿ ಸಂತೈಸುತ್ತಾನೆ; "ನುಡಿಗೆ ಕೋಪಿಸಲೇಕೆ? ಮನವೊಡಬಡುವುದೇ ಕೈಕೊಂಬುದು; ಅಲ್ಲದೊಡೆಯುಮುಂಟೇ ನಿನಗೆ?"[6] ಎಂದು ಶಲ್ಯನ ಮನಕರಗುವಂತೆ ನುಡಿಯುತ್ತಾನೆ; "ಸತ್ಪುರುಷರೇ ಪರಕಾರ್ಯನಿಷ್ಠರು"[7] ನಿಮ್ಮವರ ಮೇಲನುರಾಗ

1 ಭೀ: ೭ ೧೮; 2 ಗ ೫ ೪೯; 3 ಗ ೫ ೫೨; 4 ಅ ೨೦–೧೪; 5 ಅ ೨೦ ೩೨;
6 ಕ ೫–೨೪; 7 ಕ ೫–೨೫

ವುಳ್ಳಡೆ ಮಾಡುವಾಣು"[1] ಎಂದು ತನ್ನ ಶಬ್ದಭಂಡಾರವನ್ನು ಸೂರೆಗೊಳ್ಳುತ್ತಾನೆ. ನೃಪನಾದರೂ ಕಾರ್ಯಾರ್ಥವಾಗಿ ಎಂಥವರ ಬಳಿಯಾದರೂ ದನ್ನುಯ್ಯುಗುಡ್ಡೆಯಿಕ್ಕಬೇಕಾಗುತ್ತದೆ. ದರ್ಪ ಪ್ರತಿಷ್ಠೆಗಳಿಂದಲೇ ಕಾರ್ಯಸಾಧನೆ ಸಾಧ್ಯವಿಲ್ಲ, ವ್ಯವಹಾರಕೌಶಲದಿಂದ ಎಂಥವರನ್ನಾದರೂ ಗೆದ್ದುಕೊಳ್ಳಬಹುದೆನ್ನುವುದಕ್ಕೆ ಈ ಪ್ರಕರಣವೇ ನಿದರ್ಶನ.

ಋಷಿಗಳ ದೃಷ್ಟಿಯಲ್ಲಿ ರಾಜಕೀಯ

ಮಾರ್ಕಂಡೇಯ ಧರ್ಮವ್ಯಾಧರು ವರ್ಣಾಶ್ರಮಧರ್ಮ, ಕರ್ತವ್ಯಶ್ರದ್ಧೆ ಮೊದಲಾದುವನ್ನು ಕುರಿತು ಧರ್ಮರಾಯನಿಗೆ ಉಪದೇಶ ಮಾಡುತ್ತಾರೆ. ನಾರದನಾದರೋ ಲೌಕಿಕ ಧಾರ್ಮಿಕ ನೀತಿಗಳನ್ನು ಸಮನ್ವಯಗೊಳಿಸಿ ವಿವರಿಸುತ್ತಾನೆ. ಲೋಕಕನರ್ಥ ಸಾಧನ ಕಾಮ; ಮಾನ್ಯರನು ಧಿಕ್ಕರಿಸಿ ಅವಮಾನ್ಯರನು ಮನ್ನಿಸಕೂಡದು; ಸಪ್ತವ್ಯಸನದ ಗಸಣಿಯಿಂದ ಮುಕ್ತನಾಗಬೇಕು; ಮೇಲುಮೇಲೆ ಪತಿಕಾರ್ಯನಿಷ್ಠರಂತಿದ್ದು ಒಳಗೊಳಗೆ ರಾಜದ್ರೋಹವನ್ನು ನೆನೆಯುವ ಜನ ನೃಪರನ್ನು ಬಳಸಿಕೊಂಡಿರುತ್ತಾರೆ; ನಾಲ್ಕಾರು ಜನರಲ್ಲಿ ಆಲೋಚಿಸಿದ ಕಾರ್ಯವಿಧಾನದ ಬಗ್ಗೆ ದೊರೆಯೊಬ್ಬನೇ ಕೊನೆಯದಾಗಿ ನಿರ್ಣಯಿಸಿಕೊಳ್ಳಬೇಕು; ನೀತಿಯಿಂದ ಜನರಾಗ, ಜನರಾಗದಿಂದ ಧನ, ಧನದಿಂದ ಪರಿಕರ, ಪರಿಕರದಿಂದ ಜಯ, ಜಯದಿಂದ ಧರ್ಮ, ಧರ್ಮದಿಂದ ಸುರತುಷ್ಟಿ, ತುಷ್ಟಿಯಿಂದ ಇಹಪರವಿಜಯ ಸಮನಿಸುತ್ತವೆ; ಮಂತ್ರವಿಲ್ಲದ ಬರಿಯ ತಳತಂತ್ರದಲಿ ಫಲವಿಲ್ಲ; ಸತ್ಯವೇ ಸತ್ವಾಧಿಕಕೆ ಕಾರಣ; ಆಯವಿಲ್ಲದ ಬೀಯವಾಗಲಿ ನ್ಯಾಯವಿಲ್ಲದ ನಡವಳಿಯಾಗಲಿ ಸಲ್ಲವು; ನೆಚ್ಚದಿರು ಸಿರಿಯನು, ಅಪಕೀರ್ತಿನಾರಿಯ ಮೆಚ್ಚದಿರು; ಪರಿಜನರಲ್ಲಿ ದಯೆ, ಪರಸ್ತ್ರೀಯರಲ್ಲಿ ಭೀತಿ, ಹಗೆಗಳಲ್ಲಿ ನಿಷ್ಕರುಣೆ, ಬಡವರಲ್ಲಿ ದಾನವನ್ನು ವಿರಚಿಸುವುದುತ್ತಮ;

> ನೇಹದವರಲಿ ವೈದ್ಯರಲಿ ಮೈಗಾಹಿನವರಲಿ ಬಾಣಸಿಗರಲಿ
> ದೇಹಮಂತ್ರಿಗಳಲಿ ವಿಧಾನಾಂತರದಲಿ ಹಿರಿಯರಲಿ
> ದೇಹರಕ್ಷಕರಲಿ ಸಮೋಹಕ । ವಾಹಿಯಲಿ ಹಡಪಾಳಿಯಲಿ ಪ್ರ
> ತ್ಯೂಹವನು ವಿರಚಿಸೆಯಲೇ ಭೂಪಾಲ ಕೇಳೆಂದ
>
> ತರುಣಿಯಲಿ ಹಗೆಗಳಲಿ ಬಹಳ್ಕೆ । ಕ್ಕರಿಯುವಲಿ ಶಸ್ತ್ರಾಂಗಿಯಲಿ ಸಂ
> ಸ್ತರಣದಲಿ ಮದ್ಯಪನಲಂಬಾರ್ಥಿಯಲಿ ಶೃಂಗಿಯಲಿ
> ಉರಗನಲಿ ನಗಿಯಲಿ ಪತಿಸುರಾ । ಕುರಿಯುವಲಿ ದುರ್ಮಂತ್ರಿಯಲಿ ದು
> ಷ್ಚರಿತನಲಿ ವಿಶ್ವಾಸಿಯಲೇ ಭೂಪ ಕೇಳೆಂದ

ಮಂತ್ರಿ, ಛತ್ರಧಾರಕ, ಕಾಲಾಳು, ರಾವುತ, ಜೋದ, ರಥಿಕ, ಸೇವಕರ ಲಕ್ಷಣಗಳನ್ನು ವಿವರಿಸುತ್ತಾನೆ. "ಮಗನೆ ಮುನಿವನು ತಂಪೆ, ತಂದೆಗೆ ಮಗ ಮುನಿವನ್, ಒಡ

[1] ಕ ೫ ೨೬.

ಹುಟ್ಟಿದರು ಬಲು ಪಗೆ ಕಣಾ ತನ್ನೊಳಗೆ ಭೂಪರ ಕುಲದ ವಿನ್ಯವಿದು"[1] ಇದು ಸಾರ್ವಕಾಲಿಕ ಐತಿಹಾಸಿಕ ಸತ್ಯವಾಗಿದೆ.

ಅರಸು ರಾಕ್ಷಸ ಮಂತ್ರಿಯೆಂಬುವ । ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿವುರಿವುತಿದೆ ದೇಶ ನಾವಿ । ನ್ನಿರಲು ಬಾರದೆನುತ್ತ ಜನ ಬೇ
ಸರಿಸ ಬೇಗೆಯಲಿರದಲೇ ಭೂಪಾಲ ಕೇಳೆಂದ[2]

ಅಧಿಕಾರಸ್ಥಾನದಲ್ಲಿರುವವರ ರೀತಿಯೇ ಹೀಗೆ. ಇದಕ್ಕೆ ಹೊರತಾದವರು ಇಲ್ಲವೆಂದೇ ಹೇಳಬಹುದು. ಇದು ವಾಸ್ತವ ಸತ್ಯ. ಅರಸಿಗೆ ಬದಲಾಗಿ ಮತ್ತೊಂದು ಹೆಸರಿಟ್ಟುಕೊಂಡರೂ ಪರಿಸ್ಥಿತಿ ಎಂದಿನಂತೆಯೇ ಉಳಿದೀತು. ಎಲ್ಲಿಯತನಕ ಬಡವರ ಗೋಳಿಗೆ ಪರಿಹಾರವಿಲ್ಲ, ಅಲ್ಲಿಯತನಕ ನಾಡಿನಲ್ಲಿ ಶಾಂತಿಯಿರುವುದಿಲ್ಲ.

ರಾಜ ಅಥವಾ ಸರ್ಕಾರವಿರುವುದು ಪ್ರಜಾಕ್ಷೇಮ ಪಾಲನೆಗಾಗಿ. ಅಂದಮೇಲೆ ಆ ಸಂಸ್ಥೆಗಳ ಪೋಷಣೆ ಜಾನಪದರಿಂದ ನಡೆಯಬೇಕು. ಆದ್ದರಿಂದ ಸರ್ಕಾರ ಜನಗಳ ಮೇಲೆ ನಾನಾರೀತಿಯ ಕರ ಹಾಕುವುದು ಅನಿವಾರ್ಯ. ಆದರೆ ಆ ಕರಭಾರ ಹೊರೆಯಾಗಬಾರದು. "ಫಲವಹುದ ಕೆಡಲೀಯದವಳಿ ಪರಿಮಳವ ಕೊಂಬಂದದಲೆ ನೀನಾಳ್ದಿಳೆಯ ಕರದರ್ಥವನು ತೆಗೆವೈ ಪ್ರಜೆಯ ನೋಯಿಸದೆ."[3] ಪರರ ಅಭ್ಯುದಯಕ್ಕಾಗಿ ರಕ್ತದಾನ ಅತ್ಯವಶ್ಯ. ಆದರೆ ದಾನಿಯೂ ಬದುಕಬೇಕು. ದಾನಿಗೆ ಮಾರಕವಾಗುವಷ್ಟು ರಕ್ತ ಹೀರಿಬಿಡಬಾರದು. ಉತ್ತಮರ ಸರ್ವಸ್ವವನ್ನಪಹರಿಸುವ[4] ಕ್ರೌರ್ಯ ಹೇಯವಾಗುತ್ತದೆ; ನೀತಿಬಾಹಿರವಾಗುತ್ತದೆ; ಅದರಿಂದ ಸಾಮಾಜಿಕಾರ್ಥಿಕಾಭಿವೃದ್ಧಿ ಕುಂಟುತ್ತದೆ.

ಪಾಂಡವರಿಗೆ ದೊರಕಿದ ರಾಜಮಂತ್ರೋಪದೇಶ ಒಂದು ತೆರನದ್ದಾದರೆ, ಶಕುನಿಯಿಂದ ದುರ್ಯೋಧನ ಪಡೆದದ್ದು ಮತ್ತೊಂದು ಬಗೆಯದು. ಕೌಟಿಲ್ಯ ವಂಚನೆ ಅನ್ಯಾಯಗಳೇ ಮೂರ್ತಿವೆತ್ತಂತಿದ್ದ ಆತನ ಬೋಧನೆ ದುರ್ಯೋಧನನಿಗೆ ಪ್ರಿಯವಾಗಿದ್ದು, ಕುಲನಾಶಕ್ಕೆ ಕಾರಣವಾಗುತ್ತದೆ. ಕುಲದ ಏಳ್ಗೆಯ ದೃಷ್ಟಿಯಿದ್ದರೆ ದಾಯಾದಿ ಮಾತ್ಸರ್ಯವನ್ನು ಪುಟಗೊಳಿಸುತ್ತಿರಲಿಲ್ಲ. ಅವನು ಹೇಳುವ ಮಾತಿನಲ್ಲಿ ಸತ್ಯವಿದೆ, ನಿಜ. ನ್ಯಾಯವಾಗಿ ಕೌರವ ಪಾಂಡವರನ್ನು ಗೆಲ್ಲಲಾರನೆಂಬುದು ಅವನಿಗೆ ಗೊತ್ತಿತ್ತು.

ಶತ್ರುಗಳ ಸಂಹರಿಸಿ, ರಾಜ್ಯವ । ನೊತ್ತಿಯಾಳುವೆನೆಂಬ ಸಾಹಸ
ಸತ್ವಗುಣ ನಿನಗಿಲ್ಲ ಪಾಂಡವರತುಲ ಭುಜಬಲರು
ಕೃತ್ರಿಮದ ಮುಖದಿಂದ ರಿಪುಗಳ । ಕಿತ್ತು ಹಾಯಿಕಿ ನೆಲಸನೇಕ
ಚ್ಛತ್ರದಲಿ ಸಲಹುದು ಮತ

---

[1] ಸೋದರರೊಳ್ ಸೋದರರಂ। ಕಾದಿಸುವುದು ಸುತನ ತಂದೆಯುದೆಯೊಳ್ ಬಿಡಮು। ತ್ತಾದಿಸುವುದು ಕೋಪಮುಸಳ। ವಿಃ ದೊರೆತ್ತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್ ॥–ಪಂಪಭಾರತ ೧೪–೨೨. [2] ಸಭಾಪರ್ವ, ಸಂಧಿ ೧, ಪದ್ಯಗಳು ೨೮ರಿಂದ ೮೧ರ ವರೆಗೆ. [3] ಸ ೧-೫೩. [4] ಉ ೩–೧೦.

ಎಂದು ಘೋಷಿಸುತ್ತಾನೆ. "ಸೋದರರು ನೀವು ನಿಮ್ಮೊಳು ಭೇದಮಂತ್ರವ ಮಾಡುವುದು ಮರ್ಯಾದೆಯೇ, ನಿಮ್ಮಡಿಯ ಬಳರಮನೆಯ ಸೇವಕರು" ಎಂದು ಕಪಟವಿನಯವನ್ನು ನಟಿಸುತ್ತಾನೆ. "ವಿಪಕ್ಷ ತಂದೆಯ ದೆಸೆ ಸಪಕ್ಷವು ತಾಯ ದೆಸೆಯವರು" ಎಂದು ಅವನ ಮೇಲೆ ಪ್ರೇಮವರ್ಷವನ್ನು ಸುರಿದು, ಬುಟ್ಟಿಗೆ ಹಾಕಿಕೊಳ್ಳುತ್ತಾನೆ. ಅನಂತರ ಮಂತ್ರ ಗಾರನಂತೆ ಅವನ ಮನಸ್ಸನ್ನು ವಶಮಾಡಿಕೊಂಡು, ರುಚಿಯುಣಿಸನ್ನು ಬಡಿಸುತ್ತಾನೆ; ಭಾವಮೈದುನ ಅಣ್ಣ ತಮ್ಮ ಮಾವ ಅಳಿಯ ಪುತ್ರ ಮಿತ್ರ ಸೇವಕ ಸುಜನರೆಂದು ಸತ್ಯಯುತರೆಂದು ಭಾವಿಸಬೇಡ; ಶತ್ರುಶೇಷವಿದಲ್ಪವೆಂದುಳುಹುತ್ತ ಬರಲಾಗದು; ಪಾಂಡವರು ನಿನ್ನೇಳಿಗೆಯ ಸೈರಿಸರು; ಹಗೆಯ ಹೆಂಗಳನರಮನೆಯೊಳಗೆ ಸೇರಿಸಲಾಗದು.

ಶಯನದಲಿ ವಹ್ನಿಯಲಿ ವೈ। ಹಾಳಿಯಲಿ ಬೇಟೆಯಲೂಟದಲಿ ಕೇ
ಳಿಯಲಿ ಸುರತಕ್ರೀಡೆಯಲಿ ಮಜ್ಜನದ ಸಮಯದಲಿ
ಜಯದ ಜೋಕೆಯ ಬೋಲಗದ ಮರವೆಯಲಿ ಪಾರಸ್ತ್ರೀಯರುಗಳಲಿ
ಲಯವನೈದಿಸಬಹುದು

ಇಂಥ ಕಡೆಗಳಲ್ಲೆಲ್ಲ ರಾಜರು ಬೆಚ್ಚರದಿಂದಿರಬೇಕು; ನಂಬುವರ ನೆರೆ ನಂಬು, ನಂಬದ ಡಂಬಕರ ನಂಬದಿರು; ಅರಿರಾಯ ಹನನವಿಳಂಬನವ ಮಾಡದಿರು, ರೋಷಾಡಂಬರವ ರಚಿಸದಿರು ಬಹಿರಂಗದಲಿ;

ಎಲ್ಲರಿಂ ಬಹುಧನವ ಕೊಳು ನಿನ್ನಲಿ ಕಾಣಿಯ ಬರಿದೆ ಸೋಲದಿ
ರಿಲ್ಲವೆನ್ನದೆ ಸುಡಿದು ಕಾಲಕ್ಷೇಪವನು ಮಾಡು
ಒಳ್ಳಿದನು ನಮಗೆಂಬ ನಯನುಡಿ ಎಲ್ಲರಲಿ ಬೆಚ್ಚಂತೆ ರಿಪುಗಳ
ಗೆಲ್ಲಗೆಡಹುವ ಮಂತ್ರವಿದು

ನಾರಣಪ್ಪ ಈ ರಾಜಕೀಯ ವಿಷಯಗಳನ್ನು ನಾನಾ ಮೂಲಗಳಿಂದ ಸಂಗ್ರಹಿಸಿರುವವ ನಾದರೂ ಅವು ವಾಸ್ತವ ಸತ್ಯಗಳೆಂಬುದನ್ನು ಬಲ್ಲ. ಅವು ಎಲ್ಲ ಕಾಲಕ್ಕೂ ಎಲ್ಲ ದೇಶ ಗಳಿಗೂ ಸಮಾನವಾಗಿ ಅನ್ವಯವಾಗುವಂಥವು. ಅವುಗಳಲ್ಲಿ ಹೊಸತು ಹಳತು ಎಂಬ ಭೇದವಿಲ್ಲ. ಅಲ್ಲಿ ಉಲ್ಲೇಖಗೊಂಡಿರುವ ನೀತಿ ಎಷ್ಟು ಪ್ರಾಚೀನವೋ ಅಷ್ಟೇ ಅರ್ವಾ ಚೀನವೂ ಅಹುದು. ಆ ಭಾಗಗಳನ್ನೋದುವಾಗ ಅವು ಎಂದೋ ನಡೆದ ಸಂಗತಿಗಳೆಂದು ಅನಿಸದೆ, ನಮ್ಮ ಸಮಕಾಲೀನ ಚಿತ್ರಗಳು ಕಣ್ಮುಂದೆ ನಿಲ್ಲುತ್ತವೆ. ಇಲ್ಲಿ ಧರ್ಮಾಧರ್ಮ ಗಳ ಪ್ರಶ್ನೆ ಮುಖ್ಯವಲ್ಲ; ಅಧಿಕಾರ ಸಂರಕ್ಷಣೆ ಮುಖ್ಯ. ರಾಜಕೀಯ ನಾಯಕತ್ವದ ಕರ್ತವ್ಯಗಳಲ್ಲಿ ಇದಕ್ಕೆ ಮೊದಲ ಮನ್ನಣೆ. ರಾಜಕೀಯಕ್ಷೇತ್ರ ಆಶ್ರಮವಲ್ಲ, ತಪೋವನ ವಲ್ಲ, ಅನುಭವಮಂಟಪವಲ್ಲ. ಅದನ್ನು ಆಶ್ರಮವನ್ನಾಗಿ ಪರಿವರ್ತಿಸಲು ಪ್ರಯತ್ನಿಸುವ ಬಸವೇಶ್ವರ ಗಾಂಧೀಜಿಯಂಥ ಮಹಾತ್ಮರು ಹುತಾತ್ಮರಾಗುತ್ತಾರೆ. ಚಂದ್ರಗ್ರಹದ ಧರ್ಮವೇ ಬೇರೆ, ಅಂಗಾರಗ್ರಹದ ಧರ್ಮವೇ ಬೇರೆ, ಭೂಮಿಯ ಧರ್ಮವೇ ಬೇರೆ. ಮಂಗ ಹಕ್ಕಿಯಂತೆ ಹಾರಲಾರದು, ಕಪ್ಪೆಯಂತೆ ನೀರೊಳಗೆ ಬದುಕಲಾರದು. ರಾಜಕೀಯರಂಗದ ಪಟ್ಟು ಲಾಗಗಳೇ ಬೇರೆ, ತಪೋವನದ ರೀತಿನೀತಿಗಳೇ ಬೇರೆ.

ರಾಜಕೀಯ ಸಂಸ್ಕೃತಿಗೂ ಆಶ್ರಮ ಸಂಸ್ಕೃತಿಗೂ ಅಜಗಜಾಂತರ. ಇಲ್ಲಿಯವ ಅಲ್ಲಿಗೆ, ಅಲ್ಲಿಯವ ಇಲ್ಲಿಗೆ ನಾಲಾಯಕ್ಕಾಗುತ್ತಾರೆ. ನೈಷ್ಠಿಕ ಬ್ರಹ್ಮಚಾರಿ ಶ್ರೀರಾಮಕೃಷ್ಣಾಶ್ರಮದಲ್ಲಿರಬಹುದು; ಮದುವೆಯ ಬಯಕೆ ಮೊಳೆತುದೆ ತಡ ಆಶ್ರಮವನ್ನು ತೊರೆದು ಸಂಸಾರ ಪ್ರಪಂಚವನ್ನು ಸೇರಬೇಕು. ಸಂಸಾರದಲ್ಲಿ ಜುಗುಪ್ಸೆಗೊಂಡವನು ಪುರಂದರನಾಗಬೇಕಾಗುತ್ತದೆ. ರಾಜಕೀಯ ಸಂಸ್ಕೃತಿ ಪಾಂಡವರಿಗೆ ಹೇಳಿಸಿದ್ದಲ್ಲ. ಕೃಷ್ಣನಿಲ್ಲದಿದ್ದರೆ ಅವರೆಂದೋ ನಿರ್ನಾಮವಾಗುತ್ತಿದ್ದರು. ದೇಶ ಶತ್ರುಮುಕ್ತವಾದರೂ ಅವರು ಬಹುಕಾಲ ರಾಜ್ಯವಾಳಲಿಲ್ಲ. ಇತಿಹಾಸ ಅಶೋಕನಂಥ ಮತ್ತೊಬ್ಬ ದೊರೆಯನ್ನು ಕಂಡಿಲ್ಲ. ಅವನು ಅದೃಷ್ಟಶಾಲಿ. ಈಗ ಶಕುನಿಯ ಧರ್ಮೋಪದೇಶ ಮತ್ತಷ್ಟು ಕೇಳಬಹುದು.

ಧನವನಿತ್ತಾದಡೆಯು ಸಹಭೋ। ಜನವನುಂಡಾದೊಡೆಯು ಮೇಣ್ ನಿಜ
ತನುಜೆಯರನಿತ್ತಾದೊಡೆಯು ಬಳಿಸಂದು ಬೇಸರದೆ
ತನುವ ಬೆರಸಿದ್ದಾದೊಡೆಯು ಸೂ। ತನ ಗ(?) ಣವ ನುಡಿದಾದೊಡೆಯು ರಿಪು
ಜನಪತಿಯು ವಶವಾಳ್ವುದುಚಿತವಿದು.

ದುರ್ಯೋಧನನ ಆಸ್ಥಾನ ವೈಭವವನ್ನು ವರ್ಣಿಸುವಾಗ ಆತನ ಆಸ್ಥಾನದಲ್ಲಿದ್ದ ಮಂತ್ರಿಗಳ ವಿವರಣೆ ಬರುತ್ತದೆ:

ಕೋಶ ಪಾನಾದಿಗಳ ಮಾಡಿ ಮ। ಹೀಸುರರ ಮೇಲಾಯುಧಂಗಳ
ಸೂಸಿ ದೈವವ ಮುಟ್ಟಿ ದಿವ್ಯಾಜ್ಞೆಗಳಲೊಡಬಡಿಸಿ
ಹೇಸವರಿ ಭೂಪಾಲರನು ನಿ। ಶ್ಶೇಷವೆನಿಸುವುದಲ್ಲದಿರ್ದೊಡೆ
ವೈಸರಿಸುವುದು ರಾಜಕಾರ್ಯವಿದು[1]

ಇಷ್ಟಕ್ಕೆಲ್ಲ ತಯಾರಾಗಿರುವವನು ಮಾತ್ರ ರಾಜಕೀಯವನ್ನು ಪ್ರವೇಶಿಸಬಹುದು.

ಕಲಹವಿಲ್ಲದೆ ನೂಲಿನೆಳೆಯಲಿ। ತಲೆಯನರಿವ ವಿರೋಧಿರಾಯರ
ನಳುಕಿಸುವ ಸಾಮದಲಿ ಸಿಲಿಸುವ ನಿಖಿಳ ಭೂಭುಜರ
ಒಲಿವರೊಳ ಲಂಚದಲಿ ಭಿದ್ರಿಸಿ। ಕೊಲುವ ಮುನಿವಡೆ ಮಂತ್ರಶಕ್ತಿಯೊ
ಳಳುಕಿಸುವ ಮಂತ್ರಿಗಳು ಮೆರೆವರು ವಾಮಭಾಗದಲಿ[2]

ಇಂಥ ಮಂತ್ರಿಗಳಿಂದ ಮಾತ್ರ ರಾಜಕೀಯ ಸಲೀಸಾಗಿ ಜರುಗುತ್ತದೆ; ರಾಜನೂ ಉಳಿಯುತ್ತಾನೆ.

ಜೇನು ಕೀಳುವವನು ತಾನೂ ಕಡಿಸಿಕೊಳ್ಳಬೇಕು, ಅವುಗಳನ್ನೂ ಸುಡಬೇಕು. ಅವುಗಳ ಆಹಾರವನ್ನು ಕಸಿದುಕೊಂಡೆನಲ್ಲಾ ಎಂದು ಚಿಂತಿಸುವವನು ಜೇನಿನ ಆಸೆ ಬಿಡಬೇಕು. ಚರ್ಮಾಗಾರದಲ್ಲಿ ಕೆಲಸಮಾಡುವವನು ಅಲ್ಲಿಯ ವಾಸನೆ ಸಹಿಸಲೇಬೇಕು; ಅಣುಶಕ್ತಿ ಪ್ರಯೋಗಶಾಲೆಯಲ್ಲಿ ಸಂಶೋಧನೆ ಮಾಡುವ ಕ್ಯೂರಿಯಂಥ ವಿಜ್ಞಾನಿ ಪ್ರಾಣಾಪಾಯ ಸ್ಥಿತಿಗೂ ಸಿದ್ಧವಾಗಿರಬೇಕು. ಉತ್ತರನಂಥವನು ಯುದ್ಧಕ್ಕಲ್ಲ; ಬುದ್ಧ ಸಂಘವನು ಆಡಳಿತಕ್ಕಲ್ಲ. ಹಲವರ ಸೊಗಸು, ಕೆಲವರಿಗೆ ಹೊಲಸು; ಕೆಲವರ ಹೊಲಸು

---

[1] ಆದಿಪರ್ವ, ಸಂಧಿ ೮, ಪದ್ಯಗಳು ೧೧ರಿಂದ ೫೭ರ ವರೆಗೆ. [2] ಉ ೮-೩೫.

ಇತರರಿಗೆ ಸೊಗಸು. ಬಚ್ಚಲಿಂದ ಹೊರಗೆ ತೆಗೆದ ಕೂಡಲೇ ಕ್ರಿಮಿಗೆ ಸಾವು. ಕಲಗಚ್ಚಿನ ಕೆಸರು ಹಸುವಿಗೆ ಸೊಗಸು. ಬೂದಿಯಲ್ಲಿ ಹೊರಳಾಡುವುದೇ ಕತ್ತೆಯ ಕರ್ಮ. ಹೇದಿಯೂ ಬೇಕು ನಂದಿಯೂ ಬೇಕು. ಇದು ಪ್ರಪಂಚ. ರಾಜಕೀಯ ಹೊಲಸೆಂದು ಹಳಿಯುವವರು ಬೆಪ್ಪರು; ಅಲ್ಲಿಯ ಜನ ಗಾಂಧಿಯಂತಿರಬೇಕೆಂದು ನಿರೀಕ್ಷಿಸುವವರು ಮೂರ್ಖರು. ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ. ಹೃದಯ ಶ್ರೇಷ್ಠ, ಕರುಳು ಕನಿಷ್ಠ ಎಂದು ಜರೆಯಲಾಗದು. ದೇಹಾರೋಗ್ಯಕ್ಕೆ ಎರಡೂ ಅತ್ಯಗತ್ಯ. ಲೋಕ ಸಂಸಾರದಲ್ಲಿ ರಾಜಕೀಯ ಅನಿವಾರ್ಯ. ಆದರೆ ಅತಿ ಸರ್ವತ್ರ ವರ್ಜ್ಯ. ಧರ್ಮದ ಆದರ್ಶ ವನ್ನು ಕಣ್ಮುಂದಿರಿಸಿಕೊಂಡು, ಅಧಿಕಾರ ಎಷ್ಟು ಬೇಕೋ ಅಷ್ಟನ್ನು ಮಾತ್ರ ಎಚ್ಚರಿಕೆ ಯಿಂದ ಬಳಸಿಕೊಂಡು, ನಾಡಿನ ಹಿತವನ್ನು ಸಾಧಿಸಬೇಕಾದ್ದು ರಾಜಕೀಯದ ಧರ್ಮ. ಅಪ್ಪಟ ಚಿನ್ನದಿಂದ ಆಭರಣ ನಿರ್ಮಾಣ ಸಾಧ್ಯವಾಗದು; ಅಂತೆಯೇ ಶುದ್ಧ ಧರ್ಮದ ಮೂಲಕ ರಾಜಕೀಯ ನಡೆಸಲಾಗದು. ಗಾಂಧಿಯಂಥ ಅತಿ ಒಳ್ಳೆಯ ಜನ ರಾಜಕೀಯ ಕ್ಕಲ್ಲ. ನೆಗಡಿಯೆಂದು ಮೂಗು ಕತ್ತರಿಸುವುದಿಲ್ಲ; ಅಂತೆಯೇ ಯಾವ ಮೂಲೆಯಲ್ಲಿಯೋ ಕಲ್ಮಷವಿದೆಯೆಂದು ರಾಜಕೀಯವನ್ನು ತಿರಸ್ಕರಿಸಲಾಗದು. ಇದು ಮಹಾಭಾರತದ ಒಟ್ಟು ಸಂದೇಶ. ಜೀವನದಲ್ಲಿ ಕಣಿಂಗನೀತಿ ವಿದುರ ನೀತಿಗಳ ಸಮನ್ವಯವಾಗಬೇಕು. ಔಚಿತ್ಯ ಸಮನ್ವಯದ ಮರ್ಮ.

ವಿದುರ ಹೇಳಿದ್ದೇನು? "ಬಲವಿಹೀನನು ಬಲ್ಲಿದನ ಕೂಡೊಲಿದು ತೊಡಕಿದವಂಗೆ.... ತಿಳಿಯಬಾರದು ನಿದ್ರೆ"; "ಒಂದು ವರ್ಣವನರುಹಿದನ ಗುರು, ಒಂದಪಾಯದಲುಳುಹಿದವ ಗುರು, ಬಂದ ವಿಗ್ರಹದೊಳಗೆ ರಕ್ಷಿಸಿದಾತ ಪರಮಗುರು;" ಕೃತಜ್ಞತೆ ಸಜ್ಜನರ ಲಕ್ಷಣ; ದುರ್ಯೋಧನನಂಥ ನೂರು ಮಕ್ಕಳು ಬೇಡ, ಅರ್ಜುನನಂಥ ಒಬ್ಬ ಮಗ ಸಾಕು; ಸತ್ಯವೊಂದೇ ಸ್ವರ್ಗಕ್ಕೆ ಸೋಪಾನ; ದುಷ್ಟಾಧಿಕಾರಿಗಳ ಒರಸೊರಸಿನಿಂ ಜನಪದದ ಧನ ಹರಿವುದು; ಪ್ರಭುವಾಗಿಯೂ ಕ್ಷಮೆವೆರಸಿದವನು ದರಿದ್ರನಾಗಿಯೂ ದಾನಿಯೆನಿಸು ವವನು ಶ್ರೇಷ್ಠ; ಅತಿಬಲನ ಧರ್ಮೋತ್ಕರುಷ, ದುರ್ಬಲಂಗುತ್ತಮನ ಸೈರಣೆ ಸರಿಸವೆನಿಸದು; ಜನಪದದ ಧನವ ಕುಂದಿಸದೆ ನೃಪಮಂತ್ರಿಗಳು ಸಾನಂದದಲಿ ರಕ್ಷಿಸಲು ಬಳಿಕವರಿಂದ ಸಕಲೈಶ್ವರ್ಯ ಪದವಹುದು;

ಒಲಿದವಳ ಬಿಸುಟೊಲ್ಲದವಳಿಗೆ। ಹಲುಬುವವನಹಿತರಲಿ ಸಖ್ಯಾ
ವಳಿಯ ನೆಸಗುವನರಿಯುದುಮದ ತಾ ಬಲ್ಲೆನೆಂಬುವನು
ಒಲಿದು ಕೇಳದೆ ಹೇಳುವನ ಕೈ। ನಿಲುಕಲರಿಯದ ಕಾರ್ಯದಲಿ ಹಂ
ಬಲಿಸಿ ಮರುಗುವವನನೆ ಮೂಢನು;
ಬಲುಪ್ರಧಾನನ ವೈರ ಹಿತವಹ। ಲಲನೆಯರ ಮಸದಳಲು ಹಗೆಯುಲಿ
ಬಳಸುವಂತಕ್ಷತೆಯನಾಮಿಕರೊಡನೆ ಕೆಳೆಗೋಷ್ಠಿ
ಬಲದೊಡನೆ ನಿರ್ಬಂಧ ಧರ್ಮದ। ನೆಲೆಯನರಿಯದ ದಾನಿಗಳ ಸಿರಿ
ಸುಳಿವ ಗಾಳಿಗೆ ಮಳೆವ ದೀಪವು[1]

[1] ಉದ್ಯೋಗ ಪರ್ವ, ೩ನೆಯ ಸಂಧಿ

ಕೋಪ ಸರ್ವಹಾನಿಕಾರಿ; ವಿದ್ಯೆಯಿಲ್ಲದ ನರನು ನರಪಶುವವನ ಜನ್ಮ ನಿರರ್ಥಕರ, ವಿಭು ಮಡದಿ ಮಗ ವಿದ್ವಾಂಸ ಮಂತ್ರಿ ಸೇನಾನಿ ಸಂಧಿವಿಗ್ರಹಿ ಭಂಡಾರರಕ್ಷಕ ತಾಂಬೂಲಧಾರಕ ಸೂಪಕಾರ ಪಾನೀಯಧಾರಕ ಪಡಿಹಾರಕ ಗಾಯಕ ಮಲ್ಲ ಚಮರ ಧಾರಕ ಬೆಸದವ ಜೋದ ರಥಿಕ ರಾವುತ ಇಂತೀ ಮುಂತಾದ ರಾಜಪರಿವಾರದ ಗುಣ ದೋಷಗಳನ್ನು ವಿದುರ ವಿವರಿಸುತ್ತಾನೆ. ರಾಜ ಪಂಚಮುಖನಾದರೆ, ದಶರಥನಾದರೆ, ಸಹಸ್ರಾಕ್ಷನಾದರೆ, ಆತ್ಮಪ್ರತ್ಯಯ ಮತ್ತು ಸ್ವಬುದ್ಧಿಗಳಲ್ಲಿ ನಂಬಿಕೆಯುಳ್ಳವನಾದರೆ ಮಾತ್ರ ಲೋಕವ್ಯವಹಾರ ಸುಲಭವಾಗುತ್ತದೆ; ಇಲ್ಲವಾದರೆ ಅವನು ಬಹುಬೇಗನೆ ನಿವೃತ್ತನಾಗಬೇಕಾಗುತ್ತದೆ. ಈಗ ಅರಸುಗಳಿಲ್ಲ: ಅವರ ಸ್ಥಾನದಲ್ಲಿ ನಿಂತಿರುವ ನಾಯಕರು ಈ ನೀತಿ ಸೂಕ್ಷ್ಮವನ್ನರಿತರೆ ದೇಶಕ್ಕೆ ಸುಖ, ಅವರಿಗೆ ಶ್ರೇಯಸ್ಸು.

ನಾರದ ತ್ರಿಲೋಕಸಂಚಾರಿಯಾದ್ದರಿಂದ ಲೋಕವ್ಯವಹಾರಜ್ಞಾನವನ್ನು ಅಧಿಕ ಪ್ರಮಾಣದಲ್ಲಿ ಗಳಿಸಿಕೊಂಡಿದ್ದ. ಮುನಿ ಸನತ್ಸುಜಾತ ಅಂತರ್ಮುಖಿಯಾದ್ದರಿಂದ ಅಧ್ಯಾತ್ಮ ರಹಸ್ಯ ಬೋಧನೆಯ ಕಡೆಗೆ ಅವನ ಉಪದೇಶ ವಾಲುತ್ತದೆ; ಅಂತರ್ದೃಷ್ಟಿಯಿಂದ ತಿಳಿದುಕೊಂಡಿದ್ದ ವ್ಯವಹಾರ ಸೂಕ್ಷ್ಮವನ್ನು ಧೃತರಾಷ್ಟ್ರನಿಗೆ ಬೋಧಿಸುತ್ತಾನೆ. ದುರ್ಜನರಿಗಂಜುವುದು ಲೋಕವು ಸಜ್ಜನರ ಲೆಕ್ಕಿಸದು; ಜ್ಞಾನಿಗಳನೊಡಬಡಿಸಬಹುದು, ಅಜ್ಞಾನಿಗಳನಹುದೆನಿಸಬಹುದು, ಜ್ಞಾನಲವವನು ಕೂಡಿಕೊಂಡಿಹ ದುರ್ವಿದಗ್ಧರನು ಏನ ತಿಳಿಯಲು ಬಹುದು, ವಿಷಕ್ಸೇನಗಳವಲ್ಲ; ದಾನದಿಂದಹುದಿಹಪರಂಗಳ ಸೌಖ್ಯ ಸಂಪದವು; ವ್ಯರ್ಥರುಗಳೊಡನಾಟ, ಅಸ್ವಾರ್ಥವಿಲ್ಲದರುಗಳ ಕೂಟ, ಪರಾರ್ಥದಿಂದು ಜ್ಜೀವಿಸಿದವನ ಬದುಕು ಅನರ್ಥ ಪರಂಪರೆಗಳು; ಧರ್ಮವೆಂಬುದು ಪರಮಪದ.

ಯುವತಿಯರು ಗಾಯಕರು ಕವಿಗಳು । ತವತವಗೆ ಕೈವಾರಿಸುವರಾ
ವವನವನೆ ಯಾವಾಗಲು ದೂಷಕನಿಹಪರಂಗಳಿಗೆ
ಇವರು ಮೂವರು ನಿಂದಿಸುವರಾ । ವವನವನು ಸರ್ವಜ್ಞನೆನಿಸುವ;

ನುತಿಸುವನು ಪ್ರೋತ್ಸೈಸಿ ಕಾಲದ । ಕಡೆಯ ಕಾಣಿಸಿ ಹೋಹವರ ಬಿ:
ಟ್ಟಿಡುತ ಹಳಿಯುರನಾಪ್ತರನು ಮನ್ನಿಸುತ ತನ್ನವನು
ಹಿಡಿದು ಕೇಡೆಯ ಮಾಡುವವರನು । ಬಿಡದೆ ನಾನಾ ತೆರದ ಪದವಿಯ
ಕೊಡುತಲಿಹುದಿದು ನೀತಿ[1]

ಲೋಕ ಸಮ್ಮತವಾವುದದನು ನಿರಾಕರಿಸುವವರುಗಳು ತಾವೇನ್ ಆಕೆವಾಳರೆ? ತಲೆ ಚಿಟ್ಟಾಗುವಷ್ಟು ಮಹೀಸುರರ ಮಹಿಮಾತಿಶಯ ವರ್ಣನೆಯಿಂದ ಉಪದೇಶ ತುಂಬಿ ಹೋಗಿದೆ. ಒಟ್ಟಿನಲ್ಲಿ ರಾಜನೀತಿ ನಿರ್ಣಯಕ್ಕೊಂದು ವಿಚಾರವೇದಿಕೆ ಈ ನಾಲ್ಕಾರು ವಿಚಾರಮಂತರಿಂದ ನಿರ್ಮಾಣವಾದಂತಾಯಿತು.

---

1 ಉದ್ಯೋಗ ಪರ್ವ, ೪ನೆಯ ಸಂಧಿ.

ನೃಪರ ಗುಣಶೀಲಗಳು

ಪಂಪ ಅರಿಕೇಸರಿಯ ಪ್ರಾಣಸ್ನೇಹಿತ; ಅವರ ಗೆಳೆತನದ ಶುಭ್ರತೆಗೆ ಕರ್ಣ ದುರ್ಯೋಧನರ ಸಖ್ಯವೇ ಸಾಕ್ಷಿಯಾಗಿದೆ. ದೊರೆ ಕವಿಯನ್ನೆಂದೂ ಲಘುವಾಗಿ ಕಂಡದ್ದಿಲ್ಲ. ಆದರೂ "ಪೆಜಿರೀವುದೇಂ ಪೆಜಿರ ಮಾಡುವುದೇಂ ಪೆಜಿಱಿಂದಮಪ್ಪುದೇಂ...."[1] ಎಂದು ಉದ್ಗಾರ ತೆಗೆಯುತ್ತಾನೆ. ಅಷ್ಟೇ ಅಲ್ಲ, "ಜಳಕ್ಕನೀಗಳಜಱಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ"[2] ಎಂದು ಹೇಳುವಾಗ ಕಾಠಿನ್ಯ ಕಾಣುತ್ತದೆ. ಇದು ಕವಿಯ ಅನುಭವವ್ರೋ, ದ್ರೋಣನ ಅನುಭವವ್ರೋ ಹೇಳಲರಿದು. ಮತ್ತೊಂದು ಕಡೆ "ತೊಟ್ಟಿನ ಮೊಲೆವಾಲನುಂಡ ಗುಣಮಿಂತಿವಸಾರ್ ಕಿಡಿಪರ್ ನರೇಂದ್ರರೊಳ್"[3] ಎಂದು ಕಿಡಿದು,

> ಕಲಿಯನೆ ಪಂದೆ ಮಾಣ್ಬ ಕಡುವಂದೆಯನೊಳ್ಗಲಿ ಮಾಣ್ಬ ತಕ್ಕನಂ
> ಪೊಲೆಯನೆ ಮಾಣ್ಬ ಮುಂ ಪೊಲೆಯುಸಂ ಸೆರೆ ತಕ್ಕನೆ ಮಾಣ್ಬ ತವ್ಮೊಳ
> ಗ್ಗಲಿಸಿ ಪೊಡಟ್ಬು ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂ
> ಚಲಮುಪಜಿಂಪಮೋಲಗಿಸಿ ಬಾಟ್ಸುದೆ ಕಷ್ಟಮಿಳಾಧಿನಾಥರಂ ||[4]

ಎಂದು ಕಿನಿಸಿ, ಖಾರವಾಗಿ ಮಾತಾಡುತ್ತಾನೆ. ಈ ಕಟುಸತ್ಯವನ್ನು ಹೊರಗೆಡಹುವಾಗ ಅವನ ಸ್ಮೃತಿ ದೃಷ್ಟಿಯಲ್ಲಿದ್ದವನು ಅರಿಕೇಸರಿಯೋ ಅನ್ಯರಾಜರೋ ತಿಳಿಯದು. ಅದೇನೇ ಇರಲಿ, ಪಂಪ ಬಸವ ಹರಿಹರರಂತೆ ನಾರಣಪ್ಪನೂ ಸ್ವಾತಂತ್ರ್ಯಪ್ರಿಯ; ಕೃಷ್ಣನಿಗಲ್ಲದೆ ಬೇರೆಯವರಿಗೆ ಮಣಿದವನಲ್ಲ. ಯಾವ ರಾಜನ ಬಾಯ್ದಂಬುಲಕ್ಕೂ ಸೆರಗೊಡ್ಡಿದವನಲ್ಲ. ಆದರೂ ಅನೇಕ ರಾಜರ ದೌಷ್ಟ್ಯವನ್ನು, ದುರ್ನೀತಿಯನ್ನು, ಸಪ್ತವ್ಯಸನ ಲೋಲುಪತೆಯನ್ನು ಕಣ್ಣಾರೆ ಕಂಡಿದ್ದಾನೆ, ಕಂಡದ್ದನ್ನು ನಿರ್ಭೀತಿಯಿಂದ ಬೆಳಕಿಸಿದ್ದಾನೆ. ಅವರ ಬಗ್ಗೆ ಅವನಿಗೆಳ್ಳಷ್ಟೂ ಗೌರವವಿದ್ದಂತೆ ತೋರುವುದಿಲ್ಲ. ಸಮಯ ಸಿಕ್ಕಿದಾಗಲೆಲ್ಲ ಉರಿದು ಬೀಳುತ್ತಾನೆ. ಅವನಂಥ ಯೋಗಿಗೆ ಅವರ ದುಶ್ಚೇಷ್ಟೆಗಳು ಹಿಡಿಸದಿದ್ದದ್ದು ಸಹಜವೇ. "ಸೇವಿಸುವುದೇ ಕಷ್ಟವೆಂಬುದು ಕೋವಿದರ ಮತ"[5] ಎಂದು ಕೀಚಕನುಪಟಳದಿಂದ ಸತ್ತು ಸುಣ್ಣವಾಗಿದ್ದ ದ್ರೌಪದಿಯ ಬಾಯಿಂದ ಹೇಳಿಸುತ್ತಾನೆ. ಜೀತಗಾರರ ಪಾಡೇ ಅಂಥದು. ಗಂಡಸರ ಸೇವೆಯೇ ಕಷ್ಟವೆನ್ನುವಾಗ, ಹೆಂಗಸರದು ಕಷ್ಟತರವಾಗುತ್ತದೆ. ಭೀಮ ತನ್ನ ಕೆಲಸ ಮಾಡಿ ಮುಗಿಸಿದರೆ ಕೇಳುವವರಿಲ್ಲ; ಜತೆಗೆ ದೇಹದಾರ್ಢ್ಯವೇ ಅವನಿಗೆ ರಕ್ಷೆಯಾಗುತ್ತದೆ. ಕ್ಷಮೆ ಸಹನೆ ಸದ್ಗುಣಗಳೇ ಮೂರ್ತಿವೆತ್ತಂತಿರುವ ಧರ್ಮರಾಯನಿಗೂ ಸೇವೆ ಬಹು ಕ್ಲೇಶದಾಯಕವಾಗದು. ಹೆಣ್ಣು ಶುನಕದೃಷ್ಟಿಯ ಹತ್ತು ಜನ ಕೀಚಕರ ಮುಂದೆ ಓಡಾಡಿ, ಕೆಲಸ ಮಾಡಿ, ಶೀಲವನ್ನು ಸಹ ರಕ್ಷಿಸಿಕೊಳ್ಳಬೇಕಾಗಿದೆ. ಆದ್ದರಿಂದ ದ್ರೌಪದಿ ಹೇಳಿದ ಮಾತು ಹೆಚ್ಚೇನಲ್ಲ.

ಸಪ್ತ ವ್ಯಸನಗಳಿರುವುದು ನೃಪರಿಗೆ ಮತ್ತು ಶ್ರೀಮಂತರಿಗೇ ಹೊರತು ಸಾಮಾನ್ಯರಿ

---

[1] ಆದಿಪುರಾಣ, ೧-೩೬ ; [2] ಪಂಪಭಾರತ, ೨-೪೯ ; [3] ಅದೇ ೧೩-೯೩ ; [4] ಅದೇ ೧೨-೯೨ ; [5] ವಿ ೩-೪

ಗಲ್ಲ. ದ್ಯೂತಮೃಗಯಾವ್ಯಸನ ಪರಸ್ತ್ರೀವ್ಯಾಮೋಹಗಳನ್ನಂಟಿಸಿಕೊಳ್ಳದ ಭೂಪರಿಲ್ಲ. ಜೂಜಿನಿಂದ ಜೂಜುಗಾರ ಕೆಡುವುದಲ್ಲದೆ, ವಂಶ ಜನಪದಗಳೂ ಕಷ್ಟಕ್ಕೆ ಗುರಿಯಾಗ ಬೇಕಾಗುತ್ತದೆನ್ನುವುದಕ್ಕೆ ನಳನೇ ಸಾಕ್ಷಿ. ಅರಸು ಮಾಡಿದ ಪಾಪ ಜನಪದಕ್ಕೂ ಹತ್ತುತ್ತದೆ. ಯಾರೋ ದುಡಿಯುವವರಿರುವಾಗ ಅರಮನೆಗಳಲ್ಲಿ ಕುಳಿತು ಕಾಲನೂಕುವು ದೆಂತು? ಆ ಕಾರಣಕ್ಕಾಗಿ ಈ ಎಲ್ಲ ವ್ಯಸನಗಳು; ಸೋಮಾರಿಗಳ ಕಸಬುಗಳು. ಮೊದ ಮೊದಲು ಜೂಜು ಸರಸವಾಗಿರುತ್ತದೆ. ಬರಬರುತ್ತ ವಿರಸವಾಗುತ್ತದೆ. "ಮೊದಲಲಿದು ಸುದ್ಯೂತವವಸಾನದಲಿ ವಿಷಮದ್ಯೂತದಲಿ ನಿವಾರಣವುಂಟೆ?"[1] ಎಂದು ವಿದುರ ಧೃತ ರಾಷ್ಟ್ರನನ್ನು ಪ್ರಶ್ನಿಸುತ್ತಾನೆ, ಧರ್ಮರಾಯನನ್ನೂ ಎಚ್ಚರಿಸುತ್ತಾನೆ. "ದ್ಯೂತವಿದು ದುರ್ವ್ಯಸನವೆಂಬವ ನೀತಿವಿದನೇ ಶ್ರೋತ್ರಿಯರಿಗಖ್ಯಾತಿಯದು"...."ದ್ಯೂತಮೃಗಯಾ ಸ್ತ್ರೀವ್ಯಸನನೃಪಜಾತಿಗೋಸುಗರಾದವು, ಇದರ ರಸಾತಿಶಯವರಿಯದವ ನರಮೃಗ"[2] ಎಂದು ಶಕುನಿ ಧರ್ಮರಾಯನನ್ನು ಚುಡಾಯಿಸುತ್ತಾನೆ. "ರಾಜಧರ್ಮವಿದಹುದು" ಎಂದು ಧರ್ಮಸುತನೂ ಒಪ್ಪಿಕೊಂಡು, ತನ್ನ ದೌರ್ಬಲ್ಯವನ್ನು ತೋರಿಸಿಕೊಂಡು, "ಕಳವಿನ ಜೂಜು ಧರ್ಮದ ಮಗನೊ ಮೊಮ್ಮಗನೋ"?[3] ಎಂದು ಕೇಳುತ್ತಾನೆ. ಭೀಮಾರ್ಜುನ ರನ್ನು ಪಣವೊಡ್ಡಿ ಸೋತಾಗ "ನಿರ್ಧನಿಕನಾಗಿಯು ಮತ್ತೆ ಬಿಡದೇ ದ್ಯೂತದುರ್ವ್ಯಸನ"[4] ಎಂದು ಶಕುನಿ ಹಂಗಿಸಿದರೂ ಧರ್ಮರಾಜ ದ್ಯೂತ ನಿಲ್ಲಿಸುವುದಿಲ್ಲ. ಮರುಜೂಜಿಗೆಂದು ಧೃತರಾಷ್ಟ್ರ ಕರೆಕಳುಹಿಸಿದಾಗ "ಕರೆಸುವವದಿರು ಭಂಡರೋ ಮೇಣ್ಮರಳಿ ಹೋಹರು ಭಂಡರೋ?"[5] ಎಂದು ಭೀಮ ಗರ್ಜಿಸುತ್ತಾನೆ. ಧರ್ಮರಾಯನ ದೌರ್ಬಲ್ಯವಿದ್ದದ್ದು ದ್ಯೂತವ್ಯಸನದಲ್ಲೆಂಬುದು ಹಸ್ತಿನಾಪತಿಯಲ್ಲಿ ಡಂಗುರವಾಗಿರಬೇಕು. ಆ ಸಂಗತಿ ಮೊದಲೇ ಶಕುನಿಗೆ ಗೊತ್ತಿದ್ದುದರಿಂದ "ಧರ್ಮಜ್ಞನು ವಿಶೇಷ ದ್ಯೂತಲೋಲುಪನು ಆತನ ನೆಲೆಯ ಬಲ್ಲೆನು"[6] ಎಂದು ಉಗ್ಗಡಿಸುತ್ತಾನೆ, ಕೌರವ ಕರ್ಣಾದಿಗಳೆದುರಿನಲ್ಲಿ. ಅವನ ಮಾತು ಜಳ್ಳಲ್ಲವೆನ್ನುವಂತೆ ಧರ್ಮರಾಯ "ಕರೆಯೆ....ಆಡುವುದು....ಜೂಜೆಂಗಿದು ಮಹೇಶರ ಪರಮಧರ್ಮವಲೇ"[7] ಎಂದು ಹೇಳಿಬಿಡುತ್ತಾನೆ. ಜೂಜಿನಿಂದೊದಗಿದ ಕಷ್ಟ ಕಾರ್ಪಣ್ಯಗಳ ವಿಷಯವನ್ನು ಯಾರಾದರೂ ಎತ್ತಿದ್ದಾದರೆ "ಅದು ಪುರಾಕೃತ ಕರ್ಮದವ ಶೇಷ" "ದೈವವಿಕ್ಕಿದ ಕೊರಳುಗಣ್ಣಿಯ ಕುಣಿಕೆಯಾರಲಿ ಹರಿವುದೈ"[8] ಎಂದು ಹೇಳಲಿಕ್ಕು ಅವನು ಹಿಂಜರಿಯನು. "ತಂದೆಗೆ ಹಿರಿಯನಾ ಧೃತರಾಷ್ಟ್ರನಾಜ್ಞೆಯ ಶಿರ ದೊಳಾಂತೆನು"[9] ಎಂದು ಹೇಳುವಾಗ ಪಿತ್ರಾಜ್ಞೆಗಿಂತ ದೌರ್ಬಲ್ಯವೇ ಅವನನ್ನು ಗೆದ್ದಂತೆ ಕಾಣುತ್ತದೆ. ವಿರಾಟನಗರಿಯಲ್ಲಿದ್ದಾಗಲೂ ಧರ್ಮರಾಯ ಪ್ರತಿನಿತ್ಯ ದ್ಯೂತಸಂಗತಿಯ ಮೂಲಕ ಅವನ ಮನವನ್ನು ರಂಜಿಸುತ್ತಿದ್ದಿರಬೇಕು. ಆದರೆ ಭೀಷ್ಮನಂಥ ಹಿರಿಯರಾಗಲಿ, ಶ್ರೀಕೃಷ್ಣನಂಥ ಅವತಾರ ಪುರುಷನಾಗಲಿ ಜೂಜು ಕೆಟ್ಟದ್ದೆಂದೇ ಮೇಲಿಂದ ಮೇಲೆ

---

[1] ಸ ೧೨-೭೯; [2] ಸ ೧೩-೩೮; [3] ಸ ೧೩-೪೦; [4] ಸ ೧೪-೨೪; [5] ಸ ೧೬-೩೧; [6] ಸ ೧೨-೧೮; [7] ಸ ೧೬-೩೫; [8] ಸ ೧೩-೪; [9] ಸ ೧೨-೯೫

ವಿವೇಕ ಹೇಳುತ್ತಾರೆ. "ವಿಷಮವಿವಲೇ ದ್ಯೂತ ಮಗಯಾ ವ್ಯಸನ ಪಾರ್ಥಿವ ಜಾತಿಗಿವು"[1] ಎಂದು ಮುರಹರನೇ ಪಾಂಡವರಿಗೆ ಉಪದೇಶಿಸಿದ್ದುಂಟು.

ಅರಸುತನವೊದಗಿದ ಕೂಡಲೆ ಸರ್ವಮದಗಳು ಕೂಡಿಕೊಂಡು, ಕಣ್ಣಲ್ಲಿ ಕೊಬ್ಬು ಬೆಳೆದು, ವಿವೇಕವನ್ನು ಮರೆಸುತ್ತದೆ, ಗೆಳೆಯರನ್ನು ತಿರಸ್ಕರಿಸುತ್ತದೆ. ತಂದೆ ತಾಯಿ ಗುರುಗಳನ್ನು ಹಂಗಿಸುತ್ತದೆ. ದ್ರೋಣ ದ್ರುಪದರು ಸಹಪಾಠಿಗಳು. ಬಡತನಪಡಸಿ, ತನ್ನ ಹಸುಗೂಸಿನೊಡನೆ ಗೆಳೆಯನೆಂಬ ಸಲುಗೆಯಿಂದ ದ್ರೋಣ ದ್ರುಪದನ ಅರಮನೆಗೆ ಹೋದರೆ "ಭೂಪರಿಗೆ ಬಡಹಾರುವರಿಗೆತ್ತಣದು ಸಖತನ"[2] "ತಿರಿವ ಹಾರುವರೊಡನೆ ಭೂವಿಶ್ವರರಿಗೆತ್ತಣ ಮೈತ್ರಿ"[3] ಎಂದು ಹಳಿದು ದುರ್ಗರ್ವವನ್ನು ಮೆರೆಯುತ್ತಾನೆ. ಕರ್ಣನಂಥ ದುರ್ಜನರ ಸಹವಾಸದಿಂದ ದುರ್ಯೋಧನ ದುಷ್ಟನಾದನೆಂದು ಕೃಪಾಚಾರ್ಯ ಹಳಿಯುತ್ತಾನೆ. "ಗರುವರನು ಮಾನ್ಯರನು ರಣಧೀರರನು ದೂರದಲಿರಿಸುವರು ಹತ್ತಿರಕೆ ಕರೆವರು ಬಾಯಿಬಡಿಕರ, ಜಗದ ಭಂಡರನು; ಅರಸುಗಳು ದುಶ್ಶೀಲರೆಂಬುದನರಿಯದೇ ಜಗ"[4] ಎಂದವನು ಇಂದಿನ ಪರಿಸ್ಥಿತಿಯನ್ನು ಮೂವಲಿಸುವಂತಿದೆ. ದ್ರೋಣನಂತು ದುರ್ಯೋಧನನ ಮುಖಕ್ಕೆ ಅಪ್ಪಳಿಸುವಂತೆ "ಅವನಿಪಾಲರು ಕಂಗಳಿಂದವೆ ಕಿವಿಗೆ ಕರಪ್ರೌಳ್ಳಿದರು ಕಂಡುದನವರು ನಂಬರು ಕೊಂಡೆಯರ ನುಡಿಗೇಳ್ದು ನಂಬುವರು"[5] ಎಂದು ನುಡಿಯುತ್ತಾನೆ. ಗುರುಪಿತಾಮಹರೆಷ್ಟೇ ಭರ್ತ್ಸನೆಗೈಯಲಿ ಅವನು ಮಾತಾಡಿದವನಲ್ಲ. ದೊರೆಗಳಾಗಲಿ ಅಧಿಕಾರಗಳಾಗಲಿ ಕೊಂಡೆಯರ ಮತ್ತು ಲಂಡ ಭಂಡರ ತಂಡವನ್ನು ಸುತ್ತಲೂ ಬೆಳೆಸಿಕೊಳ್ಳುತ್ತಾರೆ. ಚೋರನಿಗೆ ಬೆಳಕು, ನೊಣಗಳಿಗೆ ಸುಗಂಧ, ರೋಗಿಗೆ ರುಚಿ ಎಂತು ಹಿಡಿಸುವುದಿಲ್ಲವೋ ಅಂತೆಯೇ ಅರಸುಗಳಿಗೆ ಸಜ್ಜನರು, ನೀತಿವಂತರು, ಸದಾಚಾರಿಗಳು ಸೇರುವುದಿಲ್ಲ. ಅದೂ ಸಹಜವೇ. ಕುತಂತ್ರ ಕುಯುಕ್ತಿ ಕುಟಿಲತೆಗಳೇ ರಾಜಕೀಯದ ಚಹರೆಯಾಗಿರುವಾಗ ಅವುಗಳನ್ನು ಬೆಂಬಲಿಸುವ ದುಶ್ಶಾಸನರೇ ಅವರಿಗೆ ಬೇಕಾಗುತ್ತದೆ. ದುಶ್ಶಾಸನ ದ್ರೌಪದಿಯ ಸೀರೆ ಸೆಳೆಯಬಲ್ಲನೇ ಹೊರತು ಯುಯುತ್ಸುವಲ್ಲ; ಶಕುನಿ ಎಸಗುವಂಥ ಭ್ರಷ್ಟಾಚಾರ ವಿದುರನಿಂದ ಸಾಧ್ಯವಿಲ್ಲ. ವಿದುರ ಕೃಪನಂಥವರನ್ನು ಆಪ್ತವರ್ಗಕ್ಕೆ ಸೇರಿಸಿಕೊಂಡದ್ದಾದರೆ ದುರ್ಯೋಧನನಿಗೂ ಸುಖವಿಲ್ಲ, ಅವರಿಗೂ ಹಿತವಿಲ್ಲ. ಲಂಡ ಭಂಡರ ಸಹವಾಸವೂ ಕಷ್ಟ. ಅವರದು ಬಕಾಸುರನ ಹೊಟ್ಟೆ. ಅದರೊಳಗೆಷ್ಟು ಸುರಿದರೂ ತುಂಬುವುದಿಲ್ಲ. ದೀನದಲಿತರು ರೈತರು ದುಡಿದ ಹಣ ಅವರಿಗಾಗಿ ಪೋಲಾಗುತ್ತದೆ. ಅದನ್ನೇ ನಾರದ ಹೇಳುವುದು: "ಖೂಳರಿಗೆ ಭಂಡರಿಗೆ ತೆರುವರು ಧನವನೀ ಧರೆಯರಸುಗಳಿಗಿದು ಸಹಜ"[6] ಎಂದು. "ಅರಸುತನ ತನಗಧಿಕವಾಗುತ ಬರಬರಲು ಕಣ್ಣಾಲಿಗಳು ತರಹರಿಸಿ ಕಾಣವು ವರ್ತಮಾನದ ನೃಪರ ಬಳಕೆಯಿದು"[7] ಎಂಬ ಮಾತುಗಳನ್ನು ಕೃಷ್ಣನ ಬಾಯಲ್ಲಿ ಆಡಿಸುವಾಗ ಕುಮಾರವ್ಯಾಸ ತನ್ನ ಕಾಲದ ದೊರೆಯೊಬ್ಬನನ್ನು ದೃಷ್ಟಿಯಲ್ಲಿರಿಸಿಕೊಂಡಿದ್ದಂತೆ ತೋರುತ್ತದೆ. ಅದಿಲ್ಲವಾದರೆ 'ವರ್ತಮಾನ' ಎಂಬ

[1] ಸ ೧೧-೧೮; [2] ಆ ೬-೩೪; [3] ಆ ೬-೩೧; [4] ದ್ರೋ ೧೫-೮; [5] ದ್ರೋ ೧೮ ೨;
[6] ಸ ೧-೩೩; [7] ಉ ೯-೨

ಪದವನ್ನವನು ಬಳಸುತ್ತಿರಲಿಲ್ಲ. ಅವರಿಗೆ ಸಾಹಿತಿಗಳು ಬೇಕಿಲ್ಲ, ಸಂತ ಸಾಧುಗಳು ಬೇಕಿಲ್ಲ, ಜ್ಞಾನಿಗಳು ಬೇಕಿಲ್ಲ. ಅವರ ವಿನೋದವೆಲ್ಲ ಖೂಳರೊಡನೆ, ಆಳಿ ಭಂಡರೊಡನೆ, ಮೇಳ ಸ್ವಾಮಿದ್ರೋಹರೊಡನೆ, ನಂಬುಗೆ ಡಂಭರೊಡನೆ, ಆಟ ವಿಕಾರಿಯೊಡನೆ ; ಸಮಜೀವಿಗಳು ಸೂಳೆಯರು ಎಂದು ನಾರದ ಧರ್ಮಸುತನೊಡನೆ ನುಡಿಯುತ್ತಾನೆ.[1] ಧರ್ಮರಾಯನೂ ರಾಜ ; ಅಥವಾ ಮುಂದೆ ರಾಜನಾಗುವವನು ; ಅವನ ಮುಂದೆಯೂ ನಾರದ ನೃಪರನ್ನು ಹೀಯಾಳಿಸುತ್ತಾನೆ ; "ಮೇಲನರಿಯದ ನೃಪನ ಬಾಳಿಕೆ ಗಾಳಿಗೊಡ್ಡಿದ ಸೊಡರು, ಭುಜಗನ ಹೇಳಿಗೆಯುಲಿಕ್ಕಿದ ಕರವು"[2] ಎಂದು. ಲೋಕದಲ್ಲಿ ಅರಸರಿಂದ ಆಗುವಷ್ಟು ಅನ್ಯಾಯ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಅವರು ಮತಿವಿಕಳವಾದರಂತು ತಿರಿಗೆ ತಿರೆಯೇ ಭಸ್ಮವಾಗುತ್ತದೆ. ಭೂಕಂಪದಿಂದ ಹತ್ತು ಲಕ್ಷ ಜನ ಮಡಿಯಬಹುದು, ಅಪಘಾತಗಳಿಂದ ಸಾವಿರ ಜನ ಸಾಯಬಹುದು. ಆದರೆ ಅರಸ ತುಸು ಮಡುಕಿದ್ದಾದರೆ ಕೋಟಿ ಕೋಟಿ ಜನ ನಿರ್ನಾಮ.

ಉರಗನನಗಿದೊಡೆ ಮೇಣು ಶಸ್ತ್ರದ । ಲಿರಿದೊಡೊಬ್ಬನೆ ಸಾವನವರಿಂ
ದರಸು ನೆಗಳಿದ ಮಂತ್ರ ಛೇದಿಸಲರಿನೃಪಾಲಕರ
ಧರೆ ಸಹಿತ ತತ್ಸಕಲ ಬಲಸಂ । ಹರಣವಹುದಿದನರಿದು ಭೂಪೋ
ತ್ತರ ರಹಸ್ಯದ ಮಂತ್ರವುಂಟೇ ರಾಯನಿಗೆ[3]

ಎಂದು ವಿದುರ ಧೃತರಾಷ್ಟ್ರನನ್ನು ಪ್ರಶ್ನಿಸುತ್ತಾನೆ. ನಾರಣಪ್ಪನ ಭಾರತದಲ್ಲಿ ನೃಪರ ವಿಷಯ ನಾಲ್ಕಾರು ಕಡೆ ಬರುತ್ತದೆ ; ಅದು ಬರುವೆಡೆಯಲ್ಲೆಲ್ಲ ಅವರ ಬಗ್ಗೆ ಒಂದೂ ಒಳ್ಳೆಯ ಮಾತಿಲ್ಲ. ಅವರ ಬಗ್ಗೆ ಅವನಿಗೆ ಜುಗುಪ್ಸೆ, ತಿರಸ್ಕಾರ, ಅವಹೇಳನ. ಅವಕ್ಕೆಲ್ಲ ಕಾರಣವಿಲ್ಲದಿಲ್ಲ. "ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸು."[4]

[1] ಸ ೧-೩೫ ; [2] ಸ ೧-೫೧ ; [3] ವಿ ೩-೧೪ ; [4] ಬಸವೇಶ್ವರ ವಚನಗಳು, ೨-೩೫೫

೩. ಮತೀಯ ಸಂಸ್ಕೃತಿ

ಜಾತಿಸಮಸ್ಯೆ

ಭರತಖಂಡದಲ್ಲಿ ಜಾತಿಸಮಸ್ಯೆ[1] ಮಹಾಭಾರತ ಕಾಲದಿಂದ ಈತನಕ ಪೆಡಂಭೂತವಾಗಿ ಬೆಳೆದು ರಾಷ್ಟ್ರೈಕ್ಯಕ್ಕೆ, ನಾಡಿನ ಪ್ರಗತಿಗೆ ಕುಠಾರಪ್ರಾಯವಾಗಿ ಪರಿಣಮಿಸಿದೆ. ಒಂದಾನೊಂದು ಕಾಲದಲ್ಲಿ ವರ್ಣವ್ಯವಸ್ಥೆ ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ಅನಿವಾರ್ಯವಾಗಿತ್ತು, ಅಂದು ಅನುಕೂಲವಾಗಿದ್ದ ವ್ಯವಸ್ಥೆ ಇಂದೇಕೆ ಶಿಥಿಲವಾಗಬೇಕೆನ್ನುವ ಪ್ರಕಾಂಡಪಂಡಿತರು ಇಲ್ಲದಿಲ್ಲ. ಈ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಹಳೆಯ ಮೌಲ್ಯಗಳೆಲ್ಲ ಜೀರ್ಣಗೊಂಡು, ಹೊಸ ಮೌಲ್ಯಗಳು ಜೀವನವಿಧಾನವನ್ನು ರೂಪಿಸುತ್ತಿವೆ ಎನ್ನುವ ಸಂಗತಿ ಆದರಣೀಯವಾದುದು. ಶುದ್ಧ ಮಾನವೀಯತೆಯ ದೃಷ್ಟಿಯಿಂದ ಆ ವ್ಯವಸ್ಥೆ ಯಾವ ಕಾಲದಲ್ಲಿಯೂ ಶ್ರೇಯಸ್ಸಾಧಕವಾಗಿದ್ದಿರಲಾರದು ; ಬಹುಜನರಿಗೆ ಅದು ಆಪ್ಯಾಯಮಾನವಾಗಿದ್ದಿರಲಾರದು. ಕೇವಲ ಹಿಡಿಮಂದಿ ಸ್ವಾರ್ಥಸುಖಕ್ಕಾಗಿ ಮೌಢ್ಯದ ಕತೆಗಳನ್ನು ನೇಯ್ದು, ತಮ್ಮ ಸ್ಥಾನಮಾನಗಳನ್ನುಳಿಸಿಕೊಳ್ಳುವ ಸಲುವಾಗಿ ಜಾತಿಯ ಮೇಲೆ ಜಾತಿಯನ್ನೆತ್ತಿ ಕಟ್ಟಿಆಳ್ಕೆ ನಡೆಸುತ್ತಿದ್ದಿರಬೇಕು ಎಂಬ ಭಾವನೆ ಆಧುನಿಕರಲ್ಲಿ ಮೂಡಿದರೆ ಅಚ್ಚರಿಯಾಗದು. ಇಲ್ಲಿಯ ಬಹುಮಂದಿ ವಿದೇಶೀಯ ಮತಗಳನ್ನಪ್ಪಿಕೊಳ್ಳಲು ಉತ್ತಮ ವರ್ಗದವರ ಕಿರುಕುಳವೇ ಕಾರಣವಾಗಿದ್ದಿರಬೇಕೆನ್ನುವುದಕ್ಕೆ ಸಾಕಷ್ಟು ಪುರಾವೆಗಳನ್ನೊದಗಿಸಬಹುದು. ಮಹಾಭಾರತ ಕಾಲದಲ್ಲಿ ಜಾತೀಯ ಕಟ್ಟುಪಾಡುಗಳು ಕಠಿನವಾಗಿರಲಿಲ್ಲ. ಪರಾಶರ ಮಹರ್ಷಿ ಬೆಸ್ತರ ಹುಡುಗಿಯೊಡನೆ ನೆರೆದು ವೇದವ್ಯಾಸನಂಥ ಮಗನನ್ನು ಪಡೆಯಬಹುದಿತ್ತು ; ವಿದುರ ದಾಸಿಯ ಮಗನಾದರೂ ಧೃತರಾಷ್ಟ್ರ ಪಾಂಡವರಂತೆಯೇ ಪುರಸ್ಕಾರಯೋಗ್ಯನಾಗಿದ್ದ ; ಯಾರಾದರೂ ಕ್ಷತ್ರಿಯನಾಗಬಹುದಿತ್ತೆನ್ನುವುದಕ್ಕೆ ಕರ್ಣನಿಗಿಂತ ಅನ್ಯ ಸಾಕ್ಷಿ ಬೇಕಿಲ್ಲ; ಭೀಮ ಹಿಡಿಂಬಿಯನ್ನು ಮದುವೆಯಾಗಿದ್ದ. ಕೆಲವು ಋಷಿಗಳಂತು ಅಂತ್ಯಜರಾಗಿದ್ದರು. ಬರಬರುತ್ತ ಒಂದು ಎರಡಾಗಿ, ಎರಡು ನಾಲ್ಕಾಗಿ, ನಾಲ್ಕು ಹದಿನಾರಾಗಿ, ಸಾವಿರಾರಾಗಿ ಕವಲುಕವಲಾಗಿ ಪ್ರತ್ಯೇಕಗೊಂಡು, ಆ ಪ್ರತ್ಯೇಕತೆ ಮರಗಟ್ಟಿಕೊಂಡು, ಪರಿಸ್ಥಿತಿ ಬಿಗಡಾಯಿಸಿದ್ದು ದುರ್ದೈವ. ಜಾತಿನಿರ್ಮೂಲಕ್ಕಾಗಿ ಸಿಂಹಾಸನವನ್ನೇ ತ್ಯಾಗಮಾಡಿದ ಬುದ್ಧ ಅಯಶಸ್ವಿಯಾದ; ಕುಲಗಳನ್ನೆಲ್ಲ ಒಟ್ಟುಗೂಡಿಸಬೇಕೆಂದು ಪ್ರಯತ್ನ ನಡೆಸಿದ ಬಸವೇಶ್ವರ ಹುತಾತ್ಮನಾದ ; ಕುಲಗಳ ಗೋಡೆಗಳನ್ನುರುಳಿಸುವ ಸಲುವಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಗಾಂಧೀಜಿ ಗುಂಡಿಗೆ ಬಲಿಯಾದರು. ಇಂದಿಗೂ ಜಾತೀಯತೆಯ ಬಲದ ಮೇಲೆ ಅಧಿಕಾರ ನಡೆಯುತ್ತಿದೆ.

---

[1] ಇಲ್ಲಿ ಜಾತಿ ಕುಲ ಪದಗಳನ್ನು ಸಮಾನಾರ್ಥಕವಾಗಿ ಬಳಸಿದೆ.

ಕರ್ನಾಟಕವೂ ಜಾತೀಯ ಮತೀಯ ಕಲಹಗಳ ರಣರಂಗವಾಗಿದೆಯೆನ್ನುವುದಕ್ಕೆ ನಮ್ಮ ಪ್ರಾಚೀನ ಮಹಾಕಾವ್ಯಗಳು ಸಾಕಷ್ಟು ಮಾಹಿತಿಯನ್ನೊದಗಿಸುತ್ತವೆ. ಪಂಪನಿಂದ ಪ್ರಾರಂಭವಾದ ಪಿಡುಗು ಬಸವೇಶ್ವರ ನಾರಣಪ್ಪ ಯುಗಗಳ ಮೂಲಕ ಕನಕದಾಸನ ಕಾಲದವರೆಗೆ, ಅಲ್ಲಿಂದ ಇಲ್ಲಿಯತನಕ ಬೇರು ಚಾಚಿದೆ. ಪಂಪನ ಹಿರಿಯರು ಮತಾಂತರ ಹೊಂದಿದವರು. ಜಾತಿಶನಿಯ ಬಗ್ಗೆ ಅವನಿಗೆ ಅಪಾರ ಆಕ್ರೋಶವಿದೆ. ಆ ಆಕ್ರೋಶ ಕರ್ಣನ ಜೀವನದಲ್ಲಿ ಆಸ್ಫೋಟಗೊಳ್ಳುತ್ತದೆ. ಕವಿಗೆ ಬಹುಪ್ರಿಯನಾದ ವ್ಯಕ್ತಿ ಕರ್ಣ. "ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮಂ, ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ" ಎಂಬಂತೆ ಕಾವ್ಯಸ್ತವನಕ್ಕೆ ಪಾತ್ರನಾದ ಕರ್ಣನ ದುರಂತಕ್ಕೆ ಕಾರಣ ಅವನ ಹುಟ್ಟು ಮತ್ತು ಜಾತಿಗಳು. ಅವನು ಹುಟ್ಟಿದ್ದು ಕ್ಷತ್ರಿಯನಾಗಿ, ಜಗಕ್ಕೆ ತಿಳಿಯುವಂತೆ ಬೆಳೆದದ್ದು ಬೆಸ್ತನಾಗಿ. ಅವನು ಬಾಯಿಬಿಟ್ಟರೆ ಸಾಕು, "ನಾಲಗೆ ಕುಲಮಂ ತುಬ್ಬುವವೊಲು ಐದೆ ನೀಂ ಕೆಡೆನುಡಿವ್ವೆ"[1] ಎಂದು ದ್ರೋಣನಂಥ ಮಹಾನುಭಾವರೇ ತಮ್ಮ ಗುರುಸ್ಥಾನವನ್ನೂ ಮರೆತು ಹೀಯಾಳಿಸುತ್ತಾರೆ. ಕುಲವ ನಾಲಗೆಯರುಹಿತು ಎಂಬ ಗಾದೆಗೆ ಕರ್ಣ ಕಥೆಯೇ ಮೂಲಸ್ಥಾನವಾಗಿದ್ದಿರಬಹುದು. ದ್ರೋಣ ಕೃಪರು ಕರ್ಣನ ಕುಲವನ್ನು ಎತ್ತಾಡಿದಾಗ ದುರ್ಯೋಧನ

> ಕುಲಮೆಂಬುದುಂಟೆ ಬೀರಮೆ। ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
> ಮೊಲಿದೆಲ್ಲಿ ಪುಟ್ಟಿ ಬಳೆದಿರೊ। ಕುಲಮಿರ್ದುದೆ ಕೊಡದೊಳಂ ಶರಸ್ತಂಭದೊಳಂ ॥[2]

ಎಂದು ಗರ್ಜಿಸಿ, ರಾಜ್ಯಾಭಿಷೇಕದ ಮೂಲಕ ಕ್ಷತ್ರಿಯ ಕುಲಕ್ಕೆ ಸೇರಿಸಿಕೊಳ್ಳುತ್ತಾನೆ. ಆದರೆ ಕುರುಪಾಂಡವರ ಕಡೆಯ ಜನ ಅವನು ಬದುಕಿರುವತನಕ ಅವನ ಕುಲಹಿಡಿದು ಹಂಗಿಸುವುದನ್ನು ಮಾತ್ರ ಬಿಡಲಿಲ್ಲ. ಮತ್ತೊಮ್ಮೆ ದ್ರೋಣ ತನ್ನನ್ನು ಭಂಗಿಸಿದಾಗ ಕರ್ಣ ತನ್ನ ಪರವಾಗಿ ತಾನೇ ವಕೀಲಿ ನಡೆಸಬೇಕಾಗುತ್ತದೆ. ಅವರ ಸವಾಲಿಗೆ, ಅವರ ಎತ್ತರಕ್ಕೆ ತಗುವಂತೆ, ಅವರು ತೋರಿಸಿದ ರೀತಿಯಲ್ಲಿಯೇ ಅವನು ಉತ್ತರನೀಡುತ್ತಾನೆ.

> ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
> ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
> ಕುಲಮಭಿಮಾನಮೊಂದೆ ಕುಲಮುಣ್ಮಕುಲಂ ಬಗೆವಾಗಳೀಗಳೀ
> ಕಲಹದೊಳಣ್ಣ ನಿಮ್ಮ ಕುಲಮಾಕುಲಮಂ ನಿಮಗುಂಟು ಮಾಡುಗುಂ ॥[3]

ಅವನ ಈ ಉತ್ತರದಿಂದ ಇತರರ ಬಾಯಿಕೊಬ್ಬು ತಕ್ಷಣವೇ ಕರಗಿ ಹೋಗುತ್ತದೆ. "ಕುಲ ಕುಲ ಕುಲವೆನ್ನುತಿಹರು ಕುಲವ್ಯಾವುದು ನಿತ್ಯಸುಖವುಳ್ಳ ಜನರಿಗೆ ?" ಎಂದು ಕನಕದಾಸ ಪ್ರಶ್ನಿಸುತ್ತಾನೆ. ಜಾತಿ ಕುಲಗಳ ಬಡಿದಾಟದಿಂದಾಗಿ, ಉತ್ತಮ ವರ್ಗದವರ ಕಿರುಕುಳದಿಂದಾಗಿ ಸಮಾಜ ದಿನೇ ದಿನೇ ದುರ್ಬಲವಾಗುತ್ತಿದ್ದುದನ್ನು, ಛಿದ್ರ ವಿಚ್ಛಿದ್ರವಾಗುತ್ತಿದ್ದುದನ್ನು, ವಿದೇಶೀಯ ಮತಗಳ ಪ್ರಭಾವಕ್ಕೊಳಗಾಗುತ್ತಿದ್ದುದನ್ನು ಬಸವಣ್ಣನವರು ಕಂಡು ಮರುಗುತ್ತಾರೆ; ಆ ರೋಗಕ್ಕೆ ಸರಿಯಾಗಿ ಮದ್ದರೆಯದಿದ್ದರೆ ಇಡೀ ದೇಶವೇ

---

1 ಪಂಪಭಾರತ ೧೦-೨೦ ; 2 ಅದೇ, ೨-೮೨ ; 3 ಪಂಪಭಾರತ ೧೦-೨೧.

ನಾಶವಾಗುತ್ತದೆಂಬ ಸತ್ಯಸಂಗತಿ ಆ ಪ್ರವಾದಿಗೆ ಹೊಳೆಯುತ್ತದೆ; ಅದನ್ನು ತಪ್ಪಿಸುವ ಸಲುವಾಗಿ 'ಉತ್ತಮ' ವರ್ಗದಲ್ಲಿ ಹುಟ್ಟಿದ ಪ್ರತಿಷ್ಠೆಯನ್ನು ಸಹ ತ್ಯಜಿಸಿ, ಪ್ರಾಣಾಪಾಯವನ್ನು ಸಹ ಲೆಕ್ಕಿಸದೆ, ನಾನಾ ರೀತಿಯಲ್ಲಿ ಕಲ್ಯಾಣವನ್ನು ಸಾಧಿಸಲು ಪ್ರಯತ್ನಿಸಿದ ಆ ಕ್ರಾಂತಿಪುರುಷ. ಸಾಮಾನ್ಯ ಜನತೆಯ ನಾಡಿಯನ್ನರಿತಿದ್ದು, ಆ ಮತಮುಕ್ತ ಸಮಾಜದ ಗೋಜನ್ನು ತೊರೆದು, ಜನರಿಗೆ ಬೇಕಾಗಿದ್ದ ಮತೀಯ ಮಾಧ್ಯಮದ ಮೂಲಕವೇ ಅವರಲ್ಲಿ ಜಾಗೃತಿ ಬೆಳೆಸಲು ಸನ್ನದ್ಧರಾದ ಮಹಾನುಭಾವರವರು. ಹಳೆಯ ಮತವನ್ನು ಪರಿಷ್ಕರಿಸಿ, ಹೊಸಮತವೆಂಬಷ್ಟು ಮಟ್ಟಿನ ಭಾವನೆಯನ್ನು ಬಲಿಯಿಸಿ, ಮತೀಯ ಕಲಹಗಳಿಂದ ನಾಡನ್ನು ಪಾರುಮಾಡಲು ಶ್ರಮಿಸುತ್ತಾರೆ. ನಾಡಿನ ಭೌತಿಕ ಪ್ರಗತಿಗೆ ಜಾತಿಮತರಹಿತ ಧಾರ್ಮಿಕ ವಾತಾವರಣದ ಹಿನ್ನೆಲೆ ಬೇಕೆಂಬುದನ್ನವರು ಸ್ಪಷ್ಟಪಡಿಸುತ್ತಾರೆ. ಜಾತಿಮತ ಕಲಹಗಳ ಅಗ್ನಿಕುಂಡಕ್ಕೆ ಅವರು ಆಹುತಿಯಾದರೂ, ಅವರ ಜೀವನ ಸಂದೇಶವೊಂದೇ ಭರತಖಂಡದ ಅಭ್ಯುದಯಕ್ಕೆ ತಾರಕಮಂತ್ರವೆಂದೂ, ಅಂದು ಅವರು ಪ್ರಾರಂಭಿಸಿದ ಸಾಹಸಯಾತ್ರೆ ಮತ್ತೂ ಮುಂದುವರಿಯುತ್ತಿದೆ, ಅದರ ಜಯವೇ ಭಾರತದ ಜಯ ಎನ್ನುವ ಅರ್ಥದಲ್ಲಿ ಅವರ ಸಂದೇಶದ ಸಾರ್ಥಕ್ಯವಿದೆಯೆಂದೂ ತಿಳಿಯಬಹುದಾಗಿದೆ. ಅಂಥ ಸಂದೇಶವನ್ನು ಮೊಟ್ಟಮೊದಲು ಭಾರತಕ್ಕೆ ವಿಶ್ವಕ್ಕೆ ನೀಡಿದ ಮಹಾಕೀರ್ತಿ ಸಂತ ಶ್ರೇಷ್ಠ ಕನ್ನಡದ ವಚನ ಗಾರುಡಿಗನಿಗೆ ಸಲ್ಲಬೇಕಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯಲೋಕದಲ್ಲಿ ಸಾಮಾನ್ಯಜನತೆಯ ಕಷ್ಟನಿಷ್ಠುರಗಳ ಬಗ್ಗೆ ಕಣ್ಣೀರು ಮಿಡಿಸಿದ, ಅವರ ಅಭ್ಯುದಯಕ್ಕಾಗಿ ಜಾತಿನಿರ್ಮೂಲನ ಕಾರ್ಯದಲ್ಲಿ ತೊಡಗಿದ. ಅವರಂತೆ ಸಾವಿರ ವರ್ಷಗಳಾಚೆಗಿನ ದೇಶಪರಿಸ್ಥಿತಿಯನ್ನು ಗುರುತಿಸಿದ, ಅವರಂತೆ ಯಾವುದೋ ವರ್ಗಕ್ಕೆ ಜಾತಿಗೆ ಸೀಮಿತವಾದ ಸಾಹಿತಿಯಾಗದೆ ಇಡೀ ನಾಡಿನ ಗೌರವಕ್ಕೆ ಪಾತ್ರರಾದ ಸಾಹಿತಿಗಳು ವಿರಳ. ಉಳಿದ ಕೆಲವು ಕವಿಗಳು ಜಾತೀಯತೆಯ ಗೂಡನ್ನು ಭೇದಿಸಿಕೊಂಡು ಹೊರಬರಲಾರದೆ ತಮ್ಮ ವ್ಯಕ್ತಿತ್ವಕ್ಕೆ ಊನ ತಂದುಕೊಂಡದ್ದುಂಟು.

ಕುಮಾರವ್ಯಾಸ ಬಸವಣ್ಣನ ಕಾರ್ಯಕ್ಷೇತ್ರದ ಪರಿಧಿಯೊಳಗೆ, ಅವನು ಬಾಳಿದ ಕಾಲಕ್ಕೆ ಅನತಿದೂರದಲ್ಲಿಯೇ ಜೀವಿಸಿದ್ದ, ಅದ್ವಿತೀಯ ವರ್ಚಸ್ಸಿನ ಮಹಾಕವಿ. ಪ್ರಾಯಶಃ ಅವನ ಕಾಲಕ್ಕೆ ಬಸವಣ್ಣನ ಜಾಜ್ವಲ್ಯಮಾನವಾದ ವ್ಯಕ್ತಿತ್ವ ಪ್ರವಾಹದ ಮಹಾದೀಪ್ತಿ ಎಂದಿನಂತೆ ಕಾಂತಿಯುತವಾಗಿ ರಾರಾಜಿಸುತ್ತಿದ್ದಿರಬೇಕು. ಆ ಮುಂದಿನ ಕೆಲವು ಶತಮಾನಗಳ ತನಕ ಯಾವ ಕವಿಯೂ ಬಸವಯುಗದ ಪ್ರಭಾವದಿಂದ ಪಾರಾಗುವಂತಿರಲಿಲ್ಲ. ಕುಮಾರವ್ಯಾಸ ಈ ನಿಯಮಕ್ಕಪವಾದವೇನಲ್ಲ. ಚಾಮರಸ ಕುಮಾರವ್ಯಾಸರ ನೆಂಟಸ್ತಿಕೆ ಕಟ್ಟುಕತೆಯಾಗಿದ್ದಿರಲಾರದು. ಅವನು ವೀರಶೈವ ಮತದೊಂದಿಗೆ ನಿಕಟಸಂಪರ್ಕವನ್ನಿಟ್ಟುಕೊಂಡಿರಬೇಕೆಂದೂ, ಅವನ ಹತ್ತಿರದ ನೆಂಟರು ವೀರಶೈವರಾಗಿದ್ದಿರಬೇಕೆಂದೂ, ಆದ್ದರಿಂದ ತಾನು ಬ್ರಾಹ್ಮಣನಾದರೂ ವೀರಶೈವಮತವನ್ನು ತೆಗಳುವ ಸಾಹಸಕ್ಕೆ ತೊಡಗಲಿಲ್ಲವೆಂದು ಊಹಿಸಬಹುದಾಗಿದೆ. ಗದುಗಿನ ಭಾರತದಲ್ಲಿ ಅಲ್ಲಲ್ಲೆ ಬರುವ ಜಾತಿ ಸಾಂಕರ್ಯದ ಮಾತುಗಳು ಬಸವಯುಗದ ಪ್ರಭಾವವನ್ನೂ, ಸಮಕಾಲೀನ ಸಾಮಾಜಿಕ ಪರಿಸ್ಥಿತಿ

ಯನ್ನೂ ಪರೋಕ್ಷವಾಗಿ ಸೂಚಿಸುತ್ತವೆಂದು ಭಾವಿಸಬಹುದಾಗಿದೆ. ಕುಮಾರವ್ಯಾಸ ಯೋಗೀಂದ್ರ ಲೌಕಿಕ ವ್ಯವಹಾರಗಳಿಂದ ತುಸುದೂರ ಸರಿದು ನಿಂತವನು; ಸಾಕ್ಷೀಪ್ರಜ್ಞೆಯಿಂದ ಸಮಾಜವನ್ನು ಕಂಡವನು; ಸಾಮಾನ್ಯ ಜನತೆಯ ಕ್ಷೇಮದಲ್ಲಿ ವಿಶ್ವಾಸವುಳ್ಳವನು. ಆದ್ದರಿಂದಲೇ ಅವನು ಕಲಿಯುವವರಿಗೂ ಕಾಮಧೇನುವಾದದ್ದು. ಪ್ರಾಮಾಣಿಕವಾಗಿ ಸರ್ವಮತ ಧರ್ಮಸಮನ್ವಯವನ್ನು ಸಾಧಿಸಲು ತೊಡಗಿದ ಮಹಾತತ್ವಜ್ಞಾನಿ, ದಾರ್ಶನಿಕ. ಅಂದಿನ ಭಕ್ತಿಪ್ರವಾಹದಲ್ಲಿ ಮುಳುಗಿ ತೇಲಿ, ತೇಲಿ ಮುಳುಗಿದ ಮಹಾಭಕ್ತ; ಆದರೂ ಅವನು ಬ್ರಾಹ್ಮಣಜಾತಿಯಲ್ಲಿ ಹುಟ್ಟಿದ್ದರಿಂದಲೋ, ಸಂಪ್ರದಾಯದ ಕಟ್ಟುಪಾಡುಗಳಿಂದ ಪಾರಾಗಲಾರದ ಕಷ್ಟದಿಂದಲೋ, ಬಸವಣ್ಣನ ಜಾತಿನಿರ್ಮೂಲನ ಯೋಜನೆಗಳು ಅವನ ಅಥವಾ ಜನತೆಯ ಮನಸ್ಸಿನಲ್ಲಿ ಹಸುರಾಗಿದ್ದುದರಿಂದಲೋ, ತನ್ನ ವರ್ಗದ ಜನರ ಮೆಚ್ಚುಗೆಯನ್ನು ಸಂಪಾದಿಸುವ ಭ್ರಮೆಯಿಂದಲೋ ಅಥವಾ ಸಮಕಾಲೀನ ಸಮಾಜವನ್ನು ಯಥಾವತ್ತಾಗಿ ಚಿತ್ರಿಸುವ ಪ್ರಾಮಾಣಿಕ ಪ್ರಜ್ಞೆಯಿಂದಲೋ, ಹೆಜ್ಜೆಹೆಜ್ಜೆಗೂ ಬ್ರಾಹ್ಮಣ ಜಾತಿಯ ಶ್ರೇಷ್ಠತೆಯನ್ನೂ, ಇತರ ಕುಲಗಳ ಕನಿಷ್ಠತೆಯನ್ನೂ ಜಾತಿ ಸಾಂಕರ್ಯದ ಹಾನಿಕಾರಕ ಪರಿಣಾಮಗಳನ್ನೂ, ವರ್ಣಾಶ್ರಮಧರ್ಮವರ್ಜನದ ಮಹಾಪಾತಕತೆಯನ್ನೂ ಪದರ ಪದರವಾಗಿ ನಿರೂಪಿಸಿದ್ದಾನೆ. ಭರತಖಂಡದಲ್ಲಿ ಜಾತೀಯತೆಯ ಸಾಂಕ್ರಾಮಿಕತೆ, ಕುಲದ ಹಮ್ಮು ಮತ್ತು ಇದೇ ತೆರನ ಲೌಕಿಕ ಭ್ರಾಂತಿಗಳಿಂದ ಸಾಧುಸಂತರೂ ಪೂರ್ಣವಾಗಿ ನಿರ್ಮುಕ್ತರಾಗಿಲ್ಲವೆನ್ನುವುದಕ್ಕೆ ನಾರಣಪ್ಪನೂ ಸಾಕ್ಷಿಯಾಗಿದ್ದಾನೆ. ಒಂದು ಕಡೆ ದರ್ಶನಸಮನ್ವಯವನ್ನು ಸಾಧಿಸುತ್ತ, ಮತ್ತೊಂದು ಕಡೆ ಜಾತೀಯತೆಯ ಧೃತರಾಷ್ಟ್ರ ಮುಷ್ಟಿಯಿಂದ ಪಾರಾಗಲಾರದೆ ಒಂದು ರೀತಿಯ ದ್ವಿಮುಖ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾನೆಂಬ ಶಂಕೆಗೆ ತಕ್ಕಮಟ್ಟಿನ ಕಾರಣವಿರುವುದಾದರೂ, ಆ ಬಗೆಗಿದ್ದ ಅವನ ಮಾನಸಿಕ ಹೋರಾಟವನ್ನು ಸಹ ಮರೆಯುವಂತಿಲ್ಲ. ನಡೆನುಡಿಗಳ ಹೊಂದಾಣಿಕೆಯನ್ನು ಆಶ್ಚರ್ಯಕರವಾಗಿ ಸಾಧಿಸಿದ ಬಸವಣ್ಣನಂಥ ಒಬ್ಬಿಬ್ಬರನ್ನು ಬಿಟ್ಟರೆ ಉಳಿದ ಸಾಹಿತಿಗಳೆಲ್ಲ ದ್ವಿಮುಖವೇಕೆ ಬಹುಮುಖ ವ್ಯಕ್ತಿತ್ವವುಳ್ಳವರೇ. ಅದು ಅಸಹಜವೇನಲ್ಲ. ಅದಿರಲಿ, ನಾರಣಪ್ಪನ ಮನಸ್ಸಿನ ತೊಳಲಾಟಕ್ಕೆ ಕೆಲವಾದರೂ ನಿದರ್ಶನಗಳನ್ನು ತೋರಿಸಬಹುದು.

ಎಲ್ಲಿಹುದು ಋಣಭಯವು ಮನುಜರೊಳಲ್ಲಿಹುದು ದೇವಾಂಶ ನಿಜವಾ
ಗೆಲ್ಲಿಹುದು ಸನ್ಮಾರ್ಗ ಬಳಿಕಲ್ಲಿಹುದು ಬ್ರಾಹ್ಮಣ್ಯ
ಎಲ್ಲಿಹುದು ಪರಸತಿಯರಂಜಿಕೆಯಲ್ಲಿಹುದು ವಿಜ್ಞಾನವಿದಸರಿ
ದಲ್ಲದಿಹಪರವಿಲ್ಲ ಚಿತ್ತೈಸೆಂದನಾ ವಿದುರ[1]

ಸತ್ಯವೇ ಸ್ವಾಧ್ಯಾಯ ಸತ್ಯವೆ ನಿತ್ಯಕರ್ಮ ವಿಧಾನವೊಂದೇ
ಸತ್ಯವೇ ಜಪ ಹೋಮ ಯಜ್ಞ ವಿಧಾನ ದಾನ ತಪ
ಸತ್ಯವುಳ್ಳೊಡೆ ಶೂದ್ರನವನಿಂದತ್ಯಧಿಕನಾ ದ್ವಿಜರೊಳಗೆ ವರ
ಸತ್ಯಹೀನನೆ ಹೀನ ಜಾತಿಗನೆಂದನಾ ಭೂಪ[2]

---

1 ಉ ೩-೩೦; 2 ಅ ೧೩-೫೩

ಮೊದಲನೆಯ ಪದ್ಯದಲ್ಲಿ ಬ್ರಾಹ್ಮಣ್ಯ ಜನ್ಮದಿಂದ ಬರುವಂಥದಲ್ಲ, ಕರ್ಮದಿಂದ ಮತ್ತು ಗುಣದಿಂದ ಲಭಿಸುವಂಥದು ಎಂಬ ಅರ್ಥ ಹೊರಹೊಮ್ಮುತ್ತದೆ. “ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ” ಎಂಬ ಗೀತಾವಾಕ್ಯಕ್ಕೆ ಭಾಷ್ಯದಂತಿದೆ. ರಾಘವಾಂಕನೇ ರಚಿಸಿರಬಹುದೆಂಬ ಭ್ರಮೆ ಹುಟ್ಟಿಸುವ ಎರಡನೆಯ ಪದ್ಯದಲ್ಲಿ ಶೂದ್ರ ವಿಪ್ರರು ಬೇರೆ ಬೇರೆ ಎಂಬ ಭಾವನೆಯಿದ್ದರೂ, ಸತ್ಯವಂತನಾದ ಶೂದ್ರ ದ್ವಿಜನಿಗಿಂತ ಮೇಲೆಂಬ ತಿಳಿವಳಿಕೆಯಿದೆ. “ಕುಲಜನಾಗಲಕುಲಜನಾಗಲಿ ಜಲರುಹಾಕ್ಷನ ನಾಮ ಕೀರ್ತನದೊಳಗೆ ಬದುಕುವನಾವನಾತನೆ ಸುಕೃತಿಯೆಂಬುವನು”[1] ಎಂದು ಕೆಲವು ರಿಯಾಯಿತಿಗಳನ್ನು ತೋರಿರುವುದೂ ಉಂಟು. ಮೊದಲಿಂದ ಕೊನೆಯತನಕ ಶೂದ್ರ ವಿಪ್ರರ ಸಂಬಂಧವನ್ನು ಇಷ್ಟರಮಟ್ಟಿಗಾದರೂ ವಿವರಿಸಿದ್ದರೆ ಯಾವ ಜಿಜ್ಞಾಸೆಗೂ ಅವಕಾಶವಿರುತ್ತಿರಲಿಲ್ಲ. ವಿಪ್ರ ದ್ವಿಜ ಬ್ರಾಹ್ಮಣ ಮುಂತಾದ ಪದಗಳು ಬಂದಾಗಲೆಲ್ಲ ಅವನ್ನು ವಿಶಾಲಾರ್ಥದಲ್ಲಿಯೆ ತಿಳಿದುಕೊಳ್ಳಬಹುದಿತ್ತು. ಆದರೆ ವಸ್ತುಸ್ಥಿತಿಯೇ ಬೇರೆಂಬ ಸಂಗತಿ ಮುಂದೆ ಉದ್ಧರಿಸಲಿರುವ ಪಂಕ್ತಿಗಳಿಂದ ವೇದ್ಯವಾಗುತ್ತದೆ.

ಕುಲದ ವಿಷಯ ಮೂಲಭಾರತದಲ್ಲಿಯೇ ಬರುತ್ತದೆ, ನಿಜ. ಮತ್ಸ್ಯಗಂಧಿಯ ಹೊಟ್ಟೆಯಲ್ಲಿ ಹುಟ್ಟಿದ ವ್ಯಾಸನಂಥ ವ್ಯಕ್ತಿ ಕುಲದ ಮೇಲುಕೀಳುಗಳನ್ನು ಬಹು ಉತ್ಪ್ರೇಕ್ಷೆಮಾಡಿ ಹೇಳಿರಲಾರ. ಭಾರತದ ಮೂಲೆ ಮೂಲೆಯ ಜನ ಆ ಸಂಬಂಧವಾದ ಪದ್ಯಗಳನ್ನು ರಚಿಸಿ, ವ್ಯಾಸನ ಹೆಸರಿಗೆ ಜಮಾ ಮಾಡಿದ್ದಿರಬಹುದು. ಕುಮಾರವ್ಯಾಸ ಮೂಲಕ್ಕಿಂತ ಒಂದು ಕೈ ಮೇಲೆನ್ನುವಂತೆ, ಈ ವಿಷಯವನ್ನು ನಾನಾ ಭಂಗಿಗಳಿಂದ ವಿವರಿಸಿರುವಂತೆ ತೋರುತ್ತದೆ. ಜಾತಿಮಾತ್ಸರ್ಯದ ಕೊಳಕುಮಂಡಲದ ವಿಷ ಇಡೀ ಸಮಾಜಜೀವನವನ್ನು ವ್ಯಾಪಿಸಿದಂತಿದೆ. ಜಾತಿ ಯಾವುದಾದರೂ ಆಗಲಿ, ಯುದ್ಧ ಮಾಡಬಲ್ಲವನೇ ಕ್ಷತ್ರಿಯನೆಂದು ಕರೆಸಿಕೊಳ್ಳುತ್ತಿದ್ದನೆನ್ನುವುದಕ್ಕೆ ಕರ್ನಾಟಕವನ್ನಾಳಿದ ರಾಜವಂಶಗಳ ಮೂಲಪುರುಷರೇ ನಿದರ್ಶನರಾಗಿದ್ದಾರೆ. ಅದೊಂದು ವೃತ್ತಿಸೂಚಕವಾದ ಹೆಸರಿರಬೇಕು. ಯಾರನ್ನಾದರೂ ಆ ಕುಲಕ್ಕೆ ಸೇರಿಸಿಕೊಳ್ಳಬಹುದಿತ್ತೆನ್ನುವುದಕ್ಕೆ ಕರ್ಣನೇ ಸಾಕ್ಷಿ. ಅನುಲೋಮ ವಿವಾಹ ಶಾಸ್ತ್ರೋಕ್ತವೆಂದು ಗಣನೆಗೊಂಡು, ಬ್ರಾಹ್ಮಣರು ದ್ರೌಪದಿಯಂಥ ಕ್ಷತ್ರಿಯ ಕನ್ನೆಯನ್ನು ಮದುವೆಯಾಗಬಹುದಿತ್ತು; ಕ್ಷತ್ರಿಯರು ಬ್ರಾಹ್ಮಣಕನ್ನೆಯನ್ನು ಲಗ್ನವಾಗುವಂತಿರಲಿಲ್ಲ. ಕ್ಷತ್ರಿಯಕುಲದಲ್ಲಿ ಹುಟ್ಟಿದ ಧರ್ಮರಾಯ, ಗೊಲ್ಲರ ಹಟ್ಟಿಯಲ್ಲಿ ಹುಟ್ಟಿದ ಕೃಷ್ಣ, ದಾಸಿಯ ಹೊಟ್ಟೆಯಲ್ಲಿ ಜನಿಸಿದ ವಿದುರ ಮೊದಲಾದ ಬ್ರಾಹ್ಮಣೇತರರು ಇಲ್ಲಿ ಅನನ್ಯಭಕ್ತಿಯಿಂದ ಬ್ರಾಹ್ಮಣರನ್ನು ಪೂಜಿಸುವಂತೆ ನಿರೂಪಿಸಲಾಗಿದೆ. ಜಾತಿ ಧರ್ಮವನ್ನು ಬಿಡಕೂಡದೆಂದೂ, ಇದ್ದಲ್ಲಿಯೇ ಮುಕ್ತಿ ಸಂಪಾದನೆ ಸಾಧ್ಯವೆಂದೂ ಮನವರಿಕೆ ಮಾಡಿಕೊಡಲು ಧರ್ಮವ್ಯಾಧನ ಕಥೆ ಬಂದಿದೆ. ಅವನು ವಿಪ್ರನೊಂದಿಗೆ “ನಿಜಾನ್ವಯ ಧರ್ಮ ಕರ್ಮ ಚ್ಯುತಿಗಳಿವು ದೋಷಾಂಕುರಗಳು”[2] ಎಂದೂ, “ಎಮ್ಮಯ ಜಾತಿ ಧರ್ಮವು ಮಾಂಸ

---

[1] ಉ ೩-೧೨೩ ; [2] ಅ ೧೫-೧೪

ವಿಕ್ರಯ ಮೃಗವಧಾದಿಗಳು....ವಿಜಾತಿ ಧರ್ಮಗ್ರಹಣವೇ ವಿಖ್ಯಾತ ಕುಂಭೀಪಾಕ ಸಾಧನ"[1] ಎಂದೂ, "ನೀವು ಜಾತಿಯೊಳಧಿಕತರದಿಂದಾವು ಜಾತಿವಿಹೀನರಾಗಿಯೆ ಭಾವ ಶುದ್ಧಿಯಲೀ ಸ್ವಧರ್ಮಾಚಾರ ಮಾರ್ಗದಲಿ ಆವುದೂಣೆಯುವಿಲ್ಲ, ಈ ದ್ವಿಜದೇವಗುರು ಪರಿಚರ್ಯದಲಿ ಸಂಭಾವಿತರು ನಾವಾದೆವು,ಎಮ್ಮನುನೋಡಿ ನಡೆ"[2] ಎಂದು ಬ್ರಾಹ್ಮಣ್ಯದ ಶ್ರೇಷ್ಠತೆಯನ್ನೂ ಕುಲಾಚಾರದ ಮರ್ಯಾದೆಯನ್ನೂ ಪ್ರಶಂಸಿಸುತ್ತಾನೆ. ಪ್ರತಿಯೊಬ್ಬರೂ ತಂತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಪಾಲಿಸಬೇಕಾದ್ದು ಧರ್ಮ; ಹಾಗೆ ಪಾಲಿಸ ದಿದ್ದರೆ ಸಮಾಜಾಭ್ಯುದಯ ಸಾಧ್ಯವಾಗುವುದಿಲ್ಲ; ಅಲ್ಲಿಅನಾಯಕತ್ವ ತಾಂಡವವಾಡು ತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಒಂದು ವೃತ್ತಿಯಲ್ಲಿ ತೊಡಗಿದವನು ಮೇಲು ಮತ್ತೊಂದು ವೃತ್ತಿಯನ್ನು ಹಿಡಿದವನು ಕೀಳು ಎನ್ನುವ ಭ್ರಮೆ ಮಾತ್ರ ಅಪಾಯಕಾರಿ. ಇಂಥ ತಾರತಮ್ಯ ಮನೋಭಾವವೇ ಭರತಖಂಡದ ಅವನತಿಗೆ ಕಾರಣವಾಯಿತೆನ್ನು ವುದನ್ನು ಮರೆಯುವಂತಿಲ್ಲ. ವನವಾಸಕಾಲದಲ್ಲಿ ಧರ್ಮರಾಯ ತಮ್ಮಂದಿರು ಮಡದಿ ಮತ್ತು ಮುನಿಜನರೊಡನೆ ಅರಣ್ಯದಿಂದ ಅರಣ್ಯಕ್ಕೆ ಹೋಗುತ್ತಿದ್ದುದು ಸರಿಯಷ್ಟೆ. ಮಳೆಗಾಲದಲ್ಲೊಮ್ಮೆ ನಡಿಗೆ ಕಷ್ಟವಾದ್ದರಿಂದ, ಧರ್ಮರಾಯ ಘಟೋತ್ಕಚನನ್ನು ನೆನೆದು, ಬರಿಸಿ, ಅವನ ಸಹಾಯವನ್ನಪೇಕ್ಷಿಸುತ್ತಾನೆ. ಘಟೋತ್ಕಚ ತನ್ನ ಪರಿವಾರದ ನೆರವಿ ನಿಂದ ಅವರೆಲ್ಲರನ್ನು ಹೊತ್ತು ಮುಂದಿನ ಕಾಡಿಗೆ ಸಾಗಿಸುತ್ತಾನೆ. ಆಗ ರೋಮಶ ಮಹರ್ಷಿ "ಅಸುರಸ್ಪರ್ಶವಸಮಂಜಸವಲಾ"[3] ಎಂದು ಗಗನೇಚರನಾಗಿ, ಅಸ್ಪೃಶ್ಯ ತೆಯ ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾನೆ. "ಸರ್ವಂ ಖಲ್ವಿದಂ ಬ್ರಹ್ಮಂ" "ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ! ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ" ಎಂದು ಇತರರಿಗೆ ಬೋಧಿಸುವ ಋಷಿಗಳ ಚರ್ಯೆ ವಿರೋಧಾಭಾಸದ ವಿಷ ವರ್ತುಲದಂತೆ ತೋರುತ್ತದೆ.

ಜಾತಿಕಲಹ ತಕ್ಕಮಟ್ಟಿಗೆ ಕುರುಕ್ಷೇತ್ರ ಯುದ್ಧಕ್ಕೂ, ಬಹುಮಟ್ಟಿಗೆ ಕೌರವಪಕ್ಷ ವಿನಾಶಕ್ಕೂ ಕಾರಣವಾಗುತ್ತದೆ. ಧನುರ್ವಿದ್ಯಾ ಪರೀಕ್ಷೆಯ ಸಮಯದಲ್ಲಿ ಕೃಪಾಚಾರ್ಯ ಕರ್ಣನ ಯೋಗ್ಯತೆಯನ್ನು ಪ್ರಶ್ನಿಸುತ್ತಾನೆ; ಭೀಮ ಅವನ ಕುಲವೆತ್ತಿ ಭಂಗಿಸುತ್ತಾನೆ; ಕೌರವ ಪಾಂಡವರ ಪಿತೃಗಳಾರೆಂದು ಸವಾಲೆಸೆಯುತ್ತಾನೆ. ಕುರುಕ್ಷೇತ್ರಕ್ಕೆ ಆಗಲೇ ಗುದ್ದಲಿಪೂಜೆ ಸಮೆದು, ಕಿಡಿಯಿಟ್ಟಂತಾಗುತ್ತದೆ. ಮುಂದೆ ಆ ಕಿಡಿಯೇ ಕಾಳ್ಗಿಚ್ಚಾಗು ತ್ತದೆ. ಯುದ್ಧ ಶುರುವಾದ ಮೇಲಂತು ಬ್ರಾಹ್ಮಣ ಕ್ಷತ್ರಿಯರ ನಡುವಣ ಕಲಹ ದುರ್ಯೋಧನನ ಪತನಕ್ಕೆ ಮೂಲವಾಗುತ್ತದೆ. ಒಂದು ಕಡೆ ದ್ರೋಣ ಮತ್ತು ಅವನ ನೆಂಟರಿಷ್ಟರು, ಮತ್ತೊಂದು ಕಡೆ ದ್ರುಪದ ಕರ್ಣ ಮೊದಲಾದವರು. ಈ ಬ್ರಹ್ಮಕ್ಷತ್ರಿಯರ ವಿರಸವೂ ಭಾರತಯುದ್ಧಕ್ಕೆ ಹಾಕಿದ ತಳಪಾಯಗಳಲ್ಲೊಂದು. ದ್ರುಪದ ತನ್ನನ್ನು ಬಯ್ದನೆಂದು ದ್ರೋಣ ಅರ್ಜುನನನ್ನು ತಯಾರಿಸಿ, ದ್ರುಪದನ ಮೇಲೆ ಛೂಬಿಡುತ್ತಾನೆ.

---

1 ಅ ೧೫-೧೩ ; 2 ಅ ೧೫-೧೭ ; 3 ಅ ೯-೩೮

ತಾನೇ ನೇರವಾಗಿ ಯುದ್ಧ ಮಾಡದೆ, ಛೂಬಿಡುವುದೇ ಅವನ ಸ್ವಭಾವವಾಗಿದ್ದಂತೆ ಕಾಣುತ್ತದೆ. ಅದಕ್ಕೆ ಕಾರಣವೂ ಉಂಟು. ಅವನಲ್ಲಿ ಸೈನ್ಯವಿಲ್ಲ, ಬಾಣ ಬತ್ತಳಿಕೆಗಳಿಲ್ಲ. ದ್ರುಪದ ರಾಜನಾದ್ದರಿಂದ ಅವನ ಬಳಿ ದೊಡ್ಡ ಪಡೆಯೇ ಇತ್ತು. ಆದ್ದರಿಂದ ಬೇರೆ ಕ್ಷತ್ರಿಯರ ನೆರವು ಪಡೆದೇ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಬೇಕಾಗಿತ್ತು. ಅವಮಾನಿತನಾದ ದ್ರುಪದ ಸಹಜವಾಗಿಯೇ ದ್ರೋಣನ ಮೇಲೆ ಸೇಡು ಮಸೆಯುತ್ತಾನೆ. ಆ ಸೇಡಿನ ಫಲವಾಗಿ ಹುಟ್ಟಿದವರು ಧೃಷ್ಟದ್ಯುಮ್ನ ದ್ರೌಪದಿಯರು. ಪಾಂಡವಪಕ್ಷದಲ್ಲಿ ದುರ್ಯೋಧನನ ಛಲಕ್ಕೆ ಸರಿಗಟ್ಟುವವಳು ದ್ರೌಪದಿಯೊಬ್ಬಳೇ. ಪರಶುರಾಮ ಕ್ಷತ್ರಿಯರಿಗೆ ವಿದ್ಯೆ ಕಲಿಸುವುದಿಲ್ಲವೆಂದು ಶಪಥ ಮಾಡುತ್ತಾನೆ. ಇನ್ನೂ ಕರ್ಣ ಕ್ಷತ್ರಿಯನಾಗದಿದ್ದ ಕಾಲವದು. ಆದರೂ ಅವನು ಪರಶುರಾಮನ ಶಾಪಕ್ಕೆ ಗುರಿಯಾದ.

ದ್ರೌಪದೀಸ್ವಯಂವರ ಸಮಯದಲ್ಲಂತು ಬ್ರಾಹ್ಮಣ ಕ್ಷತ್ರಿಯರ ಮಸೆದಾಟ ತುಸು ಹದ್ದು ಮೀರುತ್ತದೆಂದೇ ಹೇಳಬೇಕು. ವಿಪ್ರವೇಷದಲ್ಲಿದ್ದ ಅರ್ಜುನ ಮತ್ಸ್ಯಯಂತ್ರವನ್ನೆತ್ತುವ ಸಲುವಾಗಿ ಮೇಲೆದ್ದಾಗ "ಏನು ಸಿದ್ಧಿಯುಪಾಧ್ಯರಿದ್ದಿರಿ? ಇದೇನು ಧನುವಿಂಗಲ್ಲಲೇ?[1] ಎಂದು ಬಳಿಯ ವಟುಗಳು ಹಾಸ್ಯ ಮಾಡುತ್ತಾರೆ. "ಕ್ಷತ್ರಿಯರನಾಕ್ರಮಿಸುವುದು ಸದ್ಧರ್ಮವೇ. ಉಬ್ಭ್ರಮಿತನಿವನೆರೆ ಹಳಿವ ತಹನೀಶ್ರೋತ್ರಿಯರ ಸಭೆಗೆ"[2] ಎಂದು ವಿಪ್ರರೇ ಅಪಹಾಸ್ಯ ಮಾಡುತ್ತಾರೆ. "ಧನುತನಗೆ ನೆಗಹಲ್ಕೆ ಕೃಷ್ಣಾಜಿನವೊ ಸಾಲಿಗ್ರಾಮದೇವರೊ....ಬಣಗು ವಿಪ್ರನ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ" ಎಂದು ಪೊರೆಗಳು ವಿಡಂಬಿಸಿದರೆ, "ಇತ್ತನೋಡಾ ತಾಯೆ ಹಾರುವರತ್ತ ಗಡ್ಡದುಪಾಧ್ಯರನು ತಾವೆತ್ತುವರು ಗಡ ಧನುವನೆಸುವರು ಗಡ ತಿಮಿಂಗಿಲನ"[3] "ನಳಿನಮುಖಿಯನು ವರಿಸು ಬಾ..ತಲೆವಿಡಿವೆವಾಪ್ನೋಡು"[4] ಎಂದು ತರುಣಿಯರು ಗಹಗಹಿಸುತ್ತಾರೆ. ಅರ್ಜುನ ಯಂತ್ರವನ್ನು ಭೇದಿಸಿದನಂತರ "ನಮ್ಮರಸಿ ನೆರೆ ಹಾರುವತಿ" ಎಂದು ಚಪಲೆಯರು ಚಪ್ಪಳೆಯಿಕ್ಕಿದರೆ, "ನಳಿನಮುಖಿ ಹಾಯ್ಕಿದಳು ಗಡ ತಿರುಕುಳಿಯ ಕೊರಳಲಿ ದಂಡೆಯನು"[5] "ಭಂಡರೋ ನೀವ್ ನೆರೆದ ಧರಣೀ ಮಂಡಲೇಶ್ವರರಕಟ ನಿಮ್ಮಯ ಹೆಂಡಿರನು ಬಳುವಳಿಯ ಕೊಡಿ ಹಾರುವನ ಹೆಂಡತಿಗೆ"[6] ಎಂದು ಕ್ಷತ್ರಿಯರು ಹಾರಾಡುತ್ತಾರೆ. ಇಲ್ಲಿಯ ಹಾಸ್ಯ ಲಹರಿಯ ತಳಗಡೆ ಜಾತಿಮಾತ್ಸರ್ಯವಿದೆಯೆಂಬುದನ್ನು ಗಮನಿಸಬಹುದು.

ಕೌರವನ ಸೈನ್ಯದಲ್ಲಂತು ಕರ್ಣ ಕಾರಣವಾಗಿ ಯಾವಾಗಲೂ ಅಂತಃಕಲಹವೇ. ಕರ್ಣನೂ ಕುಂತಿಯ ಮಗನಲ್ಲವೆ? ಅವನು ತೀಟೆಯಲ್ಲಿ ದ್ರೋಣಾಶ್ವತ್ಥಾಮರಿಗೇನೂ ಕಡಮೆಯಿಲ್ಲ. ಅವರು ಸಮಯ ಸಿಕ್ಕಿದಾಗಲೆಲ್ಲ ಕರ್ಣನನ್ನು ಹಂಗಿಸುವ ರೀತಿಯಲ್ಲಿ ಅರ್ಜುನನನ್ನು ಹೊಗಳುತ್ತಾರೆ. ಆಗ ಸ್ವಾಮಿಕಾರ್ಯನಿಷ್ಠನಾದ ಕರ್ಣನಿಗೆ ಸಿಟ್ಟು ಬರದಿರುತ್ತದೆಯೆ? "ಬಲವ ಬೆದರಿಸಿ ಹಗೆಯ ಭುಜದಗ್ಗಳಿಕೆಯನೆ ಕೊಂಡಾಡಿ ಸ್ವಾಮಿಯ ನಿಳಿಕೆಗಾಬಿರಿ ನಿಮ್ಮ ಪೈಕಕೆ ಖುಲ್ಲತನ ಸಹಜ"[7] ಎಂದು ಗರ್ಜಿಸುತ್ತಾನೆ. "ಮರುಳು

1 ಆ ೧೫.೧೦ ; 2 ಆ ೧೫-೧೩ ; 3 ಆ ೧೫-೨೦ ; 4 ಆ ೧೫-೨೧ ; 5 ಆ ೧೫-೩೯ ; 6 ಆ ೧೫-೪೦ ; 7 ವಿ ೭-೫

ಹಾರುವ ಗದ್ಯಪದ್ಯದ ಸರಸವಿದ್ಯೆಗಳಲ್ಲವೀ ಸಂಗರದ ಕರ್ಕಶವಿದ್ಯೆ"[1] ಎಂದು ಜರಿಯುತ್ತಾನೆ. ದ್ರೋಣ ಕವಿಯಾಗಿದ್ದಂತೆ ತೋರದು. ಪ್ರಾಯಶಃ ಯಾರೋ ನಾರಣಪ್ಪನನ್ನು ಹೀಗೆ ಆಡಿಕೊಂಡಿರಬೇಕೇನೊ? ಮುಂದಿನ ಪದ್ಯಗಳಲ್ಲಿಯೂ ಅವನನ್ನೇ ಚಿತ್ರಿಸಿದಂತಿದೆ. ತನ್ನ ಬಗ್ಗೆ ಅವರಿವರು ಆಡಿಕೊಂಡದ್ದನ್ನು ಕರ್ಣನ ಬಾಯಲ್ಲಿ ನುಡಿಸಿ ನಕ್ಕಿರಬೇಕು.

ಹಣೆಗೆ ಮುಟ್ಟಿಯ ಬಡಿವು ದರ್ಭೆಯ। ಹಣಿದು ಬೆರಳಲಿ ಸೆಕ್ಕಿಘೋತ್ರದ
ದಣಿಬವನು ನಿರಿವಿಡಿದು ಮುಹಳದ ಮನೆಯ ಚೌಕದಲಿ
ಮಣೆಗೆ ಮಂಡಿಸಿ ಕುಳ್ಳಿತುಂಬಾ। ತಣದ ವಿಪ್ರವ ಬಲ್ಲಿರಲ್ಲದೆ
ರಣವಿಚಾರದ ವಿದ್ಯೆ ನಿಮಗೇಕೆಂದನಾ ಕರ್ಣ

ಇಂದು ಪಿತೃದಿನವಿಂದು ಸಂಕ್ರಮ। ಣಿಂದು ಸೂರ್ಯಗ್ರಹಣ ಹರಿದಿನ
ವಿಂದು ಯಜ್ಞಾರಂಭ ದಿನ ವಡ್ಡಂತಿ ಲೇಸೆಂದು
ಬಂದು ನಾನಾ ಮುಖದ ದಾನಕೆ। ತಂದ ವಸ್ತುವ ಬಾಚಿ ಹೊಳ್ಳಿಸಿ
ತಿಂದು ಕೊಬ್ಬಿದ ನಿಮಗೆ ಸುಭಟರ ಮಾತದೇಕೆಂದ

ಬಲ್ಲಿರೈ ಕೌರವನ ಧನವನು। ಹೊಳ್ಳಿಸಲು ಮೃಷ್ಟಾನ್ನದಿಂದವೆ
ಬೊಳ್ಳ ಬೆಳೆಸಿದಿರಿ ರಾಜಗುರುತನದಿಂದ ಬಿರೆತಿಬಿರಿ
ಬಲ್ಲ ವಿದ್ಯಾ ವಿಷಯ ರಿಪುಭಟ। ಮಲ್ಲರೊಡನೆಯು ಕದನವಿದು ಜನ
ರೆಲ್ಲರಿಗೆ ಸುಲಭವೆ ಜಪಾನುಷ್ಠಾನವಲ್ಲೆಂದ[2]

ಅಶ್ವತ್ಥಾಮ ಶೀಘ್ರಕೋಪಿ. ಕರ್ಣನ ಬಯ್ಗುಳನ್ನು ಕೇಳಿ ಉರಿದೇಳುತ್ತಾನೆ. ಅಲಿಗಳಲ್ಲೆಂತೊ ಬಾಯಿಯಲ್ಲಿಯೂ ಕಿಡಿಗಳನ್ನುಗುಳುತ್ತಾನೆ. "ಖೂಳ ಸೂತನ ಮಗನೆ....ಕೀಳುಜಾತಿಗೆ ತಕ್ಕ ನುಡಿಗಳು ಮೇಳವಿಸಿದುವು, ಕುಲವ ನಾಲಗೆ ಹೇಳಿತೆಂಬುದು ತಪ್ಪದಾಯಿತು"[3] "ಕುಲವಿಹೀನನ ತಂದು ಕೌರವ ತಿಲಕ ಪತಿಕರಿಸಿದೊಡೆ ನಾಲಿಗೆಯುಲಿಯಲಾಯಿತು ಕರ್ಣ ನಿನ್ನಯ ಭವವ ನೆನೆ"[4] ಎಂದವನು ತನ್ನ ಖಂಡೆಯವನ್ನು ಸೆಳೆಯುತ್ತಾನೆ. ನಾರಣಪ್ಪ ತನ್ನ ಎದುರಾಳಿಗೆ ಅಶ್ವತ್ಥಾಮನ ಮೂಲಕ ಉತ್ತರ ಕೊಟ್ಟಂತಿದೆ. ಅರ್ಜುನನ ಬಾಣಾಘಾತದಿಂದ ಕುರುಬಲ ಅಸ್ತವ್ಯಸ್ತವಾಗಿ, ತಾನೂ ಗಾಯಪಡೆದಾಗ ಕರ್ಣನನ್ನು ದ್ರೋಣ "ಈಗಳಾವ್ ಹಾರುವರು ಕ್ಷತ್ರಿಯನಾಗಿ ನೀನರ್ಜುನನ ತುರುಗಳ ಬೇಗ ಮರಳಿಚಿ ತಂದು ತೋರದೆ ಮಾಣೆ"[5] ಎಂದು ಮೂದಲಿಸುತ್ತಾನೆ. ಕರ್ಣನಿಗೆ ದ್ರೋಣನ ಪೂರ್ವಚರಿತ್ರೆಯ ಪರಿಚಯ ಚೆನ್ನಾಗಿದ್ದುದರಿಂದ "ಎಲ್ಲವೂ ಗರುಡಿಯ ಕಟ್ಟಿ ಸಾಮುವ ಕಲಿಸಿ ಬಳಿಕಾ ಕೋಲ ಮಕ್ಕಳ ಬಲದಿ ಬದುಕುವ ಕೃಪಣವೃತ್ತಿಯ ನಿಮ್ಮ ಕೂಡೆಮಗೆ ಕಲಹವೇತಕೆ?"[6] ಎಂದು ಮಾರ್ಮಿಕವಾಗಿ ಹಾಸ್ಯ ಮಾಡುತ್ತಾನೆ. ದ್ರೋಣ ಮಾಡಿದ್ದು ಅದೇಯೆ ಎಂದು ದ್ರುಪದನ ಪ್ರಕರಣದಿಂದ ವಿದಿತವಾಗುತ್ತದೆ. ಕರ್ಣನ ಈ ಮಾತಿನಲ್ಲಿ ವ್ಯಂಗ್ಯದ ಮೊನಚಿದೆ, ವಿಡಂಬನೆಯ ಕೂರ್ಪಿದೆ. ದ್ರೋಣ ಪಾರ್ಥನನ್ನು ತಾಗಿ "ಇದಿರುಗೊಳ್ಳೈ ಪಾರ್ಥ ವಿಪ್ರರಿಗದಟುತನವೆಲ್ಲಿಯದು?"[7] ಎಂದು ಹಂಗಿಸು

[1] ವಿ ೭ ೧೧; [2] ವಿ.ಸಂ ೭ ಪದ್ಯಗಳು ೧೨, ೧೩, ೧೪; [3] ವಿ ೭-೧೫; [4] ವಿ ೭-೧೭;
[5] ವಿ ೮-೧೫; [6] ವಿ ೮-೧೬; [7] ವಿ ೮-೩೦

ತ್ತಾನೆ. ಹಾರುವರು ಯುದ್ಧಕ್ಕಲ್ಲ ಎಂದು ಸುತ್ತಮುತ್ತಣ ಜನ ಚುಡಾಯಿಸುತ್ತಿದ್ದುದರಿಂದ ಹೀಗೆ ವ್ಯಂಗ್ಯವಾಗಿ ನುಡಿಯುತ್ತಾನೆ. "ಕುಲದಲಿ ಕೊರತೆಯೆನಿಸುವ ಕರ್ಣನೆಂಬವನೆನಗೆ ಸಮಬಲನೆ ?"[1] ಎಂದು ಉತ್ತರ ಕುಮಾರನಂಥವನು ಕುಲದ ಮದವನ್ನು ಪ್ರದರ್ಶಿಸುತ್ತಾನೆ. "ಗೆದ್ದರೆಯು ಗೆಲವಿಲ್ಲ ಹಾರುವರುದ್ದುರುಟತನಕೇನನೆಂಬೆನು ಗದ್ದುಗೆಯ ಹೊರೆಗರಸ ಕರೆದರೆ ಭವನ ಮರೆದಿರಲ"[2] ಎಂದು ಅವರಪ್ಪ ವಿರಾಟ ಗಳಹುತ್ತಾನೆ. ಬಿನುಗು ಹಾರುವನೆಂದು ಕರೆದು ಧೃಷ್ಟದ್ಯುಮ್ನ ದ್ರೋಣನ ಮೇಲೆರಗುತ್ತಾನೆ. ಅಭಿಮನ್ಯು ಮುನಿದ ಮಾರಿಯಂತೆ ಕೌರವ ಸೈನ್ಯವನ್ನೊಕ್ಕಲಿಕ್ಕಿದಾಗ, ಬೆಗಡುಗೊಂಡ ದುರ್ಯೋಧನ "ವೀರರಂಗವನೆತ್ತಬಲ್ಲರು ಹಾರುವರು, ಬೆಳುದಿಂಗಳಿನ ಬಿರುಸಾರ ಸುಡುವುದು, ಕೈದು ಹಿಡಿದರೆ ಕಲಿಗಳೇ ದ್ವಿಜರು ?"[3] ಎಂದು ದ್ರೋಣನನ್ನು ಭಂಗಿಸುತ್ತಾನೆ. ತಾನು ಹಾರುವ, ಯುದ್ಧದಲ್ಲಿ ಕ್ಷತ್ರಿಯರ ಕೈ ಮೇಲು, ಅವರ ದಕ್ಕಡಿಕೆ ತನಗಿಲ್ಲವೆಂಬ ನೈಚ್ಯಭಾವನಾಪ್ರಜ್ಞೆ ದ್ರೋಣನ ಜೀವನವನ್ನೆಲ್ಲ ಆಕ್ರಮಿಸಿಕೊಂಡಂತಿದೆ, ಅವನ ಮನಸ್ಸನ್ನು ಸದಾ ಕೊರೆಯುವಂತಿದೆ. ಆತ್ಮಾವಹೇಳನ ಮಾಡಿಕೊಳ್ಳುವಂತೆ "ಹಾರುವರು ನಾವಸ್ತ್ರವಿದ್ಯಾಪಾರಗರು ನಾವಲ್ಲ, ರಣದೌಡಾರಿಯುವ ತೋರೆವುಗೆ"[4] ಎಂದು ಅರ್ಜುನನಮುಂದೆ ಒದರುತ್ತಾನೆ. ಅರ್ಜುನನೆಂದೂ ದ್ರೋಣನನ್ನು ಲಘುವಾಗಿ ಕಂಡವನಲ್ಲ, ಅವನಲ್ಲಿ ಅಪಾರವಾದ ಗೌರವವಿದೆ. ಅಂಥ ಮಾತುಗಳನ್ನು ಕರ್ಣನ ಮುಂದೆ ಹೇಳಿದ್ದರೆ ಔಚಿತ್ಯ ಕಾಣುತ್ತಿತ್ತು. ಆಗ ದ್ರೋಣನ ಬಗ್ಗೆ ತಪ್ಪೆಣಿಸುವಂತಿರಲಿಲ್ಲ. ಸರಿಯಾಗಿ ಪಾಠಮಾಡಲಾರದೆ ವಿದ್ಯಾರ್ಥಿಗಳ ಅಪಹಾಸ್ಯಕ್ಕೆ ಗುರಿಯಾದ ಪ್ರಾಧ್ಯಾಪಕನ ಕನಿಕರ ಸ್ಥಿತಿಯಂತಿದೆ ದ್ರೋಣನ ಪಾಡು. ಅವನಂಥ ಶ್ರೇಷ್ಠ ಗುರುವಿನಿಂದ ನಿರೀಕ್ಷಿಸುವ ಮಾತಲ್ಲ ಅವು. ಇಂಥ ಕಡೆ ನಾರಣಪ್ಪನೇ ಆತ್ಮಕಥೆ ಹೇಳಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ. "ಖೂಳ ಘಡ ಹಾರುವರು ಬರಿ ಮಾತಾಳಿಗಳು"[5] ಎಂದು ದ್ರುಪದ ಬಯ್ಯುವಲ್ಲಿ ಹುರುಳಿಲ್ಲ. ಗುರುಹತ್ಯೆ ಮಹಾಪಾತಕವೆಂದು ದ್ರೋಣ ತೀರಿಕೊಂಡ ನಂತರ ಅವನ ದೇಹವನ್ನು ಛಿದ್ರಗೈದ ಧೃಷ್ಟದ್ಯುಮ್ನನನ್ನು ಪರಿವಾರ ಬಯ್ದಾಗ "ಅವನ ಗುರುತನವೇನು ವಿಪ್ರಾಧಮನಲಾ ಶಸ್ತ್ರೋಪಜೀವನನಿವನು ಋಷಿಯೇ"[6] ಎಂದವನು ತನ್ನ ಹೀನಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಾನೆ. ಅದು ಸೇಡಿನ ನುಡಿಯಾದ್ದರಿಂದ ಅದಕ್ಕೆ ಬೆಲೆ ಕೊಡಬೇಕಾದ್ದಿಲ್ಲ. ಶಲ್ಯ ಸಾರಥಿಯಾದನಂತರ ಅವನಿಗೂ ಕರ್ಣನಿಗೂ ಕಲಹ ತಪ್ಪಿದ್ದಲ್ಲ. ಆ ಕಾರಣವಾಗಿ, ಕೇವಲ ಸೇಡಿನಿಂದ ಅವನು ಕರ್ಣನನ್ನು ತೆಗಳುವುದೇ ಚಾಳಿಯಾಗುತ್ತದೆ. ಭಾಷೆಗೆ ತಪ್ಪದ ಸಲುವಾಗಿ ಸರ್ಪಬಾಣವನ್ನು ಮತ್ತೆ ತೊಡದಿದ್ದಾಗ "ಎಲವೊ ನಿನ್ನನು ಜಗವರಿಯೆ ಕಬ್ಬಿಲನ ಮಗನನು ಮರಸಿ ಕುರುಪತಿ ಕುಲಜನನು ಮಾಡಿದನಲಾ ಒಡನುಂಡು ಪತಿಕರಿಸಿ; ನೆಲನು ಹೇಸದೆ ನಿನ್ನ ಕೀರ್ತಿಯ ಬೆಳಗು ಮಾಸದೆ, ಬಿಡದೆ ಸಾಕಿದ ಹೊಲೆಯನವಸರಕೊದಗುವನು, ನೀ ಕಷ್ಟ ಹೋಗು"[7] ಎಂದು ಕರ್ಣನನ್ನು ಬಯ್ದದ್ದಲ್ಲವೆ, "ಕುಲ

[1] ವಿ ೫ ೨೩ ; [2] ಭೀ ೮-೨೩ ; [3] ದ್ರೋ ೫-೩೮ ; [4] ದ್ರೋ ೯-೪೨ ; [5] ದ್ರೋ ೧೭-೩೭ ;
[6] ದ್ರೋ ೧೯-೨೩ ; [7] ಕ ೨೫-೩೯

ಹೀನನಲಿ ಗುಣವರಸಲೇಕೆ?" ಎಂದು ಕೆಡೆನುಡಿದು, ಶಲ್ಯ ವಾಘೆಯನ್ನು ಬಿಸುಟು ಹೊರಟು ಹೋಗುತ್ತಾನೆ. ದ್ರೋಣಾಶ್ವತ್ಥಾಮರು ಕರ್ಣನನ್ನು ಹೀಯಾಳಿಸಿದಂತೆ ಪಾಂಡವರು ಹೀಯಾಳಿಸುವುದಿಲ್ಲ. ಕೌರವನ ಮೇಲಣ ಸ್ನೇಹದಿಂದಾಗಿ ಕರ್ಣ ಪಾಂಡವರಿಗೆ ಕೇಡು ಬಗೆದದ್ದುಂಟು; ದ್ರೌಪದಿಯನ್ನು ಅವಮಾನಗೊಳಿಸಲು ದುಶ್ಶಾಸನನಿಗೆ ನೆರವಾದದ್ದುಂಟು. ಆದರೂ ಅರ್ಜುನ ಎಲ್ಲಿಯೂ ಮರ್‍ಯಾದೆ ಮೀರಿ, ಅಸಹ್ಯವಾಗಿ ಬಯ್ದುದಿಲ್ಲ "ಸೂತ ಜಾತಿಯೊಳೀ ಧನುರ್ವೇದಾತಿಶಯವೆಂತಾಯ್ತು"[1] ಎಂದು ಜರೆಯುವಲ್ಲಿ ಕಾಠಿನ್ಯ ಕಾಣುವುದಿಲ್ಲ. ಕೃಷ್ಣ ಕರ್ಣನ ಜನನ ವೃತ್ತಾಂತವನ್ನು ಬಲ್ಲ. ಅರ್ಜುನನನ್ನು ಪ್ರಚೋದಿಸುವ ಸಲುವಾಗಿ ಒಮ್ಮೆ "ಕುಲವಿಹೀನನು ಕರ್ಣನಿವ ನಿನಗೆಂತು ಸರಿಯಹನು"[2] ಎಂದು ಮಾತು ಹರಿಸುತ್ತಾನೆ. ಕೃಷ್ಣ ಬಲರಾಮ ಪಾಂಡವರಿದ್ದ ಮಂತ್ರಾಲೋಚನಾ ಸಭೆಯಲ್ಲಿ ಸಂಧಾನದ ಬಗ್ಗೆ ಮಾತಾಡುತ್ತ ಸಾತ್ಯಕಿ

ಕಾದಿ ಸಾವುದು ಮೇಣು ರಿಪುಭಟನಾದವನ ನೆತ್ತಿಯಲಿ ಸಬಳವ
ಕೋದು ಕೊಂಬುದು ನೆಲಸನಿದು ಕ್ಷತ್ರಿಯರ ಮಕ್ಕಳಿಗೆ
ಮೇದಿನಿಯ ಬೇಡುವಡೆ ಮುಟ್ಟಿಯ ತೇದು ಹಣೆಯಲಿ ಬಡಿದು ಪರ್ಣಿಯ
ಕೋದು ಸ್ವಸ್ತಿಯ ಹಾಕುವುದು ಹಾರುವರ ಮಕ್ಕಳಿಗೆ[3]

ಎಂದು ನುಡಿಯುವಲ್ಲಿ ಕ್ಷತ್ರಿಯಧರ್ಮವನ್ನು ವಿವರಿಸುತ್ತಾನೆಯೇ ಹೊರತು ಯಾರನ್ನೂ ಹಳಿಯುವುದಿಲ್ಲ. ಆದರೂ ಅದರ ಹಿನ್ನೆಲೆಯಲ್ಲಿ ತಾರತಮ್ಯಭಾವವಿದೆಯೆನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮಹಾಭಾರತದಲ್ಲೆಲ್ಲ ಅತ್ಯಂತ ದೊಡ್ಡಸ್ತಿಕೆಯ ಸುಸಂಸ್ಕೃತ ಮಹಾವ್ಯಕ್ತಿಯೆಂದರೆ ಭೀಷ್ಮ. ತನಗೆ ಸೇನಾಧಿಕಾರಿ ಪಟ್ಟಕಟ್ಟಿದ ಸಂದರ್ಭದಲ್ಲಿ ಕರ್ಣ ಮಿತಿಮೀರಿ ಹರಟುತ್ತಾನಷ್ಟೆ. ಆಗ ಭೀಷ್ಮ "ನಿನ್ನಯ ಕುಲವ ನೋಡದೆ ಮೇರೆದಪ್ಪುವ ಸಲುಗೆಯಿಂದಲೇ ಸ್ವಾಮಿ ಸಂಪತ್ತಿನ ಸಗಾಢತನ"[4] ಎಂದು ನುಡಿದು ಅವನನ್ನು ಸುಮ್ಮನಿಸುತ್ತಾನೆ.

ಬ್ರಾಹ್ಮಣರ ಅಗ್ಗಳಿಕೆ

ಅವಕಾಶ ಸಿಕ್ಕಿದಾಗಲೆಲ್ಲ ಬ್ರಾಹ್ಮಣ ಜಾತಿಯ ಹೆಗ್ಗಳಿಕೆಯನ್ನು ವರ್ಣಿಸುವುದು ಕವಿಯ ಪರಿಪಾಠವಾಗಿದೆ. ಆ ಪ್ರಶಂಸೆ ಕ್ಷಚಿತ್ತಾಗಿ ಪ್ರವೇಶಿಸಿದ್ದರೆ ಅನಿವಾರ್ಯವೆನ್ನಬಹುದಿತ್ತು. ಆಗಿನ ಕಾಲದ ಸಮಾಜದಲ್ಲಿ ಅಥವಾ ಸಮಾಜದ ಒಂದು ಭಾಗದಲ್ಲಿ—ಬ್ರಾಹ್ಮಣರಿಗೆ ವಿಶೇಷ ಗೌರವ ಸಲ್ಲುತ್ತಿದ್ದಿರಬೇಕು. ರಾಜರು ಹಾಕಿಸುತ್ತಿದ್ದ ಶಾಸನಗಳಿಂದ, ಬಿಡುತ್ತಿದ್ದ ದತ್ತಿಗಳಿಂದ ಅವರು ರಾಜಾಸ್ಥಾನಗಳಲ್ಲಿ ವಿಶಿಷ್ಟ ಸ್ಥಾನಮಾನಗಳನ್ನು ಪಡೆದಿದ್ದರೆಂಬುದೂ ವಿದಿತಗೊಳ್ಳುತ್ತದೆ. ಬ್ರಾಹ್ಮಣ ಕುಟುಂಬದಲ್ಲಿಯೇ ಜನಿಸಿದ ಬಸವಣ್ಣನ ಮತ್ತು ಆತನ ಅನುಯಾಯಿಗಳ ಪ್ರಭಾವದಿಂದ ಬ್ರಾಹ್ಮಣ ಜಾತಿಯ ಕಾಂತಿ ನಾರಣಪ್ಪನ ಕಾಲಕ್ಕಾಗಲೇ ಕುಗ್ಗುತ್ತಿದ್ದಿರಬಹುದು. ಆ ಜಾತಿಯ ಪ್ರತಿಷ್ಠೆ ಮತ್ತು

1 ಕ ೨೨-೨೨; 2 ಕ ೨೬-೪೧; 3 ಉ ೧-೯; 4 ಭೀ ೧-೩೯

ಸ್ಥಾನಮಾನಗಳನ್ನು ಪುನರುಜ್ಜೀವನಗೊಳಿಸುವ ಸಲುವಾಗಿಕವಿ ನಾಲ್ಕುಮಾತು ಹೆಚ್ಚಾಗಿ ಹೇಳಿದ್ದರಿಂದ,ಪಕ್ಷಪಾತದೃಷ್ಟಿಯ ಹೊಣೆಯನ್ನುಹೊರಬೇಕಾಗುತ್ತದೆ ಎಂಬ ಅಭಿಪ್ರಾಯ ಮೂಡುವಂಥ ಸಾಧ್ಯತೆಯುಂಟು. ಕೇವಲ ಒಂದು ಜಾತಿಯ ಪ್ರಶಂಸೆ ಮಾತ್ರ ಇದ್ದು, ಅನ್ಯಜಾತಿಗಳ ಕಾನಿಷ್ಠ್ಯವನ್ನು ಉತ್ಪ್ರೇಕ್ಷಿಸದಿದ್ದರೆ, ನಾರಣಪ್ಪನಿಗೆ ಜಾತೀಯತೆಯ ಆರೋಪ ಅಂಟುತ್ತಿರಲಿಲ್ಲವೆಂದೂ ಹೇಳಬಹುದು. ಆದರೆ ಅವನೆಲ್ಲಿಯೂ ವೀರಶೈವಮತ ವನ್ನು ನೇರವಾಗಿ ಖಂಡಿಸಿದಂತಿಲ್ಲ. ಜಾತಿಸಾಂಕರ್ಯ ಮಹಾಪಾಪಕರವೆಂದು ಹೇಳುವಾಗ ಅವನು ಪ್ರಾಯಶಃ ಆ ಮತವನ್ನು ಮರೆತಿರಲಾರನೆಂದು ತೋರುತ್ತದೆ. ಕರ್ಣನಾಗಲಿ ಅರ್ಜುನನಾಗಲಿ, ಕಡೆಗೆ ಕೃಷ್ಣನಾಗಲಿ, ಏನು ಕೆಲಸ ಪ್ರಾರಂಭಿಸಬೇಕಾಗಿದ್ದರೂ ವಿಪ್ರಾವಳಿಗೆ ಭೂರಿದಕ್ಷಿಣೆಯನ್ನು ನೀಡಿ ಅವರ ಆಶೀರ್ವಾದವನ್ನು ಪಡೆದೇ ಮುಂದು ವರಿಯುತ್ತಿದ್ದುದು. ಕರ್ಣನಿಗೆ ಸೇನಾಪತಿ ಪಟ್ಟ ಭೂಸುರರ ನೇತೃತ್ವದಲ್ಲಿ ನಡೆಯುತ್ತದೆ; ಪ್ರತಿದಿನ ಯುದ್ಧಕ್ಕೆ ಹೊರಡುವ ಮುನ್ನ ಅವನು "ದೇವಗುರು ವಿಪ್ರರಿಗೆ ಬಹುಸಂಭಾ ವನೆಯು"[1]ನ್ನು ಸಲ್ಲಿಸುತ್ತಾನೆ. ಖಾಂಡವವನದಹನಾನಂತರ ಶ್ರೀಕೃಷ್ಣ ದ್ವಾರಕೆಗೆ ಹೊರಟ ಸಂದರ್ಭದಲ್ಲಿ ಜೋಯಿಸರನ್ನು ಕರೆಸಿ, ತಿಥಿ ನಕ್ಷತ್ರಗಳನ್ನು ನೋಡಿಸುತ್ತಾನೆ; ಧರಣೀ ಸುರರಿಂದ ಆಶೀರ್ವಚನ ಪಡೆಯುತ್ತಾನೆ:

ವರಮುಹೂರ್ತದೊಳಮೃತ ಯೋಗೋ। ತ್ಕರ ಶುಭಗ್ರಹದೃಷ್ಟಿಯಲಿ ಹಿಮ
ಕರ ಶುಭಾವಸ್ಥೆಯಲಿ ಕೇಂದ್ರಸ್ಥಾನ ಗುರುವಿನಲಿ
ಧರಣಿಸುರರಾಶೀರ್ವಚನ ವಿ। ಸ್ತರಣ ದಧಿ ದೂರ್ವಾಕ್ಷತೆಗಳು
ಬ್ಬರದ ವಾದ್ಯ ಗಡಾವಣೆಯಲಸುರಾರಿ ಹೊರವಂಟ[2]

ಅಜ್ಞಾತವಾಸ ಸಮಯದಲ್ಲಿ ಕಂಕಭಟ್ಟನೆನಿಸಿದ್ದ ಧರ್ಮರಾಯನ ಬ್ರಾಹ್ಮಣ ನಿಷ್ಠೆಯನ್ನು ಕೇಳುವಂತೆಯೇ ಇಲ್ಲ. ಪೂಜೆ ಜಪತಪ ಕಥಾಶ್ರವಣಕ್ಕೆ ಮಾತ್ರ ಸರಿಯೆಂದು ಕರ್ಣ ದುರ್ಯೋಧನರು ಅವನನ್ನು ಆಗಾಗ್ಗೆ ತೆಗಳುತ್ತಾರೆ. ನಹುಷ ಧರ್ಮರಾಯನಿಗೆ ಹೇಳುವ ಬುದ್ಧಿವಾದದಲ್ಲಿ ಬ್ರಾಹ್ಮಣರ ತೇಜಸ್ಸೇ ಕ್ಷತ್ರಿಯರಿಗೆ ರಕ್ಷೆ ಎಂದಿದೆ:

ಅರಸಕೇಳ್ಕೈ ಕ್ಷಾತ್ರತೇಜವ। ಹೊರೆವುದೇ ಬ್ರಾಹ್ಮಣ್ಯಶಕ್ತಿ
ಸ್ಫುರಣೆ ನೀನೀ ಬ್ರಹ್ಮವರ್ಗದ ಸಾರಸಾಖ್ಯದಲಿ
ಮೆರೆವಲಾ ವಿಪ್ರಾವಮಾನವೆ। ಸಿರಿಗೆ ಸಂಜು ಕಣಾ ಮಹೀಸುರ
ವರರುಪಾಸನೆ ನಿನಗೆ ನೀ ಕೃತಕೃತ್ಯನಹೆಯೆಂದ[3]

ಆದ್ದರಿಂದಲೇ ಅವರಿಗೆ ಯಾವಾಗಲೂ ಆಸ್ಥಾನದಲ್ಲಿ ಪೂಜೆ ಸಲ್ಲುತ್ತಿತ್ತು. ಅವರ ಸಲಹೆ ಹುಕುಮ್ಮುಗಳಿಲ್ಲದೆ ಯಾವ ರಾಜಕಾರ್ಯವೂ ಜರುಗುತ್ತಿರಲಿಲ್ಲ. ಅವರೇ ಇಳೆಯ ದೇವತೆ ಗಳಾದ್ದರಿಂದ ಅವರು ಯಾರನ್ನಾದರೂ ಒದೆಯಬಹುದಿತ್ತೇ ಹೊರತು, ಅವರನ್ನು ಯಾರೂ ಅವಮಾನಗೊಳಿಸುವಂತಿರಲಿಲ್ಲ. ಹಾಗೆ ಅವಮಾನಮಾಡಿದವರಿಗೆ ರೌರವ ನರಕ ಕಾದಿರು ತ್ತಿತ್ತು. ಭೃಗುವಿನ ಪಾದಸ್ಪರ್ಶದಿಂದ ಲಕ್ಷ್ಮೀಧರನಿಗೆ ಪುಣ್ಯಪ್ರಾಪ್ತಿಯಾಗುತ್ತದೆ.

[1] ಕ ೮-೨೦; [2] ಸ ೧-೭; [3] ಅ ೧೩-೬೧

ಶರಧಿಯೊಳು ಹರಿ ಯೋಗನಿದ್ರೆಯೊ। ಳಿರಲು ಭೃಗುವೈತಂದು ಲಕ್ಷ್ಮೀ
ಧರನ ವಕ್ಷಸ್ಥಳವನೊದೆಯಲು ಮುನಿಯ ಚರಣವನು
ಸಿರಿಯುದರದೊಳಗೊತ್ತಿ ಧರಣೀ। ಸುರರ ಮೆರೆದನು ತೀರ್ಥಪಾದನ
ಧರೆಯೊಳಗೆ ಬುಧರಿಂದಧಿಕವಹ ತೀರ್ಥವಿಲ್ಲೆಂದ[1]

ಸಾಕ್ಷಾತ್ ವಿಷ್ಣುವಿನ ಚರಿತ ಇತರರಿಗೂ ಆದರ್ಶವಾಗಬೇಕಷ್ಟೆ. ಈ ಜಗತ್ತೆಲ್ಲ ಬ್ರಾಹ್ಮಣಾಧೀನವೆನ್ನುವಷ್ಟರಮಟ್ಟಿಗೆ ಸನತ್ಸುಜಾತ ಜನ್ಮಾಂಧನಾದ ಧೃತರಾಷ್ಟ್ರನಿಗೆ ಉಪದೇಶಿಸುತ್ತಾನೆ.

ದೈವಾಧೀನವಲಿ ಜಗವಾ। ದೈವ ಮಂತ್ರಾಧೀನ ಮಂತ್ರವು
ಭೂಮಿಬುಧರಾಧೀನವಾಗಿಹುದಾಗಿ ಲೋಕದಲಿ
ದೈವವೇ ಬ್ರಾಹ್ಮಣಸದಲ್ಲದೆ। ಭಾವಿಸಲು ಬುಧರಿಂದಧಿಕವಹ
ದೈವವೆಂಬುದದಾವುದೈ ಹೇಳೆಂದನಾ ಮುನಿಪ[2]

ಜಗದೊಳಗೆ ವಿಪ್ರೋತ್ತಮರುಳಿಯೆ ದೈವ ಯಾವುದು? ಆ ದೈವವನ್ನುಳಿದು ಕಲ್ಲುಕಟಿಗ ಕಲ್ಲಿನಲ್ಲಿ ಕೆತ್ತಿದ ಜಡ ದೇವರನ್ನು ಪೂಜಿಸುವುದು ತರವೆ ಎಂದು ಪ್ರಶ್ನಿಸುತ್ತಾನೆ. "ಹತ್ತು ಮುಖದಲಿ ಲೋಕದೊಳಗುತ್ಪತ್ತಿಯಾದ ಚರಾಚರಂಗಳ ಉತ್ತಮಾಧಮರೆನ್ನದೇ ಹರಿ ಸರ್ವಗತನಾಗಿ ಸುತ್ತುವನು"[3] ಎಂದು ನುಡಿದ ಮುನಿಯೇ "ಎಣಿಸಬಹುದು ಉರ್ವರೆಯ ಸೈಕತಮಣಿಯನ್ ಗಗನಾಂತರದೊಳ್ಕೈತಹ ವೃಷ್ಟಿಬಿಂದುವ ಲೆಕ್ಕಗೊಳಬಹುದು, ಎಣಿಸಬಾರದು ಸದ್ಬ್ರಾಹ್ಮಣನೊಳೊಬ್ಬನ ರಕ್ಷಿಸಿದ ಫಲವ"[4] ಎಂದು ಉತ್ತಮರ ಮಹಿಮೆಯನ್ನು ಕೊಂಡಾಡುತ್ತಾನೆ. "ಅರಸುಗಳು ವರ್ಣೋತ್ತಮರ ದೆಸೆಗಂಜಬೇಕು" ಎಂದು ಶೂದ್ರನಾದ ವಿದುರ ಕ್ಷತ್ರಿಯನಾದ ಧೃತರಾಷ್ಟ್ರನಿಗೆ ಬೋಧಿಸುತ್ತಾನೆ. "ಇಹಪರಕೆ ಸುಖಸಂಗತಿಯನೊಲುವಡೆ ಪೂಜಿಸುವುದೈ ಬ್ರಾಹ್ಮಣೋತ್ತಮರ"[5] ಎಂಬುದು ಸನತ್ಸುಜಾತ ಮುನಿಯ ತಿಳಿವಳಿಕೆ.

ಒಂದು ರಾತ್ರಿ ತಸ್ಕರರ ಬಾಧೆಯಿಂದ ನೊಂದ ಭೂಸುರರು ಅರ್ಜುನನ ಬಳಿಬಂದು ತಮ್ಮನ್ನು ಸಂರಕ್ಷಿಸುವಂತೆ ಕೇಳಿಕೊಳ್ಳುತ್ತಾರೆ. ಅವರಿಗೆ ಅಭಯಪ್ರದಾನಮಾಡಿ, ಅರ್ಜುನ ಶರಧನುಸ್ಸುಗಳನ್ನು ತೆಗೆದುಕೊಳ್ಳುವ ಸಲುವಾಗಿ ಧರ್ಮರಾಯನ ಸೆಜ್ಜೆಯರ—ಮನೆಗೆ ಬರುತ್ತಾನೆ. ಆಗ ಧರ್ಮರಾಯ ರಮಣಿಯೊಡನೆ ಏಕಾಂತದಲ್ಲಿರುತ್ತಾನೆ. ನಾರದನ ಮತದ ಪ್ರಕಾರ "ಮಂಚದ ರಮಣಿರಮಣರ ದರುಶನ" ಅಕ್ರಮವಾಗುತ್ತದೆ; ಅಂತೆಯೇ ವಿಪ್ರರಿಗೆ ಬಂದ ಸಂಕಟವನ್ನು ಪಾರುಮಾಡದಿದ್ದರೆ ಮಹಾಪಾತಕಕ್ಕೆ ಗುರಿಯಾಗಬೇಕಾಗುತ್ತದೆ. ಎರಡನ್ನು ಅಳೆದು ಸುರಿದು,

ಅರಸನರಸಿಯರೊಂದು ಮಂಚದೊಳಿರಲು ಕಂಡರೆ ಭೂಪ್ರದಕ್ಷಿಣ
ಪರುಷವೊಂದರೊಳಿದಕೆ ಪ್ರಾಯಶ್ಚಿತ್ತ ವಿಧಿಯುಂಟು

---

1 ಉ ೪-೬೨ ; 2 ಉ ೪-೫೦ ; 3 ೪-೩೭ ; 4 ಉ ೪-೫೨ ; 5 ಉ ೪-೪೬

ಧರಣಿಯಮರರುಪಪ್ಲವವ ಪರಿಹರಿಸದಿರಲಾ ಪಾತಕಕೆ ಸಂ
ಹರಣವುಂಟೇ ಶಾಸ್ತ್ರದೃಷ್ಟಿಯೊಳೆಂದು[1]

ನಾನಾವಿಧವಾಗಿ ಚಿಂತಿಸಿ, ವಿಪ್ರರಕ್ಷಣೆ ಪ್ರಥಮಕರ್ತವ್ಯವೆಂದು ತೀರ್ಮಾನಿಸಿ, ಅರಸನ ಸೆಜ್ಜೆಮನೆಗೆ ಪ್ರವೇಶಿಸುತ್ತಾನೆ. ಕರ್ಣಾಶ್ವತ್ಥಾಮರ ಕಲಹದಲ್ಲಂತು ದ್ವಿಜರ ಮೇಲ್ಮೆಯ ಸಮರ್ಥನೆ ಸ್ಪಷ್ಟಗೋಚರವಾಗುತ್ತದೆ. "ದಾನಧರ್ಮಾದಿಗಳೊಳರ್ಥವನಾರು ಕೊಂಬರು ದ್ವಿಜರು ಹೊರಗಾಗಿ; ಜಗವ ರಕ್ಷಿಸಲಾವು ಕೊಂಬೆವು"[2] "ಉಳಿದ ವರ್ಣತ್ರಯಕೆ ಬೆಸ ಕೈವಳತೆಯಲಿ ಶೂದ್ರನು ಕೃತಾರ್ಥನು"[3] ಎಂದು ಅಶ್ವತ್ಥಾಮ ಪ್ರತಿಪಾದಿಸುತ್ತಾನೆ.

ಚತುರ್ವರ್ಣಗಳ ಜನನ ಕರ್ತವ್ಯಗಳ ವಿಚಾರವೂ ಭೀಷ್ಮ ವಿದುರರ ಮತ್ತು ಮುನಿ ಜನಗಳ ಮೂಲಕ ನಿರೂಪಣೆಗೊಳ್ಳುತ್ತದೆ. ಭೀಷ್ಮ ಶ್ರೀಕೃಷ್ಣನ ಮಹಿಮೆಯನ್ನು ವರ್ಣಿಸುವಲ್ಲಿ "ದ್ವಿಜರು ಮುಖದಲಿ ಭೂಪರೀತನ ಭುಜದಲಾದರು ನಿಖಿಳ ವೈಶ್ಯವ್ರಜ ಘನೋರುಗಳಿಂದ ಶೂದ್ರರು ಪಾದಪದ್ಮದಲಿ"[4] ಎಂದು ವಿವರಿಸುತ್ತಾನೆ. ಪ್ರಥಮ ದ್ಯೂತಾಂತ್ಯದಲ್ಲಿ ಧೃತರಾಷ್ಟ್ರ ದ್ರೌಪದಿಗೆ ವರಪ್ರದಾನ ಮಾಡುತ್ತಾನಷ್ಟೆ. ಎರಡು ವರಗಳನ್ನು ಆ ಕರುಣಿ ಕರುಣಿಸಿ ಮತ್ತೂ ಒಂದು ವರ ಕೇಳಿಕೊಳ್ಳುವಂತೆ ಸೂಚಿಸು ತ್ತಾನೆ. ಶಾಸ್ತ್ರಜ್ಞೆಯಾದ ದ್ರೌಪದಿ "ವರವು ವೈಶ್ಯರಿಗೊಂದು ನೃಪಸತಿಗೆರಡು ನೃಪರಿಗೆ ಮೂರು ಭೂದೇವರಿಗೆ ನೂರಧಿಕಾರ"[5] ಎಂದು ಧರ್ಮಸೂಕ್ಷ್ಮವನ್ನು ವಿಶದಪಡಿಸು ತ್ತಾಳೆ. ಅವಳ ಪ್ರಕಾರ ಶೂದ್ರರು ವರಸ್ವೀಕಾರಯೋಗ್ಯರಲ್ಲವೆಂದೇ ಅರ್ಥವಾಗುತ್ತದೆ.[6] ಧರ್ಮರಾಯ ಇಂದ್ರಕೀಲಕ್ಕೆ ತೆರಳುತ್ತಿದ್ದ ಅರ್ಜುನನಿಗೆ "ಜಾತಿನಾಶಕರಿಗೆ ವರ್ಣಾಶ್ರಮ ವಿದೂಷಕಗೆ ಜಾತಸಂಕರಕಾರಗೆ....ಪರಲೋಕವಿಲ್ಲ"[7] ಎಂದು ಎಚ್ಚರಿಕೆ ನೀಡುತ್ತಾನೆ. ಆ ಕಾಲದಲ್ಲಿ ಜರುಗುತ್ತಿದ್ದ ಮತಾಂತರ ಜಾತ್ಯಂತರ ಮತ್ತು ಅಂತರ್ಜಾತೀಯ ವಿವಾಹ ಗಳನ್ನು ದೃಷ್ಟಿಯಲ್ಲಿಟ್ಟುಕೊಂಡ ಕವಿ ಇಂಥ ಮಾತುಗಳನ್ನು ಹೇಳಿರಬಹುದೇ ಎಂದು ಪರಿಶೀಲಿಸಬೇಕಾಗಿದೆ.

ಭಾರತವನ್ನು ಸಂಪೂರ್ಣವಾಗಿ ಅಧ್ಯಯನಮಾಡಿ ಕವಿಯ ಇಡೀ ವ್ಯಕ್ತಿತ್ವವನ್ನು ಚಿತ್ರಿಸಿಕೊಳ್ಳುವುದಾದರೆ, ಅವನು ಜಾತೀಯತೆಯನ್ನು ಮೀರಿದ್ದ ಉದಾರ ಹೃದಯದ ಸಾಧುಪುರುಷನೆಂದೂ, ಆಗಿನ ಕಾಲದ ಸಮಾಜವನ್ನು ಸಹಾನುಭೂತಿಯಿಂದ ಸೂಕ್ಷ್ಮ ವಾಗಿ ವೀಕ್ಷಿಸಿ ವಾಸ್ತವಚಿತ್ರವನ್ನು ಪ್ರತಿಬಿಂಬಿಸಲು ಪ್ರಯತ್ನಿಸಿದ ನಿರ್ಲಿಪ್ತ ವ್ಯಕ್ತಿ ಯೆಂದೂ ತಿಳಿಯಬಹುದಾಗಿದೆ.

---

[1] ಅ ೧೯–೭; [2] ವಿ ೭–೧೬; [3] ವಿ ೭–೧೭; [4] ಸ ೯–೨೨; [5] ಸ ೧೫–೫೨;
[6] ಜಾತೀಯತೆ ಮತ್ತು ವರ್ಣವ್ಯವಸ್ಥೆಗೆ ಸಂಬಂಧಿಸಿದ ಇನ್ನೂ ಕೆಲವು ಪದ್ಯಗಳನ್ನು ಗಮನಿಸ ಬಹುದು. ಸ್ಥಳಾಭಾವದಿಂದ ಪದ್ಯಸಂಖ್ಯೆಗಳನ್ನು ಮಾತ್ರ ಕೊಟ್ಟಿದೆ: ದ್ರೋ ೨–೮. ಅ ೪–೨೫; ಆ ೧೯–೪೩; ವಿ ೩–೧೨; ವಿ ೩–೫೩; ಉ ೩–೬೯; ಉ ೪–೫೩ ೬೪, ೬೭, ೭೩, ೮೨, ೧೦೮;
[7] ಅ ೪–೨೫.

ಮತಧರ್ಮ ಸಮನ್ವಯ

ಹಿಂದೂಮತದಲ್ಲಿ ಅನೇಕ ಶಾಖೆಗಳುಂಟಷ್ಟೆ. ಬ್ರಾಹ್ಮಣರಾದವರು ಈ ಶಾಖೆಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿದವರಾಗಿರಬೇಕು. ಕುಮಾರವ್ಯಾಸ ಯಾವ ಶಾಖೆಗೆ ಸೇರಿದವನೆಂದು ಖಚಿತವಾಗಿ ಹೇಳಲಾಗದು. ಕಾವ್ಯಾಧಾರಗಳನ್ನು ಪರಿಶೀಲಿಸುವಾಗ ಸಾಕಷ್ಟು ಗೊಂದಲವಿದ್ದಂತೆ ತೋರುತ್ತದೆ. ಆದ್ದರಿಂದ ಕವಿಯು ಬ್ರಾಹ್ಮಣಭಕ್ತನಾದ ಅಬ್ರಾಹ್ಮಣನಾಗಿರಬಹುದೆಂದು ಕೆಲವರು ಸೂಚಿಸಬಹುದು. ಮತಶ್ರದ್ಧಾಳುಗಳಾದ ಬ್ರಾಹ್ಮಣೇತರರು ಯಾವುದಾದರೂ ಒಂದು ಮತಶಾಖೆಯವರ ಉಗ್ರಪಕ್ಷದವರಿಗೆ ಶಿಷ್ಯರಾಗಿ ತಾವೂ ಉಗ್ರರಾಗದೆ ಇರುವಾಗ ಸಕಲ ಜಾತಿಯ ಬ್ರಾಹ್ಮಣರನ್ನೂ ಅವರ ಪರಸ್ಪರ ಭಿನ್ನಾಚಾರಗಳನ್ನೂ ದೇವರುಗಳನ್ನೂ ಸಮಾನವಾಗಿ ಮರ್ಯಾದಿಸುತ್ತ ಸಂಕಲಿತರಾಗಿರುವರು. ಆದರೆ "ಶಾಸ್ತ್ರದಲ್ಲಿ ಸಮಗ್ರ ಪಾಂಡಿತ್ಯವನ್ನು ತೋರ್ಪಡಿಸುತ್ತಿರುವ ಕುಮಾರವ್ಯಾಸನು ತನ್ನ ಸ್ವಧರ್ಮದಲ್ಲಿ ವಿಶೇಷಾಭಿಮಾನವನ್ನು ತೋರಿಸದಿರುವುದು ಅಸಂಭವ."[1] ಬ್ರಾಹ್ಮಣರನ್ನು ಕುರಿತ ಕುಚೋದ್ಯದ ಮಾತುಗಳನ್ನು ಮಾತ್ರ ಗಮನಿಸಿದರೆ ಅವನು ಬ್ರಾಹ್ಮಣೇತರನೆಂದೇ ಹೇಳಬೇಕಾಗುತ್ತದೆ. ವಿಪ್ರವೇಷದ ಅರ್ಜುನ ದ್ರೌಪದಿಯ ಸ್ವಯಂವರ ಸಮಯದಲ್ಲಿ ಧನುಸ್ಸನ್ನು ಸಾಧಿಸಲು ಮೇಲೆದ್ದಾಗ, "ಬಂದ ದಕ್ಷಿಣೆ ಮೃಷ್ಟಭೋಜನದಿಂದ ತುಷ್ಟರು ನಾವು ನಮಗಿದರಿಂದ ಬಹ ದುಷ್ಕೀರ್ತಿ ಬರಲಿ"[2] "ವಚನಶೂರರು ನಾವು" "ನಮ್ಮ ಸಾಹಸರಚನೆಯನು ನೋಡುವರೆ ಪಂಡಿತನಿಚಯ ವಿದಿರಲಿ ನಿಲಲಿ ತೋರುವೆವಲ್ಲಿ ವಿಸ್ಮಯವ"[3]; "ಪೌರಾಣಂಗಳಲಿ ಮೀಮಾಂಸೆಯೊಳ್ ಸ್ಮೃತಿತರ್ಕಶಾಸ್ತ್ರದಲಿ" "ವಾತ್ಸ್ಯಾಯನಾದಿಯುಪಾಂಗ ವಿದ್ಯದಲೆಮ್ಮ"[4] ನೋಡಲಿ,

> ಅಲ್ಲದಿರ್ದರೆ ಶೋಧಿಸಿದ ತನಿ। ಬೆಲ್ಲವಿಕ್ಕಿದ ಹೂರಿಗೆಯ ಮೆಟೆ
> ಯಲ್ಲಿ ಪರಡಿಯ ಶಾವಿಗೆಯ ಪರಿಪರಿಯ ಪಾಯಸದ
> ಪುಲ್ಲಿಗೆಯ ತತ್ಸವಿಯ ಮಂಡಿಗೆ।ಯಲ್ಲಿ ನವಘೃತ ಸೂಪದಂಶಕ
> ದಲ್ಲಿ ನೋಡಲಿ ನಮ್ಮನು[5]

ಎಂದು ಧೂರ್ತವಟುನಿಕರ ಗುಜುಗುಜಿಸುತ್ತದೆ; ಅರ್ಜುನನನ್ನು ನಾನಾರೀತಿಯಲ್ಲಿ ವಿಡಂಬಿಸುತ್ತದೆ.[6] ಸಮಯಸಿಕ್ಕಿದಾಗಲೆಲ್ಲ ಕರ್ಣನಂತು ಅವನ ಮಾನ ತೆಗೆಯುತ್ತಾನೆ. ಕವಿ ಬ್ರಾಹ್ಮಣನಾಗಿದ್ದರೆ ಇಂಥ ಮಾತುಗಳನ್ನು ತಡೆಹಿಡಿಯುತ್ತಿದ್ದನೆಂದು ಊಹಿಸಲವಕಾಶವುಂಟು. ಆದರೆ ಕುಮಾರವ್ಯಾಸ ಯೋಗಿಗನುಗುಣವಾದ ನಿರ್ಲಿಪ್ತತೆಯನ್ನು ಸಿದ್ಧಿಸಿಕೊಂಡಿದ್ದಾನೆಂದು ತಿಳಿಯುವುದೇ ಮೇಲು.

ಅವನ ಮತದ ವಿಷಯದಲ್ಲಿಯೂ ಇಂಥದೇ ಗೋಜು ಸಿಕ್ಕುಗಳಿವೆ. ಅವನ ಕಾಲಕ್ಕೆ

[1] ಕುಮಾರವ್ಯಾಸ ಪ್ರಶಸ್ತಿ, ಪು. ೬೯; [2] ಅ ೧೫-೩; [3] ಅದೇ-೪; [4] ಅದೇ ೫; [5] ಅದೇ-೭; [6] ಅದೇ-೧೦, ೧೧, ೧೨, ೧೩, ೧೪

ಗದುಗು ಸೀಮೆಯಲ್ಲಿ ಹಲವು ಮತಗಳು ಆಚರಣೆಯಲ್ಲಿದ್ದುವು.[1] ಬ್ರಾಹ್ಮಣರ ವರ್ಣನೆಯನ್ನು, ಅವರ ಸಂಧ್ಯಾವಂದನೆ ಅಗ್ನಿಹೋತ್ರಗಳ ವಿವರಗಳನ್ನೂ, ವರ್ಣಾಶ್ರಮ ಧರ್ಮದ ಮೇಲುಗಾರಿಕೆಯ ನಿರೂಪಣೆಯನ್ನೂ, ನೋಡಿದಾಗ ಅವನು ಕರ್ಮಮಾರ್ಗದಲ್ಲಿ ಶ್ರದ್ಧೆಯುಳ್ಳವನೆಂದು ಹೇಳಬೇಕಾಗುತ್ತದೆ. ಭಗವಂತನ ಪರಾಪರತೆ, ಸರ್ವವ್ಯಾಪಕತೆ, ಚೇತನ ಸಾಕ್ಷಿತ್ವ, ಸರ್ವಪ್ರೇರಕತ್ವ, ಸಾಕಾರನಿರಾಕಾರ ವಿಚಾರ, ಏಕತತ್ವವಾದ, ಮಾಯಾವಾದ, ಹೀಗೆ ಜ್ಞಾನಮಾರ್ಗಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳು ಭೀಷ್ಮೋಕ್ತ ಕೃಷ್ಣಪ್ರಶಂಸೆ, ಮಾರ್ಕಂಡೇಯೋಪದೇಶ, ವಿದುರನೀತಿ, ಸನತ್ಸುಜಾತೀಯ ಗೀತೋಪದೇಶ ಮೊದಲಾದ ಸಂದರ್ಭಗಳಲ್ಲಿ ಬರುತ್ತವೆ. ಮೂಲಭಾರತ ಬಹುಜನರ ಕೈವಾಡವಾದ್ದರಿಂದ, ಬೇರೆ ಬೇರೆ ಮತಗಳಿಗೆ ಸಂಬಂಧಿಸಿದ ತತ್ವಗಳು ಅಲ್ಲಿ ನಾಟಿಗೊಂಡಿರುವುದು ಸಹಜ. "ಮಾರ್ಕಂಡೇಯ, ಭೀಷ್ಮ, ವಿದುರ, ಸನತ್ಸುಜಾರಾದಿಗಳು ಬೇರೆ ಬೇರೆ ಭಿನ್ನ ಮತಕ್ಕೆ ಸೇರಿರಬಹುದು. ನಾವು ಮಾರ್ಕಂಡೇಯನ ವಾಕ್ಯದಲ್ಲಿ ಒಂದು ಚೂರನ್ನೂ ವಿದುರನೀತಿಯಲ್ಲಿ ಒಂದು ಚೂರನ್ನೂ ಆರಿಸಿ ಸೇರಿಸಿ ಒಂದು ಸಾರಾಂಶವನ್ನು ಕಲ್ಪಿಸುವುದು ಸುತರ್ಕವಾಗುವುದಿಲ್ಲ."[2] ಕವಿಯ ಒಲವು ಭಕ್ತಿಮಾರ್ಗದ ಕಡೆಗೆನ್ನುವುದು ಸುಸ್ಪಷ್ಟ. ಅವನ ಆರಾಧ್ಯದೇವತೆ ಯಾರು ಎನ್ನುವ ವಿಷಯದಲ್ಲಿ ಪಂಡಿತರು ಅನೇಕ ಸಮಸ್ಯೆಗಳನ್ನೆತ್ತಲವಕಾಶವುಂಟು. ಕವಿಯ ದೃಷ್ಟಿಯಲ್ಲಿ ಭಾರತ ಕೃಷ್ಣಚರಿತೆ ಎನ್ನುವುದಂತು ನಿಶ್ಚಯ. ಪಾಂಡವರು ಕೃಷ್ಣಭಕ್ತರು. ಬುದ್ಧಕನ್ನು ಕೃಷ್ಣಲೀಲೆಗೇ ಪ್ರಾಧಾನ್ಯ. "ಹರಿಯಬಸುರೊಳಗಖಿಳ ಲೋಕವ ವಿರಳವಡಗಿಹವ್ರೋಲು"[3] "ಕೃಷ್ಣ ಜಗದೇಕ ದೈವ"[4] "ಹರಿಸರ್ವಗತ"[5] "ಕೃಷ್ಣನ ಕಾಬ ಸುಕೃತ ಫಲ"[6] ಇವೇ ಮೊದಲಾದ ಹರಿಪರವಾದ ಮಾತುಗಳಲ್ಲದೆ ಕೃಷ್ಣ ಮಾಹಾತ್ಮ್ಯವನ್ನು ಪ್ರಕಟಪಡಿಸುವ ಪ್ರಶಂಸಾಭಾಗಗಳು ಶಿಶುಪಾಲವಧ, ದ್ರೌಪದೀ ವಸ್ತ್ರಾಪಹರಣ, ಜಂಬೂಫಲೋತ್ತರಣ, ಕೃಷ್ಣಸಂಧಾನ ಮೊದಲಾದ ಪ್ರಕರಣಗಳಲ್ಲಿ ಅತಿಶಯವಾಗಿ ಬರುತ್ತವೆ. "ಮೆಚ್ಚಿಸ ಲರಿಯರಜರುದ್ರಾಮರೇಶ್ವರರು."[7] "ಇದು ಹರಬ್ರಹ್ಮಾದಿಗಳ ಗೆಲುವುದು ಕಣಾ"[8] ಎನ್ನುವಲ್ಲಿ ಹರಿಪಾರಮ್ಯ ವ್ಯಕ್ತವಾಗುತ್ತದೆ. ಗ್ರಂಥಾರಂಭದಲ್ಲಿ ಶಿವ ಗಣಪತಿ ಶಾರದೆಯರ ಸ್ತುತಿಯಿದೆ. ವಿಸ್ಮಯಾಭಿವ್ಯಕ್ತಿಯಲ್ಲಿ, ಶೌರ್ಯ ಪ್ರಶಂಸೆಯಲ್ಲಿ. ಇನ್ನೂ ಹಲವಾರು ಸಂದರ್ಭಗಳಲ್ಲಿ ಶಿವಪರವಾದ ಮಾತುಗಳು ಲೀಲಾಜಾಲವಾಗಿ ಅನೈಚ್ಛಿಕವೆಂಬಂತೆ ಬರುತ್ತವೆ. "ಹರನನುಡಿಯೇ ವೇದ ಹರನಾಚರಣೆಯೇ ಸನ್ಮಾರ್ಗ ಹರ ಪತಿಕರಿಸಿ ನುಡಿದುದೆ ಪರಮಪಾವನ ಧರ್ಮತತ್ವವದು:" "ಜಗಕೆ ಸಮರ್ಥನೊಬ್ಬನೆ ಶಂಭು"[9] "ಬಲದಲಿ ಶಿವನ ಬಲದಿಂದಧಿಕ ಬಲವನು ಕಾಣೆ"[10] "ಸಕಲ ದೈವದ ದೊರೆಯಲೇ ಹರ ನಾತನಸ್ತ್ರವನಾರು ತರುಬುವರು"[11] "ಹರಹರ ಎಂದನಸುರಾರಿ"[12] ಇಂಥ ಮಾತುಗಳು

---

[1] ಕುಮಾರವ್ಯಾಸ ಪ್ರಶಸ್ತಿ, ಪು. ೨೭-೨೯; [2] ಅದೇ, ಪುಟ ೪೯; [3] ಆ ೧.೧೮
[4] ಸ ೨-೮೪; [5] ಉ ೪.೩೭; [6] ಕ ೨೭.೯; [7] ಆ ೨೦.೬; [8] ದ್ರೋ ೩.೭೨;
[9] ಆ ೪.೧೭; [10] ಉ ೩.೩೩; [11] ದ್ರೋ ೧೫-೧೬; [12] ಕ ೧೭.೨೨

ಕಾವ್ಯದಲ್ಲೆಲ್ಲ ಹೆರಡಿಕೊಂಡಿವೆ. ಪಾಶುಪತಾಸ್ತ್ರ ಸಂಪಾದನೆಗಾಗಿ ಅರ್ಜುನ ಹರನನ್ನು ಕುರಿತು ತಪಸ್ಸು ಮಾಡುತ್ತಾನೆ. ತ್ರಿಪುರದಹನ ಪ್ರಕರಣದಲ್ಲಿ ಹರಪಾರಮ್ಯ ಎದ್ದು ಕಾಣುತ್ತದೆ. ತ್ರಿಮೂರ್ತಿಗಳನ್ನು ಸಮನಾಗಿ ಕಾಣುವ ಸಂದರ್ಭಗಳೂ ಸಾಕಷ್ಟಿವೆ. ಕುಂತಿಪುತ್ರ-ಮಂತ್ರಗಳನ್ನು ನೆನೆಯುವಾಗ ಹರಿಹರಬ್ರಹ್ಮಾದಿಗಳಿಗೆರಗುತ್ತಾಳೆ. "ಸದ್ಧರ್ಮಸಂರಕ್ಷಕರು ಹರಿಧೂರ್ಜಟಿಪಿತಾಮಹರು"[1] ಎಂದು ವೇದವ್ಯಾಸ ಧೃತರಾಷ್ಟ್ರನಿಗೆ ಸ್ಪಷ್ಟಪಡಿಸುತ್ತಾನೆ. ಇಂತೆಯೇ ಹರಿಹರಸಮತ್ವ ಪ್ರತಿಪಾದನೆಯ ನುಡಿಗಳು ಮೇಲಿಂದ ಮೇಲೆ ದೊರಕುತ್ತವೆ. ಅರ್ಜುನ ಇಂದ್ರಕೀಲಪರ್ವತಕ್ಕೆ ಹೋಗುವಾಗ ಯುಧಿಷ್ಠಿರ ಅವನಿಗೆ "ಶೂಲಿಯು ಪದ ಯುಗವ ಮರೆಯದಿರು, ಹರಿಯನು ಹೃದಯದಲಿ ಪಲ್ಲಟಿಸದಿರು"[2] ಎಂದು ಬುದ್ಧಿ ಹೇಳುತ್ತಾನೆ. ಗೋಗ್ರಹಣ ಯುದ್ಧದಲ್ಲಿ ಗೆದ್ದ ಮಾರನೆಯ ದಿನ ಪಾಂಡವರು "ಹರಹರ ಶ್ರೀಕಾಂತನೆನುತ"[3] ಉಪ್ಪವಡಿಸಿವರಂತೆ. ಸೈಂಧವನನ್ನು ಸಂಹರಿಸದಿದ್ದರೆ "ಹರ ಮುರಾರಿಯ ಭೇದವಾದಿಯ ...ನರಕವಾಗಲಿ" ಎಂದು ಅರ್ಜುನ ಶಪಥಗೈಯುತ್ತಾನೆ. "ಸಕಲ ಜಗದಳಿವಿನಲಿ ರುದ್ರಾತ್ಮಕನೆ ವಿಷ್ಣುವು"[4] ಎನ್ನುವಂತೆ ಕೃಷ್ಣ ಭೀಷ್ಮನ ಮೇಲೆ ರೋಷಗೊಂಡು ಸುದರ್ಶನವನ್ನು ಪ್ರಯೋಗಿಸಲುದ್ಯುಕ್ತನಾಗುತ್ತಾನೆ. ಈ ಮಾತಿನಲ್ಲಿ ಹರಿಹರಾಭೇದತತ್ವ ಸುಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ.

ಮತೀಯ ಅಥವಾ ಅಧ್ಯಾತ್ಮಿಕ ವಿಚಾರ ಸಂಬಂಧವಾಗಿ ಪರಸ್ಪರ ವಿರೋಧವೆಂಬಂತೆ ಕಾಣುವ ಅನೇಕ ಸಂಗತಿಗಳಿಲ್ಲಿ ಉಕ್ತಗೊಂಡಿರುವುದರಿಂದ ಕವಿಯ ಮತದ ಬಗ್ಗೆ ಭಿನ್ನಾಭಿಪ್ರಾಯಗಳು ಹಬ್ಬುವುದು ಸಹಜ. ಪಂಡಿತ ವಿ. ಶಾಮಾಚಾರ್ಯರು ಕವಿ ಅದ್ವೈತಿ ಎಂದೂ ದ್ವೈತಿಯೆಂದೂ ಹೇಳಲಿಕ್ಕಿರುವ ಸಾಧನಗಳನ್ನು ವಿವರಿಸಿ, ಅವನು ದ್ವೈತಿಯೆಂದೂ, ಅದ್ವೈತಿಯಲ್ಲವೆಂದೂ ಊಹಿಸಿ, "ಈ ವಿವಾದವನ್ನು ಪರೀಕ್ಷಕರು ತಾವು ತಾವೇ ವಿಚಾರಪೂರ್ವಕವಾಗಿ ಪರಿಹರಿಸಿಕೊಳ್ಳತಕ್ಕುದಾಗಿರುವುದರಿಂದ ನಾವು ಇರುವ ಸ್ಥಿತಿಯನ್ನು ಸೂಚಿಸಿರುವೆವೇ ಹೊರತು ಯಾವ ಪಕ್ಷವನ್ನೂ ನಿರ್ಧರಿಸಲು ಯತ್ನಿಸಿರುವುದಿಲ್ಲ"[5] ಎಂದು ನುಡಿದಿದ್ದಾರೆ. "ಈ ವಚನಗಳು ಪರಿಶೀಲಿಸಿದರೆ ದ್ವೈತ ಮತಕ್ಕೆ ವಿರುದ್ಧವಾಗಿ ತೋರುತ್ತವೆ. ಆದುದರಿಂದ ಈ ಕವಿಯು ಅದ್ವೈತಿಯೆಂದೇ ಹೇಳಬಹುದು"[6] ಎಂದು ಪಂಡಿತ ಟಿ. ಎನ್. ಸುಬ್ಬರಾಯಶಾಸ್ತ್ರಿಗಳು ಅಭಿಪ್ರಾಯ ಪಟ್ಟಿದ್ದಾರೆ. "ಅದ್ವೈತದಲ್ಲಿ ಶ್ರದ್ಧೆಯುಳ್ಳ ಕುಮಾರವ್ಯಾಸನು ಮಾಧ್ವನೂ ಅಲ್ಲ, ರಾಮಾನುಜ ಸಂಪ್ರದಾಯದ ವೈಷ್ಣವನೂ ಅಲ್ಲವೆಂದು ಇಷ್ಟು ಸ್ಪಷ್ಟವಿರುವಾಗ ಈತನು, ಭಾಗವತಸಂಪ್ರದಾಯದವನಿರಬೇಕು ಎಂಬುದು ಅಷ್ಟೇ ಸ್ಪಷ್ಟವಾಗುತ್ತದೆ"[7] ಎಂದು ಗೋವಿಂದ ಪೈಗಳು ಸ್ಪಷ್ಟೀಕರಿಸಿದ್ದಾರೆ. "ಅವನು ಶ್ರೀ ವೈಷ್ಣವ ಸಂಪ್ರದಾಯವನ್ನವ ಲಂಬಿಸಿದ ಹರಿಹರ ಭಾಗವತನೆಂದಾಗಲಿ ಅಥವಾ ಭೇದಾಭೇದ ವಾದದ ಭಾಗವತ

---

1 ಗ ೧೧-೭ ; 2 ಅ ೪-೨೭ ; 3 ದ್ರೋ ೮-೩೭ ; 4 ಭೀ ೬-೨೮ ; 5 ಕುಮಾರವ್ಯಾಸ ಪ್ರಶಸ್ತಿ, ಪುಟ ೮೦ ; 6 ಕುಮಾರವ್ಯಾಸ ಪ್ರಶಸ್ತಿ, ಪು. ೮೦ ; 7 ಅದೇ, ಪು. ೮೧

ನೆಂದಾಗಲಿ ಹೇಳಬೇಕಾಗುವುದು"[1] ಎಂದು ಮಂ. ಅ. ದೊರೆಸ್ವಾಮಿ ಅಯ್ಯಂಗಾರ್ ತೀರ್ಮಾನಿಸಿದ್ದಾರೆ.

ಈ ಅಭಿಪ್ರಾಯಗಳಲ್ಲಿ ಲೇಖಕರ ಪೂರ್ವಸಿದ್ಧಾಂತ ಅಥವಾ ಸ್ವಮತ ವ್ಯಾಮೋಹ ಪ್ರತಿಬಿಂಬಗೊಳ್ಳುವ ಸಂಭವವುಂಟು. ಈತನಕ ನಡೆದಿರುವ ವಾದವಿವಾದಗಳ ಹಿನ್ನೆಲೆಯಲ್ಲಿ ಅವನ ಕಾವ್ಯವನ್ನು ಅಧ್ಯಯನ ಮಾಡಿದಾಗ, ಪ್ರಾಯಶಃ ಅವನು ಬ್ರಾಹ್ಮಣ ಜಾತಿಯಲ್ಲಿ ಜನಿಸಿ, ತನ್ನ ದೃಷ್ಟಿಗೆ ಬಿದ್ದ ಹಿಂದೂ ಮತದ ಶಾಖೆಗಳ ತತ್ವಗಳನ್ನು ತಿಳಿದುಕೊಂಡು, ಒಂದೊಂದು ಶಾಖೆಯ ಸಿದ್ಧಾಂತ ಪಾರ್ಶ್ವಿಕ ಸತ್ಯವನ್ನು ಮಾತ್ರ ನಿರೂಪಿಸುತ್ತದೆಂಬ ಸಂಗತಿಯನ್ನು ಮನದಟ್ಟು ಮಾಡಿಕೊಂಡು, ಯಾವುದನ್ನೂ ಬಿಡದೆ, ಯಾವುದನ್ನೂ ಕಟ್ಟಿಕೊಳ್ಳದೆ, ಎಲ್ಲವನ್ನೂ ಮೀರಿ, ಎಲ್ಲ ತತ್ವಗಳನ್ನೂ ಅನುಷ್ಠಾನಗೈದು, ಸರ್ವದರ್ಶನ ಹಾಗೂ ಯೋಗಸಮನ್ವಯವನ್ನು ಸಾಧಿಸಿದ ಯೋಗಿಯೆಂದು ತಿಳಿಯಬಹುದಾಗಿದೆ. ಅವನ ಕಲ್ಪನೆಯ ಜಾತಿ ವರ್ಣಗಳ ಬಗೆಗೂ ಇದೇ ರೀತಿ ವ್ಯಾಖ್ಯಾನ ಮಾಡಬಹುದೇನೋ ಎನಿಸುತ್ತದೆ. ಆ ಕಾಲದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅವನ ಬ್ರಾಹ್ಮಣ-ಪ್ರಜ್ಞೆ ಜಾಗರೂಕವಾಗಿದ್ದು, ಒಮ್ಮೊಮ್ಮೆ ಕೆರಳಿ ಅವರಿವರ ಮಾತುಕತೆಗಳ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಅವನು ಅಧ್ಯಾತ್ಮ ಸಾಧನೆಯ ಮೂಲಕ ಸಂಕುಚಿತವಾದ ಸಾಂಪ್ರದಾಯಕ ಬ್ರಾಹ್ಮಣಿಕೆಯಿಂದ ಪಾರಾಗಲು ಪ್ರಯತ್ನಿಸಿದರೂ ಆ ಪ್ರಯತ್ನದಲ್ಲಿ ಸಂಪೂರ್ಣವಾಗಿ ಯಶಸ್ವಿಯಾದಂತೆ ತೋರದು. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಜಾತಿಸಾಂಕರ್ಯ ಭಯ ಇದ್ದಕ್ಕಿದ್ದಂತೆ ಇಣುಕುತ್ತದೆ. ಆದರೆ ಅವನು ಬ್ರಾಹ್ಮಣರನ್ನು ಲೇವಡಿ ಮಾಡಿರುವುದೂ ಉಂಟು. ಆ ಲೇವಡಿ ಅವರ ಊಟೋಪಚಾರ ವೇಷಭೂಷಣಗಳಿಗೆ ಸಂಬಂಧಿಸಿದ್ದು. ಸ್ವರ್ಗ ನರಕ ಉತ್ತಮಾಧಮಗಳ ಪ್ರಶ್ನೆ ಬಂದಾಗ ಅವನ ಮೂಲಪ್ರಜ್ಞೆ ಎಚ್ಚರಗೊಳ್ಳುತ್ತದೆ. ತಂತಮ್ಮ ಗುಣಕರ್ಮಗಳಿಂದ ಯಾರಾದರೂ ಬ್ರಾಹ್ಮಣನನ್ನು ಮೀರಿಸಬಹುದೆಂಬ ಭಾವನೆ ಒಂದೆರಡು ಕಡೆ ಮೂಡಿದೆ. ಯಾವ ದರ್ಶನವಾಗಲಿ, ಸಿದ್ಧಾಂತವಾಗಲಿ, ತತ್ವವಾಗಲಿ, ಯೋಗವಾಗಲಿ ಒಂದು ಮತ್ತೊಂದಕ್ಕಿಂತ ಮೇಲು ಎನ್ನುವುದು ಸರಿಯಲ್ಲ, ಅದು ಪೂರ್ಣದೃಷ್ಟಿಯಿಂದ ಕೂಡಿದ್ದಲ್ಲ ಎಂಬ ಮತ ಅವನದು. ಭಕ್ತಿಮಾರ್ಗವನ್ನನುಸರಿಸುವ ಯೋಗಿಯಲ್ಲಿ ಬೇರೆ ಯೋಗಗಳ ಗುಣಗಳು ಲುಪ್ತವಾಗಿರುವುದಿಲ್ಲ. ಜ್ಞಾನಯೋಗಿಯಲ್ಲಿ ಭಕ್ತಿಯಿಲ್ಲವೆನ್ನುವಂತಿಲ್ಲ; ಹಾಗೆಯೇ ದ್ವೈತದಲ್ಲಿ ಅದ್ವೈತ, ಅದ್ವೈತದಲ್ಲಿ ದ್ವೈತ ಗುಪ್ತಗಾಮಿನಿಯಾಗಿ ಹರಿಯುತ್ತಿರುತ್ತದೆ. ಈ ಒಂದೊಂದು ತತ್ವವೂ ಸತ್ಯದ ಒಂದೊಂದು ಅವಯವ. ಮನುಷ್ಯನ ಒಂದೊಂದು ಅಂಗ ಪ್ರತ್ಯೇಕವಾಗಿ ದೇಹವೆನಿಸಿಕೊಳ್ಳುವುದಿಲ್ಲ. ಅವನ್ನೆಲ್ಲ

---

[1] ಅದೇ, ೭೫. ಶ್ರೀಮಾನ್ ಮಂ.ಅ. ದೊರೆಸ್ವಾಮಿ ಅಯ್ಯಂಗಾರ್ ಅವರು 'ಕುಮಾರವ್ಯಾಸ ಪ್ರಶಸ್ತಿ'ಯ ೨೫ರಿಂದ ೭೮ನೆಯ ವರೆಗಿನ ಪುಟಗಳಲ್ಲಿ 'ಕುಮಾರವ್ಯಾಸನ ಮತಧರ್ಮ'ವನ್ನು ಕುರಿತು ವಿಸ್ತಾರವಾಗಿ ಸನಿದರ್ಶನವಾಗಿ ಚರ್ಚೆ ನಡೆಸಿದ್ದಾರೆ. ಈ ಬಗ್ಗೆ ವಿವರ ಬಯಸುವವರು ಆ ಲೇಖನ ನೋಡಬಹುದು.

ಒಟ್ಟಿಗೆ ಕಲ್ಪಿಸಿಕೊಂಡಾಗ ಮಾತ್ರ ದೇಹದ ಆಕೃತಿ ಸ್ಪಷ್ಟಗೋಚರವಾಗುತ್ತದೆ. ಯಾವ ವಸ್ತುವಾದರೂ ಅಷ್ಟೆಯೆ. ನಾಲ್ವರು ಕುರುಡರು ಆನೆಯ ಅವಯವಗಳನ್ನು ಮುಟ್ಟಿ, ಅದು ಮೊರದಂತಿದೆಯೆಂದೋ, ಕಂಬದಂತಿದೆಯೆಂದೋ ಪೊರಕೆಯಂತಿದೆಯೆಂದೋ ಗೂಟ ದಂತಿದೆಯೆಂದೋ ಭಾವಿಸಿಕೊಂಡಂತಾಗಿದೆ,ಅಧ್ಯಾತ್ಮಸಂಬಂಧವಾದ ವಾದವಿವಾದಗಳು. ಅವೆಲ್ಲವನ್ನು ಒಟ್ಟಾಗಿ ಗ್ರಹಿಸಿದಾಗ ಮಾತ್ರ ಸತ್ಯದ ಪೂರ್ಣಚಿತ್ರ ಅರಿವಾಗುತ್ತದೆ. ಹಾಗೆ ಅಖಂಡವಾಗಿ ಗ್ರಹಿಸದಿದ್ದರೆ ಅಂಗರಚನಶಾಸ್ತ್ರಜ್ಞ ತನ್ನ ಪ್ರಯೋಗಶಾಲೆಯಲ್ಲಿ ದೇಹದ ಅಂಗಾಂಗಗಳನ್ನು ಕೊಯ್ದು, ವಿಭಜಿಸಿ, ಪರೀಕ್ಷೆಗೆ ಗುರಿಪಡಿಸಿದಂತಾಗುತ್ತದೆ. ನಿಜವಾದ ಸಾಧಕನಿಗೆ ಈ ದೇವರು ಆ ದೇವರು ಬೇರೆಯಲ್ಲ, ಈ ತತ್ವ ಆ ತತ್ವ ಬೇರೆಯಲ್ಲ; ಅವೆಲ್ಲ ಒಂದೇ ಶಕ್ತಿಯ ಪ್ರತಿಬಿಂಬಗಳು. ಈ ಎಲ್ಲ ದರ್ಶನ ಹಾಗೂ ಯೋಗಗಳ ಸಾಮರಸ್ಯವನ್ನು ಸಾಧಿಸುವವನೇ ನಿಜವಾದ ಸಾಧಕ; ಅಂಥ ಸಾಧನೆಯಿಂದ ಸಂಲಬ್ಧವಾಗುವ ಸಿದ್ಧಿಯೇ ಸಂಸ್ಕೃತಿ. ಒಟ್ಟಿನಲ್ಲಿ ಆಗಿನ ಕಾಲದ ಸಮಾಜದಲ್ಲಿದ್ದ ಜಾತೀಯ ಹಾಗೂ ಮತೀಯ ಪರಿಸ್ಥಿತಿಯನ್ನು ಪರಿಚಯಿಸಿಕೊಳ್ಳಲು ಇದೊಂದು ಸಾಧನವಾಗಿದೆ.

ಭಕ್ತಿಯ ಸ್ವರೂಪ

ಮಹಾಭಾರತದಲ್ಲಿ ಶ್ರೀಕೃಷ್ಣನನ್ನು ಬಿಟ್ಟರೆ, ಉಳಿದ ವ್ಯಕ್ತಿಗಳ ಪೈಕಿ ಸಂಸ್ಕೃತಿಯೇ ಮೂರ್ತಿವೆತ್ತಂತಿರುವ, ಸರ್ವಜನ ಗೌರವ ಭಾಜನರಾದವರೆಂದರೆ ಒಬ್ಬ ಮುತ್ತಜ್ಜ, ಮತ್ತೊಬ್ಬ ಮುನ್ಮಗ ಭೀಷ್ಮ ಮತ್ತು ಅಭಿಮನ್ಯು. ಎಳೆತನದಲ್ಲಿಯೇ ಅತಿರಥ ಮಹಾ ರಥರ ಪರಾಕ್ರಮವನ್ನು ಮೆರೆದು, ಕಾಯಸುಖವನ್ನು ತೊರೆದು, ಹಿರಿಯರು ಹಿಡಿದ ಧರ್ಮವೇ ತನ್ನ ಧರ್ಮವೆಂದು ಬಗೆದು, ಶ್ರೀಕೃಷ್ಣನ ಧರ್ಮಸಂಸ್ಥಾಪನಕಾರ್ಯದಲ್ಲಿ ನೆರವಾಗುವ ಸಲುವಾಗಿ ಯುದ್ಧದೇವತೆಗೆ ಸಂತೋಷದಿಂದ ತನ್ನ ಪ್ರಾಣವನ್ನರ್ಪಿಸಿದ ಮಹಾವೀರನವನು. ಧರ್ಮವೋ ಅಧರ್ಮವೋ ಯುದ್ಧ ಪ್ರಾರಂಭವಾಗಿದೆ. ಅನ್ಯಾ ಲೋಚನೆಯಿಲ್ಲದೆ, ತನ್ನ ಕರ್ತವ್ಯ ಕರ್ಮವೆಂದರಿತು, ರಣರಂಗವನ್ನು ಪ್ರವೇಶಿಸ ಬೇಕಾದ್ದು ವೀರರ ಧರ್ಮ. ತಂತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಪ್ರಾಮಾಣಿಕತೆ ಯಿಂದ ನೆರವೇರಿಸುವವನೇ ಗರುವ. ಭೀಷ್ಮ ಅಂಥವರಲ್ಲೊಬ್ಬ. ಸಂಸ್ಕೃತಿ ಎಂದರೇ ನೆಂದು ಯಾರಾದರೂ ಪ್ರಶ್ನಿಸಿದರೆ, ಅವನ ಕಡೆಗೆ ಬೆರಳುಮಾಡಿ, ತೆಪ್ಪಗಾಗಬಹುದು. ಮಹಾಭಾರತದಲ್ಲಿ ಅವನೆತ್ತರಕ್ಕೆ ನಿಲ್ಲುವ ವ್ಯಕ್ತಿ ಮತ್ತೊಬ್ಬನಿಲ್ಲ. ತಂದೆಯ ಸುಖ ಕ್ಕೋಸ್ಕರವಾಗಿ ತನ್ನೆಲ್ಲ ಸುಖವನ್ನು ತ್ಯಜಿಸಿದ; ಚಕ್ರವರ್ತಿಯ ಪದವಿಯನ್ನು ತಿರಸ್ಕರಿ ಸಿದ; ಯಾವ ತಾಯಿಯ ದೆಸೆಯಿಂದಾಗಿ ಆಜನ್ಮ ಬ್ರಹ್ಮಚರ್ಯದ ಪ್ರತಿಜ್ಞೆ ಕೈಗೊಳ್ಳ ಬೇಕಾಗಿತ್ತೋ ಆ ತಾಯಿಯೇ ಮದುವೆಯಾಗೆಂದು, ರಾಜ್ಯಾಭಿಷಿಕ್ತನಾಗೆಂದು ಬಲಾ ತ್ಕರಿಸಿದಾಗ ತನ್ನ ಸಂಕಲ್ಪಕ್ಕೆ ಎಳ್ಳು ನೀರೆರೆಯಲಿಲ್ಲ; ಅತೃಪ್ತಿ ನಿರಾಶೆಗಳಿಂದ ಊರು ಬಿಟ್ಟು ಕಾಡು ಸೇರಿ, ಕಾವಿತೊಡಲಿಲ್ಲ; ಸ್ವಸುಖದ ಬಗ್ಗೆ ವಿರಕ್ತನಾಗಿ, ಭರತವಂಶಾಭ್ಯು

ದಂಪದ ಬಗ್ಗೆ ಅನುರಕ್ತನಾಗಿ, ಎರಡು ತಲೆಯ ಮಕ್ಕಳನ್ನು ಸಾಕಿ, ಸಲಹಿ, ಸೋದರ ಕಲಹ ತಪ್ಪಿಸಲು ತನ್ನ ಬುದ್ಧಿಸಾಹಸಗಳನ್ನೆಲ್ಲ ವೆಚ್ಚಮಾಡಿ, ತಾನು ವಿಫಲನಾದಾಗ ನೊಂದು ಬೆಂದು, ಸಂಗ್ರಾಮ ಪ್ರಾರಂಭದಲ್ಲಿ ತಾನೇ ಪ್ರಥಮ ಸೇನಾನಿಯಾಗಿ ಧರ್ಮ ವನ್ನು ಮೀರದೆ ಜೋಳದ ಪಾಳಿಯನ್ನು ಪಾಲಿಸಿಕೊಂಡು, ಪ್ರಾಣತೆತ್ತ ಮಹಾನುಭಾವ ಆತನು; ಲೌಕಿಕ ಧಾರ್ಮಿಕ ಕ್ಷೇತ್ರಗಳೆರಡರಲ್ಲಿಯೂ ಸಾಮರಸ್ಯವನ್ನು ಸಾಧಿಸಿ, ಸಿದ್ಧಿ ಯನ್ನು ಪಡೆದ ಮಹಾಯೋಗಿ; ದೀರ್ಘಾನುಭವದ ಫಲವಾಗಿ ಧರ್ಮಸೂಕ್ಷ್ಮವನ್ನರಿತ ಮಹಾಜ್ಞಾನಿ; ಸರ್ವಯೋಗಗಳ ಸಂಗಮಸ್ಥಾನವಾಗಿದ್ದ ಮಹಾತಪಸ್ವಿ; ನಡೆನುಡಿಗಳ ಲ್ಲೆಂದೂ ಓರೆಕೋರೆಗಳು ಕಾಣದ ಸ್ಥಿತಪ್ರಜ್ಞ. ಭಕ್ತಿಯಲ್ಲಿ ಅವನನ್ನು ಮೀರಿಸಿದವರಿಲ್ಲ. ರಾಜಸೂಯಯಾಗ ಸಮಯದಲ್ಲಿ ಅದು ಸುಪ್ರಕಟಗೊಳ್ಳುತ್ತದೆ. ಅವನ ಜೀವನದಲ್ಲಿ ವೀರಭಕ್ತಿ ಗುಣಗಳೆರಡೂ ಸಮಸ್ಪರ್ಧಿಯಾಗಿವೆ; ಆ ಎರಡೂ ಏಕಪ್ರವಾಹವಾಗಿ ಹರಿಯುತ್ತಿವೆ. ವೀರ ಭಕ್ತಿಯಾಗಿ, ಭಕ್ತಿ ವೀರವಾಗಿ ಅವನ ಆರಾಧ್ಯದೈವವಾದ ಕೃಷ್ಣನೇ ಕೊಚ್ಚಿಹೋಗುವ ಪ್ರಸಂಗವೊದಗುತ್ತದೆ. ಭೀಷ್ಮನ ಆಟೋಪಕ್ಕೆ ಪಾಂಡವಬಲ ಬಲಿಯಾಗುತ್ತಿದ್ದಾಗ ಕೃಷ್ಣ "ಮಡುಹೆನಹಿತಾನ್ವಯವ, ಭೀಷ್ಮನ ಕಡಿದು ಭೂತ ಗಣಕ್ಕೆ ಬೋನವ ಬಡಿಸುವೆನು"[1] ಎಂದು ಚಕ್ರವನ್ನು ತುಡುಕಿಕೊಂಡು ರಥದಿಂದ ಧುಮ್ಮಿಕ್ಕುತ್ತಾನೆ. ಭೀಷ್ಮ ಬೆದರಿದನೆ ಬೆಚ್ಚಿದನೆ? ಅವನ ವೀರರಸ ಭಕ್ತಿಯ ನೆರೆಯಾಗು ತ್ತದೆ. ಶರವನ್ನು ಬಿಸುಟು, ಕರಯುಗವ ಮುಗಿದು "ರಾಮ ರಕ್ಷಿಸು, ತರಳನಲಿ ಗುಣ ದೋಷದರಕೆಯೆ?"[2] "ಕೊಲುವ ಮನವೇ ಬಿಸುಡು ಚಕ್ರವನೆನ್ನ ಕಾಯುವಲಿ; ಅಳುಕಿ ಕೋಪವು ಹರಿದುದಾದರೆ ಬಳಿಕ ನಾ ಡಿಂಗರಿಗನಲ್ಲ; ಈ ಕಳಕಳಕೆ ನಾನಂಜುವವನೇ ದೇವ ಮರಳು"[3] ಎಂದು ಆತ್ಮಪ್ರತ್ಯಯವನ್ನೂ ಭಕ್ತಿಯ ಪರಾಕಾಷ್ಠೆಯನ್ನೂ ಮೆರೆಯು ತ್ತಾನೆ. ವಿನಯ ವೀರಕ್ಕೆ ಭೂಷಣ, ಭಕ್ತಿಯ ಲಕ್ಷಣ; ಅದೇ ಸಂಸ್ಕೃತಿಯ ಭರಣ: ವೀರ ಭೀಷ್ಮನ ನಿಚ್ಚಟದ ಭಕ್ತಿಗೆ ನಾಚಿದ ಕೃಷ್ಣ ಚಕ್ರವನ್ನು ಮುಚ್ಚಿಕೊಂಡು ತೇರಿನ ಹೊರೆಗೆ ಮರಳುತ್ತಾನೆ.

ಭಕ್ತಿಯಲ್ಲಿ ಭೀಷ್ಮನಿಗೆ ಸರಿಸಮನಾಗಿ ನಿಲ್ಲುವ ಮತ್ತಿಬ್ಬರು ವ್ಯಕ್ತಿಗಳು ದ್ರೌಪದಿ ಮತ್ತು ವಿದುರರು. ಕೃಷ್ಣ ಸಂಧಾನಕ್ಕೆಂದು ಹಸ್ತಿನಾವತಿಗೆ ಹೋದಾಗ, ದುರ್ಯೋಧನನ ಅರಮನೆಯ ಕಡೆ ಕಡೆಗಣ್ಣು ಸಹ ಹಾಯಿಸದೆ, ವಿದುರನ ಮನೆಗೆ ನಡೆಯುತ್ತಾನೆ: ವಿದುರ ಕೊಟ್ಟ ಒಕ್ಕುಡಿತೆ ಹಾಲು ಕುಡಿದು ಅವನು ತೇಗಿದ್ದಲ್ಲದೆ, ತುಳುಕಿದ ಹಾಲು ದುರ್ಯೋಧನನ ಅರಮನೆಯ ಮುಂದೆ ಹೊನಲಾಗಿ ಹರಿಯುತ್ತದೆ. ಕಾಮಿನಿಗೆ ಕರಗುವ ಕೃಷ್ಣ ಇಲ್ಲದಿದ್ದರೆ, ದ್ರೌಪದಿ ಎಂದೋ ಪ್ರಾಣ ತೊರೆಯುತ್ತಿದ್ದಳೆಂದು ತೋರುತ್ತದೆ. ಅವಳ ಭಕ್ತಿಯ ಮಹಿಮೆಯಿಂದಾಗಿ ಉಟ್ಟದ ಸೀರೆ, ಅಂತೆಯೇ ಪಾತ್ರೆಯ ಅನ್ನ ಅಕ್ಷಯ ವಾಗುತ್ತವೆ. ತುಂಬಿದ ಸಭೆಯಲ್ಲಿ ದುಶ್ಶಾಸನ ಸೀರೆ ಸುಲಿಯುವಾಗ ಅವಳು ಮಾಡುವ

---

1 ಭೀ ೬-೩೫; 2 ಅದೇ, ೩೭; 3 ಅದೇ, ೪೫

ಆಕ್ರಂದನಕ್ಕೆ ಕಲ್ಲೂ ಕರಗಬೇಕು. ಅವಳ ಭಾವಶುದ್ಧಿಯ ಭಕ್ತಿ ಉತ್ಕಂಠವಾಗಿ ದ್ವಾರಕೆಯತನಕ ಹಬ್ಬುತ್ತದೆ. ಪತಿಗಳು ಧರ್ಮದ ಕಣ್ಣಿಯಲ್ಲಿ ಸಿಕ್ಕಿಕೊಂಡು ಒದ್ದಾಡುವಾಗ, ಅವಳು ಘೋರಸಂಕಟಕ್ಕೀಡಾದದ್ದಾದರೆ ಕೃಷ್ಣನೇ ಶರಣು. ಅವಳು ನೆನೆದಾಗ. ಕರೆದಾಗ ತಾನು ಯಾವ ಸ್ಥಿತಿಯಲ್ಲಿದ್ದರೂ ಸರಿಯೆ ಓಡಿಬರುತ್ತಾನೆ. ಒಂದಲ್ಲ ಒಂದು ರೀತಿಯಲ್ಲಿ ಭಾರತದ ವ್ಯಕ್ತಿಗಳೆಲ್ಲರೂ ಕೃಷ್ಣಭಕ್ತರೇ. ಧರ್ಮರಾಯನದು ಮುಗ್ಧಭಕ್ತಿ ; ಅರ್ಜುನನ ಭಕ್ತಿ ಸ್ನೇಹರೂಪವನ್ನು ತಾಳುತ್ತದೆ. ಭೀಮನದು ವೀರಭಕ್ತಿ. ಉಳಿದ ಋಷಿ ಸಾಧು ಸತ್ಪುರುಷರದು ಸಾತ್ವಿಕ ಭಕ್ತಿ. ಒಂದುರೀತಿಯ ಆಸುರೀಭಕ್ತಿ ಕರ್ಣ ದುರ್ಯೋಧನರದು. ಕರ್ಣನ ಗೆಳೆತನ ನಿರ್ವ್ಯಾಜಶೀಲವಾದದ್ದು, ಅತ್ಯದ್ಭುತವಾದದ್ದು ; ಅದು ಭಕ್ತಿಯ ರೂಪಾಂತರವೆಂದು ತಿಳಿದರೆ ದೋಷವಾಗದು : ಬಾಳಿನ ಕೊನೆ ಕೊನೆಗಂತು ಅವನ ಹೃದಯ ಮಾಗುತ್ತದೆ, ಬದುಕಿನ ಕಹಿ ಮರೆಯಾಗುತ್ತದೆ. ಅವನ ವೀರಕ್ಕೆ, ಸ್ನೇಹದ ಸಗಾಢತನಕ್ಕೆ, ದಾನಶೂರತ್ವಕ್ಕೆ ಮೆಚ್ಚಿ ಕೃಷ್ಣ ತನ್ನ ನಿಜರೂಪವನ್ನು ತೋರಿಸುತ್ತಾನೆ. "ಈತನಂತರ್ಯಾಮಿ" "ಭಿನ್ನನಂತಿರೆ ತೋರಿ ಭಿನ್ನಾಭಿನ್ನನೆನಿಸಿಯೆ ಮೆರೆವ ತಿಳಿಯಲಭಿನ್ನನೈ"[1] ಎಂದು ಹೇಳುವ ಕೌರವನಿಗೆ ಕೃಷ್ಣಮಹಿಮೆ ಸಾಕಷ್ಟು ಗೊತ್ತಿದೆ. ಅವನ ಭಕ್ತಿ ಛಲದ ರೂಪದಲ್ಲಿ ಹೊರಹೊಮ್ಮುತ್ತದೆ.

ಶಿಶುಪಾಲನಂತು ಕೃಷ್ಣನ ಕಡುವೈರಿ. ಅವನ ತಾಯಿಗೆ ಕೊಟ್ಟಿದ್ದ ವಾಗ್ದಾನ ಪಾಲನೆಗಾಗಿ ಕೃಷ್ಣ ಅವನ ಶತಾಪರಾಧಗಳನ್ನು ಸಹಿಸಬೇಕಾಗುತ್ತದೆ. ರಾಜನೀತಿಜ್ಞನಾದ ಕೃಷ್ಣನಿಗೆ ಗೊತ್ತು, ಯಾವ ಕಾಲದಲ್ಲಿ ಯಾರನ್ನು ಕೊಲ್ಲಬೇಕು, ಯಾರಿಂದ ಯಾರನ್ನು ಕೊಲ್ಲಿಸಬೇಕು ಎಂಬ ರಹಸ್ಯ. ಅಗ್ರಪೂಜಾಸಮಯದಲ್ಲಿ ಶಿಶುಪಾಲ ಕಂಡಾಬಟ್ಟೆ ಅವನನ್ನು ಬಯ್ಯುತ್ತಾನೆ. ಅವನೆಷ್ಟು ಬಯ್ದರೂ ಶ್ರೀಕೃಷ್ಣ ತುಟಿಬಿಚ್ಚುವುದಿಲ್ಲ, ಮನೋವಿಕಾರವನ್ನೂ ಪ್ರದರ್ಶಿಸುವುದಿಲ್ಲ. ಕುಮಾರವ್ಯಾಸನಂಥ ಭಕ್ತಶಿರೋಮಣಿಗೆ ದಾನವನ ಬಯ್ಗುಳ ಸ್ತುತಿಯಾಗಿ ತೋರಿರಬೇಕು. "ಇವನು ಗಡ ಚಿಕ್ಕಂದು ಮೊಲೆಗೊಟ್ಟವಳ ಹಿಂಡಿದ ಗಂಡ, ಬಂಡಿಯ ಜವಳಿಗಾಲಲಿ ಮುರಿದನೈ"[2] "ಏಳುದಿನ ಪರಿಯಂತ ಮೊರಡಿಯ ಮೇಲುಗೊಡೆಯನು ಹಿಡಿದು ಬಲು ಮಳೆಗಾಲವನು ಮಾಣಿಸಿದ ಗಡ"[3] "ಗೋವಳರ ಹೆಂಡಿರ ಹಾದರವ ಹೆಕ್ಕಳವ ಬಣ್ಣಿಸದಾದೆ"[4] ಎಂದು ಮುಂತಾಗಿ ಅವನು ಬಯ್ಯುವುದಾದರೆ ನಾರಣಪ್ಪನಿಗೆ ಬಲು ಖುಷಿ. ದೂಷಣೆಯ ನೆವದಲ್ಲಿ ಶ್ರೀಕೃಷ್ಣನ ಸಾಹಸ ಪರಂಪರೆಯನ್ನು ವರ್ಣಿಸುತ್ತಾನೆ. ಎಂಥ ದುರ್ಭರ ಸನ್ನಿವೇಶ ಸಂದರ್ಭವಾದರೂ ಸರಿಯೆ ಅದು ಅವನಿಗೆ ಭಕ್ತಿಪ್ರದರ್ಶನದ ಮಾಧ್ಯಮವಾಗುತ್ತದೆ. ಅವನ ಕಾವ್ಯಶಕ್ತಿಯ ಗುಟ್ಟು ಭಕ್ತಿ. ಓದುಗರ ಹೃದಯದಲ್ಲೆಲ್ಲ ಭಕ್ತಿಯ ಸೆಲೆಯನ್ನು ಕ್ರಿಯೆಗೊಳಿಸುತ್ತಾನೆ. ಆ ಕಾಲದಲ್ಲಿ ಮತೀಯ ಅಥವಾ ಜಾತೀಯ ವಿರಸವೇನೇ ಇರಲಿ,

[1] ಉ ೯-೭೧ ; [2] ಸ ೧೦-೧೩ ; [3] ಅದೇ, ೧೬ ; [4] ಅದೇ, ೧೯

ಭಕ್ತಿಪ್ರವಾಹದಲ್ಲಿ ಅದೆಲ್ಲ ತೇಲಿಹೋಗುತ್ತದೆ. ಶುದ್ಧ ಭಕ್ತಿಯ ಮುಂದೆ ಇಷ್ಟದೇವತೆ ಅನ್ಯದೇವತೆ ಎಂಬ ಭಿನ್ನಭಾವವಾಗಲಿ, ತಾತ್ವಿಕ ಭೇದವಾಗಲಿ ಸುಳಿಯುವುದಿಲ್ಲ.

ದೈವ–ವಿಧಿ

ದೇವರಲ್ಲಿರುವ ಅತ್ಯಂತ ತೀವ್ರವಾದ ಅನನ್ಯ ಪ್ರೀತಿಯೇ ಭಕ್ತಿ. ಅದು ಸಿದ್ಧಿಗೆ ಸುಲಭದ ದಾರಿ. ಆದರೆ ಅದು ಮತಾಂಧತೆಗೂ ಅನ್ಯದೈವ ದ್ವೇಷಕ್ಕೂ ತಿರುಗುವ ಅಪಾಯವುಂಟು. ಶುದ್ಧಭಕ್ತಿಯಲ್ಲಿ ಜ್ಞಾನ ಪ್ರೇಮ ಕರ್ಮಯೋಗ ಎಲ್ಲವೂ ವಿಲೀನಗೊಳ್ಳುತ್ತವೆ. ಆಗ ಭಕ್ತ ಎಲ್ಲೆಲ್ಲಿಯೂ ತನ್ನ ಇಷ್ಟದೈವವನ್ನೇ ಕಾಣುತ್ತಾನೆ. ಇಂಥ ಸ್ಥಿತಿ ಮುಟ್ಟಬೇಕಾದರೆ ಬಹುದಿನದ ಸಾಧನೆ ಅಗತ್ಯ. ಮೆಟ್ಟಲು ಮೆಟ್ಟಲಾಗಿ ಮೇಲೇರಿ ಶಿಖರವನ್ನು ಮುಟ್ಟಬೇಕಾಗುತ್ತದೆ. ಪ್ರಾರಂಭ ಸ್ಥಿತಿಯಲ್ಲಿ ಚಿತ್ತೈಕಾಗ್ರತೆಗಾಗಿ ಇಷ್ಟದೈವವೊಂದು ಅವಶ್ಯ. ಕುಮಾರವ್ಯಾಸನಿಗೆಂತೋ ಭಾರತದ ಎಲ್ಲ ವ್ಯಕ್ತಿಗಳಿಗೂ ಕೃಷ್ಣನೇ ಇಷ್ಟದೈವವಾಗಿದ್ದಾನೆ. ಕವಿಯ ಇಷ್ಟದೈವ ಅವನ ಮಾನಸಪುತ್ರರ ಇಷ್ಟದೈವವೂ ಆಗುತ್ತದಷ್ಟೆ. ಭಕ್ತನ ಪಾಲಿಗೆ ಅವನು ಸರ್ವಜ್ಞ, ಸರ್ವಶಕ್ತ, ಸರ್ವಾಂತರ್ಯಾಮಿ; ಅವನೇ ವಿಧಿ, ಅವನೇ ರುದ್ರ; ಅವನೇ ಸರ್ವಸ್ವ. ಅವನು ಆಗಾಗ್ಗೆ ಶಿಷ್ಟರಕ್ಷಣೆಗಾಗಿ ದುಷ್ಟಶಿಕ್ಷಣಕ್ಕಾಗಿ ಹಾಗೂ ಧರ್ಮಸಂಸ್ಥಾಪನೆಗಾಗಿ ಮಾನವ ದೇಹವನ್ನು ಧರಿಸಿ ಬರುತ್ತಾನೆ. ನಾರಣಪ್ಪನ ಭೀಷ್ಮ ದ್ರೋಣ ವಿದುರರ ಮತ್ತು ಪಾಂಡವರ ದೃಷ್ಟಿಯಲ್ಲಿ ಕೃಷ್ಣ ಅವತಾರಪುರುಷ. ಅವನು ಯಾವಾಗಲೂ ಧರ್ಮಕ್ಕೆ ಸಾಮೀಲಾಗಿ ನಿಲ್ಲುತ್ತಾನೆ. "ತೇನವಿನಾ ತೃಣಮಪಿ ನ ಚಲತಿ." "ಎತ್ತಲೊಲಿವುದು ಧರ್ಮಬಲ ತಾನತ್ತಲೊಲಿವುದು ದೈವ, ದೈವವದೆತ್ತಲೊಲಿದಿಹುದತ್ತ ವಿಜಯಶ್ರೀಯ ಕುಡಿನೋಟ."[1] "ದೈವಬಲವೇ ಬಲವಲಾ"[2] "ದೈವದ ಮೋಹ ತಪ್ಪಿದ ಬಳಿಕ ಸುಭಟರ ಸಾಹಸಿಕೆ ಹುರುಳಿಲ್ಲ."[3] "ದೈವಯೋಗವ ಪರಿಹರಿಸಲಾರಳವು?"[4] "ದೈವಯಂತ್ರವನವಗಡಿಸಿ ನೂಕುವಡೆ ನಮ್ಮಳವೆ?"[5] ದೈವಾಧೀನನಿಸ್ಮರ ಮುರಿವುದರಿದನ್ಯಾಯತಂತ್ರದಲಿ"[6] "ಬಾಹುಬಲ ಬಲವಲ್ಲ ದೈವದ್ರೋಹಿಗಳಿಗೆ"[7] "ಹಗೆಹೊಲ್ಲ ದೈವದಲಿ."[8] "ದೈವದ್ರೋಹಿಗಳು ನಿಮಗೆವಿಜಯವೆಲ್ಲಿಯದು?"[9] "ಏನಸಾಧ್ಯವು ಕೃಷ್ಣನೊಲಿದರಿಗೆ?"[10] "ನಳಿನನಾಭನ ಕರುಣದಳತೆಗೆ ನಿಲುಕದಿಹುದೇನುಂಟು?"[11] "ನಳಿನನಾಭನ ಕರುಣದೊರತೆಯ ಕಳಿದರಾರೇಗುವರು?"[12] "ಪದದ ದರ್ಪದಲಂಬುಜಾಕ್ಷನ ಪದವ ಮರೆದರೆ ಪಾತಕದ ದುರ್ಗದಲಿ ಕೆಡಹನೆ?"[13] "ಮುಕುಂದನ ನಂಬಿದವರಿಗಿಹ ಪರಸೌಖ್ಯ ಭಯವಿಲ್ಲ"[14] "ಮುರವೈರಿಯ ಕಟಾಕ್ಷದ ಕಾಹು ಘನ"[15] "ಹರಿಪದ ನಿಸ್ಮರನು ನಿಲುಕುವನೆ

---

[1] ದ್ರೋ ೪-೨; [2] ದ್ರೋ ೧೪-೪೬; [3] ಉ ೯-೨೫; [4] ಗ ೪-೪೨; [5] ಕ ೧೪-೨೪; [6] ಸ ೧೬-೧೬; [7] ಅ ೧೫-೧೯; [8] ದ್ರೋ ೧-೯; [9] ಕ ೧-೧೫; [10] ಸ ೬-೧೩; [11] ಉ ೨-೩೨; [12] ದ್ರೋಣ ೭-೧೯; [13] ಸ ೫-೪೨; [14] ದ್ರೋ ೧೪-೧೯; [15] ದ್ರೋ ೨-೬೪

ದುರ್ಜನ"[1] "ಹರಿಯೊಲಿವ ಮನುಜರ ಮೇಲೆ ಮುನಿವೇಗುವರು ಕೆಲಬರು"[2] ಈ ಮಾತು ಹೇಳುವವರು ಸಾಮಾನ್ಯರಲ್ಲ; ದೇವರೊಂದಿಗೆ ಸರಿಸಮನಾಗಿ ಹೋರಾಡು ವಂಥವರು. ಆದರೆ ತಲೆ ಬಲ್ಲಿತೆಂದು ಬಂಡೆಗೆ ತಾಟಿಸುವವರಲ್ಲ. ಭೀಷ್ಮದ್ರೋಣರಿಗೆ ಗೊತ್ತು, ತಮ್ಮ ಶೌರ್ಯ ಪರಾಕ್ರಮಗಳಿಗೆ ಧರ್ಮದ ನೆರವಿಲ್ಲವೆಂದು, ಅಧರ್ಮದ ಪರವಾಗಿ ಹೋರಾಡುವ ಶಕ್ತಿಗೆ ಇತಿಮಿತಿಗಳಿವೆಯೆಂದು. ಆದ್ದರಿಂದ ಅವರು ಕೊನೆಯುಸಿರಿರುವ ತನಕ ಹೋರಾಡಿದ್ದೂ ಆಯಿತು; ಧರ್ಮಯಜ್ಞದಲ್ಲಿ ಆತ್ಮಾಹುತಿ ನಿವೇದಿಸಿಕೊಂಡದ್ದೂ ಆಯಿತು. ಶ್ರೀಕೃಷ್ಣನಾದರೋ ನಂಬಿದವರಿಗೆ ತನ್ನನ್ನೇ ತೆತ್ತುಕೊಂಡವನು.

ತಂದೆ ಬೇಡೆನುಗವ್ವೆ ಬೇಡೆನು । ಗಿಂದುಮುಖಿಯರನೊಲ್ಲೆ ಪಾಪ್ ಮನ
ಸಂದು ಮೆಚ್ಚಿಹೆನೆಮ್ಮ ಭಕ್ತರಿಗೆಂಬನನವರತ
ನೊಂದೆನೆಂಬನು ತನ್ನವರು ಮನ । ನೊಂದರಾದೊಡೆ ತನ್ನವರ ಸುಖ
ವಿಂದು ತನ್ನದೆಂಬುದೇ ಸಿರಿಕೃಷ್ಣ ಮತ್ತವೆಂದ

ವಿ. ೧೦ ೬೨

ಅರಸಿಯರ ಬಗೆಗೊಳ್ಳ ಮಕ್ಕಳ । ಸರಕುಮಾಡನು ದೇಶಕೋಶದ
ಸಿರಿಯ ಗಣಿಸನು ಖಡ್ಡಿಗೊಳ್ಳನು ಸಂಪದವ
ಹರಿಪರಾಯಣರೆಂದೊಡವರಿಗೆ ಹರಹಿಕೊಂಬನು ಮಗನ ಶೀಲವು
ನರರ ಪರಿಯಲ್ಲ

ವಿ. ೧೦-೬೪

ಇವು ವಸುದೇವ ಪಾಂಡವರಿಗೆ ಹೇಳುವ ಮಾತುಗಳಾದರೂ, ಭಕ್ತಕವಿಯ ಆರ್ದ್ರ ಹೃದಯದ ಅಮೃತ ಬಿಂದುಗಳೆಂದು ಗ್ರಹಿಸಬಹುದು. ಭಗವಂತ ಭಕ್ತಪರಾಧೀನ. ಇದೆಲ್ಲ ನಿತ್ಯಜೀವನದಲ್ಲಿ ನಡೆಯುವ ವ್ಯಾಪಾರ. ಸ್ನೇಹ ಪ್ರೇಮಗಳಿಂದ ಯಾರನ್ನಾದರೂ ಗೆಲ್ಲಬಹುದೆಂಬುದು ಎಲ್ಲ ಮಾನವರ ನಿತ್ಯಾನುಭವ. ಆದ್ದರಿಂದಲೇ ಇದು ಸುಲಭದ ದಾರಿ ಎನ್ನುವುದು. ಮಗು ಹೊಟ್ಟೆಯಲ್ಲಿರುವಾಗಿನಿಂದ ಮಾತೃವಾತ್ಸಲ್ಯ ಅವನ ಅಂಗಾಂಗಗಳಲ್ಲಿ ಪ್ರವಹಿಸುತ್ತ ತುಷ್ಟಿಪುಷ್ಟಿಗಳನ್ನೊದಗಿಸುತ್ತದೆ. ಸತಿ-ಪತಿ, ತಾಯಿ-ಮಗಳು, ಅಣ್ಣ-ತಂಗಿ, ಅಕ್ಕ-ತಮ್ಮ, ಗುರು-ಶಿಷ್ಯ ಈ ವಿವಿಧ ಸಂಬಂಧಗಳ ಮೂಲಕ ಪ್ರೇಮದ ಸ್ವರೂಪಮಹಿಮೆಗಳು ಪ್ರತಿಯೊಬ್ಬರಿಗೂ ವೇದ್ಯವಾಗುತ್ತವೆ. ಆ ಪ್ರೇಮ ಭಗವಂತನ ಕಡೆಗೆ ಮುಖವಾದಾಗ ಭಕ್ತಿಯಾಗುತ್ತದೆ. ಆದ್ದರಿಂದ ಭಕ್ತಿ ಎನ್ನುವ ಗುಣ ಯಾರಿಗೂ ಅಪರಿಚಿತವಾದುದಲ್ಲ; ಸ್ವಭಾವಸಿದ್ಧವಾದುದೆಂದೇ ಹೇಳಬಹುದಾಗಿದೆ. ಸುಮಾರು ಮೂರ್ನಾಲ್ಕು ಶತಮಾನಗಳ ಕಾಲ ಈ ಭಕ್ತಿಯ ಪ್ರವಾಹ ಕನ್ನಡ ನಾಡಿನಲ್ಲೆಲ್ಲ ಹರಿದದ್ದುಂಟು.

---

1 ಅ ೧೬.೪೯; 2 ದ್ರೋ ೧-೨೯.

ಕರ್ಮ

ಸಾವುನೋವು ಮಳೆಬೆಳೆ ಗೊಟ್ಟು, ಸಿಡುಗು ಸಿಡಿಲು ಗುಡುಗು ಇನ್ನೂ ಎಷ್ಟೆಷ್ಟೋ ನೈಸರ್ಗಿಕ ವ್ಯಾಪಾರಗಳ ರಹಸ್ಯಭೇದನದಲ್ಲಿ ಮಾನವನ ಬೌದ್ಧಿಕ ಸಾಹಸ ಯಶಸ್ವಿಯಾಗಿಲ್ಲ. ಅವನ ಕಣ್ಣಿಗೆ ಕಾಣದ, ಮನಸ್ಸಿಗೆ ಸಿಕ್ಕದ, ಬುದ್ಧಿಗೆ ದಕ್ಕದ ಸಂಗತಿಗಳು ಅಗಣಿತವಾಗಿವೆ. ಪ್ರತಿಯೊಂದು ಕಾರ್ಯದ ಹಿನ್ನೆಲೆಯಲ್ಲೊಂದು ಕಾರಣ ಇದ್ದೇ ಇರಬೇಕಷ್ಟೆ. ಅದೊಂದು ಅಗೋಚರಶಕ್ತಿ. ಅದು ಗಾಳಿಗಿಂತಲೂ ಸೂಕ್ಷ್ಮ. ಗಾಳಿಯ ಇರವನ್ನನುಭವಿಸಬಹುದೇ ಹೊರತು, ಅದು ಮುಷ್ಟಿಗೆ ಸಿಗುವಂಥದಲ್ಲ. ಇಡೀ ಸೃಷ್ಟಿಯ ಜೀವನವನ್ನದು ನಿಯಂತ್ರಿಸುತ್ತದೆ. ಅದನ್ನು ದೇವರು, ಅದೃಷ್ಟ, ವಿಧಿ, ಕರ್ಮ ಮೊದಲಾದ ಹೆಸರುಗಳಿಂದ ಕರೆಯುವುದುಂಟು. ಭಾರತೀಯ ದೃಷ್ಟಿಯಲ್ಲಿ ಪುರುಷಕಾರಕ್ಕೂ ವಿಧಿವಿಲಾಸಕ್ಕೂ ಪರಸ್ಪರ ವಿರೋಧವಿಲ್ಲ. ಗೀತೆಯಲ್ಲಿ ಪ್ರತಿಪಾದನೆಗೊಂಡಿರುವ ಕರ್ಮಯೋಗದ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಕರ್ಮ ಮಾಡಲೇಬೇಕು. ಪ್ರಕೃತಿ ಸಹಜವಾದ ಗುಣಗಳು ಪ್ರತಿಯೊಬ್ಬನಿಂದಲೂ ಕರ್ಮವನ್ನು ಮಾಡಿಸುತ್ತವೆ. "ಶರೀರಯಾತ್ರಾಪಿ ಚ ತೇನ ಪ್ರಸಿದ್ಧ್ಯೇದಕರ್ಮಣಃ"[1] ಅಕರ್ಮಿಗೆ ಬದುಕು ಕಷ್ಟವಾಗುತ್ತದೆ. "ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ"[2] ಕರ್ಮಾನುಷ್ಠಾನದಿಂದ ಮಾತ್ರ ಜನಕ ಮುಂತಾದ ರಾಜರ್ಷಿಗಳು ಪೂರ್ಣತೆಯನ್ನು ಪಡೆಯಲು ಸಾಧ್ಯವಾಯಿತು. ಅನಾಸಕ್ತಿಯಿಂದ ಕರ್ಮವನ್ನಾಚರಿಸಬೇಕೆಂಬುದು ಗೀತೆಯ ಶ್ರೇಷ್ಠ ಸಂದೇಶಗಳಲ್ಲೊಂದು. ಎರಡು ಗುಂಪುಗಳು ಆಟವಾಡುವಾಗ ಯಾರು ಗೆಲ್ಲುತ್ತಾರೆಂದು ಮೊದಲೇ ನಿರ್ಣಯಿಸುವುದು ಕಷ್ಟ. ಸೋಲುತ್ತೇವೆಂಬ ಸುಳಿವು ಯಾವುದಾದರೊಂದು ಗುಂಪಿಗೆ ತಿಳಿದದ್ದಾದರೆ ಆಟ ಮುಂದುವರಿಸಿಯೂ ಪ್ರಯೋಜನವಿಲ್ಲ. ವಿಮಾನಾಪಘಾತಗಳು ಸಂಭವಿಸುತ್ತವೆಂದು ಯಾರೂ ವಿಮಾನಯಾನ ನಿಲ್ಲಿಸಿಲ್ಲ. ಪ್ರತಿನಿತ್ಯವೂ ಅಪಘಾತಗಳು ಸಂಭವಿಸುವುದಿಲ್ಲ. ಅಪಘಾತ ರೋಗರುಜಿನಗಳಿಲ್ಲದಿದ್ದರೂ ಸಾವು ತಪ್ಪಿದ್ದಲ್ಲ. ಕೆಲಸಕ್ಕೆ ತಕ್ಕ ಫಲ ದೊರೆಯದಿದ್ದಾಗ ಮನುಷ್ಯ ನಿರಾಶನಾಗುತ್ತಾನೆ; ದೊರೆತಾಗ ಉಬ್ಬುತ್ತಾನೆ; ಹಿಗ್ಗು ಕುಗ್ಗುಗಳೆರಡೂ ಒಳ್ಳೆಯವಲ್ಲ. ಆದ್ದರಿಂದ ಅನಾಸಕ್ತಿಯ ಅಭ್ಯಾಸ ಒಳ್ಳೆಯ ಬಾಳಿಗೆ ಅತ್ಯವಶ್ಯ. ಕಾರ್ಯಸಿದ್ಧಿಗೆ "ಅಧಿಷ್ಠಾನ, ಕರ್ತ, ಕರಣ, ಪ್ರಯತ್ನ, ದೈವ ಇವೈದೂ ಒಟ್ಟಿಗೆ ಕಾರಣಗಳು"[3] ದೈವವೆಂಬುದು ಕೊನೆಯ ಕಾರಣ. ರೈತ ಹೊಲದಲ್ಲಿ ರಾಗಿ ಬಿತ್ತುತ್ತಾನೆ. ಬಿತ್ತಿದ ನಂತರ ಮಳೆ ತಪ್ಪಿಹೋಗಿ, ಪೈರು ಎಳದರಲ್ಲಿಯೇ ಒಣಗಿ ಹೋಗುತ್ತದೆ. ಇದನ್ನೇ ವಿಧಿವಿಲಾಸ ಎಂದು ಕರೆಯುವುದು. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲೊಬ್ಬ ಕುರುಡನಾಗುತ್ತಾನೆ, ಮತ್ತೊಬ್ಬ ಪೋಲಿಯಾಗುತ್ತಾನೆ, ಮಗುದೊಬ್ಬ ಉತ್ತಮನಾಗುತ್ತಾನೆ. ಇದನ್ನೇ ಅವರವರ ಕರ್ಮ ಎಂದು

---

[1] ಭಗವದ್ಗೀತೆ ೩-೮; [2] ಅದೇ, ೨೦; [3] ವಚನಭಾರತ, ಪೀಠಿಕೆ, ಎ. ಆರ್. ಕೃಷ್ಣಶಾಸ್ತ್ರೀ, ಪು. ೪೨

ಕರೆಯುವುದು. ಸತ್ಕರ್ಮದಿಂದ ಸತ್ಫಲ, ದುಷ್ಕರ್ಮದಿಂದ ದುಷ್ಫಲ. ಆದ್ದರಿಂದ ಕೆಲಸ ಮಾಡಬೇಕು, ಒಳ್ಳೆಯ ಕೆಲಸ ಮಾಡಬೇಕು. ಫಲದ ಆಸೆ ಅಂಟಿಸಿಕೊಳ್ಳದಿದ್ದರೆ ಸುಖ ದುಃಖಗಳು ದೂರವಿರುತ್ತವೆ. ಇದು ಭಾರತದಿಂದ ಕಲಿಯಬೇಕಾದ ಪಾಠ. ಭೀಮನನ್ನು ಸಾಯಿಸುವ ಸಲುವಾಗಿ ಕೌರವರು ವಿಷವೂಡುತ್ತಾರೆ, ಕೈಕಾಲು ಬಿಗಿದು ಮಡುವಿಗೆ ಬಿಸಾಡುತ್ತಾರೆ. ಆದರೂ ಅವನು ಸಾಯುವುದಿಲ್ಲ. "ಆಯುಷ್ಯವುಳ್ಳರೆ ಹರಿಹರ ಬ್ರಹ್ಮಾದಿಗಳು ಸಂಹರಿಸಲರಿಯರು, ಬರಿದೆ ದೈನ್ಯಂಬಡುವುದೀ ಲೋಕ"[1] ತಾನು ಕೊಟ್ಟ ಆಯುಷ್ಯವನ್ನು ಬ್ರಹ್ಮನೂ ಕಿತ್ತುಕೊಳ್ಳಲಾರ; ಅದನ್ನು ದುರ್ಯೋಧನನಂಥ ದುಷ್ಟರು ತಿಳಿದದ್ದಾದರೆ ಅನಾಹುತ ಪರಂಪರೆಗಳನ್ನು ತಡೆಗಟ್ಟಬಹುದು. ಕೌರವರ ಕಾಪಟ್ಯವನ್ನು ಕಂಡೂ ಕಂಡೂ ಧರ್ಮರಾಯ ಮರುಜೂಜಿಗೆ ಹೋಗುವಾಗ ದುಶ್ಶಕುನ ಕಾಣಿಸಿಕೊಳ್ಳುತ್ತವೆ; ಪುರೋಹಿತರು ಬೇಡವೆಂದು ತಡೆದರೂ, "ದೈವವಿಕ್ಕಿದ ಕೊರಳುಗಣ್ಣಿನ ಕುಣಿಕೆ ಯಾರಲಿ ಹರಿವುದೈ"[2] ಎಂದು ಅವನು ಮುಂದುವರಿಯುತ್ತಾನೆ. ವಿರಾಟನ ಅಡುಗೆ ಮನೆಯಲ್ಲಿ ಮಲಗಿದ್ದ ಭೀಮಸೇನನನ್ನು ಕಂಡ ದ್ರೌಪದಿ ಅವನಿಗೆ ಪ್ರಾಪ್ತವಾದ ಸೇವಾಕಾರ್ಯವನ್ನು ನೆನೆದು "ವಿಧಿ ಮುನಿದಾರನಾವಂಗದಲಿ ಬರಿಸದು ಶಿವಶಿವಾ"[3] ಎಂದು ವ್ಯಾಕುಲಗೊಳ್ಳುತ್ತಾಳೆ. ಪ್ರಾಯಶಃ ಆ ಸಮಯದಲ್ಲಿ ಅವಳಿಗೂ ತನ್ನವಸ್ಥೆ ನೆನಪಾಗಿರಬೇಕು. ಧರ್ಮರಾಯನ ಮನಸ್ಸು ಸಂಧಿಯ ಕಡೆಗೆ ವಾಲಿದಾಗ, ಖುಲ್ಲರ ಕೇಡಿನಿಂದಾಗಿ ಕಷ್ಟಗಳನ್ನನುಭವಿಸಿಯಾಯಿತು. ಆದರೆ "ಅದು ಪುರಾಕೃತ ಕರ್ಮದವಶೇಷ"[4] ಅದನ್ನನುಭವಿಸಿಯೇ ತೀರಬೇಕು ಎಂದು ಭೀಮ ನುಡಿಯುತ್ತಾನೆ. ಜನ್ಮಾಂತರವುಂಟೆಂಬ ನಂಬಿಕೆಯ ಮೇಲೆ ಕರ್ಮತತ್ವ ನಿಂತಿದೆ. ಮುಕ್ತಿದೊರೆಯುವತನಕ ಜೀವಿ ಅನೇಕ ಜನ್ಮಗಳನ್ನೆತ್ತಬೇಕಾಗುತ್ತದೆ; ದುಷ್ಕರ್ಮ ಸತ್ಕರ್ಮಗಳ ಫಲವನ್ನನುಭವಿಸಬೇಕಾಗುತ್ತದೆ; ಸತ್ಕರ್ಮ ಮಾತ್ರ ಅದನ್ನು ಮುಕ್ತಿಯ ಕಡೆಗೊಯ್ಯುತ್ತದೆ. ವಿದುರ ಧೃತರಾಷ್ಟ್ರನಿಗೆ ಹೇಳುವ ಮುಂದಿನ ಮಾತಿನಲ್ಲಿ ಈ ನಂಬಿಕೆ ತುಂಬಿಕೊಂಡಿದೆ: ಉಂಡು ತೀರಿಸಬೇಕು ತಾ ಮುಂಕೊಂಡು ಮಾಡಿದ ಪುಣ್ಯಪಾಪವ ತಂಡವನು ತರಹರಣವಿಲ್ಲದೆ ಭವಭವಂಗಳಲಿ."[5]

ವಿಧಿ

ಭಾರತದಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿಯೂ ವಿಧಿತತ್ವವನ್ನು ನಂಬುತ್ತಾನೆ. ದುರ್ಯೋಧನ ಛಲಗಾರ; ಪುರುಷಕಾರದಲ್ಲಿ ನೆಚ್ಚಿಕೆಯುಳ್ಳವನು; ಕೃಷ್ಣ ದೈವಸ್ವರೂಪಿ, ಮೂರ್ತಿವೆತ್ತ ವಿಧಿ ಎಂಬ ತಿಳಿವಳಿಕೆ ಆಗಿನ ಕಾಲದ ಜನರಲ್ಲಿ ಮನೆಮಾಡಿಕೊಂಡಿರುವಾಗಲೂ, ಅವನನ್ನೆ ದುರಿಸಿದ ಧೀರ. ದ್ರೋಣನ ಪರಾಕ್ರಮದ ವಿಷಯದಲ್ಲಿ ಅವನಿಗೆ ಅಪಾರ ನಂಬುಗೆ. ಆವನ ಮೂಲಕ ತನ್ನ ಇಷ್ಟಾರ್ಥ ನೆರವೇರದಿದ್ದಾಗ "ನಮ್ಮ ಭಾಗ್ಯದ ಬಾಣಸಿಗ ವಿಧಿ

---

[1] ಆ ೬.೧೨ ; [2] ಸ ೧೩.೪ ; [3] ವಿ ೩.೩೮ ; [4] ಉ ೬.೧೦ ; [5] ಉ ೩.೧೨೦

ವಿಷವ ಬೆರಸಿದಡಾರು ಕಾವವರು ?"[1] ಎಂದು ಕೊರಗುತ್ತಾನೆ. ಅವನ ಪಾಲಿಗೆ ದ್ರೋಣನೇ ವಿಧಿ. ಕಣ್ಣಿಗೆ ಕಾಣದ ವಿಧಿಯಲ್ಲಿ ವಿಶ್ವಾಸವಿಲ್ಲ ಅವನಿಗೆ. ಅವನ ಗೆಳೆಯ ಕರ್ಣ. ತನ್ನ ಬಾಹುಬಲದಲ್ಲವನಿಗೆ ತುಂಬ ನೆಚ್ಚಿಕೆ; ಭೀಷ್ಮ ದ್ರೋಣರು ಮಾಡಲಾರದುದನ್ನು ತಾನು ಮಾಡುತ್ತೇನೆಂಬ ಕೆಚ್ಚು. ವಯಸ್ಸು ಮಾಗಿದಂತೆಲ್ಲ ಶಕ್ತಿ ಕುಂದಿದಂತೆಲ್ಲ ಅವನಲ್ಲಿಯೂ ದೈವಶಕ್ತಿಯಲ್ಲಿ ನಂಬಿಕೆ ಮೊಳೆಯುತ್ತದೆ. "ಪೂತು ದೈವವೆ ಭೀಮಸೇನನ ಘಾತಿಯಲಿ ಸೊಪ್ಪಾದೆನ್ಯೆ"[2] ಎಂದು ಅವನು ಉದ್ಗಾರ ತೆಗೆಯುವಂತಾಗುತ್ತದೆ. "ಸೋಲು ಗೆಲವು ದೈವಾಧೀನ, ನಿನ್ನಾಳ್ತನಕ್ಕೆ ಕುಂದೇನು ?"[3] ಎಂದು ಸಾರಥಿ ಶಲ್ಯ ನಡುನಡುವೆ ಅವನನ್ನು ರೇಗಿಸುತ್ತಾನೆ. ಭೀಷ್ಮ ದ್ರೋಣ ಕರ್ಣ ದುಶ್ಶಾಸನಾದಿ ವೀರರು, ತನ್ನ ತಮ್ಮಂದಿರು ಮತ್ತು ಮಕ್ಕಳು, ಜತೆಗೆ ತನ್ನ ದೊಡ್ಡ ಪಡೆ ರಣಮಾರಿಗೆ ಬಲಿಯಾದಾಗ, ತನ್ನ ಜತೆಯವರು ನಿರ್ನಾಮವಾಗಿ ಏಕಾಕಿಯಾದಾಗ ದುರ್ಯೋಧನನ ಚಿತ್ತ ದೈವದ ಕಡೆಗೆ ತಿರುಗುತ್ತದೆ. ಮಾನವನ ರೀತಿಯೇ ಹೀಗೆ. ಅಧಿಕಾರ ಸುಖ ಸಂಪತ್ತುಗಳು ಹೇರಳವಾಗಿರುವಾಗ, ಯಾರೂ ತನ್ನ ಸಮಾನರಿಲ್ಲ, ತನ್ನನ್ನು ಮೀರಿದ ಶಕ್ತಿಯಿಲ್ಲ, ಬೆಟ್ಟವನ್ನು ಕೀಳಬಲ್ಲೆ, ಸಾಗರವನ್ನು ಹೀರಬಲ್ಲೆ ಎಂಬ ಮದದಿಂದ ವರ್ತಿಸುತ್ತಾನೆ. ಆಗವನಿಗೆ ಪಾಪ ಪುಣ್ಯಗಳ ಲೆಕ್ಕವಿಲ್ಲ; ಔಚಿತ್ಯಾನೌಚಿತ್ಯಗಳ ಪರಿವೆ ಇಲ್ಲ; ಅನುಕಂಪ ಕನಿಕರಗಳ ದಯೆ ಧರ್ಮಗಳ ಪ್ರಜ್ಞೆಯಿಲ್ಲ. ಸುಖಸಂಪತ್ತುಗಳು ಕರಗಿ, ಕೈಕಾಲುಗಳು ಸೊರಗಿ, ಹತ್ತಿರದವರು ದೂರವಾದಾಗ, ಸ್ವಸಾಮರ್ಥ್ಯದಲ್ಲಿ ವಿಶ್ವಾಸ ಹರಿದುಹೋಗಿ ಬಾಳು ಬರಿದಾದಾಗ ಅವನ ಮನಸ್ಸು ಸಹಜವಾಗಿ ಅಗೋಚರಶಕ್ತಿಯ ಕಡೆಗೆ ಹರಿಯುತ್ತದೆ. ಮುಂದೇನೆನ್ನುವುದು ಅವನಿಗೆ ತಿಳಿದಿಲ್ಲ. ದೇಹತ್ಯಾಗ ಮಾಡಿದ ಆತ್ಮ ಮತ್ತೆಲ್ಲಿಯೋ ಕಾಣದ ಜಾಗಕ್ಕೆ ಪ್ರಯಾಣ ಬೆಳಸುತ್ತದೆಂಬ ನಂಬಿಕೆ ವಿಧಿಕಲ್ಪನೆಗೂ ಹೇತುವಾಗುತ್ತದೆ. "ಪೂರ್ವ ಸುಕೃತದ ಶಾಳಿವನವೊಣಗಿದೊಡೆ....ಬಾಳಲಿಪಿಗಳ ಲೆಕ್ಕವನು ಪ್ರತಿಕೂಲವಿಧಿ ಪಲ್ಲಟಿಸಿ ಬರೆದಡೆ ಹೇಳಿ ಫಲವೇನು ?"[4] ಎಂದು ದುರ್ಯೋಧನ ಸಂಜಯನೊಡನೆ ನುಡಿದು ಕಂಬನಿದುಂಬುತ್ತಾನೆ. ಕೃಪಾಶ್ವತ್ಥಾಮರು ವೈಶಂಪಾಯನ ಸರೋವರದ ಬಳಿ ದೊರೆಯನ್ನು ಕಂಡು ಮುಂದಿನ ಯುದ್ಧದ ಭಾರವನ್ನು ತಾವು ಹೊರುವುದಾಗಿ ಸೂಚನೆ ನೀಡಿದಾಗ ಅವನು "ದೈವದೊಲಹಿನ ಪೈಸರಕೆ ನೀವೇನು ಮಾಡುವಿರಿ"[5] ಎಂದು ಅಧೈರ್ಯವನ್ನು ವ್ಯಕ್ತಪಡಿಸುತ್ತಾನೆ. ಮಹಾಭಾರತದ ಮಹಾನ್ ವ್ಯಕ್ತಿಗಳಿಗೆ ಇಂಥ ಪಾಡು ಸಂಭವಿಸುವುದಾದರೆ ಸಾಮಾನ್ಯ ಮನುಷ್ಯರ ಹವಣೆಂಥದೆನ್ನುವಂತಾಗುತ್ತದೆ. ಈ ದೃಷ್ಟಿಯಲ್ಲಿ ಇದು ವಿಧಿಶಕ್ತಿ ಮತ್ತು ಮಾನುಷಶಕ್ತಿಗಳ ನಡುವೆ ನಡೆದ ಸೆಣಸಿನ ಕತೆಯೆಂದು ಕರೆದರೂ ಒಪ್ಪುತ್ತದೆ. ಈ ಕಥೆಯ ಒಟ್ಟು ಸಂದೇಶ ಸಂಜಯ ಧೃತರಾಷ್ಟ್ರನಿಗೆ ಹೇಳುವ ಸೂಕ್ತಿಯಲ್ಲಿ ಅಡಕಗೊಂಡಿದೆಯೇನೊ ಎಂದೆನಿಸುತ್ತದೆ:

> ಅಳುವವರ ನಗಿಸುವುದು ನಗುವರ। ನಳಿಸುವುದು ಗೆಲಿದವರ ಸೋಲಿಸಿ
> ಗೆಲಿಸುವುದು ಸೋತವರನೀ ವಿಪರೀತ ಗತಿವಿಧಿಗೆ[6]

---

[1] ದ್ರೋ ೪-೬ ; [2] ಕ ೧೩-೨೦ ; [3] ಅದೇ, ೨೫ ; [4] ಗ ೩-೨೮ ; [5] ಗ ೪-೩೭ ; [6] ಕ ೧೨-೩

ಈ ವಿಧಿವಾದ ಭಾರತೀಯ ಸಂಸ್ಕೃತಿಗೆ ಮಾತ್ರವೇ ವಿಶಿಷ್ಟವಾದದ್ದಲ್ಲ. ಪ್ರಾಚೀನ ಪಾಶ್ಚಾತ್ಯ ಜನಜೀವನದ ಮೇಲೆ ಅತ್ಯಂತ ಪರಿಣಾಮಕಾರಿಯಾದ ಪ್ರಭಾವ ಬೀರುತ್ತಿತ್ತೆನ್ನುವುದಕ್ಕೆ ಈಸ್ಕಿಲಸ್ ಸೋಫೋಕ್ಲೀಸರ ನಾಟಕಗಳೇ ನಿದರ್ಶನವಾಗಿವೆ. ಶೇಕ್ಸ್‌ಪಿಯರ್ ನಾಟಕಕಾರನ ಕಿಂಗ್‌ಹೆನ್ರಿ ದಿ ಎಯಿತ್ ಎಂಬ ನಾಟಕದಲ್ಲಿ ಡ್ಯೂಕ್ ಆಫ್ ಬಕಿಂಗ್ ಹ್ಯಾಮ್‌ನ ಬಾಯಲ್ಲಿ ಬರುವ ಮಾತುಗಳಿವು :

> The will of heaven
> Be done in this and all things ! I obey[1]

ಪೆರಿಕ್ಲಿಸ್ ನಾಟಕದ ಪೆರಿಕ್ಲಿಸ್ ಒಂದು ಕಡೆ ಹೀಗೆ ಹೇಳುತ್ತಾನೆ :

> We cannot but obey
> The powers above us[2]

ತನ್ನ ಆಪ್ತಮಿತ್ರನಾದ ಹೊರೇಷಿಯೋ ಜತೆಯಲ್ಲಿ ಹ್ಯಾಮ್ಲೆಟ್ ಆಡುವ "There is a divinity that shapes our ends"[3] ಎಂಬ ಸೊಲ್ಲುಗಳಂತು ಆಂಗ್ಲಭಾಷೆಯನ್ನು ಬಲ್ಲ ಜನರ ನಾಲಗೆಯ ಮೇಲೆ ಸದಾ ನರ್ತಿಸುತ್ತಿರುತ್ತವೆ. ವಿಂಟರ್ಸ್ ಟೇಲ್ ನಾಟಕದಲ್ಲಿ ಬರುವ ಮುಂದಿನ ಉಕ್ತಿಗಳನ್ನೂ ಗಮನಿಸಬಹುದು :

> There is some ill planet reigns ;
> I must be patient till the heavens look
> with an aspect more favourable[4]

ಈ ಎಲ್ಲ ಸುಭಾಷಿತಗಳ ಸಾರಾಂಶವಿಷ್ಟು : ಸ್ವರ್ಗಸಂಕಲ್ಪ ಅಥವಾ ಈಶ್ವರೇಚ್ಛೆ ಏನಿದೆಯೋ ಅದೇ ಎಲ್ಲವನ್ನು ಆಳುತ್ತದೆ; ನಮಗಿಂತ ಪ್ರಬಲವಾಗಿರುವ ಈ ಶಕ್ತಿಗಳಿಗೆ ನಾವು ವಿಧೇಯರಾಗಿರಲೇಬೇಕು ; ದೈವೀಶಕ್ತಿಯೊಂದು ನಮ್ಮ ಬಾಳನ್ನು ತಿದ್ದುತ್ತದೆ, ಗುರಿಯನ್ನು ರೂಪಿಸುತ್ತದೆ; ಯಾವುದೋ ದುಷ್ಟಗ್ರಹದ ಪರಿಣಾಮವಾಗಿ ಅನಿಷ್ಟಗಳು ಪ್ರಾಪ್ತವಾಗುತ್ತವೆ; ರಾಶಿಬಲ ಕೂಡಿಬರುವತನಕ ನಾನು ತಾಳ್ಮೆಯಿಂದಿರಬೇಕು. ವಿದ್ವಾಂಸರು ಬಡತನದಿಂದ, ಮಹಾತ್ಮರು ಬಂಧನದಲ್ಲಿ, ಪ್ರತಿಭಾವಂತರು ಕಾರಕೂನರಾಗಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡು ನಿರ್ಗತಿಕರಾಗಿರುವ ದೇಶಾಭಿಮಾನಿಗಳು ಪರದೇಶಿಗಳಂತೆ, ಕಲಾವಿದರು ಅಜ್ಞಾತರಾಗಿ ನರಳುತ್ತಿರುವಾಗ, ಅವಿದ್ಯಾವಂತರು, ದೇಶದ್ರೋಹಿಗಳು, ಆಂಗ್ಲಮೋಹಿಗಳು ಅಧಿಕಾರಸ್ಥಾನಗಳನ್ನು ಕಸಿದುಕೊಂಡು, ಕಪ್ಪುಹಣ ಸಂಗ್ರಹಿಸಿಕೊಂಡು ಸುಖಲೋಲುಪರಾಗಿ ಮೆರೆಯುವುದು ಅದೃಷ್ಟವಲ್ಲವೆ ?

> ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ
> ಸಮುದ್ರ ಮಥನಾಲ್ಲೇಭೇ ಹರಿರ್ಲಕ್ಷ್ಮೀಂ ಹರೋ ವಿಷಂ

---

[1] I. i, 209–10 ; [2] III. iii. 10–11 ; [3] Hamlet, v. ii. 10–11 ; [4] II. i.104–06

ತ್ರಿಮೂರ್ತಿಗಳೂ ದೈವವಿಲಾಸದಿಂದ ಮುಕ್ತರಲ್ಲ. ಅವರೂ ಅನೇಕ ಕಷ್ಟನಷ್ಟಗಳನ್ನನು ಭವಿಸಬೇಕಾಗುತ್ತದೆ.

> ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ
> ಲಲಾಟ ಲಿಖಿತಾ ರೇಖಾ ನ ಶಕ್ಯಂ ಪರಿಮಾರ್ಜಿತು[1]

ದೈವ, ವಿಧಿ, ಅದೃಷ್ಟ, ನಿಯತಿ, ಈಶ್ವರೇಚ್ಛೆ, ಗ್ರಹಚಾರ ಮೊದಲಾದ ಪದಗಳು ಹೆಚ್ಚು ಕಡಮೆ ಒಂದೇ ಅರ್ಥದಲ್ಲಿ ಬಳಕೆಯಾಗುತ್ತವೆ. ಪರಿಸರಪ್ರಭಾವದಿಂದ ನೀರು ಆವಿಯಾಗುವಂತೆ ಮಂಜುಗಡ್ಡೆಯಾಗುವಂತೆ, ಒಂದೇ ಶಕ್ತಿ ಪರಿಸರ ಕಾಲಭೇದದಿಂದ ಭಿನ್ನ ಭಿನ್ನ ರೂಪಗಳನ್ನು ತಾಳುತ್ತದೆ. ಅದು ಅನಿಷ್ಟಪ್ರಾಪ್ತಿ ಸಂದರ್ಭದಲ್ಲಿ ಗ್ರಹಚಾರವಾಗುತ್ತದೆ; ಭೀಷ್ಮ ದುರ್ಯೋಧನನ ಊಳಿಗದಲ್ಲಿರುವಾಗ ಈಶ್ವರೇಚ್ಛೆಯಾಗುತ್ತದೆ, ಶ್ರೀಕೃಷ್ಣನಾಗಿ ಅವತರಿಸಿದಾಗ ದೈವವಾಗುತ್ತದೆ. ಉತ್ತರದ ಕಾಶಿ ಹಾಗೂ ದಕ್ಷಿಣದ ಕನ್ಯಾಕುಮಾರಿಯಲ್ಲಿ ಹುಟ್ಟಿ ಬೆಳೆದ ಇಬ್ಬರು ಯುವಕ ಯುವತಿಯರು ರೈಲಿನಲ್ಲಿ ಭೆಟ್ಟಿಯಾಗಿ, ಸ್ನೇಹಿತರಾಗುತ್ತಾರೆ; ಸ್ನೇಹ ವಿವಾಹದಲ್ಲಿ ವರ್ಧಿಸುತ್ತದೆ. ಮತ್ತೊಬ್ಬ ಬಡಗಿಯ ಮಗ ಸ್ವಂತ ಪ್ರಯತ್ನ ಹಾಗೂ ಪ್ರತಿಭೆಯಿಂದ ಮಹಾರಾಷ್ಟ್ರವೊಂದರ ಅಧ್ಯಕ್ಷನಾಗುತ್ತಾನೆ. ಕುರಿಕಾಯುತ್ತ ಕೊಂಡು ಅಜ್ಞಾತವಾಗುಳಿಯಬೇಕಾಗಿದ್ದ ಹಳ್ಳಿಯ ಮುಗ್ಧನೊಬ್ಬ ಮಹಾನುಭಾವರ ಸಂಪರ್ಕ ದೊರೆತು ಅಸಾಧ್ಯವನ್ನು ಸಾಧಿಸುತ್ತಾನೆ: ಕುರಿ ಮಾಳದಲ್ಲಿ ಅವನ ಒಡನಾಡಿಗಳಾಗಿದ್ದವರು ಆಗ ಹೇಗಿದ್ದರೋ ಈಗಲೂ ಹಾಗೆಯೇ ಇದ್ದಾರೆ. ಕುರುಬರ ಹುಡುಗ ಮಹಾ ಕವಿಯಾಗುತ್ತಾನೆ; ಬುಡಬುಡಿಕೆಯರ ಹುಡುಗ ಮಹಾ ಗಾಯಕನಾಗುತ್ತಾನೆ. ಕೊಲೆಯ ಸಂಚಿನಲ್ಲಿ ಸೇರದ ಸಾಧುಮನುಷ್ಯ ಆಪಾದನೆಗೊಳಗಾಗಿ ಸೆರೆಮನೆ ಸೇರುತ್ತಾನೆ; ವಾಸ್ತವವಾಗಿ ಕೊಂದವರು ಬಚಾವಾಗಿ ಅದ್ದೂರಿಯಿಂದ ಮೆರೆಯುತ್ತಾರೆ. ಇಂಥ ಘಟನೆಗಳಿಗೆ ಕಾರಣ ಎಣಿಸುವುದು ಕಷ್ಟ. ಕಾರಣ ಕಾಣದಿದ್ದಾಗ ದೈವವೆಂದೋ ಅದೃಷ್ಟವೆಂದೋ ಕರೆಯುವುದು ರೂಢಿ. ಹಿಡಿದ ಕಾರ್ಯ ಕೈಗೂಡದಿದ್ದಾಗ, ನಿರೀಕ್ಷಿಸಿದ ಫಲ ದೊರೆಯದಿದ್ದಾಗ ನಿರಾಶೆ ಭಯಗಳುಂಟಾಗಿ ಮನುಷ್ಯ ದಿಕ್ಕುಗೆಟ್ಟವನಂತೆ ತೊಳಲಾಡಬಹುದು; ಇಲ್ಲವೆ, ತನ್ನ ಪಾಲಿಗೆ ಬಂದದ್ದೇ ಪಂಚಾಮೃತವೆಂದು, ಅದೆಲ್ಲ ದೈವಲೀಲೆಯೆಂದು ನಿಶ್ಚಿಂತನಾಗಿದ್ದು ಬಿಡಬಹುದು. ಅಂಥ ನಂಬಿಕೆಯಲ್ಲಿ ಅಪಾಯ ಅನುಕೂಲಗಳೆರಡೂ ಇವೆ. ಆದರೆ ಆಧುನಿಕ ವಿಜ್ಞಾನಿಯೂ ಒಂದಲ್ಲ ಒಂದು ಸಾರಿ ಆ ಶಕ್ತಿಗೆ ತಲೆ ಮಣಿಯುವುದೂ ಉಂಟು.

ಪೌರುಷವಾದ

"ಈಸಬೇಕು, ಇದ್ದು ಜೈಸಬೇಕು," ಜೋಳಿಗೆಯನ್ನು ಗೂಟಕ್ಕೆ ತಗುಲಿಹಾಕಿದರೆ ಕಾಳು ತುಂಬುವುದಿಲ್ಲ; ಮಂತ್ರಿಸಿದರೆ ಮಾವಿನಕಾಯಿ ಉದುರುವುದಿಲ್ಲ. ದುಡಿಯದೆ ಪರಿ

---

1 ವಿಕ್ರಮಚರಿತ, ೨೬೦

ತುಂಬುವುದಿಲ್ಲ, ಕೈಕೆಸರಾದರೆ ಬಾಯಿ ಮೊಸರು, ದೈವವೇ ಕರುಣಿಸಿರುವ ವಿವಿಧ ಶಕ್ತಿಗಳನ್ನು ಬಳಸಿಕೊಳ್ಳದಿದ್ದರೆ ದೈವದ್ರೋಹವಾಗುತ್ತದೆ ಎಂಬುದಾಗಿ ಕರ್ತವ್ಯನಿಷ್ಠೆಯನ್ನೂ ಪುರುಷಕಾರದ ಮಹಿಮೆಯನ್ನೂ ಭಾರತೀಯ ಪವಿತ್ರ ಗ್ರಂಥಗಳು ಬೋಧಿಸುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ತಂತನ್ನ ಹಣೆಬರಹದ ಶಿಲ್ಪಿಯೆಂದು ಸ್ವಾಮಿ ವಿವೇಕಾನಂದರು ಹೇಳಿದ್ದುಂಟು. "What cannot be eschewed must be embraced"[1] ಎಂದು ವಿಧಿವಾದವನ್ನೊಡಿದ್ದ ಶೇಕ್ಸ್‌ಪಿಯರನೇ ಹೇಳಿದ್ದಾನೆ. ಕ್ಯಾಷಿಯಸ್ ಬ್ರೂಟಸನನ್ನು ಕುರಿತು

Men at some times are masters of their fates :
The fault, dear Brutus, is not in out stars,
But in ourselves, that we are underlings[2]

ಎಂದು ನುಡಿಯುವಲ್ಲಿ ಪೌರುಷವಾದದ ಮಹತ್ವ ಸುವ್ಯಕ್ತವಾಗುತ್ತದೆ. ಪುರುಷಕಾರವನ್ನು ಮರೆಸಿ ವಿಧಿವಾದವನ್ನು ಮುನ್ನೊಡ್ಡುವುದರಿಂದ ಮಾನವತೆಗೆ ಅಪಚಾರವೆಸಗಿದಂತಾಗುತ್ತದೆ; ಅಂತೆಯೇ ಮಾನುಷ ಶಕ್ತಿಯನ್ನು ಮೀರಿದ ಶಕ್ತಿಯೇ ಇಲ್ಲವೆಂದು ಮೆರೆಯುವುದರಿಂದ ಅಜ್ಞಾನವನ್ನು ತೋರಿಸಿಕೊಂಡಂತಾಗುತ್ತದೆ. ಈ ಎರಡು ವಾದಗಳೂ ಭಾರತದಲ್ಲಿ ಪ್ರತಿಪಾದನೆಗೊಂಡಿವೆ. ದೈವಶಕ್ತಿಯ ಒಂದು ಕಿರಣವೇ ಮನುಷ್ಯ ಎಂಬುದನ್ನರಿತ ವ್ಯಕ್ತಿ ಪುರುಷಕಾರವನ್ನು ಮರೆಯಲಾರ. ಅಂತು ಈ ಎರಡು ವಾದಗಳೂ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಶಕ್ತಿಗಳಾಗಿದ್ದು, ಸಮಸ್ತ ಜನಜೀವನವನ್ನು ರೂಪಿಸುತ್ತಿವೆಯೆಂದು ಹೇಳಬಹುದಾಗಿದೆ.

ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ
ಷಡೇತೇ ಯತ್ರ ವರ್ತಂತೇ ತತ್ರ ದೇವಃ ಸಹಾಯಕೃತ್

ವಿಕ್ರಮಚರಿತದಲ್ಲಿ ಬರುವ ಈ ಸುಭಾಷಿತ ದೈವ ಪೌರುಷವಾದಗಳ ಬಗೆಗಿನ ವಿವಾದವನ್ನು ಬಗೆಹರಿಸಿ, ಅವೆರಡರ ಸಮನ್ವಯವನ್ನು ಸುಲಲಿತವಾಗಿ ಸಾಧಿಸುತ್ತದೆ. ಅದು ಪ್ರತಿಯೊಬ್ಬ ವ್ಯಕ್ತಿಯ ಕೈದೀವಿಗೆಯಾದಾಗ ಇಂದು ಭಾರತೀಯರೆದುರಿಸಬೇಕಾಗಿರುವ ಅನೇಕ ಕಗ್ಗಂಟುಗಳು ಬಿಡಿಕೆಗೊಳ್ಳುತ್ತವೆ.

ಧರ್ಮ-ನ್ಯಾಯ

ಧರ್ಮದ ಸ್ವರೂಪನಿರ್ಣಯ ಕಠಿನವಾದದ್ದೆಂದೂ, ಅದು ಕಾಲದೇಶಾವಲಂಬಿಯೆಂದೂ ಈ ಹಿಂದೆ ತಿಳಿದದ್ದಾಗಿದೆ. ಕ್ರಿಯಾಶೀಲತೆ ಜೀವಿಯ ಪ್ರಧಾನ ಲಕ್ಷಣ, ಜೀವಂತಿಕೆಯ ಕುರುಹು, ಅದೇ ಅದರ ಧರ್ಮ. ಬದುಕುವುದೆಂದರೆ ಕೆಲಸಮಾಡುತ್ತಿರುವುದೆಂದೇ ಅರ್ಥ. ಸೂರ್ಯ ಬೆಳಗಿದರೆ ಸಸ್ಯವರ್ಗಕ್ಕೆ ಬೇಕಾದ ಆಹಾರ ಉತ್ಪತ್ತಿಯಾಗುತ್ತದೆ; ಆಹಾರ

1 *The Merry Wives of Windsor*, V. v. 263 ; 2 *Julius Cæsar*, I.ii. 138-40.

ಉತ್ಪತ್ತಿಯಾಗುವಾಗ ಆಮ್ಲ ಜನಕ ಬಿಡುಗಡೆಯಾಗುತ್ತದೆ; ಆ ಆಮ್ಲ ಜನಕ ಪ್ರಾಣಿಗಳ ಜೀವಧಾರಣೆಗೆ ಅತ್ಯಗತ್ಯವಾಗುತ್ತದೆ. ಹೀಗೆ ಸೃಷ್ಟಿಯ ಸಕಲ ಜೀವಿಗಳೂ ಪರಸ್ಪರಾವಲಂಬಿಗಳು. ಈ ಜೀವಿಗಳ ಸಾಮೂಹಿಕ ಜೀವನವೇ ಜಗತ್ತು. ಅವುಗಳ ಕ್ರಿಯೆಯೇ ಸೃಷ್ಟಿವಿಕಾಸಕ್ಕೆ ಕಾರಣವಾಗುತ್ತದೆ. ಮಾನವಜೀವನ ಬಹುಸಂಕೀರ್ಣವಾದುದು. ತನ್ನ ಜೀವನಮಾರ್ಗದಲ್ಲಿ ಅವನು ಸುತ್ತಮುತ್ತಣ ಚರಾಚರ ವಸ್ತುಗಳೊಡನೆ ನಾನಾರೀತಿಯ ಸಂಪರ್ಕಸಂಬಂಧವಿರಿಸಿಕೊಳ್ಳಬೇಕಾಗುತ್ತದೆ. ಅವನು ಅನಾಗರಿಕತೆಯಿಂದ ನಾಗರಿಕತೆಯ ಕಡೆಗೆ ಹೊರಳಿದ ಮೇಲಂತು ಅವನ ಬೇಕು ಬೇಡಗಳು ಆಂಜನೇಯ ಲಾಂಗೂಲದಂತೆ ಬೆಳೆದಿವೆ. ಸಾಮಾಜಿಕಜೀವನ ನಾಗರಿಕತೆಯ ಪ್ರಮುಖಲಕ್ಷಣಗಳಲ್ಲೊಂದು; ಕೌಟುಂಬಿಕ ಜೀವನವೂ ಅಷ್ಟೇ ಪ್ರಶಸ್ತವಾದದ್ದು. ಹೀಗೆ ಒಟ್ಟಿಗೆ ಬಾಳುವಾಗ ಪ್ರೇಮ ವಾತ್ಸಲ್ಯ ಕರುಣೆ ಶೃಂಗಾರ ಮೊದಲಾದ ಮಧುರಗುಣಗಳಂತೆಯೇ ದ್ವೇಷಾಸೂಯೆ ಕೋಪ ಲೋಭ ಮೋಹಾದಿ ದುರ್ಗುಣಗಳೂ ಜತೆಜತೆಯಲ್ಲಿಯೇ ಬೆಳೆಯುವುದುಂಟು. ಅನ್ಯೋನ್ಯಾವಲಂಬನೆ, ಸಹಜೀವನ ಮತ್ತು ನಾನಾ ಸಂಬಂಧಗಳಿಂದಾಗಿ ಸಾಮಾಜಿಕ ಜೀವನಕ್ಕೆ ಅತ್ಯಗತ್ಯವಾದ ಕೆಲವು ಕಟ್ಟುಪಾಡುಗಳು ಹುಟ್ಟಿಕೊಳ್ಳುತ್ತವೆ. ತನ್ನಂತೆಯೇ ನೆರೆಹೊರೆಯವರು ಬದುಕಬೇಕೆಂದು ತಿಳಿಯುವುದು ಮನುಷ್ಯನ ಮೂಲಧರ್ಮ. ಸಹಜೀವನದ ಯಶಸ್ಸಿಗೆ ತ್ಯಾಗ, ಔದಾರ್ಯ, ಔಚಿತ್ಯಪ್ರಜ್ಞೆ, ಸ್ನೇಹ ಇವೇ ಮೊದಲಾದ ಗುಣಗಳು ಅತ್ಯವಶ್ಯ. ಸಹಜೀವನಕ್ಕನುಕೂಲವಾಗುವಂಥ ರೀತಿಯಲ್ಲಿ ಬದುಕು ನಡೆಸುವುದೇ ಧರ್ಮ. ಈ ಧರ್ಮ ಐಹಿಕ ಮತ್ತು ಪಾರಮಾರ್ಥಿಕ ಎಂದು ಎರಡು ಬಗೆ. ಅದೆಂದೂ ಕ್ರಿಯಾತ್ಮಕವಾದುದು. ಐಹಿಕ ಮತ್ತು ಪಾರಮಾರ್ಥಿಕ ಧರ್ಮಗಳು ವಸ್ತುತಃ ಬಹು ಭಿನ್ನವಲ್ಲ; ಅವು ಒಂದೇ ವಸ್ತುವಿನ ಎರಡು ಮುಖಗಳು. "ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ" ಎಂಬ ವಚನವೇ ಅವೆರಡರ ಅದ್ವೈತ ತತ್ವವನ್ನು ಸಮರ್ಥಿಸುತ್ತದೆ. ವ್ಯಕ್ತಿ–ಸಮಾಜ, ಪ್ರಜೆ–ರಾಜ, ತಂದೆ–ಮಗ, ಅಣ್ಣ–ತಮ್ಮ, ಸತಿ–ಪತಿ ಹೀಗೆ ನೂರಾರು ಸಂಬಂಧಗಳು ರೂಢಿಯಲ್ಲಿರುವಾಗ ಆಯಾಯ ಪರಿಸರಕ್ಕನುಗುಣವಾಗಿ ಧರ್ಮದ ಸ್ವರೂಪ ವ್ಯತ್ಯಾಸವಾಗುವುದು ಸಹಜ. ಸಾಮಾನ್ಯ ಧರ್ಮ, ಆಪದ್ಧರ್ಮ, ಕಾಲಧರ್ಮ, ಸಮಾಜಧರ್ಮ, ಮೋಕ್ಷಧರ್ಮ ಎಂದು ಅದು ಹಲವು ಬಗೆಯುಳ್ಳದ್ದು. ದುರ್ಯೋಧನ, ದ್ವೇಷಾಸೂಯೆಗಳನ್ನು ತೊರೆದು, ಪಾಂಡವರಿಗೆ ನ್ಯಾಯವಾಗಿ ದೊರೆಯಬೇಕಾಗಿದ್ದ ದಾಯಭಾಗವನ್ನು ಕೊಟ್ಟುಬಿಟ್ಟಿದ್ದರೆ ಕುರುಕ್ಷೇತ್ರಯುದ್ಧ ನಡೆಯುತ್ತಿರಲಿಲ್ಲ. ದ್ರೌಪದಿಗಾದ ಮಾನಭಂಗ ಭಾನುಮತಿಗೇನಾದರೂ ಸಂಭವಿಸಿದ್ದರೆ ತನ್ನ ಮನಸ್ಸು ಹೇಗೆ ವರ್ತಿಸುತ್ತಿತ್ತೆಂಬುದನ್ನು ಊಹಿಸಿಕೊಂಡಿದ್ದರೆ ದಾಯಾದಿ ಮಾತ್ಸರ್ಯ ಉಲ್ಬಣಿಸುತ್ತಿರಲಿಲ್ಲ. ಕೆಲವು ಜನರ ಆಸುರೀ ಗುಣಗಳು ಸಮಾಜದ ಸಮತೋಲನವನ್ನು ಕೆಡಿಸುತ್ತವೆ. ಆ ಸಮತೋಲನಭಂಗವೇ ಅಶಾಂತಿ. ಅದು ಭಂಗವಾಗದಂತೆ ವ್ಯವಹರಿಸುವುದೇ ಧರ್ಮ. ಜಗತ್ತನ್ನು ಧರಿಸಿರುವ, ಅದು ನಾಶವಾಗದಂತೆ ಹಿಡಿದಿರುವ ಶಕ್ತಿಯೇ ಅದು.

ಕೈಕೆ ಮಂಥರೆಯ ಮಾತಿಗೆ ಮರುಳಾದಂತೆ, ಶ್ರೀರಾಮ ಲಕ್ಷ್ಮಣನ ಮಾತಿಗೆ ಜೋತು

ಬಿದ್ದು, ಕಾಡಿಗೆ ಹೋಗದಿದ್ದರೆ, ಸೋದರ ಕಲಹದಿಂದ ಅಯೋಧ್ಯೆಯ ಸಂಸ್ಕೃತಿ ಸಂಪೂರ್ಣವಾಗಿ ನಾಶವಾಗುತ್ತಿತ್ತೇನೋ ಎಂಬ ಶಂಕೆಗವಕಾಶವಿದೆ. ಪಿತೃವಾಕ್ಯ ಪರಿಪಾಲನೆ, ಸ್ವಾರ್ಥತ್ಯಾಗ ಮತ್ತು ಭಾತೃವಾತ್ಸಲ್ಯರೂಪದ ಮೌಲ್ಯಗಳಿಗೆ ತಿಲಾಂಜಲಿ ಕೊಟ್ಟಂತಾಗುತ್ತಿತ್ತು. ಹೆಂಡತಿಯ ಶೀಲಕ್ಕೆ ಸಂಬಂಧಿಸಿದ ಪ್ರಶ್ನೆ ಕೇವಲ ವೈಯಕ್ತಿಕವಾದದ್ದೆಂದು ಶ್ರೀರಾಮ ರಜಕನ ದೂರನ್ನು ನಿರ್ಲಕ್ಷಿಸಲಿಲ್ಲ. ರಾಮರಾಜ್ಯದಲ್ಲಿ ರಾಜನ ಸ್ವಸುಖ ಸಂವರ್ಧನೆಗಿಂತ ಪ್ರಜೆಗಳ ಹಿತರಕ್ಷಣೆ ಪ್ರಧಾನವಾಗಿತ್ತು. ಸಾರ್ವಜನಿಕ ಸಭೆಯಲ್ಲಿ ಹೆಂಡತಿಯ ಸೀರೆಯನ್ನು ಸೆಳೆಯುವಾಗ ನಪುಂಸಕನಾದವನು ಮಾತ್ರ ಮಿಳ್ಮಿಳನೆ ಕಣ್ಣುಬಿಡುತ್ತಾನೆ. "ಮುನ್ನ ತನ್ನನು ಸೋತ ಬಳಿಕಿನೊಳೆನ್ನ ಸೋತಡೆ ಸಲುವುದೇ"[1] ಎಂಬ ದ್ರೌಪದಿಯ ಪ್ರಶ್ನೆಗೆ ಯಾರೂ ಉತ್ತರಿಸಲಿಲ್ಲ, ನಿಜ. ಧರ್ಮರಾಯನ ಮೌನ ಸಹನೆಗಳೇ ಉತ್ತರ. ತನ್ನನ್ನು ಪಣವೊಡ್ಡಿ ಸೋತುಕೊಂಡನಂತರ ದ್ರೌಪದಿಯನ್ನೊಡ್ಡುವ ಹಕ್ಕು ಅವನಿಗುಳಿದಿದೆಯೆ ಎಂಬ ಸಮಸ್ಯೆಯೊಂದು ಇದ್ದೇ ಇದೆ. ಇದು ಬಹು ಕಠಿನವೂ ಸೂಕ್ಷ್ಮವೂ ಆದ ಒಗಟು. ದ್ರೌಪದಿ ಆ ಪ್ರಶ್ನೆ ಎತ್ತಿದ್ದು ನ್ಯಾಯವೇ? ದ್ರೌಪದಿಯ ಪ್ರಶ್ನೆಯನ್ನು ಚೋದಿಸಿದ ನ್ಯಾಯಪ್ರಜ್ಞೆಯೇ ಧರ್ಮರಾಯನ ಮೂಕತನಕ್ಕೂ ಕಾರಣವಾಗುತ್ತದೆ. ತಾನು ಸೋತು ದುರ್ಯೋಧನನಿಗೆ ಅಡಿಯಾಳಾದ ನಂತರ, ದ್ರೌಪದಿಯ ಮೇಲಣ ಹಕ್ಕು ಕಳೆದುಕೊಳ್ಳುತ್ತಾನಷ್ಟೆ. ಆಗವನು ದುರ್ಯೋಧನನ ವರ್ತನೆಯನ್ನು ಪ್ರಶ್ನಿಸುವಂತಿಲ್ಲ. ಪ್ರಶ್ನಿಸಿದ್ದರೆ, ಅಥವಾ ದ್ರೌಪದಿಯ ರಕ್ಷಣೆಗೆಂದು ತಮ್ಮಂದಿರು ದುಶ್ಯಾಸನನ ಮೇಲೆ ಹಾಯ್ದಿದ್ದರೆ ತಪ್ಪಾಗುತ್ತಿತ್ತು. ಅವರು ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುವುದು ಕಷ್ಟವಾಗುತ್ತಿತ್ತು. ಅಂಥ ಸಂದರ್ಭದಲ್ಲಿ ವರಿಷ್ಠ ನ್ಯಾಯಾಲಯವೊಂದಿದ್ದು ದುರ್ಯೋಧನ ಪಾಂಡವರ ಮೇಲೆ ಮೊಕದ್ದಮೆ ಹೂಡಿದ್ದರೆ ಪಾಂಡವರ ಪರವಾಗಿ ತೀರ್ಮಾನ ದೊರಕುತ್ತಿರಲಿಲ್ಲ. ಇಷ್ಟೆಲ್ಲ ಧರ್ಮಸೂಕ್ಷ್ಮ ತಿಳಿದದ್ದರಿಂದಲೇ ಧರ್ಮರಾಯ ದುಡುಕು ಸ್ವಭಾವದ ಭೀಮನ ರೋಷ ಭೀಷಣ ಸ್ಥಿತಿಯನ್ನು ಕಂಡು "ಹುಬ್ಬಿನಲಿ ನಿಲಿಸಿದನು ಪವನಜನುಬ್ಬಟೆಯನು"[2] ಸತ್ಯದ ನೆಲೆಯನ್ನರಿಯುವುದೂ ಧರ್ಮವೇ. ಒಂದು ಮಗುವಿಗೆ ಸಂಬಂಧಿಸಿದ ವ್ಯಾಜ್ಯವೊಂದು ಇತ್ಯರ್ಥಕ್ಕಾಗಿ ತನ್ನ ಮುಂದೆ ಬಂದಾಗ ಸಾಲೊಮನ್ ದೊರೆ ಬಾಹ್ಯಪ್ರಮಾಣಗಳ ಜತೆಗೆ ಅಂತಃಸಾಕ್ಷಿಯ ಸಹಾಯವನ್ನು ಸಹ ಪಡೆಯುತ್ತಾನೆ. ಮಗುವನ್ನು ಸೀಳಿ ಹೆಂಗಸರಿಬ್ಬರಿಗೂ ಹಂಚುತ್ತೇನೆಂದು ನುಡಿದಾಗ, ಮಗು ಎಲ್ಲಿಯಾದರೂ ಸುಖವಾಗಿದ್ದರೆ ಸರಿ, ಸೀಳಬೇಡಿ ಎಂದು ಅವರಲ್ಲೊಬ್ಬಳು ಹೆಂಗಸು ತಡೆಯುತ್ತಾಳಂತೆ. ಆಗ ದೊರೆ ಅವಳೇ ಮಗುವಿನ ನಿಜವಾದ ತಾಯಿ ಎಂದು ತೀರ್ಪು ನೀಡುತ್ತಾನೆ. ತಿರುಕೊಳವಿನಾಚಿಯ ಮಗ ಶಂಕರ ತನ್ನ ಮಗನ ಕುದುರೆಯ ಗೊರಸಿಗೆ ಸಿಕ್ಕಿ ತೀರಿಕೊಂಡಾಗ ಸತ್ಯೇಂದ್ರ ಚೋಳರಾಜ ಅವನಿಗೆ ಮರಣ ದಂಡನೆ ವಿಧಿಸುತ್ತಾನೆ. ಹರಿಶ್ಚಂದ್ರ ರಾಜ್ಯವನ್ನಾದರೂ ಕೊಟ್ಟೇನು, ಚಂಡಾಲ ಕನ್ನಿಕೆಯರನ್ನು ಮದುವೆಯಾಗಲಾರನೆಂದನೇ ಹೊರತು ರಾಜ್ಯವನ್ನು ಕೊಡುತ್ತೇನೆಂದು ಹೇಳ

[1] ಸ ೧೪-೫೭; [2] ಅದೇ ೭೬

ಲಿಲ್ಲ. ಆದರೂ ಅವನು ರಾಜ್ಯತ್ಯಾಗ ಮಾಡುತ್ತಾನೆ. ಪ್ರತಿಯೊಬ್ಬ ಮಾನವನ ಜೀವನದಲ್ಲಿಯೂ ಆಗಾಗೆ ಯಕ್ಷಪ್ರಶ್ನೆಗಳು ಎದುರಾಗುತ್ತವೆ. ಭೀಮನಂಥವರಿರಲಿ, ಭವಿಷ್ಯಜ್ಞಾನಿ ಸಹದೇವನಂಥವರೂ ವಿಷಮಪರಿಸ್ಥಿತಿ ದೊರೆಕೊಂಡಾಗ ಬುದ್ಧಿಸಮತೆಯನ್ನು ಕಳೆದುಕೊಳ್ಳುತ್ತಾರೆ. ತಮ್ಮಂದಿರು ನುಡಿದಿದ್ದೂ, ಯಕ್ಷಪ್ರಶ್ನೆಗೆ ಕಿವಿಗೊಡದೆ ನೀರು ಕುಡಿದು ಮೂರ್ಛಾಗತರಾದ ಭೀಮಾರ್ಜುನರನ್ನು ಹೋಲುತ್ತಾರೆ, ಲೋಕದ ಮಾನವರು. ಮನುಷ್ಯನ ಪ್ರತಿನಿತ್ಯದ ವ್ಯವಹಾರದಲ್ಲಿ ಅನುಕ್ಷಣವೂ ಇಂಥ ಪ್ರಶ್ನೆಗಳು ಹೆಡೆಯೆತ್ತುತ್ತವೆ. ಇತಿಹಾಸ ಪುರಾಣ ಧರ್ಮಶಾಸ್ತ್ರಗಳಲ್ಲಿ ಎಲ್ಲಕ್ಕೂ ಪರಿಹಾರ ದೊರಕುವುದಿಲ್ಲ. ಹೊಸ ಕಾಲಕ್ಕೆ ತಕ್ಕಂತೆ ಹೊಸ ಸಮಸ್ಯೆಗಳು ಕಣೆಗೆದರುತ್ತವೆ. ಅವುಗಳಿಗೆ ನೂತನ ರೀತಿಯಲ್ಲಿ ಪರಿಹಾರಗಳನ್ನೊದಗಿಸಿಕೊಳ್ಳಬೇಕಾಗುತ್ತದೆ. ಆದರೆ ಸಹನೆ ಕ್ಷಮೆ ವಿವೇಕ ಸಂಯಮ ಮತ್ತು ಧರ್ಮಪ್ರಜ್ಞೆಯುಳ್ಳ ಧರ್ಮರಾಯನಂಥ ಜನ ಮಾತ್ರ ಸೂಕ್ತ ಪರಿಹಾರ ಒದಗಿಸಬಲ್ಲವರಾಗುತ್ತಾರೆ.

ಮಹಾಭಾರತದಲ್ಲಿ "ಯತೋ ಧರ್ಮಸ್ತತೋ ಜಯಃ" ಎಂಬ ಮಾತು, ರಾಮಾಯಣದಲ್ಲಿ

> ಧರ್ಮಾದರ್ಥಃ ಪ್ರಭವತಿ ಧರ್ಮಾತ್ಪ್ರಭವತೇ ಸುಖಂ
> ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್[1]

ಎಂಬ ಶ್ಲೋಕವೂ ಬರುತ್ತವೆ. ಧರ್ಮವಿದ್ದಲ್ಲಿ ಜಯ, ಧರ್ಮಸಾರವೇ ಜಗತ್ತು ಎಂಬುದೇ ಆ ಸೂಕ್ತಿಗಳ ಸಾರ. ಯಾವುದು ಧರ್ಮವೋ ಅದೇ ದೈವವೆಂದಾಗುತ್ತದೆ. ದೈವ ಧರ್ಮಗಳು ಅಗೋಚರವಾದುವು; ತಾತ್ವಿಕವಾದುವು. ಬುದ್ಧಿಗ್ರಾಹ್ಯವಾಗಿ ಇಂದ್ರಿಯಗೋಚರವಾಗಬೇಕಾದರೆ ಅವು ಕರ್ಮದ ರೂಪವನ್ನು ತಳೆಯಬೇಕು. ಆದ್ದರಿಂದ ಧರ್ಮವೆನ್ನುವುದು ತತ್ವ, ಕರ್ಮವೆನ್ನುವುದು ಕ್ರಿಯೆ, ಅವೆರಡೂ ಒಂದೇ ತತ್ವದ ಎರಡು ಮುಖಗಳೆಂಬುದು ಸ್ಪಷ್ಟವಾಗುತ್ತದೆ. "The Great end of life is not knowledge but action" ಎಂದು ಥಾಮಸ್ ಎಚ್. ಹಕ್ಸ್ಲೇ ಹೇಳುವುದರಲ್ಲಿ ವಿಶಿಷ್ಟಾರ್ಥವಿದೆ. ಮಾನವನ ಸಾಮರ್ಥ್ಯದ ಮಹಿಮೆಯನ್ನು ಮತ್ತು ಗುಣಶೀಲಗಳನ್ನು ಅವನ ಕ್ರಿಯೆಯಲ್ಲಿ ಮಾತ್ರ ಕಾಣಬಹುದೆಂಬುದೇ ಅವನ ಮಾತಿನ ಸಾರ. ಶ್ರೀಕೃಷ್ಣ ಗೀತೋಪದೇಶದಲ್ಲಿ ಮೊದಲಿಂದ ಕೊನೆಯತನಕ ಕರ್ಮದ ಆವಶ್ಯಕತೆ ಮತ್ತು ಮಹತ್ತುಗಳಿಗೆ ಹೆಚ್ಚು ಒತ್ತು ಕೊಡುತ್ತಾನೆ. ಕ್ರಿಯಾರೂಪ ಪಡೆಯದ ಜ್ಞಾನದಿಂದ ಆಗಬೇಕಾದ್ದೇನು? ಮಾನವ ವಿಷಯಗಳನ್ನು ತುಂಬಿಕೊಳ್ಳುವ ಕಂಪ್ಯೂಟರ್ ಯಂತ್ರವಾಗಬಾರದಷ್ಟೆ. ಆದ್ದರಿಂದ ಧರ್ಮಸಾಧನೆ ಪ್ರತಿಯೊಬ್ಬ ಮಾನವನ ಆದ್ಯಕರ್ತವ್ಯವೆಂದು ತಿಳಿದಾಗ, ತಿಳಿದು ಅನುಷ್ಠಾನಶೀಲನಾದಾಗ ಅವನಿಗೆ ಶ್ರೇಯಸ್ಸೂ, ಜಗತ್ತಿಗೆ ಕಲ್ಯಾಣವೂ ಒದಗುತ್ತವೆ. ಇದು ಎಲ್ಲ ಭಾರತೀಯರ ಮುಂದಿರುವ ಆದರ್ಶ. ಮನುಷ್ಯ ಏನೇ ಕೆಲಸ ಮಾಡಲಿ ಅದು ಧರ್ಮವಿಹಿತವೇ ಎಂದು ಆಲೋಚಿಸಬೇಕು. ದಾನತ್ಯಾಗ

---

1 ೩-೯-೩೦

ಗಳು ಲೇಸು ; ಆದರೆ ಅವು ಸಹ ಧರ್ಮದ ಚೌಕಟ್ಟಿನೊಳಗೆ ಬಳಕೆಗೊಳ್ಳಬೇಕು. "ಧರ್ಮದ ನೆಲೆಯುನಜಾಯದ ದಾನಿಗಳ ಸಿರಿ ಸುಳಿವ ಗಾಳಿಗೆ ಮಲಿನ ದೀಪವು"[1] ಎಂಬುದು ವಿದುರನ ಮತ. "ಎತ್ತಲೊಲೆವುದು ಧರ್ಮಬಲ ತಾನತ್ತಲೊಲೆವುದು ದೈವ"[2] ಎಂದು ಸಂಜಯ ಮೇಲಿಂದ ಮೇಲೆ ಧೃತರಾಷ್ಟ್ರರಾಯನನ್ನು ಕುಟುಕುತ್ತಾನೆ. ಕೌರವರು ಅಧರ್ಮಿಗಳು, ಅವರಿಗೆ ದೈವಬಲವಿಲ್ಲವೆನ್ನುವುದು ಆ ಮಾತಿನ ಅಂತರ್ಭಾವ. ಯುದ್ಧಾವಸಾನದನಂತರ ಚಿಂತಾಕುಲರಾದ ಧೃತರಾಷ್ಟ್ರ ಗಾಂಧಾರಿಯರನ್ನು ಸಂತೈಸುವ ಸಲುವಾಗಿ ವೇದವ್ಯಾಸ ಬಂದು ಧರ್ಮವಿಲಾಸವನ್ನು ವಿಸ್ತರಿಸುತ್ತಾನೆ. "ಧರ್ಮವೆಲ್ಲಿಹುದಲ್ಲಿ ಜಯ ಸತ್ಕರ್ಮವೆಲ್ಲಿಹುದಲ್ಲಿ ಸಿರಿ"[3] ಎನ್ನುವ ಅವನ ಹಿತವಚನ ಈ ಮಹಾಕಾವ್ಯಕ್ಕೆ ಭರತವಾಕ್ಯದಂತಿದೆ. ದೈವ ಬೇರೆಯಲ್ಲ ಧರ್ಮ ಬೇರೆಯಲ್ಲ ; ಎಲ್ಲಿ ಧರ್ಮವಿದೆಯೋ ಅಲ್ಲಿ ಸತ್ಕರ್ಮವಿರುತ್ತದೆ, ಧರ್ಮದ ಪಥ ಕಷ್ಟಕರವಾದದ್ದು, ಅದಕ್ಕೆ ಅಂತಿಮ ಜಯ, ಅಧರ್ಮ ಎಂದಾದರೂ ನಾಶಹೊಂದಲೇಬೇಕು ಎನ್ನುವ ಸಾರತತ್ವವೇ ಈ ಕಾವ್ಯದ ಸಂದೇಶ. ಪಾಂಡವರು ಧರ್ಮಿಷ್ಠರಾಗಿ ಉದ್ದಕ್ಕೂ ಕಷ್ಟಪರಂಪರೆಗಳನ್ನು ಅನುಭವಿಸಬೇಕಾಗುತ್ತದೆ, ನಿಜ. ಏಕಚಕ್ರನಗರದ ಅಜ್ಞಾತವಾಸ, ಅರಣ್ಯವಾಸ, ಮತ್ತೆ ಅಜ್ಞಾತವಾಸ ಇವನ್ನೆಲ್ಲ ನೋಡಿದವರಿಗೆ ಧರ್ಮದ ದಾರಿ ಬೇಡವೆನಿಸುವುದು ಸಹಜ. ಈ ಭೂಮಿಯ ಮೇಲೆ ಇದ್ದಷ್ಟು ದಿನ ದುರ್ಯೋಧನನಂತೆ ದೌಲತ್ತಿನಿಂದ ಬದುಕಿದರೆ ಸಾಕೆನ್ನುವ ಜನರಿಲ್ಲದಿಲ್ಲ. ಮನುಷ್ಯಜೀವನದ ಜಮಾ ಖರ್ಚಿನ ಲೆಕ್ಕ ಗೊತ್ತಾಗುವುದು ಕೊನೆಯಲ್ಲಿ. ಧರ್ಮರಾಯನಂಥವನಿಗೆ ಕಷ್ಟಕ್ಲೇಶಗಳು ಸಾಧನೆಯ ಮಾಧ್ಯಮಗಳಾಗುತ್ತವೆ. ಅರ್ಜುನ ದೇವೇಂದ್ರನಗರಿಗೆ ಹೋಗಿದ್ದಾಗ, ಬಳಿಗೆ ಬಂದ ಊರ್ವಶಿಯನ್ನು ತಾಯಿಯೆಂದು ಕರೆದು ಸಂಯಮವನ್ನು ಸಾಧಿಸಿದ್ದಕ್ಕಾಗಿ, ಅವನಿಗೆ ಷಂಡತನದ ಶಾಪವೊದಗುತ್ತದೆ; "ಧರ್ಮವೆ ತಪವಲಾಯೆಂದರಿದು ನಡೆದರೆ ಷಂಡತನವಾಯ್ತು"[4] ಎಂದು ದುಃಖಿಸುವಂತಾಗುತ್ತದೆ. ಮುಂದೆ ಅಜ್ಞಾತವಾಸ ಕಾಲದಲ್ಲಿ ಷಂಡತನದಿಂದ ತನಗಾದ ಪ್ರಯೋಜನವನ್ನು ನೆನೆದಾಗ ಊರ್ವಶಿಯ ಬಗ್ಗೆ ಕೃತಜ್ಞತೆಯೂ, ಧರ್ಮದ ಬಗ್ಗೆ ದೃಢ ವಿಶ್ವಾಸವೂ ಅವನಲ್ಲಿ ಮೂಡಿರಬೇಕು. ಕಷ್ಟಗಳು ಪುಣ್ಯಪ್ರಸವವೇದನೆಗಳೆಂದು ತಿಳಿದರೆ ತಪ್ಪಾಗಲಾರದು. ಕಷ್ಟದ ಮೂಷೆಯಲ್ಲಿ ಬೆಂದ ಮಾನವ ಅಪ್ಪಟ ಚಿನ್ನವಾಗುತ್ತಾನೆ. ಅದೊಂದು ತಪಸ್ಸು. ಕುಮಾರವ್ಯಾಸ ಭಾರತದ ಕತೆ ದುರ್ಯೋಧನನ ಮರಣದೊಡನೆ ಕೊನೆಗೊಂಡದ್ದರಲ್ಲಿ ಔಚಿತ್ಯವಿದೆ, ಧ್ವನಿಯಿದೆ. ಪಾಂಡವರ ಮುಂದಿನ ಸುಖದ ಜೀವನದಲ್ಲಿ ಕವಿ-ಯೋಗೀಂದ್ರನಿಗೆ ಮಹತ್ವವಾಗಲಿ, ವಿಶೇಷಾರ್ಥವಾಗಲಿ ಗೋಚರಿಸುವುದಿಲ್ಲ. ತ್ಯಾಗ ತಪಸ್ಸು ಧರ್ಮ ಕರ್ಮಗಳೇ ಜೀವನಧ್ಯೇಯ, ವಾಚಕರ ಮನಸ್ಸಿನ ಮೇಲೆ ಅವುಗಳ ಪ್ರಭಾವಮುದ್ರೆ ಶಾಶ್ವತವಾಗಿ ಉಳಿಯಬೇಕು, ಕತೆ ಮುಂದುವರಿದದ್ದಾದರೆ ಆ ಪ್ರಭಾವ ಮಸುಕಾಗುತ್ತದೆ ಎಂಬ ಭಾವನೆ ಅವನಲ್ಲಿ ಪ್ರಗಾಢವಾಗಿದ್ದಿರಬೇಕು. ವಾಲ್ಮೀಕಿ ವ್ಯಾಸರದೂ ಇದೇ ದೃಷ್ಟಿ.

[1] ಉ ೩-೭೦ ; [2] ದ್ರೋ ೪-೨ ; [3] ಗ ೧೧-೭ ; [4] ಅ ೮-೪೭

೪. ಸಾಮಾಜಿಕ ಸಂಸ್ಕೃತಿ

ಸಿರಿತನ–ಬಡತನ

ಜಗಜ್ಜೀವನದ ರೀತಿನೀತಿಗಳು ವಿಲಾಸ ವಿಧಾನಗಳು ರೂಪರೇಷೆಗಳು ಅನಂತವಾದ್ದರಿಂದ ಧರ್ಮದ ಕವಲುಗಳು ಸಹ ಅಸಂಖ್ಯವೆಂದು ತಿಳಿಯಬೇಕಾಗಿದೆ. ಭೀಷ್ಮ ದ್ರೋಣ ವಿದುರ ಪಾಂಡವರ ಜೀವನ ಕಥೆಗಳು ಧರ್ಮದ ಕಥೆಗಳಾದರೆ, ಕೌರವರ ಬಾಳಿನ ಸಂಗತಿಗಳು ಅಧರ್ಮದ ಸಂಗತಿಗಳಾಗಿವೆ; ಒಳ್ಳೆಯ ಬದುಕಿಗೆ ಯಾವುದು ಗ್ರಾಹ್ಯ ಯಾವುದು ತ್ಯಾಜ್ಯ ಎನ್ನುವ ವಿಚಾರ ಅವುಗಳಿಂದ ಸುಸ್ಪಷ್ಟವಾಗುತ್ತದೆ. ಅಂಥ ಕೆಲವು ಸಂಗತಿಗಳ ವಿವರಣೆಯಿಂದ ಧರ್ಮದ ಸ್ವರೂಪ ತಕ್ಕಮಟ್ಟಿಗೆ ತಿಳಿದೀತು. ಯೌವನ, ಧನಸಂಪತ್ತಿ, ಪ್ರಭುತ್ವ ಮತ್ತು ಅವಿವೇಕಗಳು ಒಂದೊಂದೂ ಮಹಾನರ್ಥಕ್ಕೆ ಕಾರಣವಾಗುತ್ತವೆಂದು ಹಿತೋಪದೇಶ ಸಾರುತ್ತದೆ. ದರ್ಪಾಹಂಕಾರ ಕೊಲೆ ಸುಲಿಗೆಗಳು ವಂಚನೆ ದುರಾಚಾರಗಳು ಸಿರಿವಂತಿಕೆಯ ಗುಣಲಕ್ಷಣಗಳೆಂಬ ತಿಳಿವಳಿಕೆ ಅತ್ಯಂತ ಪ್ರಾಚೀನವಾದುದು. ಅದೊಂದು ಸಾಮಾಜಿಕ ಪಾತಕ. ಸಮಾಜದ ದುರ್ಗತಿಗೆ ಸಿರಿತನ ಬಡತನಗಳೇ ಕಾರಣ. ದುಡಿಮೆಗಾರ ಎಂದೂ ಶ್ರೀಮಂತನಾಗಲಾರ. ಹತ್ತು ಜನರ ಬೆವರು ಮತ್ತು ನೂರು ಜನರ ಸುಲಿಗೆ ಸಿರಿವಂತಿಕೆಯನ್ನು ಕೊಬ್ಬಿಸುತ್ತವೆ. ಅರ್ಥ ದೂಷ್ಯವೆಂದು ಇದರ ಅರ್ಥವಲ್ಲ. ಅದು ಪುರುಷಾರ್ಥಗಳಲ್ಲೊಂದು. ಇವುಗಳ ಪೈಕಿ ಕಾಮಾರ್ಥಗಳ ಬಗ್ಗೆ ಮನುಷ್ಯ ಎಚ್ಚರದಿಂದಿರಬೇಕು. ಅವು ಮಾನವನ ಬದುಕಿಗೆಷ್ಟು ಅವಶ್ಯಕವೋ, ಅಷ್ಟೇ ಅದರ ಅವನತಿಗೂ ಹೇತುವಾಗುತ್ತವೆ. ಅವನ ಕೋಪತಾಪಗಳಿಗೆ, ದ್ವೇಷಾಸೂಯೆಗಳಿಗೆ, ಸಾಹಸೋದ್ಯಮಗಳಿಗೆ ಅವೇ ಪ್ರೇರಕಶಕ್ತಿಗಳು. ಅವಿಲ್ಲದಿದ್ದರೆ ಸರ್ವ ಮಾನವರೂ ಸಂತರೋ ಸನ್ಯಾಸಿಗಳೋ ಆಗುತ್ತಿದ್ದರು. ಷಂಡನ ಜಿತೇಂದ್ರಿಯತ್ವದಲ್ಲಿಂತು ಕಾವು ಮೆರುಗುಗಳಿಲ್ಲವೋ ಅಂತೆಯೇ ಅವರ ಬಾಳಿನಲ್ಲಿಏನೇನೂ ವಿಶೇಷ ಕಾಣುವುದಿಲ್ಲ. ಕಾಮವಿಲ್ಲದಿರುವಾಗ ಅದನ್ನು ಗೆಲ್ಲುವ ಪ್ರಶ್ನೆಯೇ ಇಲ್ಲ. ಆದ್ದರಿಂದ ಅವು ಮಾನವನ ಬಾಳಿನ ಅಗತ್ಯ ತತ್ವಗಳು. ಅವುಗಳನ್ನು ಧರ್ಮದ ಹದ್ದಿನಲ್ಲಿಡಬೇಕಾದ್ದು ಅವನ ಜೀವನದ ಧ್ಯೇಯವಾಗಿರಬೇಕು. ಧರ್ಮದಿಂದ ಅರ್ಥವನ್ನು ಸಾಧಿಸಬೇಕೆಂದೂ "ನೆಚ್ಚದಿರು ಸಿರಿಯನು, ವೃಥಾ ಮದಗಿಚ್ಚಿನುರಿಯಲಿ ಬೇಯದಿರು"[1] ಎಂದೂ ನಾರದ ಧರ್ಮರಾಯನಿಗೆ ಬೋಧಿಸುತ್ತಾನೆ. ರಾಜಸೂಯ ಯಾಗದ ನಂತರ ದ್ವಾರಕಿಗೆ ಮರಳುವ ಸಮಯದಲ್ಲಿ ತನ್ನ ಚರಣದ ಮೇಲಿ ಹೊರಳಿದ ದ್ರೌಪದಿಯನ್ನು ಮೇಲಕ್ಕೆತ್ತಿ ಶ್ರೀಕೃಷ್ಣ "ನಂಬದಿರು ಸಿರಿಯನು....ವಿಷಾದ ವಿಡಂಬ ಹರುಷಂಗಳಲಿ ನೀನಿಹುದೇಕಚಿತ್ತದಲಿ"[2] ಎಂದು ಉಪದೇಶಿಸುತ್ತಾನೆ. ಅವಳ ಭವಿಷ್ಯದ ಕಷ್ಟಕ್ಲೇಶಗಳನ್ನು ಮೊದಲೇ

[1] ಸ ೧-೫೫; [2] ಸ ೧೧-೧೭

ಕಂಡು ಈ ಉಪದೇಶ ನೀಡಿದಂತಿದೆ. ಆ ಸಿರಿಯಾದರೂ ಶಾಶ್ವತವೆ? ಇಂದಿನ ಲಕ್ಷಾಧಿಕಾರಿ ನಾಳಿನ ಭಿಕಾರಿ. ಕೆಟ್ಟ ಹಣ ದೂಷ್ಯವೆನ್ನುವುದಕ್ಕೆ ಇದೂ ಒಂದು ಕಾರಣ. "ಕಾಯವಿದು ನೆಲೆಯಲ್ಲ, ಸಿರಿ ತಾ ಮಾಯರೂಪಿನ ಮೃತ್ಯುದೇವತೆ, ಬಾಯಬಿಡುತಿಹ ಳಾವುದೀತನ ಕಾಲಗತಿಯೆಂದು"[1] ಎಂಬುದು ಧೃತರಾಷ್ಟ್ರನಿಗೆ ಸನತ್ಸುಜಾತಮುನಿ ಹೇಳಿದ ಮಾತು. ಸಿರಿವಂತರೆಂಬ ಭಸ್ಮಾಸುರರಿಗೆ ಸಿರಿಯೇ ಮೋಹಿನಿ. ಸಿರಿವಂತಿಕೆಗೂ ನೀತಿಗೂ ಬಹುದೂರ. ದಯೆ ವಿವೇಕಗಳಂತು ಸಿರಿವಂತರಲ್ಲಿ ಸೊನ್ನೆ, ಅವರಿಗೂ ಹೆಂಡ ಕುಡುಕರಿಗೂ ನಿಕಟ ಸಂಬಂಧ. ಸಿರಿ ಕಳ್ಳು ಎರಡೂ ಸಹಭವರು ತಾನೆ? ಅವರ ಕಿರುಕುಳಕ್ಕೆ ಹೆದರಿ ಜನ ಅವರಿಗೆ ಸಕಲ ಮರ್ಯಾದೆಗಳನ್ನು ಸಲ್ಲಿಸುತ್ತಾರೆ; ಅವನಿಗೆ ಸಕಲ ಗುಣಗಳನ್ನು ಆರೋಪಿಸುತ್ತಾರೆ. "ಸಿರಿಯುಳ್ಳವನವನೆ ಕುಲಜನು, ಸಿರಿಯುಳ್ಳವನವನೆ ವಿದಗ್ಧನು, ಸಿರಿಯುಳ್ಳವನೇ ಮಹಾತ್ಮನು, ಸಕಲಗುಣಯುತನು, ಸಿರಿಯುಳ್ಳವನೇ ಸುಶೀಲನು"[2] ಸಿರಿಯಿಲಿಯನ್ನು ಲೋಕ ಸರಕುಮಾಡುವುದಿಲ್ಲವೆಂದು ವಿದುರ ನುಡಿದರೆ, "ಧನವನುಳ್ಳ ಮಹಾತ್ಮನಾವುದ ನೆನೆದೊಡದು ಕೈಸಾರುವುದು, ನಿರ್ಧನಿಕ ಬಯಸಿದ ಬಯಕೆ ಬಯಲಹುದು"[3] ಎಂದು ಸನತ್ಸುಜಾತಮುನಿ ಸಿರಿತನ ಬಡತನಗಳ ಸುಖದುಃಖಗಳನ್ನು ವಿವರಿಸುತ್ತಾನೆ. ಕವಿ ಪಂಡಿತ ವಿಜ್ಞಾನಿ ಸುಜ್ಞಾನಿಗಳೆಲ್ಲರೂ ಶ್ರೀಮಂತನ ಶುಶ್ರೂಷೆಗೆ ನಿಲ್ಲಬೇಕಾಗುತ್ತದೆ; ಅವನು ಏಳು ಎಂದರೆ ಏಳಬೇಕು, ಬಾಯಿಮುಚ್ಚು ಎಂದರೆ ತುಟಿ ಹೊಲಿದುಕೊಳ್ಳಬೇಕು. ಹಾಗೆ ಮಾಡಲಿಲ್ಲ, ಮರಣವೇ ಅವನಿಗೆ ಶರಣು. ಯುದ್ಧಾರಂಭದಲ್ಲಿ ಧರ್ಮರಾಯ ಭೀಷ್ಮರ ಆಶೀರ್ವಾದ ಪಡೆಯಲು ಹೋದಾಗ "ಆಳುಗೊಂಡನು ಕೌರವನು, ಪರರಾಳುತನವೆನಗಾಯ್ತು,"[4] "ಕೌರವನ ಧನವೆಂಬ ಘನಸಂಸಾರ ಗುಣದೊಳು ಬದ್ಧನಾವೆನು"[5] ಎಂದು ಅವನಂಥ ಮಹಾತ್ಮ ಹೇಳುವಾಗ ಅವನಿಗಿಂತ ಜೀತಗಾರ ಮೇಲೆನಿಸುತ್ತದೆ.

> ಹಿರಿಯನಾಗಲಿ ಸುಜನನಾಗಲಿ ಗರುವನಾಗಲಿ ಅರ್ಥವುಳ್ಳನ
> ಚರಣ ಸೇವಾಪರರು ಜಗದಲಿ ವರ್ತಮಾನವಿದು
> ಪರರ ಭಜಕರೊಳಾವಗುಣವಾ ನಿರವದಾವಗ್ಗಳಿಕೆ ಯಾವುದು
> ಗರುವತನವೈ ತಂದೆ ಪುರುಷಾಧಮನು ತಾನು[6]

ಎಂದವನು ಆತ್ಮಾವಹೇಳನಕ್ಕೂ ಸಿದ್ಧನಾಗುತ್ತಾನೆ. ಅನಂತರ ಧರ್ಮರಾಯ ದ್ರೋಣಾಚಾರ್ಯನ ಬಳಿ ಹೋಗಲಾಗಿ, ಅವನು

> ಅರಸ ಕೇಳರ್ಥಕ್ಕೆ ಧರಣೀಶ್ವರರ ಕಿಂಕರರರ್ಥ ತಾ ಕಿಂ
> ಕರತೆಯನು ಮಾಡುವುದು ಜಗದಲಿ ವರ್ತಮಾನವಿದು
> ನಿರುತ ಕೌರವನರ್ಥದಲಿ ಕಿಂಕರತೆಯೆಮಗಾಯಿತ್ತು ರಾಜ್ಯೈ
> ಶ್ವರಿಯ ಸೇವಾಪರರಿಗೀ ಸ್ವಾತಂತ್ರ್ಯವಿಲ್ಲೆಂದ[7]

---

1 ಉ ೪.೧೧; 2 ಉ ೩-೩೮; 3 ೪-೫೫; 4 ಭೀ ೨-೨೬; 5 ಭೀ ೨.೨೮; 6 ಭೀ ೨-೨೭; 7 ಭೀ ೨-೩೩

ಸಿರಿವಂತರ ಕೀಳು ಸೇರಿದ ಎಂಥವರ ಹಣೆಬರಹವೂ ಇದೇಯೆ. ಅವರು ಹಾಲು ಕಪ್ಪೆಂದರೆ ಅಹುದೆನ್ನಬೇಕು, ಮಸಿ ಬಿಳುಪೆಂದರೆ ನಿಜ ಎನ್ನಬೇಕು, ನೀನು ನಪುಂಸಕ ಎಂದರೆ ಸತ್ಯ ನುಡಿದಿರಿ ಎನ್ನಬೇಕು. ಅದರಿಂದಲೇ ಬಸವಣ್ಣ ಹೇಳಿದ್ದು: "ಹಾವು ತಿಂದವರ ನುಡಿಸ ಬಹುದು; ಗರಹೊಡೆದವರ ನುಡಿಸಬಹುದು; ಸಿರಿಗರ ಹೊಡೆದವರ ನುಡಿಸಲು ಬಾರದಯ್ಯ"[1] ಎಂದು. ಇಂಥ ಪರಿಸ್ಥಿತಿ ಎಲ್ಲ ದೇಶಗಳಲ್ಲಿಯೂ ಎಲ್ಲ ಯುಗಗಳಲ್ಲಿಯೂ ಇದ್ದದ್ದೇ. ಆದರೆ ಇದು ಬದಲಾವಣೆಯಾಗುವ ತನಕ ಶಾಂತಿಯೆಂಬುದು ಮೊಲದ ಕೋಡಾಗುತ್ತದೆ.

ಕುಮಾರವ್ಯಾಸಭಾರತ ಸಿರಿತನದ ಉಪಟಳವನ್ನು ಅಧಿಕವಾಗಿ ವಿವರಿಸಿದಂತೆ ಬಡತನದ ಕೊರಗು ಗೋಳುಗಳನ್ನಾಗಲಿ, ಬವಣೆ ಬಾಡುಗಳನ್ನಾಗಲಿ, ಅದರ ವಿಶ್ವರೂಪವನ್ನಾಗಲಿ ಪದರ ಪದರವಾಗಿ ಚಿತ್ರಿಸಿಲ್ಲ. ಅದಕ್ಕೆ ಸದುಪ್ರಗಳೂ ದೊರೆಯದಿರಬಹುದು. ಬಡವ ಎಲ್ಲಿಯೂ ಸ್ವತಂತ್ರನಲ್ಲ. ಅವನು ನಗುವಂತಿಲ್ಲ, ಅಣಕಿಸುವಂತಿಲ್ಲ, ಮಾತಾಡುವಂತಿಲ್ಲ. ಅವನು ಸಿರಿವಂತನ ಗುಲಾಮನಾದ್ದರಿಂದ, ಅವನು ಕಾಲಲ್ಲಿ ತೋರಿಸಿದ್ದನ್ನು ತಲೆಯಲ್ಲಿ ಹೊತ್ತು ನಡೆಸಬೇಕು. ಅವನು ಕತ್ತೆಯಂತೆ ಸಹನೆ ತಾಳ್ಮೆಗಳನ್ನು ಹೊಂದಿರಬೇಕು. "ಬಡವನ ಕೋಪ ದವಡೆಗೆ ಮೃತ್ಯು"[2] ಎಂಬ ಗಾದೆ ಬಹು ಪ್ರಾಚೀನವಾದದ್ದು. ಎಷ್ಟೇ ಕಷ್ಟವಿರಲಿ ಸಿಟ್ಟು ಹೊಟ್ಟೆಯಲ್ಲಿಯೇ ಅವಿತುಕೊಂಡಿರಬೇಕು. "ಜೀವವಿರೆ ಮೃತನೆಂದಡಾವನು"[3] ಎಂದು ಯಕ್ಷ ಕೇಳಿದಾಗ "ನಡೆವೆಣನೇ ದರಿದ್ರನು"[4] ಎಂದು ಧರ್ಮರಾಯ ಉತ್ತರಿಸುತ್ತಾನೆ. ಅಜ್ಞಾನವೂ ಸೇರಿಕೊಂಡಾಗ ಅವನು ಹೆಣವೇ ಸರಿ. ಅವನು ಯಾರಿಗೂ ಬೇಡವಾದ ಅವಸ್ತು. ಹುಟ್ಟಾಬೆಳೆಯ ಬಡತನವನ್ನನುಭವಿಸಿದವನಿಗೆ ಅದೇ ಸಹಜಸ್ಥಿತಿಯಾಗುತ್ತದೆ; ಬವಣೆಯೇ ಅವನ ಸಂಪತ್ತಾಗುತ್ತದೆ. ಆದರೆ ಸಿರಿವಂತ ಬಡವನಾದರಂತು ಅವನ ಗೋಳು ಹೇಳತೀರದು; ಅವನು ಬೀದಿನಾಯಿಗಿಂತಲೂ ಕಡೆಯಾಗುತ್ತಾನೆ. ಅವನಿಂದ ಉಪಕಾರ ಪಡೆದವರು, ಅವನಿಗೆ ಬಂದಿಳಿಕೆಗಳಾಗಿದ್ದವರು, ಅವನ ಹಿಂದೆ ತಿರುಗುತ್ತಿದ್ದವರಿರಲಿ, ಅವನ ಬಂಧುಗಳು ಸಹ ಅವನಿರುವ ಕಡೆಗೆ ತಲೆ ಹಾಕಿಕೊಂಡೂ ಮಲಗುವುದಿಲ್ಲ. "ಬಡತನಗಳಡಸಿದೊಡೆ ಬಂಧುಗಳೆಡಹಿ ಕಾಣರು"[5] ಈ ಮಾತು ಅಧಿಕಾರದಿಂದ ನಿವೃತ್ತನಾದವನಿಗೂ ಅನ್ವಯಿಸುತ್ತದೆ. ಆದರೆ ಶ್ರೀಮಂತಿಕೆಯಾಗಲಿ ಅಧಿಕಾರವಾಗಲಿ ಸ್ಥಿರವಲ್ಲ. ಆತ್ಮಗೌರವ ಅವುಗಳಿಗಿಂತ ಶ್ರೇಷ್ಠವಾದದ್ದು. ಅಧಿಕಾರ ಹೋಗಲಿ, ಸಿರಿತನ ಸಾರದಿರಲಿ, ಅದನ್ನುಳಿಸಿಕೊಂಡವನೇ ಧನಿಕ. "ಧನವಲಿ ಹೇಳಲೇನಭಿಮಾನವೇ ಧನ"[6] ಎಂಬುದು ವಿದುರನ ಮತ. ಅಂಥವನು ಸಮಾಜದಲ್ಲಿ ಎಲ್ಲಕ್ಕಿಂತ ಎತ್ತರದ ವ್ಯಕ್ತಿಯಾಗಿ ಕಾಣುತ್ತಾನೆ.

ಸಿರಿತನವೆಂಬ ಪುರುಷನ ಕೈಹಿಡಿದವಳು ಅಹಂಕಾರವೆಂಬ ದರ್ಪಿಷ್ಠೆ; ಕೋಪ ಮಾತ್ಸರ್ಯಾದಿಗಳು ಆಕೆಯ ಪರಿವಾರ. ಅಹಂಕಾರದ ಕಣ್ಣಿಗೆ ಶ್ರೇಷ್ಠವಾದವೆಲ್ಲ ಕನಿಷ್ಠ

[1] ಬಸವಣ್ಣನವರ ಷಟ್‌ಸ್ಥಳದ ವಚನಗಳು; ಸಂ. ಬಸವನಾಳ ಶಿವಲಿಂಗಪ್ಪನವರು; ಪು. ೩೬; [2] ವಿ ೨-೨೯; [3] ಅ ೨೩-೪೨; [4] ಅದೇ-೪೩; [5] ಉ ೩-೬೪; [6] ವಿ ೩-೬೫

ವಾಗಿ ಕಾಣುತ್ತದೆ; ಲೋಕ ತನಗಾಗಿಯೇ ಸೃಷ್ಟಿಯಾಗಿದೆಯೆಂದು ಬಗೆಯುತ್ತದೆ. ಅದು ಆತ್ಮಪ್ರಶಂಸೆಯಾಗಿ, ಪರರ ಖಂಡನೆಯಾಗಿ, ಸೇಡಾಗಿ, ಮೋಸವಾಗಿ, ಗೂಂಡಾಗಿರಿಯಾಗಿ, ಅಸಭ್ಯವರ್ತನೆಯಾಗಿ ನಾನಾ ರೂಪದಲ್ಲಿ ಮೈದೋರುತ್ತದೆ. ಕರ್ಣ ದ್ರೋಣ ಕೃಪರಂಥ ಅಗ್ಗಳಿಯರನ್ನು ಗೆಲ್ಲುವುದು ಸಾಧ್ಯವೆ ಎಂದು ಸಾರಥಿ ಪ್ರಶ್ನಿಸಿದಾಗ "ಮರುಳು ಸಾರಥಿ ನಮ್ಮ ನಾವ್ ಪತಿಕರಿಸಿಕೊಳಲಾಗದು"[1] ಎಂದು ಅಭಿಮನ್ಯು ಉತ್ತರವೀಯುತ್ತಾನೆ. ಅವನಂಥ ಮಹಾವೀರನ ಆತ್ಮಪ್ರತ್ಯಯದ ಮಾತುಗಳು ಆತ್ಮಪ್ರಶಂಸೆಯಾಗುವುದಿಲ್ಲ. ಘಟೋತ್ಕಚ ತನ್ನ ಪರಾಕ್ರಮವನ್ನು ವಿವರಿಸಿದಾಗ "ತಾನೆ ತನ್ನನೆ ಹೊಗಳಿಕೊಂಬರೆ ಮಾನನಿಧಿಯಾದವರು?"[2] ಎಂದು ಕರ್ಣ ಮೂದಲಿಸುತ್ತಾನೆ. ಧರ್ಮಾರ್ಜುನರೊಳಗೆ ವಿರಸ ಬುಸುಗುಡುತ್ತಿರುವಾಗ ಅರ್ಜುನ ತನ್ನ ಪರಾಕ್ರಮವನ್ನು ವಿವರಿಸುತ್ತಾನೆ. ಆಗ ಧರ್ಮರಾಯ "ತನ್ನನೆ ಕೊಂದವನು ತನ್ನಾಳುತನವನು ತಾನೆ ಹೊಗಳಿದರೆ"[3] "ನಿನ್ನಗ್ಗಳಿಕೆಯ ನೀನಾಡಿ ನಿನ್ನನೆ ಕೊಂದುಕೊಳ್"[4] ಎಂದು ಧರ್ಮರಾಯ ಮಾರ್ನುಡಿಯುತ್ತಾನೆ. ಒಳಗೆ ತಿರುಳಿಲ್ಲದವರು ಸಾಮಾನ್ಯವಾಗಿ ಆತ್ಮಪ್ರಶಂಸೆಯ ಮೋಹಕ್ಕೆ ವಶರಾಗುತ್ತಾರೆ. ಅದೇ ಅವರ ಆಸ್ತಿ.

ಅರಿಷಡ್ವರ್ಗಗಳು

ಅರಿಷಡ್ವರ್ಗಗಳಲ್ಲೊಂದು ಶಾಖೆ ಕೋಪ. ವ್ಯಕ್ತಿಯ ಮೂಲಭೂತ ಗುಣಗಳನ್ನು ಅವಲಂಬಿಸಿ ಅದು ವಿವಿಧ ಸ್ವರೂಪವನ್ನು ಪಡೆಯುತ್ತದೆ. ಅಸಮಂಜಸತೆ, ಅಸಮರ್ಪಕತೆ ಮತ್ತು ಅಪರಾಧಗಳನ್ನು ತಡೆಯುವ ಸಲುವಾಗಿ ಕೋಪ ಅಗತ್ಯವಾಗುತ್ತದೆ. ವ್ಯಕ್ತಿಕ್ಷೇಮ ಮತ್ತು ಸಮಾಜ ಕಲ್ಯಾಣ ಅದರ ಗುರಿ. ಅದು ಸದಾ ಸ್ವಾಗತಾರ್ಹ. ಅದನ್ನು ಸಾತ್ವಿಕ ಅಥವಾ ಧರ್ಮಕ್ರೋಧ ಎಂದು ಕರೆಯುವುದುಂಟು. ತಾಮಸಿಕ ಕೋಪ ವಿವೇಕವನ್ನು ಮುಸುಳಿಸುತ್ತದೆ. ಬಂಧು ಬಳಗ ಸುತ್ತಮುತ್ತಣ ಪ್ರಪಂಚ ಎಲ್ಲವನ್ನು ಮರೆಸುತ್ತದೆ. ಅದು ಬಹು ಬೇಗನೆ ಕ್ರಿಯಾರೂಪವನ್ನು ಪಡೆಯುತ್ತದೆ. ಕೋಪಗೊಳ್ಳುವುದು ಸುಲಭ. ಅದು ಜೀವಿಗಳಲ್ಲೆಲ್ಲ ಕಾಣುವ ಸಾಧಾರಣ ಗುಣ. ಯಾರಲ್ಲಿ ಯಾವಾಗ ಎಷ್ಟು ಪ್ರಮಾಣದಲ್ಲಿ ಏತಕ್ಕಾಗಿ ಕೋಪ ಕಾಣಿಸಿಕೊಳ್ಳಬೇಕೆಂದು ನಿರ್ಣಯಿಸುವುದು ಕಷ್ಟ. ಅದೊಮ್ಮೆ ಚಿತ್ತವನ್ನಾವರಿಸಿತೆಂದರೆ ಬೇರಾವ ಸದ್ಗುಣವೂ ಅಲ್ಲಿ ನಿಲ್ಲುವುದಿಲ್ಲ. ಅಷ್ಟೇ ಅಲ್ಲ, ಅದು ಶರೀರದ ನಾಳನಾಳಗಳಿಗೂ ಹರಿದು ಅವುಗಳನ್ನೆಲ್ಲ ವಿಕಾರಗೊಳಿಸುತ್ತದೆ. ಅಹಂಕಾರ ಅಸೂಯೆ ಮೊದಲಾದ ಶನಿ ಸಂತಾನದ ಒಡಹುಟ್ಟು ಕೋಪ. ರಾವಣ ದುರ್ಯೋಧನಾದಿ ಮಹಾಶೂರರು ಕೆಟ್ಟದ್ದು ಅದರಿಂದಲೇ. ಇಂದಿಗೂ ಅಂಥವರು ಇಲ್ಲವೆಂದಲ್ಲ. ಆದ್ದರಿಂದಲೇ

> ಕೋಪವೆಂಬುದನರ್ಥ ಸಾಧನ ! ಕೋಪವೇ ಸಂಸಾರಬಂಧನ
> ಕೋಪದಿಂದಿಹಪರದ ಸುಕೃತವು ಲಯವನೈದುವುದು

---

1 ದ್ರೋ ೪-೫೫ ; 2 ದ್ರೋ ೧೬-೩೩ ; 3 ಕ ೧೭-೩೬ ; 4 ಕ ೧೭-೩೫

ಕೋಪವನು ವರ್ಜಿಸಲು ಬೇಹುದು। ಕೋಪವುಳ್ಳವನಾವನಾಗಲಿ
ಕಾಪುರುಷನಿಹಪರಕೆ[1]

ಎಂದು ವಿದುರ ಧೃತರಾಷ್ಟ್ರನ ಮೂಲಕ ಇಡೀ ಲೋಕವನ್ನೇ ಕುರಿತು ಹೇಳಿದ್ದು.

ಸೇಡು ಮಾನವನ ಮತ್ತೊಂದು ದೌರ್ಬಲ್ಯ. ಮಹಾಭಾರತದ ಅನೇಕ ಘೋರ ಘಟನೆಗಳಿಗೆ ಅದೇ ಕಾರಣ. ಅದು ಅಸೂಯೆಯ ಮತ್ತೊಂದು ರೂಪ. ದ್ರುಪದನ ಮೇಲಿನ ಸೇಡಿನಿಂದ ದ್ರೋಣ ಕೌರವ ಪಾಂಡವರನ್ನು ಯುದ್ಧಕ್ಕೆ ಸಿದ್ಧಗೊಳಿಸಬೇಕಾಯಿತು. ಪಕ್ಕದ ಮನೆಯನ್ನು ಸುಡಲೆಂದು ಹಚ್ಚಿದ ಬೆಂಕಿ ತನ್ನ ಮನೆಯನ್ನೂ ಸುಡುತ್ತದೆ, ಊರೂರನ್ನೇ ನಿಶ್ಶೇಷಗೊಳಿಸುತ್ತದೆ. ಹಬ್ಬಕ್ಕೆಂದು ತಯಾರಿಸಿದ ಮದ್ದು ಇಡೀ ನಾಡನ್ನೇ ಭಸ್ಮಗೊಳಿಸಬಹುದು. ದ್ರೋಣನಿಂದ ಅವಮಾನಿತನಾದ ದ್ರುಪದ ಅವನ ನಾಶಕ್ಕೆಂದೇ ಧೃಷ್ಟದ್ಯುಮ್ನನನ್ನೂ ದ್ರೌಪದಿಯನ್ನೂ ಪಡೆದ. ಕೌರವ ಪಾಂಡವರ ವೈರ ದಿನೇ ದಿನೇ ಮಸಗತೊಡಗಿತು. "ಅರಸುಮಕ್ಕಳೊಳ್ ವಜುಗೆಯ್ವುದುಂ ಮೇಣ್ ಸಿಡಿಮದ್ದನರೆವುದುಂ ಎರಡುನೊಂದೆ"[2] ಎಂದು ದ್ರೋಣ ಅರಿಯುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು. "ಅಂತೆ ಕರ್ಮದ ಪಾಂಗು: ಮರಿಗೆ ಮರಿ; ಮರಿಗೆ ಮರಿ; ಬೆರಳ್‌ಗೆ ಕೊರಳ್"[3] ಎಂದವನು ಚಿಂತಿಸುವಂತಾಯಿತು. ಆ ಕರ್ಮರೂಪಿಯಾದ ಸೇಡು ಅಲ್ಲಿಗೇ ಕೊನೆಗೊಳ್ಳಲಿಲ್ಲ. ಕೊರಳ್‌ಗೆ ಕರುಳ್, ಕರುಳ್‌ಗೆ ಕುರುಳ್, ಎನ್ನುವ ರೀತಿಯಲ್ಲಿ ಇಡೀ ಮಹಾಭಾರತವನ್ನೆಲ್ಲ ಆವರಿಸಿತು. ಸೇಡಿನ ಪ್ರತೀಕವೋ ಎಂಬಂತೆ ಹುಟ್ಟಿದವಳು ಅಗ್ನಿಪುತ್ರಿ. ಭೀಮನ ಸೇಡು ತಣ್ಣಗಾದರೂ, ಅವಳ ಸೇಡು ಮಾತ್ರ ಕೊನೆಯ ತನಕ ಹಿಂಗಲಿಲ್ಲ. ಪಂಚ ದ್ರೌಪದೇಯರು ಅಶ್ವತ್ಥಾಮನ ಕೈಯಿಂದ ಹತರಾದಾಗ ಅವಳ ಗೋಳು ಹೇಳತೀರದು. ಆಗವಳಿಗೆ ವಿವೇಕೋದಯವಾಯಿತು. ಕೊಲ್ಲುವ ಸಲುವಾಗಿ ಭೀಮ ಫಲುಗುಣರು ಅಶ್ವತ್ಥಾಮನನ್ನು ಹಿಡಿದಾಗ "ಅಹಹ, ಗುರುನಂದನನ ಕೊಲಬಾರದಕಟೇನಂದನರ ಮರಣದ ಮಹಾವ್ಯಥೆಯಿಾತನಳಿವಿನಲಿ ಕೊಂದು ಕೂಗದೆ ಕೃಪೆಯುನ್"[4] ಎಂದು ಹೇಳಿ ಮುಂದಿನ ಅನಾಹುತವನ್ನು ನಿವಾರಿಸಿದಳು.

ಮಾತ್ಸರ್ಯಾಹಂಕಾರಗಳು ಮನೆಮಾಡಿಕೊಂಡಿರುವ ಮನುಷ್ಯ ತನ್ನ ಉದ್ದೇಶಸಾಧನೆಗಾಗಿ ವಂಚನೆ ಮೊದಲಾದ ಅವುಗಳ ಪರಿವಾರವನ್ನೇ ಬಳಸಿಕೊಳ್ಳಬೇಕಾಗುತ್ತದೆ. ರಾಜಕೀಯ ಕ್ಷೇತ್ರದಲ್ಲಂತು ಅದೊಂದು ಮಹಾಸ್ತ್ರ. ಸ್ವಕ್ಷೇಮ ಮತ್ತು ಸ್ವದೇಶಹಿತಗಳಿಗಾಗಿ ಅವನ್ನು ಬಳಸಿಕೊಳ್ಳಬಹುದೆಂದು ಹೇಳುವ ಜನ ಇಲ್ಲದಿಲ್ಲ. ಸಂದೇಹ, ಅವಿಶ್ವಾಸ ಮತ್ತು ಸುಲಭಫಲಾಪೇಕ್ಷೆಗಳು ವಂಚನೆಯ ಮಾಟುಗೋಲುಗಳಾಗಿ ಕುಯುಕ್ತಿ ಅಪಪ್ರಚಾರಗಳಲ್ಲಿ ಕ್ರಿಯಾಸಿದ್ಧಿಯನ್ನು ಪಡೆಯುತ್ತವೆ. ನಟನೆ ಅದರ ಪ್ರಮುಖಲಕ್ಷಣ. ಒಳಗೆ ಹೊಗೆ ಹೊರಗೆ ನಗೆ; ಹಗಲು ಸಂನ್ಯಾಸ, ಇರುಳು ಸಂಸಾರ; ಎದೆಯಲ್ಲಿ ಕಹಿ, ತುಟಿಯಲ್ಲಿ ಸಿಹಿ; ಅಂತರಂಗದಲ್ಲಿ ಕೊಳಕು, ಬಹಿರಂಗದಲ್ಲಿ ಥಳುಕು;

---

[1] ಉ ೧೧೩ ; [2] ಕುವೆಂಪು, ಬೆರಳ್‌ಗೆ ಕೊರಳ್, ಪು. ೨೯ ; [3] ಅದೇ, ೫೧ ; [4] ಗ ೧೦–೨೬

ಇದು ವಂಚಕರ ವೃತ್ತಿ. "ಒಳಗೆ ಕುಜನರು ಹೊರಗೆ ಧರಣೀವಳಯ ಮಾನ್ಯರು"[1] ಇಂಥವರ ಬಗ್ಗೆ ಸದಾ ಜಾಗರೂಕರಾಗಿರಬೇಕೆಂದು ನಾರದ ಧರ್ಮರಾಯನಿಗೆ ವಿವೇಕ ಹೇಳುತ್ತಾನೆ. ನಿಷ್ಕಪಟಿಗಳ ನಾಲಗೆ ಹರಿತವಾದರೂ ಹೃದಯ ಮಾತ್ರ ಶುದ್ಧವಾಗಿರುತ್ತದೆ. ಹೊರಗೆ ಕೂಡಲೇ ವ್ಯಕ್ತವಾಗದೆ ಹೃದಯದಲ್ಲಿ ನಿಂತ ಭಾವ ಕೊಳೆತು ನಾರುತ್ತದೆ. ನಿಷ್ಕಪಟಿಗಳ ಹೃದಯ ಮೊಸಳೆಗಳ ಮಡುವಲ್ಲ; ಹರಿಯುವ ತಿಳಿನೀರು. ಮಹಾಭಾರತದಲ್ಲೆಲ್ಲ ಅತ್ಯಂತ ನಿಷ್ಕಪಟಿಯಾದ ವ್ಯಕ್ತಿಯೆಂದರೆ ದ್ರೌಪದಿ. ಕೀಚಕವಧೆಯ ಹಿಂದಿನ ದಿನ ಅವಳಿಗೂ ಭೀಮನಿಗೂ ನಡೆಯುವ ಸಂಭಾಷಣೆಯಿಂದ ಅವಳ ಈ ಸ್ವಭಾವ ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ.[2] ನಿಷ್ಕಾಪಟ್ಯ ತಪ್ಪುಗ್ರಹಿಕೆಗೆ ಕಾರಣವಾಗುವುದಾದರೂ ನಟನೆಗಿಂತ ಬಹುಪಾಲು ಮೇಲು.

ಮನುಷ್ಯನ ಹಗೆಗಳು ಎರಡು ವಿಧ: ಆಂತರಿಕ ಮತ್ತು ಬಾಹ್ಯ. ಬಾಹ್ಯಶತ್ರುಗಳಿಗಿಂತ ಆಂತರಿಕ ಶತ್ರುಗಳು ಹೆಚ್ಚು ಅಪಾಯಕಾರಿ. ಬಾಹ್ಯಶತ್ರುಗಳನ್ನು ಉಪಾಯ ಚತುಷ್ಟಯಗಳ ಮೂಲಕ ನಿವಾರಿಸಿಕೊಳ್ಳಬಹುದು. ಆದರೆ ಆಂತರಿಕ ಶತ್ರುಗಳನ್ನು ಅಷ್ಟು ಸುಲಭವಾಗಿ ನಿರ್ನಾಮಗೊಳಿಸಲಾಗದು. ಬಾಹ್ಯಶತ್ರುಗಳ ಅಸ್ತಿತ್ವಕ್ಕೂ ಅಂತಶ್ಶತ್ರುಗಳೇ ಕಾರಣ. ಕಾರಣವನ್ನು ಮುರುಟಿಹಾಕಿದರೆ ಕಾರ್ಯ ತಾನಾಗಿಯೇ ನಿವಾರಣೆಯಾಗುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೇ ಅಂತಶ್ಶತ್ರುಗಳು. ಪ್ರಪಂಚದಲ್ಲಿ ನಡೆಯುವ ಸಕಲ ದುಷ್ಕರ್ಮಗಳಿಗೆ ಎಲ್ಲ ಅನಾಹುತಗಳಿಗೆ ಈ ಅರಿಷಡ್ವರ್ಗಗಳೇ ಮೂಲವೆಂಬುದನ್ನು ಜಗತ್ತಿನ ಕಾವ್ಯನಾಟಕಾದಿಗಳಿಂದ ತಿಳಿಯಬಹುದು. ಪಾಂಡವರ ಮೇಲಣ ಕೌರವರ ಮಾತ್ಸರ್ಯ ಕುರುಕ್ಷೇತ್ರ ಯುದ್ಧಕ್ಕೆ ಕಾರಣವಾಗುತ್ತದೆ. ಪ್ರೇಮ ಪ್ರೇಮಕ್ಕೆ ಕಾರಣವಾಗುವಂತೆಯೇ ಮಾತ್ಸರ್ಯದಿಂದ ಮಾತ್ಸರ್ಯ ರಕ್ತಬೀಜ ರಾಕ್ಷಸರಂತೆ ವೃದ್ಧಿಯಾಗುತ್ತದೆ.[3] "ಉಂಡು ಬದುಕುವ ಬಹಳ ಭಾಗ್ಯರ ಕಂಡಸೂಯಂಬಡುವ ಖಡ್ಡರ ಬಂಡರೆನ್ನದೆ ಲೋಕ"[4] ಎಂದು ಧೃತರಾಷ್ಟ್ರ ಮಗನಿಗೆ ಬುದ್ಧಿ ಹೇಳುವಾಗ ಸಾಮಾನ್ಯಜನರ ದುಷ್ಪ್ರವೃತ್ತಿಯನ್ನು ಹೊರಗೆಳೆದಿದ್ದಾನೆ. ಅಸೂಯೆಗೆ ವಿಶೇಷವಾದ ಪ್ರಚೋದನೆ ಅನಾವಶ್ಯಕ; ಸಂಬಂಧವಿಲ್ಲದಲ್ಲಿಯೂ ಅದು ವಿಜೃಂಭಿಸುತ್ತದೆ. ರೋಗಿ ನಿರೋಗಿಯನ್ನು ನೋಡಿ ಅಸೂಯೆಪಡುತ್ತಾನೆ; ಬಡವ ಮಿಂದು ಮಡಿಯುಟ್ಟರೆ ಸಿರಿವಂತನ ಹೊಟ್ಟೆಕಿಚ್ಚು ಧಗಧಗನೆ ಹತ್ತಿಕೊಳ್ಳುತ್ತದೆ; ಯಾರೊ ಅಪರಿಚಿತರು ಕಾರಿನಲ್ಲಿ ಹೋದರೆ, ಅಥವಾ ಮಿರುಮಿರನೆ ಮಿಂಚುವ ವಸ್ತ್ರಾಭರಣಗಳನ್ನು ಉಟ್ಟು ತೊಟ್ಟು ಆಡ್ಡಾಡಿದರೆ ಅವನ ಮಾತ್ಸರ್ಯ ಭುಗಿಲೆನ್ನುತ್ತ ಆಕಾಶ

---

1 ಸ ೧-೩೪; 2 ವಿ. ಪರ್ವ, ಸಂಧಿ ೩; ಪದ್ಯಗಳು ೪೪-೪೭; ೫೬-೬೫

3 They are not even jealous for the cause
But jealous for they are jealous ; it is a monster
Begot upon itself, born on itself (*Othello*, III, iv. 159-161)

4 ಸ ೧೨-೪೯.

ವ್ಯಾಪಿಯಾಗುತ್ತದೆ. ಮನೋವಿಕಾರಗಳಿಗಂತು ಮೋಹವೋ ಮದವೋ ನಿಮಿತ್ತವಾಗುತ್ತವೆ. ಅವುಗಳನ್ನು ಹತೋಟಿಗೆ ತೆಗೆದುಕೊಂಡಾಗ ಬಾಹ್ಯಶತ್ರುಗಳು ತಾವಾಗಿಯೇ ಹತರಾಗುತ್ತಾರೆ. ಧೃತರಾಷ್ಟ್ರ ದ್ರೌಪದಿಗೆ ನೀಡಿದ ವರಗಳಿಂದ ಜೂಜಿನಲ್ಲಿ ಕಳೆದುಕೊಂಡಿದ್ದ ಸಂಪತ್ತನ್ನೆಲ್ಲ ಮರಳಿ ಪಡೆದು, ಪಾಂಡವರು ಹಿಂದಿರುಗುವಾಗ ಕರ್ಣ ಪಾಂಚಾಲೆಯನ್ನು ಅಣಕಿಸುತ್ತಾನೆ. ಭೀಮ ರೋಷರುದ್ರನಾಗಿ ಬಾಗಿಲ ಲಾಳವಿಂಡಿಗೆಯ ಕಡೆಗೆ ಕೆಕ್ಕರಿಸಿ ನೋಡುತ್ತಾನೆ. ಆಗ ಧರ್ಮರಾಯ "ಹಗೆಗಳೇ ಕೌರವರು ತೆಗೆ ಬಲುವಗೆ ಕಣಾ ಕಾಮಾದಿರಿಪುಗಳು"[1] ಎಂದು ಭೀಮನನ್ನು ತಡೆದು ಸಂತೈಸುತ್ತಾನೆ. ಭೀಮನ ಕೋಪಾಗ್ನಿಗೆ ಧರ್ಮರಾಯನ ತಾಳ್ಮೆಯ ಜಲವಿಲ್ಲದಿದ್ದರೆ ಭಾರತದಲ್ಲಿ ಒಂದಲ್ಲ, ಹಲವಾರು ಕುರುಕ್ಷೇತ್ರಗಳು ನಡೆದುಹೋಗುತ್ತಿದ್ದುವೆಂದು ತೋರುತ್ತದೆ.

ಛಲ—ಸ್ವಾಭಿಮಾನ—ಆತ್ಮಗೌರವ

ಮನುಷ್ಯನ ಬೆಳವಣಿಗೆಗೆ ಹಾಗೂ ಅವನ ಆತ್ಮಗೌರವ ರಕ್ಷಣೆಗೆ ಛಲಾಭಿಮಾನಗಳು ಅನಿವಾರ್ಯ. ಹಿಡಿದ ಕೆಲಸವನ್ನು ಕೊನೆಮುಟ್ಟಿಸುವ ಸ್ವಭಾವವೇ ಛಲ; ಮಾನ ಮರ್ಯಾದೆಯನ್ನೂ ವ್ಯಕ್ತಿಸ್ವಾತಂತ್ರ್ಯವನ್ನೂ ಕಾಪಾಡಿಕೊಳ್ಳುವುದರಲ್ಲಿ ನೆರವಾಗುವ ಚಾಳಿಯೇ ಅಭಿಮಾನ. ಕೈಕೊಂಡ ಕಾರ್ಯದಲ್ಲಿ ಅಥವಾ ಸಾಧನೆಯಲ್ಲಿ ವಿಫಲನೆಯೇ ಆತ್ಮಹತ್ಯೆ. ಏಕೆಂದರೆ ಆ ವಿಫಲತೆಯಿಂದ ನಿಂದೆ ನಿರಾಶೆಗಳು ಸಂಗ್ರಹಗೊಂಡು ಭವಿಷ್ಯಾಭ್ಯುದಯಕ್ಕೆ ಅಡ್ಡಿಯಾಗುತ್ತವೆ. ಛಲದ ಮತ್ತೊಂದು ರೂಪವೇ ಕಾರ್ಯಸಿದ್ಧಿ. ಆದರೆ ಆ ಛಲದ ಹಿಂದೆ ಸಾತ್ವಿಕ ಮನೋಧರ್ಮವಿರಬೇಕು; ಲೋಕಕಲ್ಯಾಣಾಕಾಂಕ್ಷೆಯಿರಬೇಕು. ಭೀಮ ಕೌರವರಿಬ್ಬರೂ ಛಲಗಾರರು ಅಭಿಮಾನಧನರು. ಅವರು ವಧೆಗೆ ಸಿದ್ಧರೇ ಹೊರತು ಅಭಿಮಾನಭಂಗಕ್ಕಲ್ಲ. ದ್ರೌಪದಿಯನ್ನಪಹರಿಸಿಕೊಂಡು ಹೋಗಲು ಬಂದ ಜಯದ್ರಥನನ್ನು ಭೀಮಾರ್ಜುನರು ಹಿಡಿದು ಕೊಲ್ಲುವ ಸಲುವಾಗಿ ಅಣ್ಣನ ಅನುಮತಿ ಕೇಳಿದಾಗ "ಮಾನಧನರಿಗೆ ವಧೆಯೆನಿಪುದಭಿಮಾನ ಭಂಜನ"ವೆಂದು ಮುನಿಸ್ತೋಮ ಬುದ್ಧಿ ಹೇಳಿ ಅವನನ್ನು ಬಿಡಿಸುತ್ತಾರೆ. ಭೀಮನ ಛಲ ಧರ್ಮರಾಯನ ಅಂಕೆಗೊಳಪಟ್ಟಿದ್ದುದರಿಂದ ಅನಾಹುತ ಒದಗಲಿಲ್ಲ. ದುರ್ಯೋಧನನ ಛಲಾಭಿಮಾನಗಳು ವಿವೇಕದ ನಿಯಂತ್ರಣಕ್ಕೊಳಪಡಲಿಲ್ಲವಾಗಿ ಲೋಕಕಂಟಕವಾದುವು. ರಾಜಕೀಯ ನಾಯಕರ ಛಲಾಭಿಮಾನಿಗಳು ಹೇಗೆ ಸಮಾಜಕಂಟಕವಾಗುತ್ತಿವೆ, ಜನಬಲಿಗೆ ಕಾರಣವಾಗುತ್ತಿವೆಯೆಂಬುದು ದಿನದಿನವೂ ನಾಡಿನ ಸಜ್ಜನರ ಅನುಭವಕ್ಕೆ ಬರುತ್ತಿರುವ ಸಂಗತಿಗಳು.

ಸತ್-ಅಸತ್, ಕಪ್ಪು-ಬಿಳುಪು, ಕಹಿ-ಸಿಹಿ, ಭೀತಿ-ಧೈರ್ಯ ಇವೇ ಮೊದಲಾದ ದ್ವಂದ್ವಗಳು ಮಾನವಜೀವನವನ್ನೆಲ್ಲ ಆಕ್ರಮಿಸಿಕೊಂಡಿವೆ. ಅಸತ್ತಿನಿಂದ ಕೂಡಿದ್ದೆಲ್ಲ ಆಸುರೀಯತೆಯಾಗುವಂತೆ, ಸತ್ತಿನಿಂದ ಕೂಡಿದ್ದೆಲ್ಲ ದೈವೀಯತೆಯಾಗುತ್ತದೆ. ಆಸುರೀಯತೆಯಿಂದ ದೈವೀಯತೆಯ ಕಡೆಗೆ ಮಾನವ ಕೈಗೊಳ್ಳುವ ಯಾತ್ರೆಯೇ ಜೀವನ.

1 ಸ ೧೫-೫೭.

ಈ ಎರಡು ಗುಣಗಳೂ ಅವನ ವ್ಯಕ್ತಿತ್ವದಲ್ಲಿ ಸುಪ್ತವಾಗಿಯೋ ಜಾಗೃತವಾಗಿಯೋ ಒಂದಲ್ಲ ಒಂದು ಪ್ರಮಾಣದಲ್ಲಿ ನೆಲಸಿರುತ್ತವೆ. ದೈವೀಗುಣಗಳು ವೃದ್ಧಿಗೊಂಡರೆ ಆಸುರೀಗುಣಗಳು ತಳ ಸೇರುತ್ತವೆ; ಆಸುರೀಗುಣಗಳು ಪ್ರಬಲಗೊಂಡರೆ ದೈವೀಗುಣಗಳು ಮರೆಯಾಗುತ್ತವೆ. ಈ ಗುಣಗಳು ಅಂತರಂಗದಲ್ಲಿ ಅರಳಿ, ಬಹಿರಂಗವಲ್ಲಿ ಪ್ರಕಾಶಿಸುತ್ತವೆ. ಅಂತರಂಗಶುದ್ಧಿಯಿಂದ ಬಹಿರಂಗಶುದ್ಧಿ ಪ್ರಾಪ್ತವಾಗುತ್ತದೆ. ಭಾವಶುದ್ಧಿ ಆಲೋಚನಾಶುದ್ಧಿಗಳಿಂದ ವಾಕ್ಶುದ್ಧಿ ಮತ್ತು ವರ್ತನಶುದ್ಧಿಗಳು ಸಿದ್ಧಿಸುತ್ತವೆ. ಶೈಶವ ಸಮಯದ ಮನಶ್ಶುದ್ಧಿ ಬರಬರುತ್ತ ಪರಿಸರದ ಪ್ರಭಾವದಿಂದ ವಿಕಾರಗೊಳ್ಳುತ್ತದೆ. ಕೌರವ ಪಾಂಡವರ ಜೀವನವೇ ಇದಕ್ಕೆ ನಿದರ್ಶನ. ಇಂದ್ರಿಯಗಳು ಬಹುಬೇಗನೆ ಭೋಗಮುಖಿಯಾಗುತ್ತವೆ. ವಿಷಯಾಸಕ್ತಿಯೇ ಅವುಗಳ ಪ್ರಸಕ್ತಿ. ಅವುಗಳನ್ನು ಹದ್ದಿನಲ್ಲಿಟ್ಟುಕೊಳ್ಳುವುದು ಶ್ರಮಸಾಧ್ಯವಾದ ಸಂಗತಿ. ಅರಿಷಡ್ವರ್ಗಗಳ ಪ್ರಾಬಲ್ಯದಿಂದ ಏನೇನನಾಹುತಗಳೊದಗುತ್ತವೆ, ಅವುಗಳ ನಿಯಂತ್ರಣದಿಂದ ಜೀವನ ಹೇಗೆ ಶ್ರೇಯಸ್ಸಿನ ಮಾರ್ಗದಲ್ಲಿ ಸಾಗುತ್ತದೆನ್ನುವುದನ್ನು ಹೆಜ್ಜೆಹೆಜ್ಜೆಗೂ ಇಲ್ಲಿ ಕಾಣಬಹುದು. ಇಲ್ಲಿ ಮೂರು ವಿಧದ ವ್ಯಕ್ತಿಗಳನ್ನು ಸಂಧಿಸುತ್ತೇವೆ: ಸಿದ್ಧರು, ಸಾಧಕರು ಮತ್ತು ಸಾಮಾನ್ಯರು. ಋಷಿಗಳು ಸಿದ್ಧರು, ಭೀಷ್ಮ ದ್ರೋಣ ಪಾಂಡವರು ಸಾಧಕರು, ಉಳಿದವರೆಲ್ಲ ಸಾಮಾನ್ಯರು. ನಾರದಾದಿ ಋಷಿಗಳು ಬೋಧಿಸಿದ ಆದರ್ಶತತ್ವಗಳನ್ನು ಪಾಂಡವರು ತಮ್ಮ ಜೀವನದಲ್ಲಿ ಅನುಷ್ಠಾನಗೈದವ್ದರಿಂದಲೇ ಅಂತಿಮ ಜಯ ಅವರದಾಗುತ್ತದೆ. ಅವರ ಆದರ್ಶವನ್ನು ಮುಂದಿನವರು ಅನುಸರಿಸುತ್ತಾರೆ. ಕೊನೆಗೆ ಆ ಆದರ್ಶಗಳೇ ಇಡೀ ಸಮಾಜದ ಸತ್ವವಾಗಿ, ಸಂಸ್ಕೃತಿಯೆಂದು ಹೆಸರು ಪಡೆಯುತ್ತವೆ.

ಸತ್ಯ

ಅಂಥ ಆದರ್ಶಗಳಲ್ಲಿ ಸತ್ಯನಿಷ್ಠೆಯೂ ಒಂದು. ಇರುವಿಕೆಯೇ, ಅಂದರೆ ವಾಸ್ತವತೆಯೇ ಸತ್ಯ; ಇಲ್ಲದ್ದೇ ಅಂದರೆ ವಾಸ್ತವವಲ್ಲದ್ದೇ ಅಸತ್ಯ. ಒಂದು ವಸ್ತುವಿನ ಅಥವಾ ಶಕ್ತಿಯ ಸ್ವರೂಪದರ್ಶನವೇ ಸತ್ಯ. ಸತ್ಯಾಸತ್ಯಗಳ ಸ್ವರೂಪನಿರ್ಣಯ ಆಯಾಯ ವ್ಯಕ್ತಿಯ ಜ್ಞಾನ ವಿವೇಕಸಾಮರ್ಥ್ಯವನ್ನವಲಂಬಿಸುತ್ತದೆ. ಒಂದು ವಸ್ತುವಿನ ಸ್ವರೂಪ ವಿಜ್ಞಾನಿಗೆ ಗಮ್ಯವಾಗಿರುವಂತೆ ಸಾಮಾನ್ಯನಿಗೆ ತಿಳಿದಿರುವುದಿಲ್ಲ. ಅದನ್ನು ಸುಜ್ಞಾನದಿಂದರಿಯುವ ಜತೆಗೆ ಸುಜ್ಞಾನಿ ಮತ್ತು ವಿಜ್ಞಾನಿಗಳಿಂದ ತಿಳಿದುಕೊಳ್ಳಬೇಕಾಗುತ್ತದೆ. ಹೇಳಿದ್ದನ್ನು ನಡಸುವುದು ಸತ್ಯದ ಮತ್ತೊಂದು ಅರ್ಥ. ಗೋವಿನ ಕಥೆಯಲ್ಲಿ ಕಾಣುವ ಸತ್ಯವೇ ಅದು. ಧರ್ಮರಾಜನೀತಿಗಳನ್ನು ಕುರಿತು ಉಪದೇಶ ನೀಡಿದ ನಾರದ ಋಷಿಯೇ ಸತ್ಯದ ಮಹತ್ವವನ್ನು ಧರ್ಮರಾಯನಿಗೆ ವಿವರಿಸುತ್ತಾನೆ.

> ಸತ್ಯವುಳ್ಳರೆ ಧರಣಿ ಸಾರುಗು । ಸತ್ಯವುಳ್ಳರೆ ಪದವಿ ಸಾರುಗು
> ಸತ್ಯವುಳ್ಳರೆ ಸಕಲರಾಜ್ಯದ ವೀರಸಿರಿ ಸಾರ್ಗು

ಸತ್ಯವೇ ಬೇಹುದು ನೃಪರಿಗಾ । ಸತ್ಯ ಭುಜಬಲಗೂಡಿ ಮಂತ್ರದ
ಸತ್ಯವೇ ಸತ್ವಾಧಿಕವು[1]

ಸತ್ಯಪಾಲನೆಯಿಂದ ಧರಣಿ ಪದವಿಸಂಪತ್ತು ಸಿಗುತ್ತವೆಂದು ಈಗಿನ ಕಾಲದಲ್ಲಿ ಹೇಳುವುದು ಕಷ್ಟವಾದೀತು. ಹಿಂದಿನ ಕಾಲದಲ್ಲಿಯೂ ಅಷ್ಟೇಯೆ. ಅದರಿಂದ ಆತ್ಮಸತ್ವ ವೃದ್ಧಿಯಾಗುವುದಂತು ಖಂಡಿತ. ಹರನೆಂಬುದೇ ಸತ್ಯ, ಸತ್ಯವೆಂಬುವೆ ಹರನು ಎಂಬ ತತ್ವವನ್ನು ಸಾಧಿಸಿದ ಹರಿಶ್ಚಂದ್ರ ಲೋಕಕ್ಕೆ ಆದರ್ಶವ್ಯಕ್ತಿಯಾಗಿದ್ದಾನೆ. ಎಷ್ಟೇ ಕಷ್ಟಗಳು ಅಡ್ಡಬರಲಿ ಆಡಿದ ಮಾತಿಗೆ ತಪ್ಪದವನು ಮಹಾತ್ಮನೆನಿಸಿಕೊಳ್ಳುತ್ತಾನೆ. ಅಪಾರವಾದ ಆತ್ಮಶಕ್ತಿಯನ್ನು ಪಡೆದಂಥವನಿಂದ ಮಾತ್ರ ಸತ್ಯಪಾಲನೆ ಸಾಧ್ಯವಾಗುತ್ತದೆ. "ಬೆಚ್ಚಿಬೆದರದಿರೆಡರಿನಲಿ ಸತ್ಯವನು ಚಲಿಸದಿರು"[2] ಎಂಬ ಋಷಿವಾಕ್ಯವನ್ನು ಅಕ್ಷರಶಃ ಧರ್ಮರಾಯ ಪಾಲಿಸುತ್ತಾನೆ. "ಸತ್ಯವೇ ಜಪ ಹೋಮ ಯಜ್ಞ ವಿಧಾನದಾನ ತಪ....ಸತ್ಯಹೀನನೆ ಹೀನಜಾತಿಗ"[3] ಎಂದು ಅವನೂ "ಸತ್ಯವೇ ನಿಜಮಾತೆ, ಜ್ಞಾನವೇ ನಿತ್ಯವಹ ಪಿತ"[4] ಎಂದು ಮುಂತಾಗಿ ಸಹದೇವನೂ ನುಡಿಯುವಾಗ ಸತ್ಯಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲವೆಂದಾಗುತ್ತದೆ. "ಸತ್ಯವೊಂದೇ ಸೋಪನವು ಸ್ವರ್ಗಕ್ಕೆ"[5] ಎಂಬುದು ವಿದುರನ ಮತ. ವನವಾಸದ ಸಮಯದಲ್ಲಿ ವೇದವ್ಯಾಸ ಬಂದಾಗ ಧರ್ಮರಾಯ ಬೇಡುವ ಆಶೀರ್ವಾದದಲ್ಲಿ ಅವನ ಕಠೋರನಿಷ್ಠೆ ವ್ಯಕ್ತವಾಗುತ್ತದೆ. ಸತ್ಯಸಿದ್ಧಿಗಾಗಿ ಅವನು ಮಡದಿ ತಮ್ಮಂದಿರನ್ನು ಸಹ ತ್ಯಾಗಮಾಡಲು ಸಿದ್ಧನಾಗಿದ್ದಾನೆ.

ಒಡಲು ಬೀಳಲಿ ಮೇಣು ತಮ್ಮದಿ । ರಡವಿಯಲಿ ಹಾಯಿಕ್ಕಿ ಹೋಗಲಿ
ಮಡದಿ ಮುನಿಯಲಿ ಬಸಿದು ಬೀಳಲಿ ಧರಣಿ ಕುರುಪತಿಗೆ
ಎಡೆಯಲುಳಿವಿವರಾಗು ಹೋಗಿನ । ಗೊಡವೆಯೆನಗಿಲ್ಲೆನ್ನ ಸತ್ಯದ
ಮುಡಿಗೆ ಹಾದರವಿಲ್ಲದಂತಿರೆ ಕರುಣಿಸುವುದೆಂದ[6]

ಅವನಿಗೆ ನೆಲ ಬೇಕಿಲ್ಲ, ಸಿರಿ ಬೇಕಿಲ್ಲ, ಸತ್ಯವನ್ನು ಬಿಡಲಿಲ್ಲವೆಂದಷ್ಟರಿಂದಲೇ ತೃಪ್ತಿ ಅವನಿಗೆ. ಆ ವಿಷಯದಲ್ಲವನು ಯಾವಾಗಲೂ ತಮ್ಮಂದಿರನ್ನು ಎಚ್ಚರಿಸುತ್ತಾನೆ. ಅವರು ಕೊನೆಯತನಕ ಅಣ್ಣನ ಮಾತು ವಿನಾಯಿಸುವುದಿಲ್ಲ. ಅಜ್ಞಾತವಾಸದ ಅವಧಿ ಮುಗಿಯುವ ಮುನ್ನವೇ ಗೋಗ್ರಹಣದ ಮೂಲಕ ಪಾಂಡವರನ್ನು ಪತ್ತೆ ಹಚ್ಚುತ್ತೇವೆಂದು ಕೌರವ ಗುಡುಗಿದಾಗ "ಅವರು ಸತ್ಯಕ್ಕೆ ನಡೆವರಲ್ಲದೆ ಬವರಕಂಜುವರಲ್ಲ"[7] "ಜಲಧಿ ಮೇರೆಯನೊದೆದು ಹಾಯಲಿ, ನಡೆದಾಡಲಿ ಕುಲಾದ್ರಿಗಳು ಅಳುಪರಿಲರಿವನೆ ಸತ್ಯ ಭಾಷೆಗೆ ಕಲಿಯುಧಿಷ್ಠಿರ"[8] ಎಂದು ಭೀಷ್ಮ ಸಬುದಿಸುತ್ತಾನೆ.

ಹರಿಶ್ಚಂದ್ರ ಧರ್ಮರಾಯ ಗಾಂಧೀಜಿಯಂಥ ಮಹಾನುಭಾವರಿಗೆ ಸತ್ಯವೇ ಪ್ರಾಣವೆಂಬುದು ನಿಜ. ಸತ್ಯವಚನದಿಂದ ಕೆಟ್ಟದ್ದಾಗುವ ಪ್ರಸಂಗಗಳು ಲೋಕದಲ್ಲಿ ಹಲವಾ

---

[1] ಸ ೧–೫೦; [2] ಸ ೧-೫೫; [3] ಅ ೧೩-೫೩; [4] ಅ ೩–೩೧; [5] ಉ ೩–೯; [6] ಅ ೪-೧೨; [7] ವಿ ೪ ೧೨; [8] ವಿ ೭–೨೩

ರುಂಟು. "ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡದಂಥ ಕೋಪ" ಎಂಬ ಗಾದೆಯ ಸತ್ಯವನ್ನರಿತವರು ಸತ್ಯವನ್ನು ಮುಚ್ಚುವುದೂ ಉಂಟು. ಕೆಲವು ಸಾರಿ ನಿಜ ಗೊತ್ತಿದ್ದರೂ ಕಾಣದವರಂತೆ ಮೌನವಾಗಿದ್ದುಬಿಡುತ್ತಾರೆ. ತನ್ನ ಹೃದಯದಲ್ಲಿ ಸಂಚರಿಸುವ ಒಳಸಂಚುಗಳನ್ನೂ, ಚಿತ್ತಕೋಶದಲ್ಲಿ ಉದ್ಭವಿಸುವ ಆಲೋಚನೆಗಳನ್ನೂ ತನ್ನ ಮಡದಿ ಮೊದಲುಗೊಂಡು ಹತ್ತಿರದ ಬಂಧುಗಳಾದರೂ ಸರಿಯೆ, ಅವರಿಗೆ ಸಾಕಲ್ಯವಾಗಿ ರಟ್ಟು ಮಾಡುವ ಧೀರಸಾಹಸಿಯನ್ನು ಕಾಣಲಾಗದು. ಹಾಗೆ ಮಾಡುವುದರಿಂದ ಸಂಸಾರದಲ್ಲಿ ಒಡಕುಂಟಾಗುವ ಸಂಭವವುಂಟು. ಸತ್ಯ ನುಡಿಯುವುದರಿಂದ ಸಜ್ಜನರಿಗೆ ಕೇಡೊದಗುವುದಾದರೆ ನುಡಿಯದಿರುವುದೇ ಮೇಲೆಂದು ಕೃಷ್ಣ ಹೇಳುತ್ತಾನೆ. ಸತ್ಯವೇ ತನಗೆ ಸುವ್ರತವೆಂದು ತಿಳಿದು ಕೌಶಿಕನೆಂಬ ಋಷಿ ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ. ಕೆಲವು ದುಷ್ಟರು ಸಜ್ಜನರನ್ನು ಬೆಂಬತ್ತಿ ಅಟ್ಟಿಸಿಕೊಂಡು ಬಂದರು. ಸಜ್ಜನರು ಓಡಿಹೋಗಿ ಒಂದು ಮರೆಯಲ್ಲವಿತುಕೊಂಡದ್ದನ್ನು ಮುನಿ ಗಮನಿಸಿದ. ಹಿಂದೆಯೇ ಬಂದ ದುಷ್ಟರು ಓಡಿಹೋದವರ ನೆಲೆ ಯಾವುದೆಂದು ಅವನನ್ನು ಪ್ರಶ್ನಿಸಿದರು. ಏಕೆ ಎತ್ತ ಎಂದು ವಿಚಾರಿಸದೆಯೆ ಮುನಿ ಸಜ್ಜನರು ಹೋದ ಮಾರ್ಗವನ್ನು ತೋರಿಸಿದನು. ದುರ್ಜನರು ಸಜ್ಜನರನ್ನು ಕೊಂದು,ಅವರಲ್ಲಿದ್ದುದನ್ನು ಸುಲಿದೊಯ್ದರು. ಕಾಲಾನಂತರದಲ್ಲಿ ಕೌಶಿಕ ತೀರಿಕೊಂಡಾಗ ಅವನಿಗೆ ನರಕವಾಸ ಲಭಿಸಿತು. ದುರ್ಜನರ ಗುರಿಯೇನೆಂಬುದನ್ನು ವಿಚಾರಿಸದೆ, ಸಜ್ಜನರ ವಧೆಗೆ ಕಾರಣನಾದದ್ದಕ್ಕಾಗಿ ಅವನಿಗೆ ಆ ಸ್ಥಿತಿಯೊದಗಿತು. ಆದ್ದರಿಂದಲೇ ಹಿರಿಯರು

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್
ನ ಬ್ರೂಯಾತ್ ಸತ್ಯಮಪ್ರಿಯಂ
ನಾಸತ್ಯಂ ಚ ಪ್ರಿಯಂ ಬ್ರೂಯಾತ್
ಏಷ ಧರ್ಮಃ ಸನಾತನಃ

ಎಂದು ಹೇಳಿದ್ದು. ಆದ್ದರಿಂದ ಅಸಂಸ್ಕೃತರ ಮುಂದೆ ಸತ್ಯ ನುಡಿಯಬಾರದು ; ನುಡಿಯಬೇಕಾದಾಗ ಧರ್ಮಕ್ಕೆ ಬಾಧಕವಾಗದಂತೆ ನೋಡಿಕೊಳ್ಳಬೇಕು.

ಅಹಿಂಸೆ

"ಅಹಿಂಸಾ ಪರಮಧರ್ಮವು ಎಂಬ ವಾಕ್ಯದ ಸರಣಿ ಸಾರೋದ್ಧಾರವಲ್ಲಾ ಸಕಲ ದರುಶನಕೆ"[1] ಎಂಬ ಶಾಸ್ತ್ರೋಕ್ತ ನೀತಿಯನ್ನಾಧರಿಸಿ, ಬಂಧುಹನನ ಪಾಪಕೃತ್ಯವಾಗುವುದಿಲ್ಲವೆ ಎಂದು ಅರ್ಜುನ ಕೃಷ್ಣನನ್ನು ಪ್ರಶ್ನಿಸುತ್ತಾನೆ. ಪ್ರಾಣಿವಧೆ ಹಿಂಸೆಯಾಗುವುದಿಲ್ಲವೆ ಎಂಬುದು ಅವನ ಸಂದೇಹ. ಆತ್ಮನ ಚಿರಂತನತೆ, ಕರ್ಮದ ಅನಿವಾರ್ಯತೆ, ಕಾಯದ ನಶ್ವರತೆ ಮೊದಲಾದ ವಿಷಯಗಳ ಬಗ್ಗೆ ಕೃಷ್ಣ ದೀರ್ಘವಾಗಿ ಉಪನ್ಯಾಸ ಮಾಡಿದರೂ ಈ ವಿಚಾರದ ಬಗೆಗಿರುವ ಸಮಸ್ಯೆಗಳನ್ನು ಬಿಡಿಸಿದಂತೆ ತೋರುವುದಿಲ್ಲ. ಪ್ರಾಣಿವಧೆ ಪಾತಕವೆನಿಸಿಕೊಳ್ಳುವುದಾದರೆ, ಮಾನವರು ಸಹಿತ ಜಗತ್ತಿನ ಪ್ರಾಣಿಗಳೆಲ್ಲ

---

1 ಭೀ ೩–೫೨

ಪಾಪಿಸಮುದಾಯಕ್ಕೆ ದಾಖಲಾಗಬೇಕಾಗುತ್ತದೆ. ಇಡೀ ಜಗತ್ತೊಂದು ನರಕವೆನ್ನಬೇಕಾಗುತ್ತದೆ. ಜೀವವೇ ಜೀವಿಗೆ ಪ್ರಾಣಸತ್ವ, ಪೋಷಕದ್ರವ್ಯ. ಕೃಷ್ಣ ಹೇಳಿದ್ದೇ ಒಂದು ಕತೆಯಿದೆ.[1] ಬಳಾಕನೆಂಬ ವನಚರನೊಬ್ಬ ಕುಟುಂಬ ರಕ್ಷಣೆಗಾಗಿ ಪ್ರತಿದಿನ ಮೃಗವಧೆ ಮಾಡಬೇಕಾಗುತ್ತದೆ. ಅದು ಹಿಂಸಾಚರಣೆಯೆಂದೇ ಧರ್ಮನ ಸೇನಬೋವ ತನ್ನ ದಿನಚರಿಯಲ್ಲಿ ಬರೆದುಕೊಳ್ಳುತ್ತಾನೆ. ಮರಣ ಪ್ರಾಪ್ತವಾದಾಗ ಸುರಾಂಗನೆಯರು ಆತನನ್ನು ಕೊಂಡೊಯ್ಯುತ್ತಾರೆ. ಧರ್ಮವ್ಯಾಧ ತನ್ನ ವೃತ್ತಿಯ ವಿಷಯ ಮಾತಾಡುವಾಗ "ಭೂತಹಿಂಸೆಯಿದಲ್ಲ, ನಮಗಿದು ಮಾತೃಪಿತೃ ರಕ್ಷಾರ್ಥ, ಎಮ್ಮಯ ಜಾತಿಧರ್ಮವು ಮಾಂಸವಿಕ್ರಯ ಮೃಗವಧಾದಿಗಳು"[2] ಎಂದು ವಿವರಿಸುತ್ತಾನೆ. ಲೋಭ ದೂರನಾಗಿ ಅನ್ಯಾಯಕ್ಕವಕಾಶವಿಲ್ಲದಂತೆ ಕುಟುಂಬಭರಣಕ್ಕಾಗಿ ಮಾಡುವ ಪ್ರಾಣಿವಧೆ ಪಾತಕವಾಗಲಾರದು ಎಂಬ ತತ್ವ ಅವನ ಮಾತಿನಿಂದ ಸಿದ್ಧವಾಗುತ್ತದೆ. ವಾಲ್ಮೀಕಿ ವ್ಯಾಧನಾಗಿದ್ದಾಗ ಚೋರವೃತ್ತಿಯಲ್ಲಿ ತೊಡಗಿದ್ದನಷ್ಟೆ. "ಇಂಥ ಹಿಂಸೆಯಿಂದ ಪಾಪ ಬರುತ್ತದೆ. ಯಾವ ಮಡದಿ ಮಕ್ಕಳ ರಕ್ಷಣೆಗಾಗಿ ಹಿಂಸಾಕೃತ್ಯದಲ್ಲಿ ತೊಡಗಿದ್ದೀಯೋ ಅವರು ಈ ಪಾಪಕ್ಕೆ ಹೊಣೆಗಾರರಾಗಲಾರರು, ಬೇಕಾದರೆ ಅವರನ್ನು ಕೇಳಿಕೊಂಡು ಬಾ" ಎಂದು ನಾರದ ಅವನ ಮುಂದೆ ಸಮಸ್ಯೆಯನ್ನೊಡ್ಡಿದನಂತೆ. ನಾರದನ ಮಾತು ನಿಜವೆಂದು ತೋರಿದಾಗ, ವ್ಯಾಧ ಸಂಸಾರವನ್ನು ತೊರೆದು ಅವನ ಉಪದೇಶದಿಂದ ತಪಸ್ಸು ಮಾಡಿ ಋಷಿಯಾದದ್ದುಂಟು. ಗೋವಳಿಗರು ಕರುವಿಗೊಂದು ತೊಟ್ಟೂ ಬಿಡದೆ ಹಸುವಿನ ಕೆಚ್ಚಲಿನ ಹಾಲನ್ನೆಲ್ಲ ಹಿಂಡಿಕೊಳ್ಳುತ್ತಿದ್ದ ಕರುಣಾಜನಕ ದೃಶ್ಯವನ್ನು ನೋಡಿದ ಗಾಂಧೀಜಿ ಹಸುವಿನ ಹಾಲು ಕುಡಿಯುವುದನ್ನು ನಿಲ್ಲಿಸಿ, ಆಡಿನ ಹಾಲು ಕುಡಿಯಲಾರಂಭಿಸುತ್ತಾರೆ. ಪ್ರಾಣಿವಧೆ ಸಲ್ಲದೆಂದು ತಿಳಿವಳಿಕೆ ನೀಡುತ್ತಿದ್ದ ಆ ಸಾತ್ವಿಕ ಶಿರೋಮಣಿ, ಖಾಯಿಲೆಯಿಂದ ನರಳುತ್ತಿದ್ದ ಕರುವೊಂದರ ಸಂಕಟವನ್ನು ಸಹಿಸಲಾರದೆ, ಚುಚ್ಚುಮದ್ದು ಕೊಟ್ಟು ಅದನ್ನು ಸಾಯಿಸಿಬಿಡುವಂತೆ ವೈದ್ಯರಿಗೆ ಸೂಚನೆ ನೀಡುತ್ತಾರೆ. ಕೆಲವರಿಗೆ ಅಧ್ಯಯನ ಒಂದು ಹಿಂಸೆಯಾದರೆ, ಮತ್ತೆ ಕೆಲವರಿಗೆ ಸೋಮಾರಿತನವೇ ಹಿಂಸೆ. ಪ್ರಸವವೇದನೆಯೆಂತು ಹಿಂಸೆಯೋ[3] ಕೆಸರಿನ ಕೆಲಸವೂ ಹಿಂಸೆ. ಜೀತವೆಂತು ಹಿಂಸೆಯೋ ಅಧಿಕಾರ ಸೇವೆಯೂ ಹಿಂಸೆ. ಕಂತ್ರಾಟುದಾರ ಅಥವಾ ಗಿರಣಿಯ ಮಾಲೀಕ ಬೆಳಗಿನಿಂದ ಸಂಜೆಯ ತನಕ ಆಳುಗಳ ಎದೆಮೇಲೆ ನಿಂತು ಕಿರುಕುಳ ಕೊಟ್ಟು ಕೆಲಸ ತೆಗೆಯುತ್ತಾನೆ. ಅದು ಹಿಂಸೆಯಲ್ಲವೆ? ಅಧಿಕಾರಿಯ ಮನೆಯ ಮುಂದೆ ಚಳಿಮಳೆಗಳಲ್ಲಿ ನಿಂತು ಬಾಗಿಲು ಕಾಯುವ ಜವಾನನ ಪರಿಸ್ಥಿತಿ ದಾರುಣವಾದುದಲ್ಲವೆ? ಇಲ್ಲೆಲ್ಲ ಹಿಂಸೆಯ ಗುರಿ ಯಾವುದೆಂಬುದು ಮುಖ್ಯ. ಕ್ರಿಮಿನಾಶಕವಾದೀತೆಂದು ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವವರು ನಡೆದಾಡುವಾಗ ಹುಳು ಹುಪ್ಪಟೆಗಳು ಸಾಯುತ್ತವೆಂದು ಯೋಚಿಸಿದಂತಿಲ್ಲ.

---

[1] ಕ ೧೭-ಪದ್ಯ ೧೮, ೧೯ ; [2] ಅ ೧೫-೧೩ ; [3] ಗರ್ಭಧಾರಣೆಯನ್ನು ಕುರಿತು ಶೇಕ್ಸ್‌ಪಿಯರ್ "The pleasing punishment that women bear" ಎನ್ನುತ್ತಾನೆ—*Comedy of Errors*, I. i. 46.

ಕರುಣೆ

ಕರುಣೆ, ಅನುಕಂಪೆ, ಕನಿಕರ, ಪಶ್ಚಾತ್ತಾಪ ಮತ್ತು ಸಹಾನುಭೂತಿಗಳು ಅಹಿಂಸಾನುಷ್ಠಾನಕ್ಕೆ ಪ್ರೇರಕಶಕ್ತಿಗಳು. ಇಂಥ ಗುಣಗಳುಳ್ಳವನ ಮನಸ್ಸು ಅನೇಕವೇಳೆ ಸಂಘರ್ಷದ ರಣರಂಗವಾಗುವುದೂ ಉಂಟು. ನೆಲದಮೇಲೆ ನಡೆದರೆ ಇರುವೆಗಳು ಸಾಯುತ್ತವಲ್ಲ, ಹಾವು ಹೊಡೆದರೆ ಹಿಂಸೆಯಾಗುತ್ತದಲ್ಲ, ಮಕ್ಕಳನ್ನು ಬೇಸಾಯತನಕ್ಕೆ ಹಚ್ಚಿದರೆ ಅವರ ಮೈಕೈಗಳಿಗೆ ನೋವಾಗುತ್ತದಲ್ಲ ಇತ್ಯಾದಿ ಇತ್ಯಾದಿಯಾಗಿ ಅವನು ಚಿಂತಿಸುತ್ತಿದ್ದರೆ ಅವನು ಕರ್ಮಜಡನಾಗುವ ಸಂಭವವೂ ಉಂಟು. ಹಾವಿನ ಬಾಯಲ್ಲಿರುವ ಕಪ್ಪೆ ಬಿಡಿಸಿದರೆ ಅದರ ಆಹಾರ ಕಿತ್ತುಕೊಂಡಂತಾಗುತ್ತದೆ. ಇದು ಸರಿಯೆ? ಶ್ರೀಮಂತನೊಬ್ಬ ಆಳುಕಾಳಿಗೆ ಸರಿಯಾಗಿ ಅನ್ನ ಬಟ್ಟೆ ಕೊಡದೆ ದುಡಿಸಿಕೊಳ್ಳುವಾಗ ಸರ್ಕಾರ ಆತನ ಮೇಲೆ ಕ್ರಮ ತೆಗೆದುಕೊಂಡರೆ ತಪ್ಪೆ? ಅವನ ಬಗ್ಗೆ ಕನಿಕರ ವ್ಯಕ್ತಪಡಿಸುವುದು ಸರಿಯೆ? ರಥದ ಚಕ್ರ ಹೂತು ಸಾರಥಿಯಿಲ್ಲದೆ ನಿಸ್ಸಹಾಯಕನಾಗಿದ್ದ ಕರ್ಣನ ಮೇಲೆ ಅರ್ಜುನ ಬಾಣ ತೊಡಲು ಹಿಂಜರಿಯುತ್ತಾನೆ. "ಸಿಕ್ಕಿದನು ಕರುಣಾಲತಾಂಗಿಯ ತೆಕ್ಕೆಯಲಿ."[1] "ಜೀವವೀತನ ಮೇಲೆ ಕರಗುವುದು",[2] "ತೆರಳುವೀ ಸಿರಿಗೋಸುಗವು ಸೋದರನ ಕೊಲುವೆನೆ ಕೃಷ್ಣ ಕರುಣಿಸು"[3] ಎಂದು ಮುಂತಾಗಿ ಅವನು ಗೋಳಾಡುತ್ತಾನೆ. ಆದರೆ ಕೃಷ್ಣ ಹಲವು ಬಗೆಗಳಿಂದ ಅವನನ್ನು ರೇಗಿಸಿ, ಅವನ ಮೇಲೆ ಬಾಣಪ್ರಯೋಗ ಮಾಡುವಂತೆ ಪ್ರಚೋದಿಸುತ್ತಾನೆ. ಯಾವ ಸಂದರ್ಭದಲ್ಲಿ ಕರುಣೆ ಅಥವಾ ಸಹಾನುಭೂತಿ ಚೆನ್ನು, ಯಾವಾಗ ಅಲ್ಲ ಎಂಬುದನ್ನು ಔಚಿತ್ಯವಿವೇಕ ನಿರ್ಧರಿಸಬೇಕಾಗುತ್ತದೆ. ಆದರೆ ಅದು ಮಾನವೀಯತೆಯ ಸಲ್ಲಕ್ಷಣವೆಂಬುದಂತು ನಿಜ.

ಪರಪೀಡೆ

ಸತ್ಯ ವರ್ಣಾಶ್ರಮಧರ್ಮ ಕಾಮಾದಿ ಅರಿಷಡ್ವರ್ಗಗಳನ್ನು ಕುರಿತಂತೆ ನಡೆದಿರುವ ಸ್ಪಷ್ಟೀಕರಣ ಹಿಂಸೆ ಅಹಿಂಸೆಗಳ ಬಗೆಗೆ ನಡೆದಂತಿಲ್ಲ. ನಿಂದೆ ಬಂಧನ ಚಿತ್ರಹಿಂಸೆ ಮಾನಭಂಗಗಳಿಗಿಂತ ಮರಣವೇ ಮೇಲೆಂಬುದು ಎಲ್ಲರ ಅನುಭವಕ್ಕೆ ಬಂದಿರುವ ವಿಷಯ. ಶ್ರೀಮಂತನ ಹೊಡೆತ ಒದೆತ ಬಯ್ಗುಳ ಕಿರುಕುಳಗಳನ್ನು ಸಹಿಸುವುದಕ್ಕಿಂತ ಜೀತಗಾರ ಸಾಯುವುದೇ ಲೇಸು. ಚಿತ್ರಹಿಂಸೆಯ ಶಿಕ್ಷೆಗಿಂತ ಮರಣದಂಡನೆಯನ್ನನುಭವಿಸುವುದು ಸುಲಭ. ಭೀಮನನ್ನು ಹಿಂಸಿಸುತ್ತಿದ್ದ ಸರ್ಪವೇಷದ ನಹುಷನನ್ನು ಕಂಡಾಗ ಧರ್ಮರಾಯ "ವಿಖ್ಯಾತರಿಗೆ ಪರಪೀಡೆ ಧರ್ಮವಿನಾಶಕರ"[4] ಎಂದು ಬಿನ್ನವಿಸಿಕೊಳ್ಳುತ್ತಾನೆ. ಧರ್ಮಾರ್ಜುನರಿಗೆ ವಿರಸವೊದಗಿದ ಸಂದರ್ಭದಲ್ಲಿ ಶ್ರೀಕೃಷ್ಣ ಅರ್ಜುನನ ಆತ್ಮಪ್ರಶಂಸೆ ಹಾಗೂ ಧರ್ಮರಾಯನ ಮೂದಲಿಕೆಯಿಂದ ನೊಂದು "ಸಂದ ಪರಿಯಿದು ಜಗಕೆ ಲೋಗರ ನಿಂದಿಸುವುದೇ ಹಿಂಸೆ"[5] ಎಂದು ಅವನಿಗೆ ವಿವೇಕ ಹೇಳುತ್ತಾನೆ. ಅರ್ಜುನನ ಮೂದಲಿಕೆ

---

1 ಕ ೨೬ ೨೦ ; 2 ಕ ೨೬.೨೩ ; 3 ಕ ೨೬.೨೮ ; 4 ಅ ೧೩-೪೬ ; 5 ಕ ೧೭-೩೬

ಯನ್ನು ಸಹಿಸಲಾರದ ಧರ್ಮರಾಯ "ತನ್ನಯ ಗಂಟಲಿದೆ ಶಸ್ತ್ರೌಘವಿದೆ ನೀ ಬೇಗ ಮಾಡು" ಎಂದು ತಮ್ಮನಿಗೆ ಆಹ್ವಾನ ನೀಡುತ್ತಾನೆ. ನಿಂದಾವಮಾನಗಳ ತೀಕ್ಷ್ಣತೆಯನ್ನು ಶ್ರೀಕೃಷ್ಣ

> ಕೊಲುವುದೇನೊಂದರಿದೆ ಟಕ್ಕರಿಗಳಿವುದೆ ಪರಹಿಂಸೆ ಲೋಗರ
> ಹಳಿವುದೇ ವಧೆ ಶಸ್ತ್ರವಧೆ ವಧೆಯಲ್ಲ ನೋಡುವರೆ
> ಖಳರ ದುಸ್ಸಹ ದುಷ್ಟವಚನದ। ಹಿಳುಕು ಹೃದಯವ ಕೊಂಡು ಮರುಮೊನೆ
> ಮೊಳೆತ ಬಳಿಕವ ಬದುಕಿದವನೇ ಪಾರ್ಥ[1]

ಎಂಬ ಮಾತುಗಳಲ್ಲಿ ಮನಸ್ಸಿಗೆ ನಾಟುವಂತೆ ವಿವರಿಸುತ್ತಾನೆ. ದುಷ್ಟರನ್ನು ಕುರಿತ ನಿಂದೆ ಕ್ಷಮ್ಯವಾಗಬಹುದು; ಆದರೆ ಶಿಷ್ಟ ಹಿಂಸೆಯಿಂದ ಎಲ್ಲೆಲ್ಲೂ ಬರ್ಬರತನ ಮುಸುರುವುದಲ್ಲದೆ ಘೋರಪಾತಕಕ್ಕೆ ಗುರಿಯಾಗಬೇಕಾಗುತ್ತದೆ. ಸಹನೆ ಅಂಥವರ ಸಹಜಗುಣವಾದ್ದರಿಂದ ಆಳರಸರು ಅವರಿಗೆ ತುಂಬ ಕೋಟಲೆ ಕೊಡಬಹುದು. ಈ ಹಿಂಸೆ ನಾನಾರೂಪದಲ್ಲಿ ಪ್ರಕಟಗೊಳ್ಳಬಹುದು. ಗೂಂಡಾಗಳನ್ನು ಅವರ ಮೇಲೆ ಛೂಬಿಡಬಹುದು. ಯಾವುದಾದರೂ ಕೊಲೆ ಪ್ರಕರಣದಲ್ಲಿ ಕೃತ್ರಿಮ ಸಾಕ್ಷ್ಯದ ಮೂಲಕ ಅವರನ್ನು ಭಾಗಿಮಾಡಬಹುದು, ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಮಾಡಿಕೊಳ್ಳಬಹುದು. ಅವರು ಮಾನಮರ್ಯಾದೆಗಳನ್ನುಳಿಸಿಕೊಂಡವರಾದ್ದರಿಂದ ಯಾರ ಮುಂದೆಯೂ ತಮ್ಮ ಸಂಕಟವನ್ನು ತೋಡಿಕೊಳ್ಳುವಂತಿಲ್ಲ. ಆಳರಸರು ಮಾಡಿದ್ದೆಲ್ಲ ಸರಿಯೆನ್ನುವ ಪರಿಸ್ಥಿತಿಯಿರುವಾಗ ಮೂಕವೇದನೆಯೇ ಅವರಿಗೆ ಆಸರೆಯಾಗುತ್ತದೆ. "ಕಾಪಥವನಾಶ್ರಯಿಸಿ ಕೋಪಾಟೋಪದಿಂದುತ್ತಮರ ಸರ್ವಸ್ವಾಪಹಾರವ ಮಾಡಿ ಬದುಕುವುದಾವ ಗುಣ"[2] ಎಂದು ವಿದುರ ಹೇಳುವಾಗ ದುರ್ಯೋಧನನಂಥ ದುಷ್ಟರನ್ನೂ ಪಾಂಡವರಂಥ ಶಿಷ್ಟರನ್ನೂ ನೆನಪಿನಲ್ಲಿಟ್ಟುಕೊಂಡಿದ್ದಾನೆ.

ದಾನ

ಮಾನವನ ಹಾಗೂ ಜಗತ್ತಿನ ಸಕಲ ಸಮಸ್ಯೆಗಳಿಗೆ, ಅಶಾಂತಿಗೆ, ಅತೃಪ್ತಿಗೆ, ಕಷ್ಟಕಾರ್ಪಣ್ಯಗಳಿಗೆ ಸಿರಿತನ ಬಡತನಗಳ ನಡುವಿರುವ ಕಂದಕವೇ ಕಾರಣ. ಬಡತನದ ಸಿಟ್ಟು ಸಿರಿತನದ ರಟ್ಟೆಯನ್ನು ನುಚ್ಚುನುರಿಮಾಡಲು ಸದಾ ಯತ್ನಿಸುತ್ತದೆ. ಕೆರೆಗೆ ನಾನಾ ದಿಕ್ಕುಗಳಿಂದ ನೀರು ಹರಿದುಬರುತ್ತದೆ. ಅದು ಅಲ್ಲಿಯೇ ಬಹುಕಾಲ ನಿಂತದ್ದಾದರೆ ಕೆಡುತ್ತದೆ. ಆ ನೀರು ಹೊಲಗದ್ದೆಗಳಿಗೆ ಹರಿದು ಫಸಲು ಕೈಗೂಡಿದಾಗ ಅದಕ್ಕೆ ಸಾರ್ಥಕತೆ ಯೊದಗುತ್ತದೆ. ಮನುಷ್ಯ ಆರ್ಜಿಸಬಹುದಾದ ಯಾವುದೇ ಸಂಪತ್ತಾಗಲೀ–ಬೌದ್ಧಿಕವೋ ಆರ್ಥಿಕವೋ ಆಧ್ಯಾತ್ಮಿಕವೋ—ಬೇರೆಯವರಿಗೆ ಹಂಚಿಕೆಯಾದಾಗ ಮಾತ್ರ ಶ್ರೇಯಸ್ಸುಂಟಾಗುತ್ತದೆ. ಸಿರಿತನ ಬಡತನಗಳನ್ನು ಸಮನ್ವಯಗೊಳಿಸಿ, ಯಾವುದೂ ವಿಷಮ

[1] ಕ ೧೭-೨೬; [2] ಉ ೩-೧೦.

ಸ್ಥಿತಿಯನ್ನು ಮುಟ್ಟದಂತೆ ಸಮತೋಲನ ಸಾಧಿಸುವ ಉಪಾಯವೇ ದಾನ. ಅದೊಂದು ಅತ್ಯುತ್ತಮವಾದ ಸಂಪದ್ವಿನಿಯೋಗ ವಿಧಾನವೂ ಹೌದು. ಧನಸಂಗ್ರಹವೊಂದೇ ಶ್ರೀಮಂತರ ಗುರಿಯಾಗಿ, ಅದರ ಹಂಚಿಕೆಯ ಕಡೆಗೆ ಗಮನಕೊಡಲಿಲ್ಲವಾದ್ದರಿಂದ ರಾಜಕೀಯಕ್ರಾಂತಿ ಅನಿವಾರ್ಯವಾಗುತ್ತದೆ. ಆದ್ದರಿಂದಲೇ ವಿದುರ ಹೇಳಿದ್ದು, ದಾನವಿಲ್ಲದ ವಿತ್ತ ಮೆರೆಯದು ಎಂಬುಪಾಗಿ. "ಇಕ್ಕದೆರೆಯದೆ ಬಿತ್ತಿ ಬೆಳೆಯದೆ ಪುಕ್ಕಟೆಯ ಸ್ವರ್ಗಾದಿ ಭೋಗವು ಸಿಕ್ಕಲರಿವುದೆ"[1] ಎಂದು ಸನತ್ಸುಜಾತಮುನಿ ನುಡಿಯುವಲ್ಲಿ ದಾನದ ಅಗತ್ಯತೆ ಮತ್ತು ಮಹತ್ವಗಳು ವ್ಯಕ್ತವಾಗುತ್ತವೆ. ಬಿತ್ತಿದರೆ ಬೆಳೆ, ಬಿತ್ತದಿರೆ ಬರ. ಕಣಜದ ಕಾಳನ್ನು ಹೊಲದಲ್ಲಿ ಚೆಲ್ಲಿದಾಗ ಅದು ಬಹುಗುಣವಾಗುತ್ತದೆ. ಅದು ಕಣಜದಲ್ಲಿಯೇ ಇದ್ದದ್ದಾದರೆ ಹುಳುತು ಕೊಳೆತು ನಾಶವಾಗಬಹುದು. ತನ್ನಲ್ಲಿರುವುದನ್ನು ಮನುಷ್ಯ ನೆರೆಹೊರೆಯವರೊಡನೆ ಹಂಚಿಕೊಂಡದ್ದಾದರೆ ಆನಂದದ ಸ್ವರ್ಗಸುಖವನ್ನನುಭವಿಸಬಹುದು. "ದಾನವೇ ಸಂಸಾರ ಸಾಧನ....ದಾನದಿಂ ಕಡೆಯೊಳಚ್ಯುತಪದವಿ"[2] ಎಂಬ ತತ್ವವನ್ನು ಭಾರತದಲ್ಲಿ ಅನುಷ್ಠಾನಗೊಳಿಸಿದ ಏಕೈಕ ವ್ಯಕ್ತಿಯೆಂದರೆ ಕರ್ಣ. ಅವನು ಕೇವಲ ಭೌತಿಕ ಸಂಪತ್ತಿನ ಹಂಚಿಕೆಯಿಂದಲೇ ತೃಪ್ತನಾಗುವುದಿಲ್ಲ. ತನಗಾಗುವ ನಷ್ಟವನ್ನು ಸಹ ಲಕ್ಷಿಸದೆ ಸರ್ವಶಕ್ತಿಗಳನ್ನು ಧಾರೆಯೆರೆಯುತ್ತಾನೆ. ಸಕಲಲೋಭಮೋಹಗಳನ್ನು ಗೆದ್ದು ನಿರ್ಲಿಪ್ತತೆಯನ್ನು ಸಾಧಿಸಿದ ವ್ಯಕ್ತಿಗೆ ಮಾತ್ರ ಅಂಥ ಸಾಹಸ ಸಾಧ್ಯ; ಬಾಹುಬಲಿಯಂಥವನಿಗೆ ಮಾತ್ರ ಸುಲಭ. ಸಿರಿವಂತಿಕೆಯಿದ್ದೂ ದಾನಮಾಡದ ವ್ಯಕ್ತಿ ಮಹಾಪಾಪಿ. "ಕ್ಷಿತಿಗೆ ಲೋಭಿಯೆ ಕಷ್ಟನ್"[3] ಪ್ರಾಯಶಃ ಕಳ್ಳಕಾಕ ದರೋಡೆಕೋರರಿಗಿಂತ ಅವನು ಹೀನ. ಅವನೊಬ್ಬ ಧೂರ್ತ, ಮಹಾತಸ್ಕರ.

ಕ್ಷಮೆ

ಸುಸಂಸ್ಕೃತ ಮಾನವನ ಮತ್ತೊಂದು ಗುಣ ಕ್ಷಮೆ. ಔದಾರ್ಯ ಸಹನೆಗಳಿರುವೆಡೆ ಅದು ಪ್ರಕಾಶಿಸುತ್ತದೆ. ಸುಗಂಧ ಹೂವಿಗೆಂತು ಭೂಷಣವೋ, ಹೂವು ಮರಕ್ಕೆಂತು ಭೂಷಣವೊ, ಅದು ಮಾನವನಿಗೆ ಭೂಷಣ. ಪ್ರಪಂಚದಲ್ಲಿ ತಪ್ಪು ಮಾಡದ ಮನುಷ್ಯ ಇಲ್ಲ. ಸೂಳೆಯೊಬ್ಬಳನ್ನು ಹಿಂಸಿಸುತ್ತಿದ್ದ ಜನರನ್ನು ಸಂಬೋಧಿಸಿ ಕ್ರಿಸ್ತ ನುಡಿದನಂತೆ, "ನಿಮ್ಮಲ್ಲಿ ಯಾರು ತಪ್ಪುಮಾಡಿಲ್ಲವೋ ಅವರು ಅವಳ ಮೇಲೆ ಕಲ್ಲೆಸೆಯಬಹುದು" ಎಂದು. ಆಗ ಎಲ್ಲರೂ ಸ್ತಬ್ಧರಾಗುತ್ತಾರೆ. ಸಾಮಾನ್ಯವಾಗಿ ತಪ್ಪುಮಾಡಬೇಕೆಂದು ಯಾವ ಮನುಷ್ಯನೂ ಇಚ್ಛಿಸುವುದಿಲ್ಲ. ಅನೇಕ ತಪ್ಪುಗಳು ಆಕಸ್ಮಿಕವಾಗಿ ಸಂಭವಿಸುವಂಥವು. ಆದ್ದರಿಂದ ಪ್ರಭುಸ್ಥಾನದಲ್ಲಿರುವ ವ್ಯಕ್ತಿಗಳು ಕ್ಷಮಾಗುಣವನ್ನು ಬೆಳೆಸಿಕೊಳ್ಳದಿದ್ದರೆ ಬಹುಜನರಿಗೆ ತೊಂದರೆಯಾಗುತ್ತದೆ. ಗೋವು ಹುಲಿಯ ತಪ್ಪನ್ನು ಮನ್ನಿಸುವುದರಲ್ಲಿ ವಿಶೇಷವಿಲ್ಲ; ಹುಲಿ ಗೋವಿನ ತಪ್ಪನ್ನು ಕ್ಷಮಿಸುವುದರಲ್ಲಿ ಮಹತ್ವವುಂಟು. "ಪ್ರಭುವಾಗಿಯು ಕ್ಷಮೆವೆರಸಿದವನು"[4] ಸುರರಿಗೆ ಸಮಾನನಂತೆ. ಕ್ಷಮಾಗುಣ ನೈತಿಕ

---
1 ಉ ೪-೯೬ ; 2 ಉ ೪-೨೫ ; 3 ಆ ೧೩-೫೬ ; 4 ಉ ೩-೨೦

ಧೈರ್ಯವನ್ನಪೇಕ್ಷಿಸುತ್ತದೆ. ಈ ಗುಣಸಮೃದ್ಧಿಯನ್ನು ಧರ್ಮರಾಯನಲ್ಲಿ ಕಾಣುತ್ತೇವೆ. ಈ ಕ್ಷಮಾಗುಣ ಅವನಲ್ಲಿ ಎದ್ದು ಕಾಣುವ ಸನ್ನಿವೇಶಗಳು ಮುಖ್ಯವಾಗಿ ಎರಡು. ಗಂಧರ್ವನಿಂದ ದುರ್ಯೋಧನನನ್ನು ಬಿಡಿಸಿದ್ದು ಒಂದು. ಚಿಕ್ಕಂದಿನಿಂದ ನಾನಾ ಕಷ್ಟಗಳಿಗೆ ಗುರಿಮಾಡಿ, ಹಲವು ಸಾರಿ ಅವಮಾನಗೊಳಿಸಿ, ಕೊನೆಗೆ ಕಾಡುಪಾಲು ಮಾಡಿದ ದುಷ್ಟ ಶತ್ರುವನ್ನು ಯಾರೋ ನಿಗ್ರಹಿಸುತ್ತಿರುವಾಗ ಅವನು ಸುಮ್ಮನಿರಬಹುದಿತ್ತು. ಜಯದ್ರಥ ಪ್ರಸಂಗವೂ ಹೆಚ್ಚು ಕಡಮೆ ಇಂಥದೇ. ಅಜ್ಞಾತವಾಸ ಮುಗಿದ ನಂತರವೂ ಅವನು ದುರ್ಯೋಧನನನ್ನು ಕ್ಷಮಿಸಲು ಸಿದ್ಧನಾಗಿದ್ದಾನೆ. ದೊಡ್ಡವರಾಗಲಿ ಸಣ್ಣವರಾಗಲಿ ತಪ್ಪೊಪ್ಪಿಕೊಂಡು, ಕ್ಷಮೆ ಕೇಳುವುದು ಹೆಗ್ಗುಣ. ತಪ್ಪು ಮುಚ್ಚಿಕೊಂಡು ಸಜ್ಜನನಂತೆ ನಟಿಸುವವನು ಶಠ; ತಪ್ಪು ಮಾಡಿಯೂ ತಾನು ಮಾಡಿದ್ದೆಲ್ಲ ಒಪ್ಪೆನ್ನುವಂತೆ ದುರಹಂಕಾರದಿಂದ ವರ್ತಿಸುವವನು ದುಷ್ಟ. ತೊಡೆಯುಡಿದು ಬಿದ್ದಿದ್ದ ದುರ್ಯೋಧನನ ಮುಕುಟವನ್ನು ಭೀಮ ಒದೆದಾಗ "ಸೈರಿಸೆಮ್ಮಪರಾಧವನು ಕುರುವೀರ"[1] ಎಂದು ಧರ್ಮರಾಯ ದುರ್ಯೋಧನನ "ನೀರೊರೆವ ಕಣ್ಣುಗಳನೊರಸುತ ನೀರೆಯುಲಿ" ದುಃಖಕ್ಕೊಳಗಾಗುತ್ತಾನೆ. ಕೀಚಕನ ಪೀಡೆಗೊಳಗಾದ ದ್ರೌಪದಿ ಕೃತಕ ವೇಷದ ಗಂಡಂದಿರೆದುರಿಗೆ ಮೊರೆಯಿಟ್ಟಾಗ "ಕ್ಷಮೆಯಖಿಳ ದೋಷಾಪಹಾರವು ಶೌರ್ಯ ಧರ್ಮದ ರೂಪು ನೆಲೆಯಾ ಕ್ಷಮೆ"[2] ಎಂದು ಧರ್ಮರಾಯ ಅದರ ಹೆಗ್ಗಳಿಕೆಯನ್ನು ತಿಳಿಸಿ, ಅವಳನ್ನು ಸಂತೈಸುತ್ತಾನೆ.

ಸ್ನೇಹ

ಮಾನವನ ಬಾಳಿಗೆ ಪೂರ್ಣತೆಯನ್ನೊದಗಿಸುವ ಗುಣವೆಂದರೆ ಸ್ನೇಹ. ವಾತ್ಸಲ್ಯ ಪ್ರೇಮ ಭಕ್ತಿಗಳಿಗೆ ಅದು ಮತ್ತೊಂದು ಹೆಸರು. ಬಣ್ಣ ಬಣ್ಣದ ಹಂಡೆಗಳ ಮೂಲಕ ಹರಿಯುವ ವಿದ್ಯುತ್ತು ಭಿನ್ನ ಭಿನ್ನವಾಗಿ ತೋರುವಂತೆ ಪರಿಸರ ಭೇದದಿಂದ ಅದು ಬೇರೆ ಬೇರೆಯಾಗಿ ಕಾಣಿಸಿಕೊಳ್ಳುತ್ತದೆ. ಹೃದಯವನ್ನು ಆರ್ದ್ರಗೊಳಿಸುವ, ಜೆಣ್ಣೆಯಾಗಿಸುವ, ಹಸನುಗೊಳಿಸುವ ಶಕ್ತಿ ಅದಕ್ಕಿದೆ. ಅದು ಸೊನ್ನೆಯಾಗಿದ್ದರೆ ಬಾಳು ನೀರಸವಾಗುತ್ತಿತ್ತು; ಜಡವಾಗುತ್ತಿತ್ತು, ಅಸಹ್ಯವಾಗುತ್ತಿತ್ತು; ಕರ್ಣನಿಗೆ ದುರ್ಯೋಧನನ ಸಖ್ಯ ದೊರೆಯದಿದ್ದಲ್ಲಿ ಅವನ ಬಾಳು ಅರ್ಥಹೀನವಾಗುತ್ತಿತ್ತು, ಅನಾಥವಾಗುತ್ತಿತ್ತು. ಅವರಿಬ್ಬರ ಸ್ನೇಹ ಇಡೀ ಕಾವ್ಯ ಪ್ರಪಂಚದಲ್ಲಿಯೇ ವಿಶಿಷ್ಟವಾದದ್ದು, ವಿನೂತನವಾದದ್ದು. ಒಡಲೆರಡಾದರೂ ಶುದ್ಧ ಸ್ನೇಹ ಅವರ ಆತ್ಮಗಳನ್ನೊಂದುಗೂಡಿಸುತ್ತದೆ. ಅವರಿಬ್ಬರ ಭಾವಾಲೋಚನೆಗಳಲ್ಲಿ ನಡೆ ನುಡಿಗಳಲ್ಲಿ ಧ್ಯೇಯಾದರ್ಶಗಳಲ್ಲಿ ಅದ್ವೈತ ತತ್ತ್ವವನ್ನು ಗುರುತಿಸಬಹುದು. ಒಬ್ಬನ ಇಷ್ಟಾನಿಷ್ಟಗಳು ಹಗೆ ಕೆಳೆಗಳು ಮತ್ತೊಬ್ಬನವಾಗುತ್ತವೆ. ಅವರದು ಸಾಯುಜ್ಯ ಸಂಬಂಧವೇ ಹೊರತು ದೇಹಛಾಯಾತ್ಮಕ ಸಂಬಂಧವಲ್ಲ. ಕರ್ಣ ದುರ್ಯೋಧನನ ಬಳಿಗೆ ಬಂದಂದಿನಿಂದ ಅವರ ಜೀವನವೊಂದಾಗುತ್ತದೆ. ಮನ ಮತವೊಂದಾಗುತ್ತವೆ.

[1] ಗ ೮ ೨೧; [2] ವಿ ೩-೨೫

ಬೇಟೆ ಕರ್ಣನ ಕೂಡೆ ಹಗಲಿರು । ಳಾಟ ಕರ್ಣನ ಕೂಡೆ ಷಡುರಸ
ದೂಟ ಕರ್ಣನ ಕೂಡೆ ಶಸ್ತ್ರಾಭ್ಯಾಸನವ ಕೂಡೆ
ತೋಟ ಮಸಮಲಿ ನಗೆಯ ಮಧುರದ । ನೋಟ ಕಣ್ಣಿನೊಳುಳಿವವರ ಕೂ
ಡಾಟಗಳು ತಾವಿಬ್ಬರೊಂದೆನಿಸಿದರು ಜಗವರಿಯೆ[1]

ಕರ್ಣ ಶಕುನಿಯಂಥ ವಂಚಕನಲ್ಲ, ದುಶ್ಶಾಸನನಂಥ ದುಷ್ಟನಲ್ಲ. ಆದರೆ ತನ್ನ ಒಡೆಯನ ಧರ್ಮ ತನ್ನದಾದುದರಿಂದ ಪಾಂಡವರನ್ನು ದ್ವೇಷಿಸುವಲ್ಲಿ, ದ್ರೌಪದಿಯನ್ನು ಭಂಗಿಸುವಲ್ಲಿ ಅವನು ಅವರೆಲ್ಲರಿಗಿಂತ ಮುಂದಾಗುತ್ತಾನೆ. ಅವನ ಆ ದ್ವೇಷ ತೀಕ್ಷ್ಣತೆಗೆ ಪಾಂಡವರೂ ಸಮಕಾರಣರೆನ್ನುವುದನ್ನು ಮರೆಯುವಂತಿಲ್ಲ. "ಧರೆಯೊಳಗೊಬ್ಬನೇ ದುರ್ಯೋಧನನು ಮತ್ತೊಬ್ಬರಿಲ್ಲೆಂದೆನಿಸಿ ತೋರುವೆನು"[2] ಎಂಬುದು ಅವನ ಛಲ. ಭೀಷ್ಮನಿಗೆ ಸೇನಾನಿ ಪಟ್ಟ ಕಟ್ಟಿದ ಸಂದರ್ಭದಲ್ಲಿ ವಿನಯದ ಸೀಮೆಯನ್ನು ದಾಟಿ ತೂರಿಸಿ ಮಾತಾಡುವುದು ನಿಜ. ಭೀಷ್ಮ ದ್ರೋಣರ ರಾಜನಿಷ್ಠೆಯ ಬಗ್ಗೆ ಅವನಿಗೆ ಸದಾ ಸಂದೇಹ. ತನ್ನ ಒಡೆಯನಿಗೆ ಜಯವಾಗಬೇಕು, ಅವನಿಗಾಗಿ ತಾನು ಮೊದಲು ಜೀವಾರ್ಪಣೆ ಮಾಡಬೇಕೆಂಬುದೇ ಅವನ ಹಂಬಲ. ಕೃಷ್ಣ ಸಹ ಅವನ ಸ್ನೇಹವನ್ನು ಅಲ್ಲಾಡಿಸಲಾರ. "ಮರುಳು ಮಾಧವ, ಮಹಿಯ ರಾಜ್ಯದ ಸಿರಿಗೆ ಸೋಲುವನಲ್ಲ"[3] "ಕೇಳೆನ್ನೊಡೆಯನಾದಂತಹೆನು"[4] "ವೀರ ಕೌರವರಾಯನೇ ದಾತಾರನ್, ಆತನ ಹಗೆಯೆ ಹಗೆ ಕೈವಾರವೇ ಕೈವಾರ"[5] "ಕೌರವೇಶ್ವರನೊಲುಮೆ ತಪ್ಪಿಸಿ ಭುವನದೊಳಗಾಪ್ತಜನವಿಲ್ಲ"[6] "ನೋಡಿ ದಣಿಯನು ಬಿರುದ ಹೊಗಳಿಸಿ ಹಾಡಿ ದಣಿಯನು ನಿಚ್ಚಲುಚಿತವ ಮಾಡಿ ದಣಿಯನು ಮಾನನಿಧಿಯನವೆಂತು ಮರೆದಪೆನು"[7] "ಪತಿಯವಸರಕ್ಕೆ ಶರೀರವನು ನೂಕುವೆನು"[8] ಸ್ನೇಹದ ಮಡುವಾಗಿರುವ ಪ್ರತಿಯೊಂದು ಪದವೂ ಕೃಷ್ಣನ ಎದೆಗಡಲನ್ನು ಉಕ್ಕಿಸಿರಬೇಕು. ಅನ್ಯತ್ರ ಯಶಸ್ವಿಯಾದ ಅವನ ರಾಜನೀತಿ ಕೌಶಲವೂ ಇಲ್ಲಿ ಬಂಜೆಯಾಗುತ್ತದೆ. ಕೌರವ ಪಾಂಡವರಿಗೆ ರಾಜಿ ಮಾಡಿಸಯ್ಯ ಎಂದು ಕೇಳಿಕೊಂಡಾಗ, "ವಿಸಸನದ ಕಟ್ಟಾಳು ಮಂತ್ರವನೆಸಗಲಾಗದು ತನ್ನ ವೀರಕೆ ಮಸುಳಹುದು"[9] ಎಂದು ಖಡಾಖಂಡಿತವಾಗಿ ಆಡಿಬಿಡುತ್ತಾನೆ. ಅಷ್ಟಟೆ ಗೆಳೆತನ ಕೊಂಕು ಬಿಂಕಗಳನ್ನು ಕಾಣದು. ಹುಟ್ಟಿದಾಗಲೇ ತನ್ನನ್ನು ಹೊಳೆಗೆಸೆದವಳೆಂದು ತಾಯಿಯ ಬಗ್ಗೆ ಅನಾದರವಿಲ್ಲ; ಮಾತೃವಚನವೆಂದು ಸ್ನೇಹಕ್ಕೆ ಅಪಚಾರವೆಸಗುವುದಿಲ್ಲ "ಇಂದು ನೀವರುಹಿದ ಬಳಿಕ ರವಿನಂದನನುಯೆಂದರಿದೆನಲ್ಲದೆ, ಹಿಂದೆ ದುರಿಯೋಧನನ ದಾವುದ ನೋಡಿ ಸಲಹಿದನು"[10] ಎಂದು ಅಪ್ರಿಯವಾದರೂ ನಿಜ ನುಡಿಯುತ್ತಾನೆ. ತನ್ನ ಸೋಲು ಸನ್ನಿಹಿತವಾದಾಗ ಅವನ ಹೃದಯ ಕರಗಿ ನೀರಾಗಿ ಹರಿಯುತ್ತದೆ; ಸತ್ತಶರಧಿಗಳಿಗೆ ಅವನ ಕಣ್ಣೇ ತಲಕಾವೇರಿಯಾಗುತ್ತವೆ: "ಒಡೆಯಗೆ ಕಾಣೆನಾಪ್ತರನೆಂದು ಮರುಗು"[11]ತ್ತಾನೆ.

---

1 ಆ ೬-೪೪; 2 ಆ ೮-೯; 3 ಉ ೧೦ ೧೪; 4 ಉ ೧೦-೧೫; 5 ಅದೇ, ೧೬; 6 ಅದೇ, ೧೭; 7 ಕ ೨೭-೭; 8 ಉ ೧೦-೨೦; 9 ಉ ೧೦-೩೩; 10 ಉ ೧೦-೩೪; 11 ಕ ೨೭ ೫

ಕೃತಜ್ಞತೆ

ನಾಯಿ ಕುರಿ ಹಸು ಯಾವ ಸಾಕಿದ ಪ್ರಾಣಿಯೇ ಆಗಲಿ, ಸಾಕಿದವನ ಬೆನ್ನು ಹಿಂದೆಯೇ ತಿರುಗುತ್ತವೆ. ಅವನು ನೀರಿಗೆ ಬೀಳಲಿ, ಕೊಂಡ ಹಾಯಲಿ, ಅವನನ್ನು ಹಿಂಬಾಲಿಸುತ್ತವೆ. ನಾಯಿಯಂತು ತನ್ನ ಪ್ರಾಣವನ್ನು ತೆತ್ತಾದರೂ ಒಡೆಯನ ಜೀವ ವನ್ನುಳಿಸುತ್ತದೆ. ಅಂಥ ಕೃತಜ್ಞತೆಯುಳ್ಳ ಪ್ರಾಣಿ ಮತ್ತೊಂದಿಲ್ಲ. ಪ್ರಾಣಿಗಳಲ್ಲಿರುವ ಉಪಕಾರಸ್ಮರಣೆಯ ಬುದ್ಧಿ ಮನುಷ್ಯರಲ್ಲಿ ವಿರಳ. ಉಪಕಾರಸ್ಮರಣೆ ಸೊನ್ನೆಯಾದರೂ ಸರಿಯೆ,ಉಪಕಾರಿಗೆ ಅಪಕಾರವೆಸಗದಿರುವ ಮಾನವ ಸಜ್ಜನನೆನಿಸಿಕೊಳ್ಳುತ್ತಾನೆ. ಕರ್ಣನ ಇಡೀ ಬಾಳನ್ನು ಆಳುವ, ಬೆಳಸುವ, ಮತ್ತು ಪರಿಮಳಿಸುವ ಗುಣ ಕೃತಜ್ಞತೆ ಎಂದು ದುರ್ಯೋಧನ ಅವನಿಗೆ ಅಂಗರಾಜ್ಯವನ್ನಿತ್ತು, ಅವನ ಸ್ಥಾನಮಾನವನ್ನೆತ್ತರಿಸಿದನೋ, ಅಂದಿನಿಂದ ಅವನು ದುರ್ಯೋಧನನ ಛಾಯೆಯಂತಲ್ಲ, ಪ್ರತಿರೂಪದಂತೆ ವರ್ತಿಸುತ್ತಾನೆ. ದುರ್ಯೋಧನನ ಕಡೆ ಒಮ್ಮನಸ್ಸಿನಿಂದ ಯುದ್ಧಮಾಡಿದವನು ಅವನೊಬ್ಬನೇ. ಪಾಪವೋ ಪುಣ್ಯವೋ, ತನ್ನೊಡೆಯನ ಅಭ್ಯುದಯ ಸಾಧನೆಯೊಂದೇ ಅವನ ಗುರಿ. ಎಲ್ಲರಿಗಿಂತ ಮುಂದಾಗಿ ರಣರಂಗವನ್ನು ಹೊಕ್ಕು ಬಾಯ್ದಣಿಯೆ ಮೂದಲಿಸಿ ಮೈದಣಿಯೆ ಮನ ದಣಿಯೆ ಹೋರಾಡಿ, ಪ್ರಾಣಾರ್ಪಣೆಮಾಡಿ ಒಡೆಯನ ಋಣವನ್ನು ತೀರಿಸುವ ತವಕ ಅವನದು. ತನ್ನ ಸರದಿ ಬಂದಾಗ ಅವನಿಗಾದ ಆನಂದ ಅಷ್ಟಿಷ್ಟಲ್ಲ.

> ಸರಸ ಶರಪತಿಗೆನ್ನ ತನು ಜ। ರ್ಝರಿತವಾಗಲಿ ನನ್ನ ಕಣೆಯಲಿ
> ಜರಿಸುಲಾತನ ದೇಹ ಖಾಡಾಖಾಡಿ ಯುದ್ಧದಲಿ
> ಕರುಳು ಕರುಳಲಿ ತೊಡಕಿ ನೊರೆನೆ। ತ್ತರಲಿ ನೆತ್ತರು ಕೂಡಿ ಕಡಿಯಲಿ
> ಬೆರಸಿ ಕಡಿ ಪಲ್ಲಟಿಸೆ ದಿಟ ಕೃತಕೃತ್ಯನಹೆನೆಂದ[1]

> ಸರನ ರಕುತದ ಮದ್ಯಪಾನವ। ನೆರೆದು ಶಾಕಿನಿಯರಿಗೆ ಪಾರ್ಥನ
> ಕರುಳ ದೊಂಡೆಯ ಕೂಳನುದ್ದಿಯ ಬಡಿಸಿ ದೈತ್ಯರಿಗೆ
> ಅರಿಯ ಖಂಡದಿ ಹಸಿಯ ಸುಂಟಿಗೆ ವೆರಸಿ ಭೂತಾವಳಿಯ ದಣಿಸಿದ
> ಡರಸು ಕೌರವನೆನ್ನ ಸಾಕಿತಕಿಂದು ಫಲವೆಂದ[2]

ಕೃಷ್ಣ ಕುಂತಿಯರು ಮುಂದೊಡ್ಡಿದ್ದ ವ್ಯಾಮೋಹಗಳ ಕಡೆಗೆ ಕಡೆಗಣ್ಣು ಸಹ ಹರಿಸು ವುದಿಲ್ಲ- "ರಾಯನೆನ್ನನು ನೆಚ್ಚಿ ಹೊರೆದನು ಸಾಯಲಳುಕುವನೇ ಸುಡೇತರದಿ.ಯಿಳೆಯ ಬಾಳಿಕೆ, ಕೃತಘ್ನತೆಗೆಲ್ಲಿ ಗತಿ?"[3] ಎಂದು ಖಂಡತುಂಡವಾಗಿ ಹೇಳಿಬಿಡುತ್ತಾನೆ. ಹೀಗೆ ಹೇಳುವವನು ಒಬ್ಬ ಕರ್ಣ, ಮತ್ತೊಬ್ಬ ಧರ್ಮರಾಯ.

ಗೋಗ್ರಹಣ ಯುದ್ಧದನಂತರ ವಿರಾಟನರಮನೆಗೆ ಬಂದ ಭೀಮ ಧರ್ಮರಾಯನ ಹಣೆಯ ಗಾಯವನ್ನು ಕಂಡು ಕೆರಳುತ್ತಾನೆ; ಆ ಗಾಯಕ್ಕೆ ಕಾರಣನಾದ ವಿರಾಟನನ್ನು ಸಿಗಿದು ಭೂತಗಳಿಗೆ ಹಬ್ಬ ಮಾಡುವುದಾಗಿ ಹಾರಾಡುತ್ತಾನೆ. "ಇವನ ನಾವ್ರೋಲ್ವೈಸಿ,

---

[1] ಕ ೮–೩೮; [2] ಕ ೮.೪೨; [3] ಉ ೧೦–೩೨

ಕೈಯೊಡನಿವಗೆ ಮುನಿದೊಡೆಯೇನನೆಂಬುದು ಭುವನ ಜನವು ಭ್ರಮಿಸದಿರು ಸ್ವೈರಣೆಗೆ ಮನಮಾಡು"[1] ಎಂದು ಧರ್ಮರಾಯ ತಮ್ಮನನ್ನು ಸಾಂತ್ವನಗೊಳಿಸಿ, ಕೃತಜ್ಞತೆಯನ್ನು ಮೆರೆಯುತ್ತಾನೆ.

ಪರನಿಂದೆ-ಪರಸ್ತುತಿ

ಲೋಕದ ಜನ ಅನ್ಯಚಿಂತೆಯುಳಿದು, ಪರರ ವ್ಯವಹಾರದಲ್ಲಿ ತಲೆ ಹಾಕುವುದು ಬಿಟ್ಟು ಆತ್ಮಚಿಂತೆಯಲ್ಲಿ ತೊಡಗುವುದಾದರೆ ಅವರಿಗೆ ಶ್ರೇಯಸ್ಸೂ, ಲೋಕಕ್ಕೆ ಶುಭವೂ ಒದಗುತ್ತವೆ. ಅಷ್ಟರಮಟ್ಟಿಗೆ ಸಮಸ್ಯೆಗಳು ಕಡಮೆಯಾಗುತ್ತವೆ. ಅದಕ್ಕೋಸ್ಕರವೇ ಬಸವಣ್ಣ ವಚನಿಸಿದ್ದು: "ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತಯಿಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ"[2] ಎಂದು. ತಮ್ಮ ದೋಷ ದೌರ್ಬಲ್ಯಗಳು ಏನೇ ಇರಲಿ, ಪರರ ರಂಧ್ರಾನ್ವೇಷಣೆಯೇ ಬಹುಜನರ ಚಾಳಿ. ಲೋಕದ ತಾಪತ್ರಯಗಳು ಬಲಿಯುವುದು ಇಂಥ ಚಾಳಿಯಿಂದಲೇ. ಬಸವಣ್ಣ ವಾಚಿಸಿದ ತತ್ವವನ್ನು ದೃಢೀಕರಿಸಲೆಂಬಂತೆ ವಿದುರ ಅನ್ಯಚಿಂತೆಯ ಹಾನಿಯನ್ನು ಸ್ಪಷ್ಟಪಡಿಸುತ್ತಾನೆ: "ತನ್ನ ಕಾರಿಯ ಕಾರಣವನುಳಿದನ್ಯಥಾ ಚಿಂತೆಯನು ಮಾಡುವುದುನ್ನತಿಕೆ ತಾನಲ್ಲ ನೀತಿಜ್ಞರಿಗೆ"[3] ಶರೀರದಾದ್ಯಂತ ವಿಷತುಂಬಿಕೊಂಡಿರುವ ಜನ ಮೂರು ಹೊತ್ತೂ ಪರರ ಅಡಿಕೆಯಲ್ಲಿಯೇ ಹೊತ್ತು ಕಳೆಯುತ್ತಾರೆ; ಹಾಗೆ ನಿಂದೆಯಲ್ಲಿ ತೊಡಗದಿದ್ದರೆ ಅವರಿಗೆ ನಿದ್ದೆ ಹತ್ತುವುದಿಲ್ಲ. ಚಾಡಿ ಬೆಸೆಯುವುದೇ ಅವರ ಚಾಳಿ. ಅಂಥವರು ಸಮಾಜದ ಅಶಾಂತಿಗೆ ಕಾರಣರಾಗುತ್ತಾರೆ. ಆದ್ದರಿಂದಲೇ ಧರ್ಮರಾಯ ಯಕ್ಷಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದ್ದು "ಪರನಿಂದಕನೆ ನಿಂದ್ಯನು, ಪರಹಿತನೆ ವಂದ್ಯನು"[4] ಎಂದು. ಪರರಿಗೆ ಹಿತವಾಗುವಂಥ ಕಾರ್ಯದಲ್ಲಿ ತೊಡಗುವುದು ತಪ್ಪಲ್ಲ. ಕೆಳೆಯರಾಗಲಿ ಹಗೆಗಳಾಗಲಿ ಮತ್ತೊಬ್ಬರಿಗೆ ಉಪಕಾರ ಮಾಡುವ ಅವಕಾಶ ಸಿಕ್ಕೀತೆ ಎಂದು ಸಜ್ಜನರು ಸದಾ ಅದೇ ಧ್ಯಾನದಲ್ಲಿರುತ್ತಾರೆ. "ಅಪಕಾರಿ ಜನದಲಿ ನೆನೆವುದುಪಕಾರವನು, ಗುಣಹೀನನಲಿ ಗುಣವನು ತೋರುವುದು ಗರುವರಿಗೆ ತೊಡಿಗೆಯಿದು"[5] ಎಂಬುದು ಧರ್ಮರಾಯನ ನಿಲವು. ಈ ನಿಲವು ಭೀಮನಿಗೊಪ್ಪಿಗೆಯಾಗುವುದಿಲ್ಲ. ದುರ್ಯೋಧನ ಗಂಧರ್ವನ ಬಂಧನಕ್ಕೊಳಗಾದಾಗ ಅವನನ್ನು ಬಿಡಿಸಿಕೊಂಡು ಬರಲು ಅವನೊಪ್ಪುವುದಿಲ್ಲ. ಪರರ ದುಃಖವನ್ನು ಕಂಡು ಮರುಗುವುದು ಸಜ್ಜನಿಕೆ. ಅವರು ಕಷ್ಟದಲ್ಲಿರುವಾಗ ಹರ್ಷಿಸುವುದು ಅಲ್ಪತನ, ಮತ್ತಷ್ಟು ತೊಂದರೆ ಕೊಡುವುದು ದುಷ್ಟತನ. "ಒದಗಿದುತ್ಸವದಲ್ಲಿ ಪರರಭ್ಯುದಯವನು ಬಯಸುವುದು, ಪರರಿಗೆ ಮುದವನಾಚರಿಸುವುದು ಧರ್ಮಜ್ಞರಿಗೆ ಗುಣ"[6] ಎಂದು ಧರ್ಮರಾಯ ಭೀಮನಿಗೆ ಬೋಧಿಸುತ್ತಾನೆ. ಸಾಮಾಜಿಕ ಜೀವನದ ಶಾಂತಿ ಯಶಸ್ಸುಗಳು ಪರಸ್ಪರ

---

1 ವಿ ೯-೩೯; 2 ಬಸವಣ್ಣನವರ ಷಟ್‌ಸ್ಥಳದ ವಚನಗಳು, ಸಂ. ಬಸವನಾಳ ಶಿವಲಿಂಗಪ್ಪನವರು, ೧೨೪; 3 ಉ ೩-೭; 4 ಅ ೨೩-೪೩; 5 ಅ ೨೦-೧೩; 6 ಅ ೨೦-೧೭

ಸಹಕಾರತತ್ವವನ್ನವಲಂಬಿಸಿವೆ. ಅಕ್ಕಪಕ್ಕದ ಜನ ಕಷ್ಟದಲ್ಲಿದ್ದಾಗ ನೆರವು ನೀಡು ವಂಥದು ಮಾನವೀಯ ಲಕ್ಷಣ, ಹಾಗೂ ಸಾಮಾಜಿಕ ನೀತಿ. ಯೋಗ್ಯ ಸಾರಥಿಯ ಅಭಾವದಿಂದ ತೊಂದರೆಗೊಳಗಾಗಿದ್ದ ಕರ್ಣನಿಗೆ ಸಾರಥಿಯಾಗುವಂತೆ ಶಲ್ಯನನ್ನೊಪ್ಪಿ ಸುವ ಸಂದರ್ಭದಲ್ಲಿ ದುರ್ಯೋಧನ "ಸತ್ಪುರುಷರೇ ಪರಕಾರ್ಯನಿಷ್ಠರು"[1] ಎಂದು ಬೆನ್ನು ತಟ್ಟುತ್ತಾನೆ. ಅಂಥವನು ಸರ್ವಲೋಕಮಾನ್ಯನಾಗುತ್ತಾನೆ. ಕೊನೆಗೆ ಉಪಕಾರ ಮಾಡುವುದು ಬೇಡ, ಅವರ ಏಳಿಗೆಯನ್ನು ಕಂಡು ವಿಷಕಾರದಿದ್ದರೆ ಸಾಕು. ನೆರೆಯ ಹೊಲದವ ನಾಲ್ಕು ಪಲ್ಲ ಬತ್ತ ಹೆಚ್ಚಾಗಿ ಬೆಳೆದರೆ ಹೊಟ್ಟೆಯುರಿ; ಗೆಳೆಯನಾಗಿದ್ದವನು ಅಧಿಕಾರದ ಮೆಟ್ಟಿಲೇರಿ ಯಶಸ್ಸು ಗಳಿಸುತ್ತಿದ್ದರೆ ಹಿಂದಿನಿಂದ ಕಾಲು ಹಿಡಿದೆಳೆಯುವುದೇ ಕೆಲವು ಪ್ರಾಧ್ಯಾಪಕರ ಸಲುವಳಿ. ಅಂಥವರನ್ನು ಕುರಿತೇ ಧರ್ಮರಾಯ ಹೇಳಿದ್ದು "ಸತತ ಪರರುಪಕಾರಿ ದೇವಪ್ರತತಿ ಪ್ರಿಯನು, ಪರರ ಗುಣದುನ್ನತಿಯ ಸೈರಿಸದವನು ಕಷ್ಟನು"[2] ಎಂದು. ತನ್ನನ್ನು ಎಡರುಗಳು ಮುತ್ತಿಕೊಂಡಿರುವಾಗಲೂ, ಅವುಗಳನ್ನು ಮರೆತು ಪರ ಹಿತವನ್ನು ಸಾಧಿಸುವಾತ ಸರ್ವಶ್ರೇಷ್ಠನೆನಿಸಿಕೊಳ್ಳುತ್ತಾನೆ. ಸರ್ಪವೇಷದ ನಹುಷನ ಹಿಡಿತದಿಂದ ಧೈರ್ಯ ಕರಗಿ, ಚಿಂತಾಕ್ರಾಂತನಾಗಿದ್ದ ಭೀಮನನ್ನು ಸಂತೈಸುತ್ತ "ತನ್ನರಿಷ್ಟವನೀಕ್ಷಿಸದೆ, ಪರರುನ್ನತಿಯ ಬಯಸುವರು ಸಜ್ಜನರು"[3] ಎಂದು ಧರ್ಮರಾಯ ಅವನ ಕಂಬನಿಯೊರಸುತ್ತಾನೆ. ಭೀಮನಿಗೆ ತುಸು ತೊಂದರೆಯಾದರೂ, ನಹುಷನ ಶಾಪವಿಮೋಚನೆಯಾದದ್ದು ಅವನಿಗೆ ಆನಂದದಾಯಕವಾದ ವಿಷಯವಾಗುತ್ತದೆ.

ಪರಗುಣಸ್ತುತಿಗಿಂತ ಶತ್ರುಗುಣ ಪ್ರಶಂಸೆ ಮಾನವನ ಹಿರಿಮೆಗೆ ದ್ಯೋತಕವಾಗು ತ್ತದೆ. ಗುಣ ಎಲ್ಲಿಯಾದರೂ ಇರಲಿ, ಮಾತ್ಸರ್ಯ ಕೂಡದು. ಮದ ಮಾತ್ಸರ್ಯಾದಿ ಅವಗುಣಗಳಿಗೆ ಆಸರೆಯಾಗಿರುವ ಮಾನವನ ಗುಣಗ್ರಹಣ ಸಾಮರ್ಥ್ಯ ಇಂಗಿಹೋಗು ತ್ತದೆ. ಶಿಶುಪಾಲನಂಥವರ ಕಣ್ಣಿಗೆ ಶ್ರೀಕೃಷ್ಣನ ಸದ್ಗುಣಗಳೆಲ್ಲ ಅವಗುಣಗಳಾಗಿ ತೋರುತ್ತವೆ. ಅಭಿಮನ್ಯುವಿನ ಶೌರ್ಯ ಪರಾಕ್ರಮಗಳನ್ನು ಕಂಡು ಮೆಚ್ಚಿದ ದುರ್ಯೋಧನ "ಪಾರ್ಥತನಯನ ಸರಿಯೊರೆಗೆ ಭಟನಾವನ್"[4]

> ತಂದೆ ಹಡೆಯನೆ ಮಗನನಹುದೋ। ಕಂದ ಕಲ್ಪಸಹಸ್ರ ನೋಂತಳೊ
> ಇಂದುಧರನನು ನಿನ್ನ ತಾಯಿ ಸುಭದ್ರೆ
> ಹುರುಡು ಮರೆದೆನು ಮಗನೆ ಸಾಲದೆ। ಭರತಕುಲದಲಿ ನಿನ್ನ ಬೆಳವಿಗೆ
> ಒಪಿರದು ಕಮಲನ್ವಯಕೆ ಕೊಡದೇ ಸುಗತಿ ಸಂಪದವ[5]

"ಪುತ್ರನವೆ, ಪಾರ್ಥ ಕೃತಾರ್ಥ"[5] ಎಂದು ಮನಸಾರೆ ಹೊಗಳುತ್ತಾನೆ. ಭೀಮ ಮದ ದಿಂದ ದುರ್ಯೋಧನನ ವದನವನೊದೆದು ಹಲ್ಲುಗಳನ್ನು ಕಳಚಿದಾಗ "ಕುರುಭೂಮಿ ಪತಿಯುಶ್ಲಾಘ್ಯನೇ ಲೋಕೈಕಮಾನ್ಯನಲಾ"[6] ಎಂದು ಧರ್ಮರಾಯ ಅವನನ್ನು ನೂಕು ತ್ತಾನೆ;

---

[1] ಕ ೫-೨೫ ; [2] ಅ ೨೩-೪೧ ; [3] ಅ ೧೩-೭೧ ; [4] ದ್ರೋ ೫-೧೬ ; [5] ದ್ರೋ ೫-೧೭ ; [6] ಗ ೮-೧೬

ಗುಣನಿಧಿಯನೇಕಾದಶಾಕ್ಷೋಹಿಣಿಯ ಪತಿಯನಶೇಷ ಪಾರ್ಥಿವ
ಮಣಿ ಮಕುಟ ಕಿರಣೋಪಲಾಲಿತ ಪಾದಪಲ್ಲವನ
ರಣದೊಳನ್ಯಾಯದಲಿ ತೊಡೆಗಳ ಹಣಿದುವಲ್ಲದೆ ಪಾದದಲಿ ನೀ
ಕೆಣಕುವರೆ ಕುರುರಾಜ ಮೌಳಿಯನ್[1]

ಎಂದು ಮರುಕ ಪಶ್ಚಾತ್ತಾಪಗಳನ್ನು ವ್ಯಕ್ತಪಡಿಸಿ, ದುರ್ಯೋಧನನನ್ನು ಸಂತವಿಡುತ್ತಾನೆ, ಅವನನ್ನು ಗುಣನಿಧಿಯೆಂದು ಕರೆಯುವಲ್ಲಿ ಧರ್ಮರಾಯನ ಅಗ್ಗಳಿಕೆ ಮುಗಿಲು ಮುಟ್ಟುತ್ತದೆ.

ವಿನಯ

"ಏನಿ ಬಂದಿರಿ ಹದುಳವಿದ್ದಿರೆ? ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ? ಕುಳ್ಳಿರೆಂದರೆ ನೆಲಕುಳಿ ಹೋಹುದೆ?"[2] ಎಂದು ಬಸವಣ್ಣನವರು ಸಭ್ಯರು ಅನುಸರಿಸಬೇಕಾದ ಆಚಾರವನ್ನು ಸೂಚಿಸಿದ್ದಾರೆ. ವಿನಯ ಸುಸಂಸ್ಕೃತರ ಲಕ್ಷಣ. ಅದು ಹೇಡಿತನದ, ಅಥವಾ ದೌರ್ಬಲ್ಯದ ಕುರುಹಲ್ಲ. ಮಹಾಶಕ್ತನ, ಮಹಾವಿದ್ವಾಂಸನ ಸಲ್ಲಕ್ಷಣ.

ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ
ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಂ[3]

ವಿನಯದ ಮೂಲಕ ಬಿಡಿಸಲಾರದ ಸಮಸ್ಯೆಗಳಿರಲಾರವು, ಸಾಧಿಸಲಾರದ ಲೌಕಿಕ ಸಿದ್ಧಿಯಿರಲಾರದು. ಕಾಠಿನ್ಯವನ್ನು ಕರಗಿಸುವ, ದೌಷ್ಟ್ಯವನ್ನು ದುರ್ಬಲಗೊಳಿಸುವ ಐಂದ್ರಜಾಲಿಕಶಕ್ತಿ ಅದರಲ್ಲಿದೆ. "ಮೆಲ್ಪು ಬಲ್ಪನಬೀಗುಂ" ಎಂದು ಪಂಪ ಹೇಳಿದ್ದೂ ಇದೇ ಅರ್ಥದಲ್ಲಿ. ದ್ರುಪದ ತನ್ನನ್ನು ನಿಂದಿಸಿದಾಗ ದ್ರೋಣ "ಏನು ಬಂದಿರಿಯೆಂಬ ಗುಣವಚನಾನುರಾಗವು ಸಾಲದೇ ಧನವೇನು ಫಲ?"[4] ಎಂದು ಅವನಿಗೆದುರು ನುಡಿಯುತ್ತಾನೆ. ರಾಜಸೂಯಯಾಗ ಸಮಯದಲ್ಲಿ ಶಿಶುಪಾಲ ಶಿಷ್ಟಮರ್ಯಾದೆಯನ್ನು ಮೀರಿ ವರ್ತಿಸಿದಾಗ, ತನ್ನ ಮಾತುಗಳಿಗೂ ಕಿವಿಕೊಡದಿದ್ದಾಗ "ಏಕೆ ಖಳರಿಗೆ ನಯವಿಧಾನ ವ್ಯಾಕರಣ ಪಾಂಡಿತ್ಯ?"[5] ಎಂದು ಭೀಷ್ಮ ಅವನಿಗೆ ಎಚ್ಚರಿಕೆ ನೀಡುತ್ತಾನೆ. ಕುಂತಿಯಂಥ ಹಿರಿಯರನ್ನು ಕಾಣುವ ಸಂದರ್ಭದಲ್ಲಿ ಶ್ರೀಕೃಷ್ಣ ನಡೆದುಕೊಳ್ಳುವ ರೀತಿಯಲ್ಲಿ ವಿನಯಶ್ರೀ ಎದ್ದು ಕಾಣುತ್ತದೆ. ಯುದ್ಧದ ನಡುವೆ ಒಂದು ರಾತ್ರಿ ಕೃಷ್ಣ ಪಾಂಡವರೊಡನೆ ತನ್ನನ್ನು ನೋಡಲು ಬಂದಾಗ ಭೀಷ್ಮ ಮೇಲೆದ್ದು ಅವರನ್ನು ಸ್ವಾಗತಿಸಿ, ಕೃಷ್ಣನ ಚರಣದಲ್ಲಿ ನಿಡುಗೆಡೆದು ವಿನಯವನ್ನೂ ಭಕ್ತಿಯನ್ನೂ ಪ್ರಕಟಿಸುತ್ತಾನೆ. ಭೀಷ್ಮನಿಗೆ ಪಟ್ಟಾಭಿಷೇಕವಾದಾಗ ಕರ್ಣ ಅವನನ್ನು ನಾನಾ ರೀತಿಯಲ್ಲಿ ಅವಹೇಳಿಸುತ್ತಾನೆ. ಭೀಷ್ಮ ಸರಳಮಂಚಗತನಾದನಂತರ ಕರ್ಣ ಅವನ ಬಳಿ ಹೋಗಿ, ಚರಣಕಮಲವ ಹಿಡಿದು, ಕಂಬನಿ

---

1 ಗ ೮-೧೭ ; 2 ಬಸವೇಶ್ವರನ ಷಟ್‌ಸ್ಥಳದ ವಚನಗಳು, ಸಂ. ಬಸವನಾಳ ಶಿವಲಿಂಗಪ್ಪನವರು, ೨೪೧. 3 ಹಿತೋಪದೇಶ, ಪ್ರಸ್ತಾವನೆ ೭ ; 4 ಅ ೬-೩೩ ; 5 ಸ ೯-೩೬

ಯೊಳಂಘ್ರಿಗಳನ್ನು ನಾದುತ್ತಾನೆ; "ಕರುಣಿಸೈ ಗಾಂಗೇಯ,....ಖಳತಿಲಕ ಕರ್ಣನ ದುರುಳತನವನು ಮರೆದು ಮೆರೆವುದು ನಿಮ್ಮ ಸದ್ಗುಣವ"[1] ಎಂದು ಪಶ್ಚಾತ್ತಾಪದ ಮುದ್ದೆಯಾಗುತ್ತಾನೆ. ಸಂಸ್ಕಾರವಿಲ್ಲದ ಕಡೆ ನಾನತ್ವ ತುಂಬಿ ತುಳುಕುತ್ತದೆ; ನಾನತ್ವ ವಿಲ್ಲದ ಕಡೆ ವಿನಯ ಪರಿಮಳಿಸುತ್ತದೆ. ದುರ್ಯೋಧನನ್ನುಳುಹುವ ಹದನ ನೆನೆಯೆಂದು ಭೀಷ್ಮ ಬೆಸಸಿದಾಗ ಕರ್ಣ ಹೇಳುವ ಮಾತಿನಲ್ಲಿ ಅವನ ಪರಿಪಕ್ವತೆ ಪ್ರಕಟಗೊಳ್ಳುತ್ತದೆ.

ಎನ್ನ ಹವಣೇ ಹಗೆಯ ಗೆಲುವಡೆ । ನಿನ್ನ ವಂದಿಗರಿರಲು ನೂಕದು
ತನ್ನ ಸಾಹಸನೆಲ್ಲಿ ಪರಿಯಂತಹುದು ಕದನದಲಿ
ಗನ್ನಕಾರನು ಕೃಷ್ಣನವರಿಗೆ । ತನ್ನನೊಚ್ಚತಗೊಟ್ಟನಹಿತರ
ನಿನ್ನು ಗೆಲ್ಲುವರಾರು ಜಯಪೆಲ್ಲಿಯದು ನಮಗೆ[2]

ಎಂದು ನಿಗರ್ವತೆಯನ್ನು ಪ್ರಕಾಶಪಡಿಸುತ್ತಾನೆ. ಮಹಿಮನ ಮಹಿಮೆಯನ್ನು ಗುರುತಿಸಿದವನು ಸಹ ಮಹಿಮನಾಗುತ್ತಾನೆ. ಜ್ಞಾನಿಗೆ ಜ್ಞಾನದ ಅನೇಯತೆಯ ಅರಿವಿರುವುದರಿಂದ ಅವನಲ್ಲಿ ವಿನಯ ವರ್ಧಿಸುತ್ತದೆ; ಜ್ಞಾನದ ಆಳ ತಿಳಿಯದೆ, ಸರ್ವಜ್ಞರೆಂದು ತಿಳಿದುಕೊಂಡು ನಾನತ್ವದಿಂದ ಮೆರೆಯುವ ಮಂದಿಯ ಅಹಂಕಾರ ಮುಗಿಲನ್ನು ತಿವಿಯುತ್ತದೆ. ವಿನಯ ಶೌರ್ಯಗಳೆರಡೂ ಕರ್ಣನಲ್ಲಿ ಕೈಕೈಹಿಡಿದುಕೊಂಡು ಸಾಗುತ್ತವೆ. ಕೊನೆಗೆ ಭೀಷ್ಮ ಕೌರವ ಪಾಂಡವರಿಗೆ ಸಂಧಿ ಮಾಡುವಂತೆ ಹೇಳಿದಾಗ "ಜೀಯ, ಮಂತ್ರದ ಮಾತು ರಾವುತಪಾಯಕರಿಗೊಪ್ಪುವದೆ, ಅವರವರಾಯತದಲೋಲೈಸಬೇಹುದು ಮೇರೆಮಾರ್ಗದಲಿ"[3] ಎಂದು ಔಚಿತ್ಯಪ್ರಜ್ಞೆಯನ್ನೂ, ಪತಿನಿಷ್ಠೆಯನ್ನೂ, ಧ್ಯೇಯ ದೃಢತೆಯನ್ನೂ, ಎಲ್ಲಕ್ಕಿಂತ ಮಿಗಿಲಾಗಿ ವಿಧೇಯತೆಯನ್ನೂ ಮೆರೆಯುತ್ತಾನೆ; ವಿನಯದಲ್ಲಿ ಅವನಿಗೆ ಯಾರೂ ಹೊಯಕಯ್ ಇಲ್ಲವೆಂಬಂತೆ ನಡೆದುಕೊಳ್ಳುತ್ತಾನೆ.

ವಿನಯದಲ್ಲಿ ಕರ್ಣನಿಗೆ ಹೆಗಲೆಣೆಯಾಗಿ ನಿಲ್ಲಬಲ್ಲವನು ಮತ್ತೊಬ್ಬನೆಂದರೆ ಧರ್ಮರಾಯ. ಕೃಷ್ಣ ಕಾಣಿಸಿಕೊಂಡನೆಂದರೆ ಯುಧಿಷ್ಠಿರ ಅವನ ಕಾಲಿಗೆರಗುತ್ತಾನೆ; ಅವನು ಮೇಲೇಳುವಷ್ಟರಲ್ಲಿ ಕೃಷ್ಣ ಪೊಡಮಡುತ್ತಾನೆ. ಕೃಷ್ಣನಿರುವತನಕ ಧರ್ಮತನಯನಿಗೆ ಭವಿಷ್ಯದ ಚಿಂತೆಯೇ ಇಲ್ಲ. ಆ ದಂದುಗವೆಲ್ಲ ಶ್ರೀಕೃಷ್ಣನದು. ಅಭಿಮನ್ಯು ವಿವಾಹಾನಂತರ ಮುಂದೇನು ಮಾಡುವುದೆಂದು ಅವನು ಪ್ರಶ್ನಿಸಿದಾಗ ದ್ರುಪದ ಅಳಿಯನ ಪರವಾಗಿ ಕೊಡುವ ಉತ್ತರವಿದು :

ದೇವ ನೀನೇ ಬಲ್ಲೆ ನಿಮ್ಮಯ । ಭಾವನೀ ಧರ್ಮಜನ ಬಹುಮಾ
ನಾವಮಾನದ ಹೊರಿಗೆ ನಿನ್ನದು ಹರಣ ಭರಣವನು
ನೀವು ಬಲ್ಲಿರಿ ಕಾಲಬೊಡೆಮದನೋವಿ ತಳೆಯಲಿ ಹೊತ್ತು ನಡೆಸುವ
ಡಾವು ಬಲ್ಲೆವು ಜೀಯ[4]

ಈ ಮಾತಿನಲ್ಲಿ ಧರ್ಮರಾಯನ ಹೃದಯವೇ ಮಿಡಿದಂತಿದೆ.

---

[1] ದ್ರೋ ೧–೨೧ ; [2] ದ್ರೋ ೧–೨೮ ; [3] ದ್ರೋ ೧–೩೧ ; [4] ಉ ೧–೪

ಇಂಗಿತಜ್ಞತೆ

"ಈ ಪ್ರಪಂಚಯಂತ್ರದ ಚಕ್ರಗಳೂ ಕೀಲುಗಳೂ—ಒಂದಕ್ಕೊಂದರಿಂದ ತಿಕ್ಕಾಟವಾಗದೆ, ಅವು ಕಿರುಗುಟ್ಟದೆ—ಸುಗಮವಾಗಿ ನಡೆಯಬೇಕಾದರೆ, ಸೌಹಾರ್ದಪೂರ್ವಕವಾದ ಇಂಗಿತಜ್ಞತೆಯ ಜಿಡ್ಡು ಯಥೇಷ್ಟವಾಗಿ ಅವುಗಳಲ್ಲಿ ಹರಿಯುತ್ತಿರಬೇಕು. ಈ ಬಗೆಯ ಆತ್ಮೀಯತೆ ಪರಕೀಯತೆಗಳ ಏಕೀಕರಣವು ಸಾಧ್ಯವಾಗತಕ್ಕದ್ದು ಊಹಾವಿಕಾಸಪೂರ್ವಕವಾದ ಒಂದು ಭಾವವಿಸ್ತಾರದಿಂದ. ಅಂಥ ಸ್ವಾನ್ಯೈಕ್ಯಭಾವನಾಪ್ರಸಾರದಿಂದ ಇಂಗಿತಜ್ಞತೆ"[1] ಎಂದು ಡಿ.ವಿ.ಜಿ.ಯವರು ಪರೇಂಗಿತಜ್ಞತೆಯ ಸ್ವರೂಪವನ್ನು ಬಹು ಸ್ಪಷ್ಟವಾಗಿ ತಿಳಿಯಾಗಿ ವಿವರಿಸಿದ್ದಾರೆ. "ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ ಸರ್ವಭೂತೇಷು ಚಾತ್ಮಾನಂ"[2] ತನ್ನನ್ನು ಇತರ ಪ್ರಾಣಿಗಳಲ್ಲಿ ಇತರ ಪ್ರಾಣಿಗಳನ್ನು ತನ್ನಲ್ಲಿ ಅಂದರೆ ತನ್ನ ನೆರೆಹೊರೆಯ ಪ್ರಾಣಿ ಅಥವಾ ಮನುಷ್ಯರನ್ನು ತನ್ನಂತೆ ಯಾರು ಕಂಡುಕೊಳ್ಳುತ್ತಾರೆಯೋ ಅವನೇ ಇಂಗಿತಜ್ಞ, ಅವನೇ ಸುಸಂಸ್ಕೃತ. ಮತ್ತೊಬ್ಬನ ಮನಸ್ಸನ್ನು ಅವನ ಅಂಗಭಾವದಿಂದರಿತುಕೊಂಡು, ಆ ಅರಿಮೆಯನ್ನು ಕ್ರಿಯಾರೂಪಕ್ಕೆ ತಿರುಗಿಸುವವನು ಉತ್ತಮೋತ್ತಮ. ತಂದೆ ಬಾಯಿಬಿಟ್ಟು ಹೇಳಿ ಮಗನಿಗೆ ಬುದ್ಧಿ ಕಲಿಸಲಿಷ್ಟವಿಲ್ಲದಿರಬಹುದು. ಅವನ ನಡೆನುಡಿನೋಟ ಭಾವಭಂಗಿಗಳನ್ನು ಗ್ರಹಿಸಿಕೊಂಡು ಮಗ ತನ್ನ ನಡತೆಯನ್ನು ತಿದ್ದಿಕೊಳ್ಳಬೇಕು. ಅಧಿಕಾರಿ-ಸಹಾಧಿಕಾರಿ, ಗುರು-ಶಿಷ್ಯ, ಪತಿ-ಸತಿ, ಅಣ್ಣ-ತಮ್ಮ ಇವೇ ಮೊದಲಾದ ಸಂಬಂಧಗಳು ಶಾಶ್ವತವಾಗಿ ಅವಿಚ್ಛಿನ್ನವಾಗಿ ರಮಣೀಯವಾಗಿ ಮುಂದುವರಿಯಬೇಕಾದರೆ ಪರೇಂಗಿತಜ್ಞತೆ ಅತ್ಯವಶ್ಯ. ಪರಭಾವಪ್ರವೇಶವೇ ಅದು. ಭೀಷ್ಮ ಚೈದ್ಯನೃಪನ ದೂರುಗಳಿಗೆ ಸಮಜಾಯಿಷಿ ನೀಡಿ, ತನ್ನ ವಿವೇಕ ಸಾಮರ್ಥ್ಯವನ್ನು ಕರಗಿಸಿದನಂತರವೂ ಅವನ ದುಷ್ಟತನ ಸ್ಥಗಿತಗೊಳ್ಳುವುದಿಲ್ಲ. ಆಗ ಭೀಷ್ಮ

> ಇಂಗಿತದಲರಿವುದು ಮಹಾತ್ಮರಿ। ಗಂಗವಿದು ಮಧ್ಯಮರು ಕರ್ಣಪ
> ಥಂಗಳಲಿ ಗೋಚರಿಸಲರಿವುದು ಲೋಕವೃತ್ತಿಯಿದು
> ಕಂಗಳಲಿ ಕಂಡರಿವರಧಮರು। ಕಂಗಳಲಿ ಕಿವಿಗಳಲಿ ಮೇಣ್ ಪರಿ
> ಯಿಂಗಿತವನರಿಯದ ಜಡಾತ್ಮನು ಚೈದ್ಯನೃಪ[3]

ಎಂದು ಅವನಿಗೆ ಕೊನೆಯೆಚ್ಚರಿಕೆ ನೀಡುತ್ತಾನೆ.

ಸಹನೆ

ಸಮಾಜದ ಸ್ವಾಸ್ಥ್ಯಕ್ಕಾಗಿ ಮನುಷ್ಯನಲ್ಲಿರಬೇಕಾದ ಮತ್ತೊಂದು ಗುಣವೆಂದರೆ ಸಹನೆ. ಅವನಲ್ಲಿರಬೇಕಾದದ್ದು ಹೇಡಿಯ ತಾಳ್ಮೆಯಲ್ಲ, ಮಹಾವೀರನ ತಾಳ್ಮೆ. ಶ್ರೀಕೃಷ್ಣ ಯೇಸು ಗಾಂಧೀಜಿ ಮೊದಲಾದವರ ಜೀವನ ಸಹನೆಗೆ ಸಾಕಾರ ಸಾಕ್ಷಿಯಾಗಿದೆ.

---

1 ಸಂಸ್ಕೃತಿ, ಪು. ೮೨; 2 ಈಶಾವಾಸ್ಯೋಪನಿಷತ್ತು, ೬; 3 ಸ ೯-೬೨

ಆದರಿಂದ—ಸರಲಾಭ ಏನು ಏನೋ ಗೊತ್ತಿಲ್ಲ—ಐಹಿಕ ಸಿದ್ಧಿಯಂತು ನಿಶ್ಚಿತ. ತಾನು ದಿವ್ಯಶಕ್ತಿ ಪರಿಪೂರ್ಣ, ತನ್ನ ಬಳಿ ದಿವ್ಯಾಸ್ತ್ರವಿದೆ ಎಂದು ಶ್ರೀಕೃಷ್ಣ ದೈತ್ಯಸಂಹಾರ ಕ್ಕಾಗಿ ದುಡುಕಲಿಲ್ಲ. ಸತ್ಯಾಗ್ರಹವೆಂಬುದು ಸಹನೆಯ ಮತ್ತೊಂದು ರೂಪ. ಸಂಖ್ಯಾ ಬಲವನ್ನು ನೆಮ್ಮಿ ಗಾಂಧೀಜಿ ಹಿಂಬಾಲಕರನ್ನು ಕೂಡಿಕೊಂಡು ಆಂಗ್ಲರ ಮೇಲೆ ಧಾಳಿ ನಡೆಸಿದ್ದರೆ ಎಲ್ಲರೂ ನಿರ್ನಾಮರಾಗುತ್ತಿದ್ದರು, ಸ್ವಾತಂತ್ರ್ಯಲಾಭ ಸ್ವರ್ಗಸ್ವಪ್ನವಾಗು ತ್ತಿತ್ತು. ತಲೆ ಬಲ್ಲಿತೆಂದು ಬಂಡೆಗೆ ತಾಟಿಸಲಾಗದು. ಶ್ರೀಕೃಷ್ಣ ಜರಾಸಂಧನಿಗಂಜಿ ದ್ವೀಪ ಹೊಕ್ಕದ್ದೂ ಉಂಟು. ನೂರು ತಪ್ಪು ಮಾಡುವತನಕ ಶಿಶುಪಾಲನನ್ನು ಸಹಿಸಿ ಕೊಂಡದ್ದುಂಟು. ಜರಾಸಂಧನನ್ನು ಭೀಮನಿಂದ ಕೊಲ್ಲಿಸಲಾಯಿತು. ಕೌರವ ತನ್ನನ್ನು ಬಯ್ದು ಬಂಧಿಸಲು ಹವಣಿಸಿದಾಗಲೂ ಸುದರ್ಶನವೆತ್ತಲಿಲ್ಲ. ಕಾಳಗ ಕೊಲೆಗಳಲ್ಲಿಯೇ ಮುಪ್ಪಾದ ಅವನು ತನ್ನ ಶೌರ್ಯ ಸಾಧನೆಗೆ ಪಾಂಡವರನ್ನು ಬಳಸಿಕೊಂಡದ್ದಾಯಿತು. ಶ್ರೀಕೃಷ್ಣ ವಿಜಯ ಸಹನೆಗೆತ್ತಿದ ಮಂಗಳಾರತಿಯಾಯಿತು.

ಆತ್ಮಪ್ರತ್ಯಯ

ಭಾರತದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಉತ್ತರ ಹೊರತಾಗಿ ಸ್ಪಷ್ಟವಾಗಿ ಕಾಣುವ ಗುಣವೆಂದರೆ ಆತ್ಮಪ್ರತ್ಯಯ. ಅದು ವೀರ ಹಾಗೂ ಸಾಹಸಯುಗದ ಸಾಮಾನ್ಯ ಲಕ್ಷಣ. ಶ್ರೀಕೃಷ್ಣ ಪಾಂಡವರು ಯುದ್ಧಕ್ಕೊಗ್ಗದಿದ್ದರೆ ತನ್ನ ತಂದೆ ಮಕ್ಕಳ ಮತ್ತು ಸಹದೇವನ ಸಹಾಯದಿಂದಲೇ ಕೌರವವಂಶವನ್ನು ನಿರ್ಮೂಲ ಮಾಡುವಂಥ ಆತ್ಮಪ್ರತ್ಯಯ ದ್ರೌಪದಿ ಯಂಥ ಸ್ತ್ರೀಯ ಧಮನಿ ಧಮನಿಗಳಲ್ಲಿ ಹರಿಯುತ್ತಿದ್ದ ಕಾಲವದು. ಆತ್ಮಪ್ರತ್ಯಯ ಮತ್ತು ಆತ್ಮಗೌರವವಿಲ್ಲದ ಜನ ಷಂಡರಾಗುತ್ತಾರೆ, ಪಶುಗಳಾಗುತ್ತಾರೆ. ಆಗವರು ಪರನೇಯ ಬುದ್ಧಿವಶರಾಗಿ ಗುಲಾಮರಾಗುತ್ತಾರೆ. ಸಾಗರವನ್ನು ಕುಡಿಯುತ್ತೇನೆಂಬ, ಹಿಮಾಲಯವನ್ನು ಮುನ್ನೂಕುತ್ತೇನೆನ್ನುವ, ನಕ್ಷತ್ರಗಳನ್ನು ಗುಡಿಸುತ್ತೇನೆನ್ನುವ ಕೆಚ್ಚು ನೆಚ್ಚುಗಳು ಮಾನವನ ವಿಕಾಸಕ್ಕೆ ಕಾರಣವಾಗುತ್ತವೆ. ಆ ಕೆಚ್ಚುನೆಚ್ಚುಗಳಿಲ್ಲದ ಮಾನವ ಸತ್ತಂತೆಯೇ ಸರಿ. ಈ ಆತ್ಮಪ್ರತ್ಯಯದ ಸ್ವರೂಪವನ್ನು ಸೂಚ್ಯವಾಗಿ ತೋರಿ ಸುವ ಸಲುವಾಗಿ ಒಂದು ಪದ್ಯವನ್ನಿಲ್ಲಿ ಉದ್ಧರಿಸಲಾಗಿದೆ :

> ಬವರವಾದರೆ ಹರನ ವದನಕೆ । ಜವರ ತಹೆನವಗಡಿಸಿದರೆ ವಾ
> ಸವನ ಸದೆವೆನು ಹೊಕ್ಕಡಹುದೆನಿಸುವೆನು ಭಾರ್ಗವನ
> ಜವನ ಜವಗೆಡಿಸುವೆನು ಸಾಕಿ । ನ್ನಿವರವರಲೇನರ್ಜುನನು ಮಾ
> ಧವನು ಮುನಿವಡೆ ಗೆಲುವೆನಂಜದೆ ರಥವ ಹರಿಸು[1]

ಎಂದು ಅಭಿಮನ್ಯು ತನ್ನ ಸಾಮರ್ಥ್ಯವನ್ನು ಹೆಸರಿಸಿದರೆ, "ಮುನಿವೆನಾದರೆ ಕೋಟಿ ಕೃಷ್ಣಾರ್ಜುನರ ಕೊಂಬೆನೆ"[2] ಎಂದು ಕರ್ಣ ಉದ್ಘೋಷಿಸುತ್ತಾನೆ. ರಣರಂಗದಲ್ಲಿ ಶತ್ರು

---

[1] ದ್ರೋ ೪-೫೬ ; [2] ಕ ೯-೧೮

ವಿಗೆದುರಾಗಿ ನಿಂತಾಗ ಇಂಥ ವೀರವಾಕ್ಯಗಳು ಪುಂಖಾನುಪುಂಖವಾಗಿ ಹೊಮ್ಮುತ್ತವೆ. ಅನ್ಯಸಮಯ ಸಂದರ್ಭಗಳಲ್ಲಿ ಆತ್ಮಪ್ರಶಂಸೆಯಂತೆ ತೋರಬಹುದಾದ ಈ ವೀರವಾಣಿಗಳು ಸೂಕ್ತ ಸಮಯದಲ್ಲಿ ಆತ್ಮಪ್ರತ್ಯಯ ಪ್ರಚೋದಕವಾಗುತ್ತವೆ.

ಸಾಧಾರಣ ನೀತಿ

ಬಾಳಿನೊಡನೆ ಬಾಳಿನಿಂದ ಬಾಳಿಗಾಗಿ ನೀತಿ ಉಗಮಗೊಂಡಿತು; ಸಾಮಾಜಿಕ ಜೀವನದೊಡನೆ ಆಗಾಗಿನ ಪರಿಸರ ಅಗತ್ಯಗಳಿಗೆ ತಕ್ಕಂತೆ ಅದು ಪರಿವರ್ತನೆಗೊಳ್ಳುತ್ತ, ಬೇಡವಾದ್ದನ್ನು ಬಿಟ್ಟು ಬೇಕಾದದ್ದನ್ನುಳಿಸಿಕೊಂಡು, ಹೊಸತನ್ನು ಸ್ವೀಕರಿಸಿಕೊಂಡು ವಿಕಾಸವಾಗತೊಡಗಿತು. ಅದು ಮಾನವ ಮನಸ್ಸಿನ ವರ್ತನೆಗಳಿಗೆ ಕನ್ನಡಿಯಾಗಿರುವು ದಲ್ಲದೆ ಸಂಸ್ಕೃತಿಗೆ ದೀಪಿಕೆಯಾಗಿದೆ. ಅದು ಮೊದಮೊದಲು ಪ್ರಜ್ಞಾಪೂರ್ವಕವಾದ ಚಿಂತನೆಯಿಂದ ಸಂಸಿದ್ಧವಾದದ್ದಲ್ಲ ಎಂಬುದು ತಜ್ಞರ ಮತ. ಪ್ರಾಣಿಸಮಾಜದ ವರ್ತನೆ ಮನುಷ್ಯನ ನೈತಿಕಪ್ರಜ್ಞೆಯನ್ನು ಕೆರಳಿಸಿತು. ಜೇನುಹುಳು ದುಡಿಮೆಯ ಮಹಿಮೆಯನ್ನು, ಇರುವೆ ಒಗ್ಗಟ್ಟು ಮತ್ತು ಸಹಕಾರಗಳ ತತ್ವವನ್ನು, ನಾಯಿ ಕೃತಜ್ಞತೆಯನ್ನು, ಹಕ್ಕಿ ವಸತಿಪ್ರಜ್ಞೆಯನ್ನು ಹೀಗೆ ಒಂದೊಂದು ಪ್ರಾಣಿಪಕ್ಷಿ ಒಂದೊಂದು ರೀತಿಯ ಜೀವನ ವಿಧಾನವನ್ನೂ ನೀತಿ ನಿಯಮಗಳನ್ನೂ ಅವನಿಗೆ ಕಲಿಸಿದ್ದುಂಟು. ಒಂದು ಗುಂಪಿನ ಹಿರಿಯನ ಆಡಿದ ನುಡಿ, ನಡೆದ ದಾರಿ ಇತರರಿಗೆ ಆದರ್ಶವಾಗುತ್ತದೆ. ಗುಂಪಿನ ಜನ ಅದನ್ನೊಪ್ಪಿಕೊಂಡಾಗ, ಮುಂದಿನ ಪೀಳಿಗೆ ಅದನ್ನು ಪರಿಪಿದಾಗ, ಕೊನೆಗೆ ಅದು ಸಾಮೂಹಿಕ ತತ್ವ ಅಥವಾ ವರ್ತನೆಯಾಗಿ ಪರಿಣಾಮ ಹೊಂದಿದಾಗ ನೀತಿಯಾಗುತ್ತದೆ. ಬರಬರುತ್ತ ಈ ನೈತಿಕ ಪ್ರಜ್ಞೆ ಮಾನವನ ಬದುಕಿನ ಅವಿಭಾಜ್ಯಾಂಶವಾಗುತ್ತದೆ. ಯಾವುದಾದರೂ ವಸ್ತುಸಂಗತಿ ಅಥವಾ ತತ್ವದಲ್ಲಿ ಬಹುಜನ ಕಲ್ಯಾಣಕಾರಿಯಾದ ಅಥವಾ ಬಹುಜನಸಮ್ಮತವಾದ ಗುಣವಿದೆಯೋ ಅದನ್ನು ಮೌಲ್ಯವೆಂದು ಕರೆಯುತ್ತೇವೆ. ಇಬ್ಬರು ಅಥವಾ ಹೆಚ್ಚು ಜನ ಒಂದು ಕಡೆ ನೆಲಸುವಲ್ಲಿ ನೈತಿಕ ಮೌಲ್ಯಗಳ ಅಗತ್ಯ ಬೀಳುತ್ತದೆ. ನೀತಿ ಅವರನ್ನು ಕೂಡಿಸುವ, ಮತ್ತು ಅವರ ವ್ಯವಹಾರಗಳನ್ನು ನಿರ್ಣಯಿಸುವ ಸೂತ್ರವಾಗುತ್ತದೆ. ಸಮಾಜದ ಸಂಸ್ಥಿತಿ ಸಾಮರಸ್ಯ ಮತ್ತು ಸುಭದ್ರತೆಗಳ ರಕ್ಷಣೆ ಇವುಗಳ ಪಾಲನೆಯನ್ನವಲಂಬಿಸುತ್ತದೆ. ಸಮಾಜ ಸಂಕೀರ್ಣಗೊಂಡಂತೆಲ್ಲ, ನೂತನ ಜ್ಞಾನಶಾಖೆಗಳು ಹುಟ್ಟಿಕೊಂಡಂತೆಲ್ಲ, ಜೀವನವಿಧಾನ ಬದಲಾವಣೆಗೊಂಡಂತೆಲ್ಲ ಹೊಸ ಮೌಲ್ಯಗಳು ರೂಢಿಗೆ ಬರುತ್ತವೆ. ನೈತಿಕ ಪ್ರಜ್ಞೆಯ ಪರಿಣಾಮವಾಗಿ ರೂಪಗೊಳ್ಳುವ ಮನುಷ್ಯನ ಮನೋಧರ್ಮ, ವರ್ತನೆ, ಮತ್ತು ಅಭ್ಯಾಸಗಳ ಮೊತ್ತವನ್ನು ಶೀಲವೆಂದು ಹೆಸರಿಸುತ್ತೇವೆ. ಈ ಶೀಲದ ಸಲ್ಲಕ್ಷಣಗಳನ್ನು ಸದ್ಗುಣಗಳೆಂದೂ ಅಸಲ್ಲಕ್ಷಣಗಳನ್ನು ದುರ್ಗುಣಗಳೆಂದೂ ಕರೆಯುವುದುಂಟು. ವ್ಯಕ್ತಿಯ ಅಥವಾ ಸಮಾಜದ ಶ್ರೇಯಸ್ಸಿಗೆ ಕಾರಣವಾಗುವಂಥವನ್ನು ಸದ್ಗುಣಗಳೆಂದೂ, ಹಾನಿಗೆ ನಿಮಿತ್ತವಾಗುವಂಥ

ವನ್ನು ದುರ್ಗುಣಗಳೆಂದೂ ನಿರ್ದೇಶಿಸಬಹುದು. ಈ ಹಿಂದೆ ಇವುಗಳಲ್ಲಿ ಕೆಲವನ್ನು ಮಾತ್ರ ವಿವರಿಸಿಜೆ.

"ನಮ್ಮ ಲೋಕಪ್ರಸಂಗಗಳಲ್ಲಿ ಸ್ವಪ್ರಯುಕ್ತ ಅನ್ಯಪ್ರಯುಕ್ತ ದೃಷ್ಟಿಗಳಿಂದ ಉಭಯ ಹಿತಾನುಕೂಲವೆಂದು ಗೊತ್ತಾದ ಚರ್ಯಾವಿಧಾನವೇ ನೀತಿ. ಮೊದಲು ನೀತಿಯ ತಳಪಾಯ ಗಟ್ಟಿಯಾಗಿದ್ದರೆ ಅದರ ಮೇಲೆ ಎದ್ದುನಿಲ್ಲತಕ್ಕುವು ಸಂಸ್ಕೃತಿಯ ಕಲಶ ತೋರಣ ಸಿಂಗಾರಗಳು"[1] ಅನೇಕ ನೈತಿಕ ಮೌಲ್ಯಗಳ ಮೊತ್ತವೇ ಸಂಸ್ಕೃತಿ. ನೀತಿ ತತ್ವಗಳನ್ನು ಪಟ್ಟಿಮಾಡುವ ಪದ್ಯಗಳು ಭಾರತದಲ್ಲಿ ಗೊಂಚಲು ಗೊಂಚಲಾಗಿ ಬರುತ್ತವೆ. ನಾರದ ವೇದವ್ಯಾಸ ಮಾರ್ಕಂಡೇಯ ವಿದುರ ಸನತ್ಸುಜಾತರಾದಿಯಾಗಿ ಎಲ್ಲರೂ ನೀತಿ ಯನ್ನು ಬೋಧಿಸುವವರೇ. ಯಕ್ಷಪ್ರಶ್ನೆಯಲ್ಲಿ ಹಾಗೂ ನಹುಷ ಧರ್ಮರಾಯರ ಸಂವಾದದಲ್ಲಿ ನೈತಿಕ ವಿಚಾರಗಳು ಹೆಪ್ಪುಗಟ್ಟಿಕೊಂಡಿವೆ.[2] ಇವುಗಳ ಜತೆಗೆ ಶಕುನಿ ನೀತಿಯಿದೆ. ಅಷ್ಟೇ ಅಲ್ಲ, ಪಾತ್ರಗಳ ಸಂಭಾಷಣೆಗಳಲ್ಲಿ, ಅವರ ಪರಸ್ಪರ ಪ್ರಶಂಸೆ ಮೂದಲಿಕೆಗಳಲ್ಲಿ, ಅವರ ಚರ್ಯೆಗಳಲ್ಲಿ ನೀತಿಯು ಹೊಗರು ಮುಕ್ಕುಳಿಸುತ್ತದೆ. ಆ ಎಲ್ಲ ಪದ್ಯಗಳ ಉದ್ಧರಣೆ ಮತ್ತು ವ್ಯಾಖ್ಯಾನ ಪ್ರಕೃತೋದ್ದೇಶವಲ್ಲದ್ದರಿಂದ ಕೇವಲ ನಿದರ್ಶ ನಾರ್ಥವಾಗಿ ಒಂದೆರಡನ್ನು ಮಾತ್ರ ಉದ್ಧರಿಸಿ ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ವಿತಥ ಭಾಷಿತವನ್ಯವಿತ್ತಾ । ಹೃತಿಪರವ್ಯಾಪಾದವಾತ್ಮ
ಸ್ತುತಿ ಪರಸ್ತ್ರೀವ್ಯಸನವತ್ಯಾಚಾರ ಬಕವೃತ್ತಿ
ಕೃತವಿನಾಶನ ಡಂಭ ಹಿಂಸಾರತಿ ನಿಜಾನ್ವಯ ಧರ್ಮಕರ್ಮ
ಚ್ಯುತಿಗಳಿವು ದೋಷಾಂಕುರಂಗಳು.[3]

ಇಂಥ ದುರ್ಗುಣಗಳ ವರ್ಜನ ಸದ್ಗುಣಗಳ ಸಂಸ್ಥಾಪನೆಗೆ ನಾಂದಿಯಾಗುತ್ತವೆ.

ಕ್ರೂರರಿಗೆ ಶಠರಿಗೆ ವೃಥಾಹಂ। ಕಾರಿಗಳಿಗತಿ ಕುಟಿಲರಿಗೆಯುಪ
ಕಾರಿಯಪಘಾತರಿಗೆ ಭೂತದ್ರೋಹಿ ಜೀವರಿಗೆ
ಜಾರರಿಗೆ ಜಡರಿಗೆ ನಿಕೃಷ್ಟಾಚಾರರಿಗೆ ಪಿಸುಣರಿಗೆ ಧರ್ಮವಿ
ದೂರರಿಗೆ ಕಲಿಪಾರ್ಥ ಕೇಳ್ ಪರಲೋಕವಿಲ್ಲೆಂದ[4]

ಇವು ಅರ್ಜುನನಿಗೆ ಮಾತ್ರವಲ್ಲ ಇಡೀ ಮಾನವಕೋಟಿ ಅನುಸರಿಸಬೇಕಾದ ನೀತಿ ಸೂತ್ರಗಳು.

---

[1] ಸಂಸ್ಕೃತಿ, ಪು. ೬೫. [2] ನೀತಿಸಂಬಂಧವಾದ ಪದ್ಯಗಳೆಲ್ಲ ನಾರಣಪ್ಪ ಬರೆದುವೋ, ಅಥವಾ ಕೆಲವು ಇತರರು ರಚಿಸಿ ಸೇರಿಸಿದುವೋ ಹೇಳಲಾಗದು. ಒಂದು ಬಾರಿ ಗದುಗಿನ ಭಾರತವ ನ್ನೋದಿ ಮುಗಿಸಿದವನು ಅಷ್ಟೇ ಜೋರಿನ ಕೆಲವು ಪದ್ಯಗಳನ್ನು ಕಟ್ಟಿ ಸೇರಿಸುವುದು ಕಠಿನವಾಗು ವುದಿಲ್ಲ. ಒಂದು ಕಾವ್ಯ ಜನಪ್ರಿಯವಾಯಿತೆಂದರೆ ಮೂಲದ್ದೆಂದೇ ತೋರುವ ಪ್ರಕ್ಷಿಪ್ತಗಳು ಬಂದು ಹುದುಗಿಕೊಂಡು ಪ್ರವಾಹದಲ್ಲಿ ವಿಲೀನಗೊಳ್ಳುವುದುಂಟು. ಸರ್ವಜ್ಞನ ಪದಗಳೂ ಈ ಗುಂಪಿಗೆ ಸೇರುತ್ತವೆ; [3] ಅ ೧೫-೧೪; [4] ಅ ೪-೨೪

ಪರಸ್ತ್ರೀವ್ಯಾಮೋಹದಿಂದ ಸಮಾಜದಲ್ಲಿ ಅಶಾಂತಿಯುಂಟಾಗುತ್ತದೆನ್ನುವುದು ಲೋಕ ವಿದಿತವಾದ ಸಾರ್ವಕಾಲಿಕ ಸತ್ಯ. ಹೆಣ್ಣಿನ ದೆಸೆಯಿಂದಾಗಿ ಜಗತ್ತಿನಲ್ಲೆಲ್ಲ ಯುದ್ಧಗಳು ಜರುಗಿ, ಜನಸಾಮಾನ್ಯರು ನಾನಾಹಿಂಸೆಗಳನ್ನನುಭವಿಸಿದ್ದುಂಟು. ಇಲಿಯಡ್ ರಾಮಾಯಣಗಳೇ ಅಂಥ ಅನಿಷ್ಟಗಳಿಗೆಲ್ಲ ಜ್ವಲಂತ ಸಾಕ್ಷಿಯಾಗುಳಿದಿವೆ. ಲೈಂಗಿಕ ಸ್ವಾಚ್ಛಂದ್ಯದಿಂದಾಗಿ ಪಾಶ್ಚಾತ್ಯದೇಶಗಳಲ್ಲಿ ಅನೇಕ ರಾಜಕೀಯ ಧುರೀಣರು ತಮ್ಮ ಭವಿಷ್ಯವನ್ನು ಹಾಳುಮಾಡಿಕೊಂಡಿರುವ ಸುದ್ದಿ ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುತ್ತದೆ. "ಪರಸತಿಗಳುಪಿದೊಡೆ ಪಾತಕ ದೊರಕುವುದು, ನಿಜಲಕ್ಷ್ಮಿ ತೊಲಗುಗು, ಧರೆಯೊಳಗ್ಗದ ಕೀರ್ತಿ ಮಾಸುಗು, ಗತಿಗೆ ಕೇಡಹುದು"[1] ಎಂಬ ದ್ರೌಪದಿಯ ಮಾತು ಇಂದಿಗೂ ಪೂರ್ಣ ಸತ್ಯವೆಂಬುದು ಅಲ್ಲಿಯ ಪ್ರಕರಣಗಳಿಂದ ಖಚಿತವಾಗುತ್ತದೆ. ನಮ್ಮ ದೇಶದಲ್ಲಿ ಅಂಥ ಪ್ರಕರಣಗಳು ನಡೆಯುತ್ತಿಲ್ಲವೆಂದಲ್ಲ. ಅಲ್ಲಿಯ ಜನ ನಮಗಿಂತ ಹೆಚ್ಚು ಜಾಗರೂಕರಾಗಿದ್ದಾರಷ್ಟೆ. ಈ ವ್ಯಸನದಿಂದ ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಸಾಂಸಾರಿಕ ಕ್ಷೇತ್ರದಲ್ಲಿಯೂ ಕೋಲಾಹಲವುಂಟಾಗಿ ಹಾಲಾಹಲವುಬ್ಬಿಸಿರುವುದುಂಟು. ಜಾನಪದ ಸಂಸ್ಕೃತಿಯಲ್ಲಿಯೂ ಲೈಂಗಿಕ ಲಂಪಟತ್ವದ ಖಂಡನೆಯಿದೆ. ಜಿತೇಂದ್ರಿಯತ್ವಕ್ಕೆ ಪರಮಾದರ್ಶ ವ್ಯಕ್ತಿಯೆಂದರೆ ಭೀಷ್ಮ. ತಂದೆಯ ಬಯಕೆಯನ್ನೀಡೇರಿಸುವ ಸಲುವಾಗಿ ಆಜೀವ ಬ್ರಹ್ಮಚರ್ಯವ್ರತದ ದೀಕ್ಷೆಯನ್ನು ಕೈಕೊಂಡು ಯಶಸ್ವಿಗೊಳಿಸಿದ್ದರಿಂದ ಅವನು ಇಚ್ಛಾಮರಣಿಯಾಗುತ್ತಾನೆ; ಶ್ರೀಕೃಷ್ಣನನ್ನು ಸಹ ಬೆರಗುಗೊಳಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಶ್ರೀಕೃಷ್ಣ ಅವತಾರಪುರುಷನೆಂದು ಗಣಿಸುವುದಾದರೆ, ಭಾರತದಲ್ಲಿ ಭೀಷ್ಮನಿಗಿಂತ ಮಿಗಿಲಾದ ಮಹಾತ್ಮ ಮತ್ತೊಬ್ಬನಿಲ್ಲ. ವಂಶದ ಕುಡಿಯನ್ನು ಬೆಳೆಸುವ ಸಲುವಾಗಿಯಾದರೂ ಮದುವೆಯಾಗುವಂತೆ ಯೋಜನಗಂಧಿ ಒತ್ತಾಯಪಡಿಸಿದಾಗ ಅವನು ಶಿಥಿಲಸಂಕಲ್ಪನಾಗುವುದಿಲ್ಲ. ತನ್ನ ಸಂಕಲ್ಪ ಸಂರಕ್ಷಣೆಗಾಗಿ ತನ್ನ ಗುರು ಪರಶುರಾಮನೊಡನೆ ಕಾಳಗಕ್ಕೂ ಸಿದ್ಧನಾಗುವ ಧೀರನವನು. "ಸತಿಯನೊಲ್ಲೆನು, ಬ್ರಹ್ಮಚರ್ಯಸ್ಥಿತಿಗೆ ತಪ್ಪುವನಲ್ಲ, ನೀವನುಚಿತವ ನೆನೆದರೆ ನಡೆಯಿ ಕೊಟ್ಟೆನು ಕಾಳಗವ ನಿಮಗೆ"[2] ಎಂದು ಗುರುವನ್ನು ಗೆದ್ದ ಶಿಷ್ಯೋತ್ತಮನವನು. ಅವನಿಗೆ ಸಮಗೈಯಲ್ಲದಿದ್ದರೂ, ಈ ಸಂದರ್ಭದಲ್ಲಿ ನೆನೆಯಬಹುದಾದ ಮತ್ತೊಬ್ಬ ವ್ಯಕ್ತಿ ಅರ್ಜುನ. ಊರ್ವಶಿ ದೇವಲೋಕದ ವೇಶ್ಯೆ. ಪ್ರಾಯಶಃ ಆ ಲೋಕದ ಮರ್ಯಾದೆಗನುಗುಣವಾಗಿ, ದೇವೇಂದ್ರನಿಂದ ಆಜ್ಞಪ್ತಳಾಗಿ, ತಾನಾಗಿಯೇ ಬಳಿಬಂದ ಅವಳನ್ನು ಅವನು ವಿನಯದಿಂದ ನಿರಾಕರಿಸುತ್ತಾನೆ. ರಣರಂಗದಲ್ಲಿ ಹೋರಾಡುವುದೇ ಶೌರ್ಯವಲ್ಲ; ಒಂದು ರೀತಿಯಲ್ಲಿ ಅದು ಪಾಶವಿಕವಾದುದು. ಇಂದ್ರಿಯವಿಜಯವೇ ನಿಜವಾದ ಶೌರ್ಯಕ್ಕೆ ಕಳಶವಾಗುತ್ತದೆ, ಸಂಕೇತವಾಗುತ್ತದೆ. "ಬೇಟವೇ ಪರವಧುವಿನಲಿ, ಕೈಮಾಟವೇ ಪರವಿತ್ತದಲಿ, ತೆಗೆದೋಟವೇ ಕದನದಲಿ, ಗುಣವೇ ರಾಜಪುತ್ರರಿಗೆ"[3] "ಮೇಲೆಯಾರೈವನೆ ಸುತೃಷ್ಣಾಲೋಲಚಿತ್ತನು"[4] "ನಾರಿಯರ ಕಡೆಗಣ್ಣ ಹೊಯ್ಲಿನ ಧಾರೆಗಳುಕದನಾವನಾತನೆ

[1] ವಿ ೨-೨೧ ; [2] ಅ ೨-೩೬ ; [3] ವಿ ೨-೪೪ ; [4] ಅ ೨೩-೨೫

ಧೀರ"[1] ಪರಸತಿಯೆ ನಿಜ ಜನನಿ"[2] "ಎಲ್ಲಿಹುದು ಪರಸತಿಯರಂಜಿಕೆಯಲ್ಲಿಹುದು
ವಿಜ್ಞಾನ"[3]—ಇಂಥ ಆಣಿ ನುಡಿಗಳು ಮೇಲಿಂದ ಮೇಲೆ ಬರುವುದನ್ನು ಗಮನಿಸಿದಾಗ,
ಗಂಡಸಿನ ಪತನಕ್ಕೆ ಇಂದ್ರಿಯ ದೌರ್ಬಲ್ಯವೇ ಮುಖ್ಯ ಕಾರಣವೆಂದೂ, ಇಂದ್ರಿಯ
ವಿಜಯಿ ಸರ್ವತ್ರ ಮಾನ್ಯನೆಂದೂ ಭಾರತ ಒತ್ತಿ ಹೇಳುವಂತಿದೆ.

ನ್ಯಾಯ ಅಥವಾ ಧರ್ಮ, ವಿವೇಕ, ಧೈರ್ಯ ಮತ್ತು ಸಂಯಮ ಉತ್ತಮ
ಮಾನವನ ಮೂಲಭೂತ ಸದ್ಗುಣಗಳೆಂದು ಪ್ರಾಚೀನ ಗ್ರೀಕರ ಅಭಿಪ್ರಾಯವಾಗಿತ್ತು.
ಬುದ್ಧಿ ಭಾವ ಬಯಕೆಗಳ ಹಾಳತವಾದ ಸಾಮರಸ್ಯವೇ ಸಜ್ಜನನ ಲಕ್ಷಣವೆಂದು
ಅರಿಸ್ಟಾಟಲ್ ತಿಳಿದಿದ್ದ. ಸತ್ಯ ಔದಾರ್ಯ ಸ್ನೇಹ ಮೊದಲಾದ ಇತರ ಗುಣಗಳನ್ನವರು
ಮರೆತಿರಲಿಲ್ಲ. ಉಳಿದುವು ಮೇಲಣ ನಾಲ್ಕು ಸದ್ಗುಣಗಳಿಗೆ ಪೂರಕವಾಗಿರುತ್ತವೆಂಬುದು
ಅವರ ಮತ. ರಾಗಪ್ರವೃತ್ತಿ ಮತ್ತು ಮಮತೆಗಳಿಗೂ, ವಿವೇಕ ಅಂತರ್ಬೋಧೆ ಮತ್ತು
ಸಮಾಜಕಲ್ಯಾಣಾಕಾಂಕ್ಷೆಗಳಿಗೂ ನಡುವೆ ನಡೆಯುವ ಸಂಘರ್ಷವೇ ನೈತಿಕ ಜೀವನ.
ಲೋಕಹಿತ ಮತ್ತು ವೈಯಕ್ತಿಕ ಶ್ರೇಯಸ್ಸುಗಳ ದೃಷ್ಟಿಯಿಂದ ರಾಗೋದ್ರೇಕ ಮತ್ತು
ಮಮತೆಗಳನ್ನು ಹದವರಿತು ವಿವೇಕಯುತವಾಗಿ ಸಮನ್ವಯಗೊಳಿಸುವ ಅಥವಾ
ನಿಯಂತ್ರಿಸುವ ವಿಧಾನವೇ ಸಂಯಮ. ಎಲ್ಲ ಬಗೆಯ ಶೀಲ ಸದ್ಗುಣಗಳಿಗೆ ಮತ್ತು
ನೈತಿಕತೆಗೆ ಸಂಯಮವೇ ಆಧಾರ ಹಾಗೂ ಜೀವಸೂತ್ರ. ಅನಿಯಂತ್ರಿತ ವಿದ್ಯುತ್
ಪ್ರವಾಹ ಅಪಾಯಕಾರಿ; ಆದರ ನಿಯಂತ್ರಣದಿಂದ ಬಿಸಿ ತಂಪುಗಳೆರಡನ್ನೂ ಸಾಧಿಸ
ಬಹುದು. ಅಂತೆಯೇ ರಾಗಪ್ರವೃತ್ತಿಗಳನ್ನು ಸ್ವೇಚ್ಛೆಯಾಗಿ ಹರಿಸಿದರೆ ಅನಾಹುತ
ಗಳೊದಗುತ್ತವೆ; ಅವುಗಳನ್ನು ನಿಯಂತ್ರಿಸಿದ್ದಾದರೆ ಎಂಥ ಸಿದ್ಧಿಯನ್ನಾದರೂ ಪಡೆಯ
ಬಹುದು. ಮಾನವಶಕ್ತಿ ಅಮೇಯವಾದದ್ದು. ಅವನ ಸಾಂಸ್ಕೃತಿಕ ಸೃಷ್ಟಿಯೇ ಅದಕ್ಕೆ
ನಿದರ್ಶನ. ಅದು ದುರ್ವ್ಯಯವಾಗದಂತೆ ಜಾಗರೂಕತೆಯಿಂದ ರಕ್ಷಿಸಿಕೊಂಡು, ಆದರ್ಶ
ಸಾಧನೆಗಳಿಗೆ ಬಳಸಿಕೊಂಡದ್ದಾದರೆ, ವಿಜ್ಞಾನದಿಂದ ಕಸವನ್ನು ಕಸವರಗೊಳಿಸುವಂತೆ
ಸುಜ್ಞಾನದಿಂದ ತಾಮಸಗುಣಗಳನ್ನು ಸಾತ್ವಿಕಗುಣಗಳನ್ನಾಗಿ ಪರಿವರ್ತಿಸಿದ್ದಾದರೆ ಅವನಿಗೆ
ಶ್ರೇಯಸ್ಸೊದಗುತ್ತದೆ, ಸಮಾಜದಲ್ಲಿ ಶಾಂತಿ ಸ್ಥಿತಗೊಳ್ಳುತ್ತದೆ. ಹಸಿವು ನೀಗಿಕೆಗೆಷ್ಟು
ಬೇಕೋ ಅಷ್ಟು ತಿನ್ನುವುದು ಸರಿ; ಹೆಚ್ಚು ತಿಂದರೆ ಹೊಟ್ಟೆಬಾಕತನವಾಗುತ್ತದೆ:
ಮೈಮುಚ್ಚಲಿಕ್ಕೆ ಚಳಿಗಾಳಿಯಿಂದ ರಕ್ಷಿಸಲಿಕ್ಕೆ ಎಷ್ಟು ಬಟ್ಟೆ ಬೇಕೋ ಅಷ್ಟು ಪಡೆಯ
ಬೇಕಾದ್ದು ನ್ಯಾಯ; ವಸತಿಯೂ ಅಷ್ಟೆ. ಅಗತ್ಯಮೀರಿ ವೆಚ್ಚಮಾಡುವುದಾಗಲೀ
ಸಂಗ್ರಹಮಾಡುವುದಾಗಲೀ ಸಾಧುವಲ್ಲ. ಭಾವರಾಗಗಳು ಹಿಡಿತದಲ್ಲಿರುವಾಗ ಮನುಷ್ಯ
ಹೇಳಿದಂತೆ ಕೇಳುತ್ತವೆ; ಅವನ ಬದುಕಿಗೆ ಅವು ಅತ್ಯವಶ್ಯವೂ ಅಹುದು; ಅವು ಹದ್ದು
ಮೀರಿದಾಗ ಅವನು ಅವುಗಳಿಗೆ ಗುಲಾಮನಾಗುತ್ತಾನೆ. ಅವು ಅತಿರೇಕಕ್ಕೆ ಹೋಗದಂತೆ
ತಡೆದು, ಅವುಗಳ ಹೊಂದಾಣಿಕೆಯನ್ನು ಸಾಧಿಸುವುದೇ ಸಂಯಮ; ಸಂಯಮವೇ

---

1 ಅ ೧೩-೫೫; 2 ಅ ೩ ೨೬; 3 ಉ ೩-೩೦

ಸಂಸ್ಕೃತಿ, ಅಸಂಯಮವೇ ವಿಕೃತಿ, ಮೂಲ ರಾಗಗಳೇ ಪ್ರಕೃತಿ. ಮೇಲೆ ನಿರೂಪಣೆ ಗೊಂಡಿರುವ ಸದ್ಗುಣಗಳೆಲ್ಲ ಸಂಯಮಬದ್ಧವಾದುವೆಂಬುದನ್ನು ಮರೆಯಲಾಗದು.

ಸಂಬಂಧಗಳು

ದೊಡ್ಡದೊಂದು ಸಮಾಜದ ಜನಜೀವನವನ್ನು ವಸ್ತುವಾಗುಳ್ಳ ಕತೆ ಭಾರತ. ಆದ್ದರಿಂದಲೇ ಈ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ ಸಾಂದ್ರವಾಗಿ ವ್ಯಕ್ತಗೊಂಡಿದೆ; ಸಮಾಜದ ವಿವಿಧ ಮುಖಗಳು ಮೂರ್ತಿಮತ್ತಾಗಿ ಚಿತ್ರಣಗೊಂಡಿವೆ. ನಿರ್ದಿಷ್ಟ ಭೌಗೋಲಿಕ ಸೀಮೆಯೊಳಗಿನ, ಅಂಗೀಕೃತ ಕಟ್ಟುಪಾಡುಗಳಿಂದ ಬದ್ಧವಾದ, ಸಂಪ್ರದಾಯಶೀಲವಾದ, ನಾನಾ ಬಾಂಧವ್ಯಗಳನ್ನೊಳಗೊಂಡ ವ್ಯವಸ್ಥೆಯೇ ಸಮಾಜ. ಸಮಾಜವೆಂದ ಕೂಡಲೇ ಪ್ರಥಮತಃ ಕೆಲವು ಸುಪರಿಚಯದ ಸಂಬಂಧಗಳು ಕಣ್ಣಿಗೆ ಬೀಳುತ್ತವೆ. ಇವು ರಕ್ತಸಂಬಂಧ, ಮಾನಸಿಕಸಂಬಂಧ ಮತ್ತು ವ್ಯವಹಾರಸಂಬಂಧ ವೆಂದು ವಿಂಗಡಣೆಗೊಳ್ಳುತ್ತವೆ. ವಾಣಿಜ್ಯಾದಿ ವ್ಯವಹಾರಗಳಲ್ಲಿ ಇಬ್ಬರು ಕೂಡಿಕೊಂಡಾಗ ವ್ಯವಹಾರ ಸಂಬಂಧವಾಗುತ್ತದೆ; ಗುರುಶಿಷ್ಯ ಹಾಗೂ ಸ್ನೇಹಬಾಂಧವ್ಯವೇ ಮಾನಸಿಕ ಸಂಬಂಧ. ಆನುವಂಶೀಯವಾಗಿಯೂ ವಿವಾಹದ ಮೂಲಕವಾಗಿಯೂ ಬೆಳೆದು ಬಂದಿರುವ ಸಂಬಂಧವನ್ನು ರಕ್ತಸಂಬಂಧವೆನ್ನಬಹುದು. ಭಾರತ ಪ್ರಧಾನವಾಗಿ ಸೋದರ ಕಲಹದ ಕತೆಯಾದುದರಿಂದ ಇಲ್ಲಿ ಬರುವ ಪಾತ್ರಗಳೆಲ್ಲ ಹೆಚ್ಚು ಕಡಮೆ ರಕ್ತಸಂಬಂಧಿಗಳೇ. ಪತಿ-ಸತಿ ; ತಾಯಿ-ಮಗ ; ತಂದೆ-ಮಗ ; ಅಣ್ಣ-ತಮ್ಮ, ಈ ಸಂಬಂಧಗಳೂ, ಇವುಗಳ ಜತೆಗೆ ಗುರು-ಶಿಷ್ಯ, ಒಡೆಯ-ಸೇವಕ, ಮಿತ್ರ–ಮಿತ್ರ ಸಂಬಂಧಗಳೂ ಇಲ್ಲಿ ನಿರೂಪಣೆಗೊಂಡಿವೆ. ಸಂಸಾರದ ಸ್ವಾರಸ್ಯ ಬಂಧುಗಳನ್ನವಲಂಬಿಸಿದೆ. ಅರಬರಕ್ಕೆ ಕಾಯಿಲೆ ಕಸಾಲೆಗಳಲ್ಲಿ ಅವರು ಬೇಕು. ಅವರಿಲ್ಲದೆ ಹಬ್ಬಹರಿದಿನ ಸೊಗಸುವುದಿಲ್ಲ. ಯುದ್ಧಕ್ಕೆ ಮುನ್ನ ತನ್ನ ಕಡೆ ಬರುವಂತೆ ಶಲ್ಯನನ್ನು ದುರ್ಯೋಧನ ಕೇಳಿಕೊಳ್ಳುತ್ತಾನೆ. ಆಗ ಶಲ್ಯ "ಎನಗೆ ನೀವಿತ್ತಂಡ ಸರಿ, ನಿಮ್ಮತ್ತ ಬಹೆನು."[1] "ಅಗಲಿದೆನು ಹಲಕಾಲವೈವರ ಮೊಗವನೀಕ್ಷಿಸಿ ಮರಳುವೆನು, ಬಂಧುಗಳ ದರುಶನ ಫಲವಲಾ ಸಂಸಾರ ತರುವಿಂಗೆ"[2] ಎಂದು ಹೇಳಿ ಪಾಂಡವರಲ್ಲಿಗೆ ಹೋಗುತ್ತಾನೆ.

ನಿಜವಾದ ಗುರುಶಿಷ್ಯರ ಸಂಬಂಧ ಅಲೌಕಿಕವಾದುದು. ನಶ್ವರ ದೇಹವನ್ನು ಕೊಟ್ಟವನು ತಂದೆಯಾದರೆ, ಶಾಶ್ವತವಾದ ಆತ್ಮದ ವಿಕಾಸಕ್ಕೆ ಇಂಬುಗೊಡುವವನು ಗುರು. ವಿದ್ಯೆಯನ್ನು ಕಲಿಸುವ ಮೂಲಕ ಶಿಷ್ಯನ ಭವಿಷ್ಯಕ್ಕೆ ಭದ್ರವಾದ ಬುನಾದಿ ಹಾಕುವವನು ಗುರು. ನಿಜವಾದ ಗುರು ತನ್ನ ಶಕ್ತಿಯನ್ನೆಲ್ಲ ಶಿಷ್ಯನಿಗೆ ಧಾರೆಯೆರೆದು, ಅವನಿಂದ ಸೋಲೊಪ್ಪಿಕೊಳ್ಳಲಿಕ್ಕೂ ಸಿದ್ಧ. ಆದರೆ ಹೀನಕುಲದವನಿಗೆ ವಿದ್ಯೆ ಕಲಿಸುವುದಿಲ್ಲವೆನ್ನುವವನು ಶ್ರೇಷ್ಠನೆನಿಸಿಕೊಳ್ಳಲಾರ. ಗುರು ಯಾರು?

---

[1] ಉ ೨-೧೨ ; [2] ಉ ೨-೧೩

ಒಂದು ವರ್ಣವನರುಹಿದವ ಗುರು । ವೊಂದಪಾಯದಲುಳುಹಿದವ ಗುರು
ಬಂದ ವಿಗ್ರಹದೊಳಗೆ ರಕ್ಷಿಸಿದಾತ ಪರಮಗುರು.[1]

ಅಕ್ಷರ ಕಲಿಸಿದವ ಮಾತ್ರವಲ್ಲ, ವಿಪತ್ಸಮಯದಲ್ಲಿ ಕಾಯ್ದುಕೊಂಡವನೇ ಗುರು. ಪ್ರಪಂಚದಲ್ಲಿ ತಂದೆ ತಾಯಿ ಗುರು ಈ ಮೂವರಿಗಿಂತ ಹೆಚ್ಚು ಪವಿತ್ರವಾದ ವಸ್ತು ಮತ್ತೊಂದಿಲ್ಲ. ಗುರು-ಶಿಷ್ಯರ ಆದರ್ಶಸಂಬಂಧಕ್ಕೆ ದ್ರೋಣ-ಏಕಲವ್ಯರು ಉತ್ತಮ ನಿದರ್ಶನ. ಅರ್ಜುನ ಏಕಲವ್ಯನಿಗೆ ಗುರುಭಕ್ತಿಯಲ್ಲಿ ದ್ವಿತೀಯನಾದರೂ, ಭಾರತದಲ್ಲಿ ಅವನಿಗೆಣೆಯಾದವರು ಮತ್ತೊಬ್ಬರಿಲ್ಲ. ದ್ರೋಣಾರ್ಜುನರು ಪಕ್ಷ ಪ್ರತಿಪಕ್ಷಗಳಲ್ಲಿ ನಿಂತು ಹೋರಾಡುತ್ತಿದ್ದರೂ, ಅವರ ಕರ್ತವ್ಯಶ್ರದ್ಧೆಗಾಗಲಿ, ವಾತ್ಸಲ್ಯಕ್ಕಾಗಲಿ ಭಂಗಬರುವುದಿಲ್ಲ. ದ್ರೋಣ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಾನೆ. ಒಂದು ಕಡೆ ಅನ್ನದ ಋಣ, ಮತ್ತೊಂದು ಕಡೆ ಶಿಷ್ಯವಾತ್ಸಲ್ಯ ಮತ್ತು ಧರ್ಮಪಕ್ಷಪಾತ. ಅನ್ನದ ಋಣ ತೀರಿಸುವ ಸಲುವಾಗಿ, ಪಾಂಡವರ ಕಡೆಯ ಬಹುಭಾಗ ಸೈನ್ಯವನ್ನು ನಿರ್ನಾಮ ಮಾಡುತ್ತಾನೆ, ತಾನೂ ಪ್ರಾಣಾರ್ಪಣೆ ಮಾಡಿಕೊಳ್ಳುತ್ತಾನೆ. ಆತ್ಮಬಲಿದಾನದ ಮೂಲಕ ಧರ್ಮಪಕ್ಷಪಾತವನ್ನೂ ಶಿಷ್ಯವಾತ್ಸಲ್ಯವನ್ನೂ ಮೆರೆಯುತ್ತಾನೆ. ಅವನು ಮತ್ತಷ್ಟು ದಿನ ಬದುಕಿದ್ದರೆ ಪಾಂಡವರ ಗೆಲವು ದುಸ್ಸಾಧ್ಯವಾಗುತ್ತಿತ್ತೆಂದು ತೋರುತ್ತದೆ. ಅವನ ಶಿಷ್ಯವಾತ್ಸಲ್ಯದೊಡನೆ ಸಮನಾಗಿ ತೂಗುವಂಥ ಗುರುಭಕ್ತಿ ಅರ್ಜುನನದು. ಸಂಗ್ರಾಮ ಪ್ರಾರಂಭದಲ್ಲಿಯೇ ಗುರುಹಿರಿಯರನ್ನು ಕೊಲ್ಲಬೇಕಲ್ಲ ಎಂಬ ಸಂಕಟ ಅವನದು. ಅವನು ಕನಸು ನನಸುಗಳಲ್ಲಿಯೂ ಗುರುವನ್ನು ಹಳಿದವನಲ್ಲ. ಪ್ರತಿನಿತ್ಯ ನಮಸ್ಕಾರಾರ್ಥವಾಗಿ ಗುರುಚರಣಗಳಿಗೆ ಎರಡು ಬಾಣ ಪ್ರಯೋಗಿಸಿದನಂತರವೇ ಮುಂದಿನ ಯುದ್ಧ ಪ್ರಾರಂಭಿಸುತ್ತಾನೆ. ಅವನ ವಿನಯ ಶಿಷ್ಯವಾತ್ಸಲ್ಯಕ್ಕೆ ಸಮಸ್ಪರ್ಧಿಯಾಗಿ ಪ್ರಕಾಶಿಸುತ್ತದೆ. ಗೋಗ್ರಹಣಸಮಯದಲ್ಲಿ

ಇದಿರುಗೊಂಡೆನು ವಂದಿಸಿದೆನೆ । ಮ್ಮುದಯ ನಿಮ್ಮದು ನಿಮ್ಮ ಕೃಪೆಯಲಿ
ವಿದಿತವೆನಗೀ ವಿದ್ಯೆ ನೀವ್ ಕಾಮಾರಿ ಮುರವೈರಿ
ಹೃದಯ ನಿಮ್ಮದು ಕಾಳಗಕೆ ನಿ।ಮ್ಮಿದಿರೊಳಾಳೇ ತಾನು ಕರುಣಾ
ಸ್ಪದರು ನೀವು[2]

ಎಂದವನು ದ್ರೋಣನ ಸಿರಿಪದಕ್ಕೆ ಬಾಣ ಬಿಡುತ್ತಾನೆ. ಗುರುವಿನ ಪ್ರತಿಬಿಂಬವೇ ಶಿಷ್ಯ ಎಂಬ ತಥ್ಯವನ್ನು ಮೇಲಿಂದ ಮೇಲೆ ಪ್ರಚುರಪಡಿಸುತ್ತಾನೆ. "ಭಾವಿಸಲು ಪ್ರತಿಬಿಂಬದಲಿ ಭೇದಾತಿಶಯವೇನುಂಟು, ನೀವೆನಗಾವ ಪರಿಯಲಿ ಕಲಿಸಿದಿರಿ ನಿಮಗೊಪ್ಪಿಸುವೆನವನು"[3] ಎಂದು ನುಡಿಯುವಲ್ಲಿ ಗುರುಶಿಷ್ಯರು ಅಭೇದರೆನ್ನುವ ಕಲ್ಪನೆಯಿದೆ, ಗುರುಶಕ್ತಿಯೇ ಶಿಷ್ಯಶಕ್ತಿಯಾಗಿ ಪ್ರವಹಿಸುತ್ತದೆನ್ನುವ ಸತ್ಯವಿದೆ. ಆ ಸಂದರ್ಭದಲ್ಲಿ ದ್ರೋಣ ಉಚ್ಚರಿಸುವ ಮಾತಿನಲ್ಲಿ ಅತ್ಯುನ್ನತ ಮಟ್ಟದ ಗುರುತನ ಹೊಳಲುಗೊಡುತ್ತದೆ. "ವಿಷಯಲಂಪಟತನದಲಾವ್ ನಿರ್ಮಿಸಿದೆವಶ್ವತ್ಥಾಮನನು ನಮ್ಮೆಸೆವ ಮೋಹದ

[1] ಉ ೩-೬; [2] ವಿ ೮-೩೧; [3] ವಿ ೮-೩೩

ಕಂದನ್ನೈ ಯೆಲೆ ಪಾರ್ಥ ನೀನೆಮಗೆ"[1] ಎಂಬ ಸಾಹಸದ ಮಾತುಗಳು ಲೋಕ ಗುರು
ಮಾತ್ರ ಹೇಳಬಹುದಾದಂಥವು. ಈ ಮಾತುಗಳಲ್ಲಿ ಆತ್ಮೀಯತೆಯಿದೆ, ಭಾವಶುದ್ಧಿಯಿದೆ,
ಆತ್ಮನ ಕರೆಯಿದೆ. ಗುರುವಿನ ಪ್ರತಾಪೋತ್ಕರ್ಷ ಸ್ಯೈಂಧವವಧೆಗೆ ಅಡ್ಡಿಯಾದಾಗ,
ಅರ್ಜುನ ರಥದಿಂದಿಳಿದು ದ್ರೋಣನ ಚರಣಕಮಲದಲಿ ಮೈಯಿಕ್ಕಿ "ತಿಳಿಯಲೆಮ್ಮೈವ
ರಿಗೆ ಜೀವನದುಳಿವು ನಿನ್ನದು, ನಿನ್ನ ಮಕ್ಕಳ ಸಲಹು ಮೇಣ್ ಕೊಲ್"[2] ಎಂದು ಸವಿನಯ
ವಾಗಿ ಪ್ರಾರ್ಥಿಸುತ್ತಾನೆ. ಆಗ ದ್ರೋಣ.

ಕಂದನಶ್ವತ್ಥಾಮ ಹುಸಿಂಪಿನಗಿಂದು ಬೇಹ ಕುಮಾರ ನೀ ನಿ
ನ್ನಿಂದ ತನ್ನಯ ಕೀರ್ತಿ ಮೆರೆವುದು ಮೂರು ಲೋಕದಲಿ[3]

ಎಂದು ನುಡಿದು, ಮಗನಿಗಿಂತ ಶಿಷ್ಯನೇ ಮೇಲೆಂಬ ತತ್ವವನ್ನು ಪ್ರಕಟಪಡಿಸುತ್ತಾನೆ;
ಗುರುಶಿಷ್ಯರು ಒಂದೇ ಶಕ್ತಿಯ ಎರಡು ತುದಿ ಅಥವಾ ಎರಡು ಮುಖಗಳೆನ್ನುವುದನ್ನು
ಕಾರ್ಯತಃ ತೋರಿಸುತ್ತಾನೆ. ಶಿಷ್ಯರಕ್ಷಣೆ ಗುರುತನದ ಮತ್ತೊಂದು ಲಕ್ಷಣ. ಹೆಜ್ಜೆ
ಹೆಜ್ಜೆಗೂ ದ್ರೋಣ ಅರ್ಜುನನಿಗೆ ರಕ್ಷಾಯಂತ್ರವಾಗಿ ಸಲಹುತ್ತಾನೆ. ಅಂತೆಯೇ
ಅರ್ಜುನ ತನ್ನ ಶಿಷ್ಯನಾದ ಸಾತ್ಯಕಿಗೆ ಭೂರಿಶ್ರವನಿಂದ ಕುತ್ತೊದಗಿದಾಗ, ಅವನ
ಮೇಲೆ ಕಡುಕೋಪದಿಂದ ಹಾಯುತ್ತಾನೆ. "ಪೊಡವಿಯೊಳು ಯಾದವರು ಕ್ಷತ್ರಿಯ
ಗಡುಕರದರೊಳು ಹುಟ್ಟಿದನು" "ಕೃಷ್ಣನ ನಂಬಲಿಹಪರವಿಲ್ಲ"[4] ಆ ಕುಲದಲ್ಲಿ ಹುಟ್ಟಿದ
ಸಾತ್ಯಕಿಯನ್ನು ನೀನುಳಿಸಿಕೊಂಡೆಯಲ್ಲ ಎಂದು ಭೂರಿಶ್ರವ ಮೂದಲಿಸಿದಾಗ "ಎನಗೆ
ಸಾತ್ಯಕಿ ಕೋಲಮಗನಾತನ ವಧೆಯನಾ ಕಾಣಲಾಗದು"[5] "ಶಿಷ್ಯನ ಕುಂದು ಹೆಚ್ಚು
ಗಳಾರದೆಂಬುದ ಹೇಳು"[6] ಎಂದು ಅರ್ಜುನ ಮಾರುತ್ತರ ನೀಡುತ್ತಾನೆ. ಗುರುನಿಂದೆ
ಯನ್ನು ಸಹಿಸುವುದು ಶಿಷ್ಯನಿಗೆ ತರವಲ್ಲ. ಅಂಥವನು ಮಹಾಪಾಪಿ. ದ್ರೋಣಾವಸಾನ
ಸಮಯದಲ್ಲಿ ಧೃಷ್ಟದ್ಯುಮ್ನ ಅವನನ್ನು ಹಳಿದಾಗ "ಶಿವಶಿವಾ ಗುರುನಿಂದೆಯನು
ಕೇಳುವರು ನಾವಲ್ಲ"[7] ಎಂದು ಸಾತ್ಯಕಿ ಕಿವಿ ಮುಚ್ಚಿಕೊಂಡದ್ದು ಮಾತ್ರವಲ್ಲ, ಖಡ್ಗ
ವನ್ನಿರಿದು ಅವನ ಮೇಲೆ ನುಗ್ಗುತ್ತಾನೆ. ಗುರುವನ್ನು ಗುರುತಿಸದವನು ಗುರುನಿಂದಕ
ನಷ್ಟೇ ನಿಂದ್ಯನಾಗುತ್ತಾನೆ. "ವಿನುತ ಗುರುವರಿಯದನೆ ಮರುಳ"[8] ಎಂಬುದಾಗಿ ಧರ್ಮ
ರಾಯ ಯಕ್ಷನಿಗೆ ನೀಡುವ ಉತ್ತರದಲ್ಲಿ ವಿಶದಪಡಿಸುತ್ತಾನೆ.

ಶಿಷ್ಯವಾತ್ಸಲ್ಯ ಅಥವಾ ಗುರುಭಕ್ತಿ ಅವರ ಸ್ವಂತ ವ್ಯಕ್ತಿತ್ವವನ್ನು ಅಥವಾ ಸ್ವಾತಂತ್ರ್ಯ
ವನ್ನು ಕಸಿದುಕೊಳ್ಳುವುದಿಲ್ಲ. ಸತ್ಯಧರ್ಮಗಳ ರಕ್ಷಣೆಯ ಹೊಣೆ ಇಬ್ಬರಿಗೂ ಸೇರಿದ್ದು.
ಅವುಗಳಿಗೆ ವಿಪತ್ತೊದಗಿದಾಗ, ಪರಸ್ಪರ ಯುದ್ಧವಾದರೂ ಸರಿಯೆ ಅವನ್ನು ರಕ್ಷಿಸ
ಬೇಕಾದ್ದು ಅವರ ಕರ್ತವ್ಯ. ಅಂಬೆಯನ್ನು ಮದುವೆಯಾಗುವಂತೆ ಇಲ್ಲವೆ ಯುದ್ಧಕ್ಕೆ
ಸಿದ್ಧನಾಗುವಂತೆ ಕ್ಷತ್ರಿಯ ವಿರೋಧಿಯೂ ಆತ್ಮಗುರುವೂ ಆದ ಪರಶುರಾಮ ಒತ್ತಾಯ

---

1 ವಿ ೮-೩೪ ; 2 ದ್ರೋ ೯-೪೮ ; 3 ದ್ರೋ ೯-೫೧ ; 4 ದ್ರೋ ೧೪-೧೮ ; 5 ದ್ರೋ ೧೪-೨೦ ; 6 ದ್ರೋ ೧೪-೭೯ ; 7 ದ್ರೋ ೧೯-೨೪ ; 8 ಅ ೨೩-೪೫

ಪಡಿಸಿದಾಗ, ಸತ್ಯವಚನಕ್ಕೆ ತಪ್ಪಲಾರದೆ ಭೀಷ್ಮ ಗುರುವಿನೊಡನೆ ದ್ವಂದ್ವಯುದ್ಧ ಹೂಡುತ್ತಾನೆ. ಆ ಯುದ್ಧದಲ್ಲಿ ಭೀಷ್ಮನಿಗೆ ವಿಜಯ ಲಭಿಸುತ್ತದೆ. ಅವನೇನಾದರೂ ಗುರುಭಕ್ತಿಯನ್ನು ಪ್ರದರ್ಶಿಸುವ ಸಲುವಾಗಿ, ಅಂಬೆಯನ್ನು ಮದುವೆಯಾಗಿ ಭಗ್ನ ಸಂಕಲ್ಪನಾಗಿದ್ದರೆ, ಪ್ರಾಯಶಃ ಗುರುವೂ ಅವನನ್ನು ಅಣಕಿಸುತ್ತಿದ್ದುದಲ್ಲದೆ, ಲೋಕ ನಿಂದೆಗೆ ಗುರಿಯಾಗುತ್ತಿದ್ದನೆಂದು ತೋರುತ್ತದೆ. ಶಿಷ್ಯನ ಏಳ್ಗೆಯನ್ನು ನೋಡಿ ಹರ್ಷ ಗೊಳ್ಳದ, ಅವನ ಸ್ವತಂತ್ರ ಮನೋಧರ್ಮವನ್ನು ಮೆಚ್ಚದ ಗುರು ಅಲ್ಪನಾಗುತ್ತಾನೆ.

ಪತಿ-ಸತಿ

ಮಹಾಭಾರತವೊಂದು ವೀರಕಾವ್ಯವಾಗಿ, ಯುದ್ಧಗಳಿಗೆ ಹೆಚ್ಚು ಪ್ರಾಧಾನ್ಯವಿದ್ದದ್ದ ರಿಂದ ಕೌಟುಂಬಿಕ ಸಂಗತಿಗಳಿಗೆ ಪ್ರಾಶಸ್ತ್ಯ ಸಹಜವಾಗಿಯೇ ಕಡಮೆಯಾಗುತ್ತದೆ. ಅವುಗಳ ಪ್ರಸ್ತಾಪ ಬಂದಾಗ ಕವಿ ಚಿಟಿಕೆ ಚಪ್ಪರದಲ್ಲಿ ಅವುಗಳ ಉಲ್ಲೇಖವನ್ನು ಮುಗಿಸಿ ಬಿಡುತ್ತಾನೆ. ಶಂತನು–ಯೋಜನಗಂಧಿ, ವಿಚಿತ್ರವೀರ್ಯ–ಅಂಬಿಕೆ ಅಂಬಾಲಿಕೆ, ಧೃತರಾಷ್ಟ್ರ–ಗಾಂಧಾರಿ, ಪಾಂಡು–ಕುಂತಿ ಮಾದ್ರಿ, ಪಾಂಡವರು-ಹಿಡಿಂಬಿ ದ್ರೌಪದಿ ಸುಭದ್ರೆ ಉಲೂಪಿ ಚಿತ್ರಾಂಗದೆಯರು, ದುರ್ಯೋಧನ–ಭಾನುಮತಿ, ವಿರಾಟ–ಸುದೇಷ್ಣೆ ಮತ್ತು ಅಭಿಮನ್ಯು–ಉತ್ತರೆ[1]—ಈ ಏಳೆಂಟು ಜೋಡಿಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ ಯಾದರೂ, ಆ ಕುಟುಂಬಗಳ ಆಗುಹೋಗುಗಳಾಗಲೀ, ಆ ಸತಿಪತಿಯರ ರೀತಿ ನೀತಿ ಸ್ವಭಾವಗಳಾಗಲಿ ತಿಳಿಯುವುದಿಲ್ಲ. ಕುಂತಿಮಾದ್ರಿಯರಲ್ಲಿ ಸವತಿಮಾತ್ಸರ್ಯವಿದ್ದಂತೆ ತೋರುವುದಿಲ್ಲ. ಅವರು ಗಂಡನಿಗೆ ಅನುರೂಪೆಯರಾಗಿ, ಛಾಯೆಯಂತೆ ನಡೆದುಕೊಳ್ಳು ತ್ತಾರೆ. ಕುಂತಿಗೆ ಮೊದಲು ಮಕ್ಕಳಾದಾಗ ಓರಗಿತ್ತಿ ಗಾಂಧಾರಿಗೆ ಅಸೂಯೆ ಮೊಳೆ ದೋರುತ್ತದೆ. ಆದರೆ ಗಾಂಧಾರಿ ಸದ್ಗೃಹಿಣಿ, ಮಹಾಪತಿವ್ರತೆ ಮತ್ತು ಶೀಲಸಂಪನ್ನೆ. ಕಂಡೂ ಕಂಡೂ ಕುರುಡನನ್ನು ಗಂಡನನ್ನಾಗಿ ಪಡೆಯುತ್ತಾಳೆ. ಗಂಡನಿಗಿಲ್ಲದ ನೇತ್ರಸುಖ ತನಗೇಕೆಂದು ತಾನೂ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕಟ್ಟುಕುರುಡಿಯಾಗುತ್ತಾಳೆ. ಮಕ್ಕಳ ದೌರ್ಜನ್ಯ ಅವಳಿಗೆ ಹಿಡಿಸುವುದಿಲ್ಲ. ದುರ್ಯೋಧನನ ಹೆಂಡತಿ ಭಾನುಮತಿ ನಾಚಿಕೆಯ ಹೆಣ್ಣು: ಗಂಡನ ಸ್ವಭಾವವನ್ನು ಕಂಡೋ ಏನೋ ಹೊರಗೆ ಹೆಚ್ಚು ಕಾಣಿಸಿಕೊಳ್ಳುವ ದಿಲ್ಲ; ಕಾಣಿಸಿಕೊಂಡರೂ ಬಾಯಿ ಬಿಚ್ಚುವುದಿಲ್ಲ; ಘೋಷಯಾತ್ರೆಯ ಕಾಲದಲ್ಲಿ ಮಾತ್ರ ಗಂಡನಿಗೆ ರಕ್ಷೆಯಾಗಿ ಬರುತ್ತಾಳೆ. ಪಾಂಡವರ ಔದಾರ್ಯದಿಂದಾಗಿ ಗಂಧರ್ವನಿಂದ ಬಿಡುಗಡೆ ಹೊಂದಿ ನಾಚಿಕೆಯಿಂದ ಸೊಪ್ಪಾಗಿ, ಚಿಂತೆಯನ್ನಪ್ಪಿದ ದುರ್ಯೋಧನನಿಗೆ ಪತಿಕ್ಷೇಮಕಾತರೆಯಾದ ಭಾನುಮತಿ ಬುದ್ಧಿವಾದ ಹೇಳುತ್ತಾಳೆ. "ರಣವಲಿ ನಮ್ಮ ಬಿಡಿಸಿ ದವರು....ಹಿಂದಣ ಹಳಿವ ನೋಡಿದರೆ....ಯಮಸುತನ ನಮ್ಮ ನಗರಿಗೆ ಕರೆಸಿ ಧರೆಯನು ತಮ್ಮ ಪಟ್ಟಣ ಸಹಿತ ಕೊಟ್ಟರೆ ನಿಮ್ಮನೀಗಲು ಲೋಕಮೆಚ್ಚುವುದು"[2] "ಕರೆಸಿವರೆ ದಿಟ ಬಾರರವರು....ವರುಷ ಹದಿಮೂರಾದಡಲ್ಲದೆ ಮೆಟ್ಟರೀ ನೆಲನ"[3], ಅವಧಿ ಮುಗಿದ

[1] ಇಲ್ಲಿ ಕೃಷ್ಣನ ಸಂಸಾರವನ್ನು ಗಮನಿಸಿಲ್ಲ; [2] ಅ ೨೧-೨೧ ; [3] ಅದೇ, ೨೨

ನಂತರ "ಪ್ರೊಡವಿಯರ್ಥಕೆ ಬಲೆಯ ಬೀಸದೆ ಬಿಡುವರೇ ಬಳಿಕ; ನುಡಿಯ ಸಲಿಸದ ಮುನ್ನ ನೀ ಕೊಟ್ಟೊಡೆ ಕೃತಘ್ನತೆ ತಪ್ಪುವುದು"[1] ಅವಳು ಇಷ್ಟು ಹೇಳಿದ್ದೇ ಹೆಚ್ಚು. ಪಾಂಡವರಲ್ಲಿ ಮೊತ್ತಮೊದಲು ಮದುವೆಯಾಗುವವನು ಭೀಮ. ಮಧುಚಂದ್ರವಿಹಾರಕ್ಕೆ ಹೋಗುವವನೂ ಅವನೊಬ್ಬನೇ.

> ಎಲ್ಲಿ ಉಪವನ ವರಸರೋವರ। ವೆಲ್ಲಿ ಕೇಳೀ ಶೈಲ ಹಿಮಗೃಹ
> ವೆಲ್ಲಿ ರಮ್ಯೋದ್ಯಾನವೆಲ್ಲಿ ವಿಹಾರವನ ಭೂಮಿ
> ಅಲ್ಲಿ ಗಲ್ಲಿಗೆ ಹರಿದು ಮಾರುತಿ। ವಲ್ಲಭೆಯ ರಮಿಸಿದನು ಚೌಪಟ
> ಮಲ್ಲ ಜನಿಸಿದ ಕಲಿಘಟೋತ್ಕಚನಾ ಹಿಡಿಂಬಿಯಲಿ[2]

ಧರ್ಮರಾಯ ಮದುವೆಯಾದದ್ದೇ ತಡವಾಗಿ. ಅವನಿಗಾಗ ಮೂವತ್ತೈದು ವರ್ಷವಿದ್ದಿರಬಹುದು. ರಾಜರು ಶ್ರೀಮಂತರು ಅನೇಕ ಸ್ತ್ರೀಯರನ್ನು ಮದುವೆಯಾಗುತ್ತಿದ್ದ, ಅವರು ಸಾಲದೆಂಬಂತೆ ವೇಶ್ಯೆಯರನ್ನೂ ಸಹ ಬಳಸಿಕೊಳ್ಳುತ್ತಿದ್ದ ಕಾಲ. ಅಂಥ ಕಾಲದಲ್ಲಿ ಐವರು ಗಂಡಸರು ಒಬ್ಬ ಸ್ತ್ರೀಯನ್ನು ಮದುವೆಯಾಗುವುದು, ಅವಳೊಡನೆ ಯಾವ ತಕರಾರೂ ಇಲ್ಲದೆ ಸಂಸಾರ ಮಾಡುವುದೂ ಆಗಿನವರಿಗೂ ವಿಸ್ಮಯಕಾರಿಯಾದ ಸಂಗತಿಯಾಗಿದ್ದಿರಬಹುದು. ತಿಲೋತ್ತಮೆಗಾಗಿ ಒಬ್ಬರಿಗೊಬ್ಬರು ಹೊಡೆದಾಡಿ ಸತ್ತ ಸುಂದೋಪಸುಂದರರ ಕತೆಯನ್ನು ಹೇಳಿ ನಾರದ ಅವರಿಗೆ ಸಂಸಾರನೀತಿಕ್ರಮವನ್ನು ನಿಗದಿಪಡಿಸುತ್ತಾನೆ. ವಾಚಕರ ಕುತೂಹಲದಲ್ಲಿ ಪಾಲುಗಾರಳಾದ ಸತ್ಯಭಾಮೆ "ಅರಸಿ, ಕೌತುಕವೆನಗೆ ನೀನೈವರಿಗೆ ಸತಿ, ವಲ್ಲಭರ ಚಿತ್ತಾಕರುಷಣವು ನಿನಗೆಂತು ಸೇರಿಹುದೇಕಭಾವದಲಿ"[3] ಎಂದು ಪ್ರಶ್ನಿಸುತ್ತಾಳೆ. "ಭಾವಶುದ್ಧಿಯಲೈವರನು ಸಂಭಾವಿಸುವೆನವರವರ ಚಿತ್ತದ ಭಾವವರಿದುಪಚರಿಸುವೆನು ಚತುರತೆಯ ಚಾಳಿಯಲಿ"[4] ಎಂದು ದ್ರೌಪದಿ ಉತ್ತರಿಸಿ, ಗಂಡಂದಿರನ್ನು ವಶಪಡಿಸಿಕೊಳ್ಳುವ ವಿಧಾನವನ್ನು ವಿವರಿಸುತ್ತಾಳೆ:

> ಒಲವರಿದು ಹತ್ತುವುದು ಚಿತ್ತದ। ನೆಲೆಯರಿದು ನೆನ್ಮುವುದು ಮುರಿವಿಸ
> ಹೊಳವರಿದು ಹಿಂಗುವುದು ಹೊಂಗುವುದು ಮನದೊಳೊಳವರಿದು
> ಸುಳಿವರಿದು ಸೋಂಕುವುದು ತವಕಕೆ। ಬಲಿದು ಮುನಿವುದು ಸವಿಯ ಬೇಟವ
> ಬೆಳಸಿ ಬೆಸವುದು ಬಗೆಯಲಿ[5]

ದ್ರೌಪದಿ ವೀರಮಹಿಳೆ; ಭೀಮನಿಗೆ ತಕ್ಕ ಹೆಂಡತಿ. "ಎಲ್ಲರೊಳು ಕಲಿಭೀಮನೇ ಮಿಡುಕುಳ್ಳ ಗಂಡಸು"[6] ಎಂದು ತಿಳಿದಿದ್ದಾಳೆ. ಜಗತ್ರಯವನ್ನು ನಡುಗಿಸಬಲ್ಲ ಸಾಮರ್ಥ್ಯವುಳ್ಳ ಐವರು ಗಂಡಂದಿರನ್ನು ಪಡೆದಿದ್ದರೂ ಅವಳು ಪಟ್ಟಪಾಡು ಬೇರೆ ಯಾರೂ ಅನುಭವಿಸದಂಥದು; ನಾಥರಿದ್ದೂ ಅನಾಥಳು. ಹೆಣ್ಣಿಗೆ ಮಾನಭಂಗವೇ ಮೃತ್ಯು. ಅದನ್ನು ರಕ್ಷಿಸುವವರಿಲ್ಲದಿದ್ದಾಗ, ತನ್ನ ಕೈಯಿಂದಲೂ ಆತ್ಮರಕ್ಷಣೆ ಸಾಧ್ಯವಿಲ್ಲದಿದ್ದಾಗ, ನಿರಾಶೆಯಿಂದ

---

1 ಅದೇ, ೨೩; 2 ಅ ೯ ೨೪; 3 ಅ ೧೫-೨೨; 4 ಅದೇ, ೨೩; 5 ಅದೇ, ೨೪;
6 ವಿ ೩-೩೪

ಅವಳ ನಾಲಗೆಯು ಕಡುಹು ತೀವ್ರವಾಗುತ್ತದೆ. "ರಮಣ ಕೇಳುಳಿದವರು ತನ್ನನು ರಮಿಸುವರು ಮಾನಾರ್ಥವೆನೆ ನಿರ್ಗಮಿಸುವರು"[1]; "ಗಂಡರೈವರು ಮೂರುಲೋಕದ ಗಂಡರೊಬ್ಬರನಾಳಲಾರಿರಿ, ಗಂಡರೋ ನೀವ್ ಭಂಡರೋ"[2] "ಕಾಮಿನಿಯ ಕೇಳದಲಿ ನೆನೆವುದು"[3] "ತೋಳ ಹೊರೆ ನಿಮಗೇಕೆ....ಕೂಳುಗೇಡಿಂಗೊಡಲ ಹೊರುವಿರಿ"[4] ಎಂದು ಕಣ್ಣೀರ ಹೊನಲು ಹರಿಸುತ್ತಾಳೆ. ಶಿಷ್ಟಮನೆತನದ ಹೆಣ್ಣು ಹೇಳಬಾರದ ಈ ಮಾತು ಗಳು ಅವಳ ವಿಷಯದಲ್ಲಿ ಆ ಸಮಯದಲ್ಲಿ ಕ್ಷಮ್ಯವಾಗುತ್ತವೆ. ಮದುವೆಯಾದ ಮುಹೂರ್ತದಿಂದ ಹಿಡಿದು ಕುರುಕ್ಷೇತ್ರಯುದ್ಧ ಮುಗಿಯುವತನಕ ಅವಳು ಅನುಭವಿಸಿದ ಯಾತನೆ ಅವರ್ಣನೀಯವಾದುದು. ಪತಿಭಕ್ತಿಯಲ್ಲಿಯೂ ಅವಳನ್ನು ಮೀರಿಸಿದವರಿಲ್ಲ. ಆದ್ದರಿಂದಲೇ ಅವಳು ಗಂಡಂದಿರ ನೆರಳಂತೆ ಅರಣ್ಯದಲ್ಲಿ ಅಲೆದಾಡುತ್ತಾಳೆ; ಪರಕೀಯರ ಮನೆಯಲ್ಲಿ ದಾಸಿಯಂತೆ ಸೇವೆ ಮಾಡುತ್ತಾಳೆ. ಜಾಜ್ವಲ್ಯಮಾನವಾದ ಅವಳ ವ್ಯಕ್ತಿತ್ವದ ಪ್ರಖರತೆಗೆ ಮೊಗಗೊಡಲಾರದ ಮಿಂಚುಹುಳುಗಳು ಹಿನ್ನೆಲೆಗೆ ಸರಿಯುತ್ತವೆ. ಅರ್ಜುನ ಮೂವರು ಹೆಣ್ಣುಗಳನ್ನು ಮದುವೆಯಾದರೂ ಭೀಕರ ಘಟನೆಗಳ ದಾವಣಿಯಲ್ಲಿ,ಯುದ್ಧದ ಕೋಲಾಹಲದಲ್ಲಿ, ಅವನ ಸಾಹಸಮಯ ಸಾಧನೆಗಳಲ್ಲಿ ಅವರು ಮರೆತು ಹೋಗುತ್ತಾರೆಂದು ತೋರುತ್ತದೆ.

ಪುತ್ರವಾತ್ಸಲ್ಯ

ಪಿತೃಪ್ರೇಮ ಅಥವಾ ಮಾತೃಪ್ರೇಮಕ್ಕಿಂತ ಪುತ್ರವಾತ್ಸಲ್ಯಕ್ಕಿಲ್ಲಿ ವಿಶೇಷ ಸ್ಥಾನವಿದೆ. "ತಾಯಿಂದಧಿಕ ಗುರುವಿಲ್ಲ"[5] ಎಂಬಂಥ ಮಾತುಗಳು ಅಲ್ಲಲ್ಲೆ ಸುಳುಹುದೋರುವುದರ ಜತೆಗೆ ಪಾಂಡವರ ಕರ್ಣನ ಮತ್ತು ಭೀಷ್ಮನ ಜೀವನದಲ್ಲಿ ಮಾತೃಭಕ್ತಿ ಒಮ್ಮೊಮ್ಮೆ ಪ್ರಕಟಗೊಳ್ಳುತ್ತದೆ. ಭೀಷ್ಮ ಕರ್ಣರಿಬ್ಬರೂ ತಂತಮ್ಮ ತಾಯಿಗೆ ಕೊಟ್ಟ ವಚನವನ್ನು ಚಾಚೂತಪ್ಪದೆ ಪರಿಪಾಲಿಸುತ್ತಾರೆ. ಪಾಂಡವರಂತು ತಾಯಿಯ ಆಜ್ಞೆಯನ್ನು ಎಳ್ಳಷ್ಟೂ ಮೀರುವುದಿಲ್ಲ. ಮಡದಿಯಾಗಿ ತಂಗಿಯಾಗಿ ಸೊಸೆಯಾಗಿ ಅಥವಾ ಇತರ ಸಂಬಂಧಗಳ ಮೂಲಕ ಮಹಿಳೆ ಮಾನ್ಯೆಯಾಗಿದ್ದಾಳೆ, ನಿಜ; ಅದಕ್ಕಿಂತ ಮಿಗಿಲಾಗಿ ಆಕೆ ತಾಯಿಯಾಗಿ ಜಗದ್ವಂದ್ಯೆಯಾಗಿದ್ದಾಳೆ. ಶ್ರೀಕೃಷ್ಣ ಬುದ್ಧ ಯೇಸು ಮಹಮದ್ ಬಸವ ರಾಮಾನುಜ ಲಿಂಕನ್ ವಿವೇಕಾನಂದ ಲೆನಿನ್ ಗಾಂಧೀಜಿ ಮೊದಲಾದ ಮಹಾಮಹಿಮರನ್ನು ಪಡೆಯುವ ಮೂಲಕ ಭೂಮಿಯಲ್ಲಿ ಸ್ವರ್ಗವನ್ನು ಸೃಷ್ಟಿಸಿದ ಆ ತಾಯಂದಿರು ಸುರವಂದ್ಯರಾಗಿದ್ದಾರೆ. ಲೋಕದ ದೃಷ್ಟಿಯಲ್ಲಿ ಕೆಟ್ಟ ಮಡದಿಯರಿರಬಹುದು, ಪತಿತೆಯರಾದ ಸೊಸೆಯರಿರಬಹುದು ದುಷ್ಟಮಾತೆಯಂತು ಇಲ್ಲವೇ ಇಲ್ಲ. ಗಾಂಧಾರಿ ಧೃತರಾಷ್ಟ್ರರ ಪುತ್ರವ್ಯಾಮೋಹವೇ ಜ್ಞಾತಿಕಲಹಕ್ಕೆ ಕಾರಣವಾಯಿತೆಂದರೂ ತಪ್ಪಾಗಲಾರದು. ತಮ್ಮ ಮಗ ಜ್ಞಾತಿವೈರಿ, ರಾಜ್ಯಲೋಭಿ ಮತ್ತು ನೀತಿಬಾಹಿರ ಎಂಬ ವಿಷಯ ಅವರಿಗೆ ತಿಳಿಯ

---

[1] ವಿ ೩-೪೪; [2] ವಿ ೩-೪೬; [3] ವಿ ೩-೬೫; [4] ವಿ ೩ ೬೨; [5] ಅ ೧೬-೯

ದಿಲ್ಲ. ಪಾಂಡವರನ್ನು ಜೂಜಿಗೆ ಕರೆಸಿಕೊಡುವಂತೆ ದುರ್ಯೋಧನ ಬೇಡಿಕೆಯನ್ನು ಮುಂದೊಡ್ಡಿದಾಗ ಧೃತರಾಷ್ಟ್ರ "ಸತಿಯರಲಿ ನಿಮ್ಮಪ್ಪೆ ಸುಪತಿವ್ರತೆ, ಮಹಾಖಳ ನೀನು, ಬೀಜಸ್ಥಿತಿಯಲೂಣಯವಿಲ್ಲ, ನಿನ್ನಯ ಬುದ್ಧಿದೋಷವಿದು"[1] ಎಂದು ಬಿಸುಸುಯ್ಯುತ್ತಾನೆ. ತಾನು ರಾಜ್ಯತ್ಯಾಗಮಾಡಿ ಊರು ಬಿಟ್ಟು ಹೋಗುವೆನೆಂದು ಮಗ ಮೇಲಿದ್ದಾಗ ಗಾಂಧಾರಿ ಕರಗಿ ಕಂಬನಿಸೂಸುತ್ತಾಳೆ, ಧೃತರಾಷ್ಟ್ರನೆದೆ ಜರ್ಝರಿತವಾಗುತ್ತದೆ. "ಎಲೆಗೆ ಕರೆಯಾ ಪಾಪಿ ಕೌರವ ಕುಲಕುಠಾರನ ನಿನ್ನ ಮಗನೊಡನಳಿವೆನ್ಯೆಸಲೆ ಪಾಂಡುಪುತ್ರರ ವೈರಬಂಧದಲಿ"[2] ಎಂದವನು ದುಃಖಸಾಗರದಲ್ಲಿ ಮುಳುಗುತ್ತಾನೆ. "ಧರ್ಮ ನಿಮ್ಮದು ತಾಯೆ, ಕಿಲ್ಬಿಷ ಕರ್ಮವೆಮ್ಮದು, ಲೋಕವರಿಯಲು ನಿರ್ಮಲರು ನೀವ್....ದುರ್ಮತಿಗಳಿವದಿರ ಕುಚೇಷ್ಟೆಯನೆಮ್ಮನೀಕ್ಷಿಸಿ ಮರೆಮಗಳೆ"[3] ಎಂದು ದ್ರೌಪದಿಯ ಸೀರೆ ಸುಲಿಗೆಯಾದನಂತರ ಭೀಷ್ಮದ್ರೋಣಾದಿಗಳು ಭಂಗಿಸಿದಾಗ ಧೃತರಾಷ್ಟ್ರ ಮರುಗುತ್ತಾನೆ. "ನೋಡಲಾಗದು ಮಕ್ಕಳಿರ ಕುಲಗೇಡಿಗರ ಕಪಟವನು"[4] ಎಂದು ಗಾಂಧಾರಿ ದ್ರೌಪದಿಯನ್ನು ಸಂತೈಸುತ್ತಾಳೆ. ಮತ್ತೆ ಅದೇ ಮಗನ ಆವುಟ; ಅದೇ ತಂದೆ ತಾಯಿಯರ ಮೋಹ ಪಾಂಡವರ ಅರಣ್ಯವಾಸಕ್ಕೆ ಮೂಲವಾಗುತ್ತದೆ; ಸಂಧಾನಕ್ಕೆಂದು ಬಂದ ಕೃಷ್ಣನನ್ನು ಬಂಧಿಸಲು ದುರ್ಯೋಧನ ಹವಣಿಸಿದಾಗ "ಪಾಪಿಮಗನನು ಹುಟ್ಟಿದಂದೇ ಬಿಸುಡದಾದೆವು ಬಾಳುಗೇಡಿಯನು"[5] ಎಂದು ಗಾಂಧಾರಿ ಮುಳಿಯುತ್ತಾಳೆ. "ಸುತ ಕೆಡುಗು ಲಾಲನೆಗಳಲಿ"[6] ಎಂದು ವಿದುರ ಹೇಳಿದ್ದು ಧೃತರಾಷ್ಟ್ರನನ್ನು ಕುರಿತೇ ಎಂಬುದು ಸ್ಪಷ್ಟ. ದುರ್ಯೋಧನ ಸತ್ತ ನಂತರ ಅವರ ವ್ಯಾಮೋಹ ಕೋಪಶಿಖಿಯಾಗಿ ಪರಿಣಮಿಸಿ, ಭೀಮ ಧರ್ಮರಾಯರ ಮೇಲೆ ತಿರುಗುತ್ತದೆ. ಅವರದು ತಾಮಸಿಕ ವಾತ್ಸಲ್ಯವೆಂಬ ಸಂಗತಿ ಮೇಲಿನ ವಿವರಣೆಗಳಿಂದ ಸಿದ್ಧವಾಗುತ್ತದೆ.

ಎಳವೆಯಲ್ಲಿಯೇ ತಂದೆ ಸಾಯಲು ಮಕ್ಕಳನ್ನು ಪಾಲಿಸುವ ಪೋಷಿಸುವ ಹೊಣೆ ಕುಂತಿಯ ಪಾಲಿಗೆ ಬರುತ್ತದೆ. ಏಕಚಕ್ರನಗರದಲ್ಲಿ ಬಕನ ಬಾಯಿಗೆ ಬಲಿಯಾಗುತ್ತಿದ್ದ ವಿಪ್ರಸುತನನ್ನು ರಕ್ಷಿಸುವಲ್ಲಿ ಅವಳ ಪುತ್ರವಾತ್ಸಲ್ಯ ಬೆಳಗುತ್ತದೆ. ದ್ರೌಪದಿಯ ವಿವಾಹ ಸಮಯದಲ್ಲಿ ಕೃಷ್ಣ ತನ್ನನ್ನು ನೋಡಲು ಬಂದಾಗ "ಯಾದವನೃಪರು ಬಂಧುಗಳು ನಿಮಗೆಂದೈವರನು ಕೈ ನೆಗಹಿ ಕಮಲೋದರನ ಕೈಯಲಿ"[7] ಕುಂತಿ ಕೊಡುತ್ತಾಳೆ. ಅಂದಿನಿಂದ ಪಾಂಡವರಿಗೆ ಕೃಷ್ಣನೇ ತಂದೆ ತಾಯಿ ಗುರು ಎಲ್ಲ ಆಗುತ್ತಾನೆ. ಪಾಂಡವರ ಹಾಗೂ ಸುಭದ್ರೆಯ ಕಣ್ಮಣಿ ಅಭಿಮನ್ಯು. ಅವನು ರಣರಂಗದಲ್ಲಿ ಅಸುನೀಗಿದಾಗ ಧರ್ಮರಾಯ ಮೂರ್ಛೆಗೊಳ್ಳುತ್ತಾನೆ. ಅವನು ಸತ್ತುಹೋಗಿರಬಹುದೆಂದು ಸಚಿವರು ಶಂಕಿಸುತ್ತಾರೆ. ಸುಭದ್ರೆಯ ಹಲುಬು ಹೇಳತೀರದು. ಜೀವನವನ್ನೆಲ್ಲ ಯುದ್ಧದಲ್ಲಿಯೇ ಕಳೆದ, ಭೀಷ್ಮಾದಿ ಬಂಧುಗಳನ್ನೂ ಅಸಂಖ್ಯಾತ ಜನರನ್ನೂ ಕೊಂದ ಅರ್ಜುನನ ಶೋಕ

---

1 ಸ ೧೨-೪೮; 2 ಸ ೧೨-೫೭; 3 ಸ ೧೫-೪೮; 4 ಸ ೧೫-೬೪; 5 ಉ ೯-೪೯; 6 ಉ ೩-೧೧೯; 7 ಆ ೧೭-೬

ಸಾಗರವುಕ್ಕಿ ಪಾಂಡವಪಕ್ಷವನ್ನೆಲ್ಲ ಮುಳುಗಿಸುತ್ತದೆ. ಅವನ ದುಃಖತೀವ್ರತೆಯಲ್ಲಿ ಪುತ್ರವಾತ್ಸಲ್ಯದ ಪರಾಕಾಷ್ಠೆಯನ್ನು ಗುರುತಿಸಬಹುದು.

> ಬರಲು ಬಹನಿದಿರಾಗಿ ತನ್ನಯ। ವರರಥವ ಬಂದೇರುವನು ನಿಜ
> ಕರತಳದಿ ಮೈದಡವಿ ಛಾಯವ ನೋಡಿ ಮುರುಗುವನು
> ತರುಣನಿದಿರೈತರಲು ತನ್ನಯ। ಧುರದ ಬಳಲಿಕೆ ಹಿಂಗುವುದು ಹೇ
> ಳರಸ ಕಂದನ ಸುಳಿವ ಕಾಣೆನು ಕರಸಿ ತೋರೆಂದ[1]

ಭ್ರಾತೃವಾತ್ಸಲ್ಯ

ಕಾಶಿರಾಜನ ಸ್ವಯಂವರ ಮಂಟಪವನ್ನು ಹೊಕ್ಕು, ನೆರೆದಿದ್ದ ರಾಜಾಧಿರಾಜರನ್ನು ಸೋಲಿಸಿ, ಅವನ ಪುತ್ರಿಯರನ್ನು ಕರೆತಂದು ತನ್ನ ತಮ್ಮಂದಿರಿಗೆ ಮದುವೆ ಮಾಡುವಲ್ಲಿ ಭೀಷ್ಮನ ಭ್ರಾತೃಪ್ರೇಮ ವ್ಯಕ್ತಗೊಳ್ಳುತ್ತದೆ. ತನ್ನ ಮನಸ್ಸಿಗೆ ಬಾರದ ಕೃತ್ಯವನ್ನೆಸಗಿದರೂ ತಮ್ಮನನ್ನು ಅನುನಯದಿಂದ ಹಿಂಬಾಲಿಸುವ ಬಲರಾಮನ ಭ್ರಾತೃಸ್ನೇಹ ಅನುಪಮವಾದದ್ದು. ಈ ಭ್ರಾತೃಪ್ರೇಮ ಪಾಂಡವರ ಪರಸ್ಪರ ಸಂಬಂಧದಲ್ಲಿ ಮುಗಿಲುಮುಟ್ಟುತ್ತದೆ. ಪ್ರೇಮಾರಾಧನೆಯಲ್ಲಿ ಅವರು ಪರಸ್ಪರ ಸ್ಪರ್ಧಿಗಳಂತೆ ಕಾಣುತ್ತಾರೆ. ಪರೇಂಗಿತಜ್ಞತೆ ಸಂಯಮ ಸ್ವಾರ್ಥನಿಯಮನ ನಿರ್ವ್ಯಾಜಸ್ನೇಹ ಮತ್ತು ನಿಷ್ಕಾಪಟ್ಯಗಳು ಅವರ ಅಚಲ ಪ್ರೇಮಕ್ಕೆ ಕಾರಣವಾಗಿವೆ. ಅಣ್ಣ ಹಾಕಿದ ಗೆರೆಯನ್ನೆಂತು ತಮ್ಮಂದಿರು ಮೀರುವುದಿಲ್ಲವೋ ಅಂತೆಯೇ ಅಣ್ಣ ತಮ್ಮಂದಿರನ್ನು ಪ್ರಾಣಕ್ಕಿಂತ ಮಿಗಿಲಾಗಿ ಕಾಣುತ್ತಾನೆ. ದೈತ್ಯಸಾಮರ್ಥ್ಯದ ಉಗ್ರಕ್ರೋಧದ ಭೀಮ ಲಾಕ್ಷಾಗೃಹದಿಂದ ತಾಯಿಯನ್ನು ಅಣ್ಣತಮ್ಮಂದಿರನ್ನು ಹೊತ್ತುಕೊಂಡು ಹೊರಗೆ ಬರುವಾಗ, ಹಸಿವು ನೀರಡಿಕೆ ನಿದ್ದೆಗಳನ್ನುಳಿದು, ದಣಿವನ್ನು ಲೆಕ್ಕಿಸದೆ, ಕಲ್ಲುಮುಳ್ಳಿಡಿದ ದಾರಿಯಲ್ಲಿ ಸಾಗುವಾಗ, ಕೆಳಗೆ ಮಲಗಿಸಿ ತಾಯಿಯ ಮತ್ತು ಅಣ್ಣನ ಪಾದಗಳನ್ನೂ, ತಮ್ಮಂದಿರ ಅಂಗಾಂಗಗಳನ್ನೂ ಒತ್ತುವಾಗ ಅವನ ಮೃದುಸ್ವಭಾವ ಮೆರೆಯುತ್ತದೆ. ತಾನು ಗೆದ್ದ ಹೆಣ್ಣನ್ನು ಇತರ ಸೋದರರಿಗೂ ಹಂಚುವಾಗ ಅರ್ಜುನನ ಔದಾರ್ಯ ಪ್ರಕಟವಾಗುತ್ತದೆ. ಅಣ್ಣನ ಭಾವಭಂಗಿ ಮತ್ತು ಅಂಗಮುದ್ರೆಗಳಿಂದಲೇ ಅವನ ಇಂಗಿತವರಿತು, ಆದೇ ಆಜ್ಞೆಯೆಂಬಂತೆ ಪರಿಪಾಲಿಸುತ್ತಾರೆ. ಆಗಾಗ್ಗೆ ಭೀಮ, ಒಮ್ಮೊಮ್ಮೆ ಅರ್ಜುನ ದುಡುಕಿ ಅಣ್ಣನನ್ನು ದೂರುವುದುಂಟು. ಆದರೆ ಮರುಕ್ಷಣದಲ್ಲಿಯೇ ಪಶ್ಚಾತ್ತಾಪ ವ್ಯಕ್ತಪಡಿಸಿ, ಶರಣಾಗತರಾಗುವುದೂ ಉಂಟು. ಧರ್ಮರಾಯ ಮರುಜೂಜಿಗೆ ಹೋಗುವಾಗ "ಕರೆಸುವವದಿರು ಭಂಡರೋ ಮೇಣ್ಮರಳಿ ಹೋಹರು ಭಂಡರೋ"[2] ಎಂದು ಭೀಮ ರೇಗಾಡುತ್ತಾನೆ. "ಜನಪನಾಜ್ಞೆಯ ಮೀರಿ ಬಳಸುವುದನುಚಿತವು ನಮಗಿನ್ನು....ನಿಮ್ಮಯ ಮನಕೆ ಚೆಮ್ಮಾವುಗೆಗಳ್"[3] ಎಂದು ಮರುಕ್ಷಣವೇ ಮಾರುತಿ ಮೊದಲಾದವರು ಮಣಿಯುತ್ತಾರೆ.

---

[1] ದ್ರೋ ೮-೧೯; [2] ಸ ೧೬-೩೧; [3] ಸ ೧೬-೩೬

ಭೀಮನನ್ನು ಸರ್ಪವೇಷದ ನಹುಷ ಪೀಡಿಸಿದಾಗ, ತಮ್ಮಂದಿರು ಯಕ್ಷ ಸರೋವರದ ನೀರು ಕುಡಿದು ಮೂರ್ಛೆ ಹೊಂದಿದಾಗ ಸ್ಥಿತಪ್ರಜ್ಞನಾದ ಧರ್ಮರಾಯನೂ ಹಲವು ವಿಧವಾಗಿ ಹಲುಬುತ್ತಾನೆ. ತಾಯಿಯಿಲ್ಲದ ತಮ್ಮಂದಿರಲ್ಲಂತು ಅವನಿಗೆ ಅಪಾರ ಪ್ರೇಮ. ವಿರಾಟ ರಾಯನ ದಾಳಹತಿಯಿಂದಾಗಿ ಗಾಯಗೊಂಡಿದ್ದ ಅಣ್ಣನ ಹಣೆಯನ್ನು ನೋಡಿ, ಭೀಮಾರ್ಜುನರು ರೋಷಭೀಷಣರಾಗುತ್ತಾರೆ. "ಬರಿಯ ಧರ್ಮದ ಜಾಡ್ಯದಲಿ ಪೈ ಮರೆದು ವನದಲಿ ಜೀವು ಬಿಕ್ಕೆಯನರಸಿ ತೊಳಲಿದು ಸಾಲದೇ ಹದಿಮೂರು ವತ್ಸರದಿ"[1] ಎನ್ನುವ ನೋವು ಆಗಾಗ್ಗೆ ಮನವನ್ನು ಹಿಂಡುತ್ತಿದ್ದರೂ, ಅಣ್ಣ ಗಲ್ಲ ಹಿಡಿದು ಮುದ್ದಾಡಿದ ನೆಂದರೆ ಭೀಮ ನಾಚಿಕೆಯಿಂದ ತಲೆತಗ್ಗಿಸಿಬಿಡುತ್ತಾನೆ: ಕೊನೆಗೆ ಅವನೇ ಸಂಧಿ ಗೊಡಂಬಡುತ್ತಾನೆ. ದ್ರೌಪದಿಯ ವಸ್ತ್ರಾಪಹರಣ ಸಂದರ್ಭದಲ್ಲಿ "ಧಾರುಣೀಶನ ಧರ್ಮ ತತ್ವದ ಸಾರವುಳಿದರೆ ಸಾಕು ಮಿಕ್ಕಿನ ನಾರಿಧನವಭಿಮಾನ ಬೇಯಲಿ"[2] ಎಂದೂ, ಧರ್ಮರಾಯನೊಮ್ಮೆ ರಣರಂಗದಲ್ಲಿ ಅಪಾಯವಶವಾದಾಗ "ಅರೆಘಳಿಗೆ ಧರ್ಮಜನ ಬಿಟ್ಟಾನಿರೆನು ಮುರಹರ"[3] ಎಂದೂ ನುಡಿದ ಅರ್ಜುನನೇ ಕರ್ಣನನ್ನು ಹೊಗಳಿದ ಅಣ್ಣನನ್ನು ಗ್ರಾಮಿಣನಂತೆ ಹಳಿಯುತ್ತಾನೆ. ಮರುಕ್ಷಣವೆ "ದುರಾತ್ಮಕನನುದ್ಧರಿಸ ಬೇಹುದು ಜೀಯ ಕರುಣಾಕರನಲಾ ನೀನೆನುತ"[4] ಅವನು ಅಣ್ಣನ ಪಾದಗಳನ್ನು ತಬ್ಬಿ ಕೊಳ್ಳುತ್ತಾನೆ. ಧರ್ಮಜನ ಸತ್ಯಾಭ್ಯುದಯಕೋಸುಗ ಊರ್ವಶಿಯ ಶಾಪ ತನಗೆ ಬಂತೆಂದು ಉತ್ತರನೊಡನೆ ಹೇಳುವಾಗ ಅಣ್ಣನಿಗಾಗಿ ಎಂಥ ಕಷ್ಟವಾದರೂ ಸಹಿಸಬಹು ದೆಂಬ ನಿಷ್ಠೆ ಅವನಲ್ಲಿ ಕಂಡುಬರುತ್ತದೆ.

ಕೌರವಸಹೋದರರ ಭ್ರಾತೃಪ್ರೇಮವೂ ಅಸಾಮಾನ್ಯವಾದದ್ದು. ದುಶ್ಶಾಸನನಿಗೆ ಅಣ್ಣ ನೆಂದರೆ ಪ್ರಾಣ; ಅವನ ಜತೆಯಲ್ಲಿ ಸ್ವರ್ಗವಾದರೆ ಸ್ವರ್ಗ; ನರಕವಾದರೆ ನರಕ. ಅಣ್ಣನ ಆಜ್ಞೆ ಎಂಥ ಹೇಯವಾದುದೇ ಆಗಿರಲಿ, ಹಿಂದೆ ಮುಂದೆ ನೋಡದೆ, ಮರುಮಾತಿಲ್ಲದೆ ಅದನ್ನು ಪರಿಪಾಲಿಸುವುದೇ ಅವನ ಧರ್ಮ. ಅವನು ದುರ್ಯೋಧನನ ಪ್ರತಿಬಿಂಬ. ದುರ್ಯೋಧನನಿಗೂ ತಮ್ಮನ ಮೇಲೆ ಅಷ್ಟೇ ಪ್ರೀತಿ. ಭೀಷ್ಮದ್ರೋಣರ ಸಾವಿನಿಂದ ಅವನು ಜರ್ಝರಿತನಾಗುವುದಿಲ್ಲ. "ಗುರುನದೀಸುತರಳಿವುಭಯರಾಯರಿಗೆ ಸರಿ, ದುಶ್ಶಾಸನನ ನೆತ್ತರದಿ ಪಾನಕ್ರೀಡನಾಸೌಭಾಗ್ಯ ಸಂಪದಕೆ ಸರಿಯದಾವುದು ?"[5] ಎಂದು ಪ್ರಶ್ನಿಸಿ, ತಮ್ಮ ಸತ್ತನಂತರ ತಾನು ಬದುಕುವುದು ಸರಿಯಿಲ್ಲ, ಭೀಮನ ಬಸುರಿಂದ ಅವನನ್ನು ತೆಗೆಯುವತನಕ ತನಗೆ ಸಮಾಧಾನವಾಗಲಾರದೆಂದು ಸಂಜಯ ಮೊದಲಾದ ವರಿಗೆ ಸ್ಪಷ್ಟಪಡಿಸುತ್ತಾನೆ. "ಕದನದಲಿ ದುಶ್ಶಾಸನನ ತೇಗಿದನಲಾ ಬಕವೈರಿ ತಮ್ಮನನು ದರದಲಿ ತೆಗೆವೆನು"[6] ಎಂದು ಕೊನೆಗಳಿಗೆಯಲ್ಲಿಯೂ ಅವನು ತಮ್ಮನ ಚಿಂತೆಯನ್ನಂಟಿಸಿ ಕೊಂಡು ಕೊಳದಲ್ಲಿ ಮುಳುಗುತ್ತಾನೆ. ಸ್ನೇಹಬಾಂಧವ್ಯದಲ್ಲಂತು ಕರ್ಣ ದುರ್ಯೋಧನರು ಎಲ್ಲ ಲೋಕಗಳಿಗೂ ಎಲ್ಲ ಕಾಲಕ್ಕೂ ಆದರ್ಶವಾಗುಳಿದಿದ್ದಾರೆ. ದುರ್ಯೋಧನನ

1 ವಿ ೯-೪೦; 2 ಸ ೧೫-೧೬; 3 ಕ ೧೪-೧೨; 4 ಕ ೧೭-೪೯; 5 ಕ ೨೨-೪೩; 6 ಗ ೩-೨೯

ಪ್ರೀತ್ಯರ್ಥವಾಗಿ ಕರ್ಣ ಎಂಥ ಕಾರ್ಯಕ್ಕೂ ಸಿದ್ಧ, ಅಂತೆಯೇ ಅವನಿಗಾಗಿ ಸಾಯಲೂ ಸಿದ್ಧ. ದುರ್ಯೋಧನನಿಗಂತು ಕರ್ಣನೇ ಸರ್ವಸ್ವ; ಕರ್ಣ ಸತ್ತ ಸುದ್ದಿ ಕೇಳಿ ಅವನು ಮೂರ್ಛಾಗತನಾಗುತ್ತಾನೆ. ಅನಂತರ ಅವನ ಶಕ್ತಿ ಸಾಮರ್ಥ್ಯ ಛಲಗಳಿಗೆ ಚಿರಮೂರ್ಛೆ ಸಮನಿಸುತ್ತದೆ.

ಗುರುಹಿರಿಯರು

ಗುರುಹಿರಿಯರಿಗೆ ಗೌರವ ಸಲ್ಲಿಸಬೇಕಾದ್ದು ಆಗಿನ ಕಾಲದ ಒಂದು ಶಿಷ್ಟಪದ್ಧತಿ. ದುರ್ಯೋಧನನಂಥ ಛಲವಾದಿಯೂ ತಂದೆತಾಯಿಯರನ್ನು ಗುರುಹಿರಿಯರನ್ನು ಕೇಳದೆ ಯಾವ ಕೆಲಸವನ್ನೂ ಕೈಗೊಳ್ಳುವುದಿಲ್ಲ. ಧರ್ಮರಾಯನನ್ನು ಜೂಜಿಗೆ ಆಹ್ವಾನಿಸುವ ಮುನ್ನ ತಂದೆಯನ್ನೊಪ್ಪಿಸಿಕೊಳ್ಳುತ್ತಾನೆ; ಭೀಷ್ಮ ದ್ರೋಣರು ತನ್ನ ಯೋಜನೆಗಳಿಗೆ ಅಸ್ತು ಎನ್ನುವುದಿಲ್ಲವೆಂದು ತಿಳಿದಿದ್ದರೂ ಅವರ ಕಿವಿ ಮೇಲೆ ಒಂದು ಮಾತು ಹಾಕುತ್ತಾನೆ. ರಾಜಸೂಯವೋ ಯುದ್ಧಯಜ್ಞವೋ ಯಾವುದೇ ಆಗಲಿ, ಕೃಷ್ಣನೊಡನೆ ಸಮಾಲೋಚಿಸದೆ ಅವನ ಅನುಮತಿಯನ್ನು ಪಡೆಯದೆ ಪಾಂಡವರು ಮುಂದರಿಯುವುದಿಲ್ಲ. ಜೂಜಿಗೆಂದು ಧೃತರಾಷ್ಟ್ರ ಹೇಳಿ ಕಳಿಸಿದಾಗ ವಿದುರ ಮುನ್ನೆಚ್ಚರಿಕೆ ನೀಡುವವನಾದರೂ, ಧರ್ಮರಾಯ

> ಕರೆಸುವನು ಧೃತರಾಷ್ಟ್ರ ಗಡ ನ । ಮ್ಮರಸನಲಿ ಧೃತರಾಷ್ಟ್ರನಲಿ ಸಮ
> ನೆರಡು ಮನವೇ ಭಾವಭೇದವೆ ಪಾಂಡು ಭೂಪನಲಿ
> ಪರಿವೆ ದೊರಕಲಿ ಶಾಪವೇ ಮೋ । ಕ್ಷರಲಿ ಭಯವಿಲ್ಲೆಮಗೆ ಭೂಪನ
> ಕರಣಕೃತಿಗೆ ಪಸಾದವೆಂದು[1]

ತನ್ನ ಗೌರವಭಾವವನ್ನು ಅಭಿವ್ಯಕ್ತಪಡಿಸುತ್ತಾನೆ. ಎದುರು ಪಕ್ಷಕ್ಕೆ ಸೇರಿದ ಹಿರಿಯರೆಂದು ಪಾಂಡವರು ಎಂದೂ ಭೀಷ್ಮಾದ್ಯರನ್ನು ಅವಜ್ಞೆಯಿಂದ ಕಾಣುವುದಿಲ್ಲ. ಅವರನ್ನು ವಿನಯದಿಂದ ನುಡಿಸದೆ, ಅವರ ಚರಣಗಳಿಗೆ ಬಾಣಪುಷ್ಪವನ್ನರ್ಪಿಸದೆಯೆ ಕಾರ್ಯಾಚರಣೆಯಲ್ಲಿ ತೊಡಗುವುದಿಲ್ಲ. "ನಿಮ್ಮ ಕಾರುಣ್ಯಾವಲೋಕನವೆನ್ನ ಸಿರಿ ಬೇರೆಮಗೆ ಕಾಳಗದಮ್ಮುಗೆಯ ವಿಕ್ರಮದ ವಿವರಣವಿನ್ನೆ ಫಲಿಸುವುದೆ?"[2] ಎಂದು ಅರ್ಜುನ ಗೋಗ್ರಹಣ ಸಮಯದಲ್ಲಿ ಭೀಷ್ಮನೊಡನೆ ನಿವೇದಿಸಿಕೊಳ್ಳುತ್ತಾನೆ. ಒಂದು ಕುಟುಂಬದ ಅಥವಾ ಸಮಾಜದ ಶಾಂತಿ ಸಾಮರಸ್ಯಗಳ ರಕ್ಷಣೆಗೆ ಇಂಥ ಕೆಲವು ನೀತಿನಿಯಮಗಳು ಅತ್ಯವಶ್ಯವೆಂದು ಆಗಿನ ಜನ ನಂಬಿದ್ದುದುಂಟು. ಶಿಸ್ತು ಅಥವಾ ವ್ಯವಸ್ಥೆ ಸಂಬಂಧಪಟ್ಟ ಜನರ ಅಂಗೀಕೃತ ನಿಯಮಗಳನ್ನವಲಂಬಿಸುತ್ತದೆ. ಇಲ್ಲವಾದರೆ ಅವ್ಯವಸ್ಥೆ ಸಮಾಜವನ್ನೆಲ್ಲ ಆಕ್ರಮಿಸಿಕೊಳ್ಳುತ್ತದೆ; ಸಭ್ಯ ಸಮಾಜದ ಶಿಷ್ಟಜನ ಅನುಸರಿಸಬೇಕಾದ ಕೆಲವು ಮೂಲಭೂತ ನೀತಿಗಳನ್ನು ಕೃಷ್ಣ ಪಾಂಡವರಿಗೆ ಬೋಧಿಸುತ್ತಾನೆ :

---

[1] ಸ ೧೨-೮೮ ; [2] ವಿ ೮-೫೩

ಸೋತು ನಡೆವುದು ಹಿರಿಯರಲಿ ಸಂ। ಪ್ರೀತಿಯನು ಸುಜನರಲಿ ನಿರ್ಮಳ
ನೀತಿಯನು ಪರಿವಾರ ಪುರಜನ ನಾಡುಬೀಡಿನಲಿ[1]

ಪಾಂಡವರಿಗೆ ನಾನಾ ಕಡೆಗಳಿಂದ ಲಭಿಸಿದ ನೀತಿ ಶಿಕ್ಷಣ ಕೌರವರಿಗೆ ದೊರೆತಿದ್ದರೆ ಮೇಲಾಗುತ್ತಿತ್ತೇನೋ.

ಸ್ವಾಮಿ-ಭೃತ್ಯ

ಈ ಕಾವ್ಯದಲ್ಲಿ ಪ್ರತಿಪಾದನೆಗೊಂಡಿರುವ ಸ್ವಾಮಿಭೃತ್ಯಸಂಬಂಧ ಆ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಮೇಲುಕೀಳುಗಳ ಕಲ್ಪನೆಯನ್ನು ಮೂಡಿಸುವ, ವ್ಯಕ್ತಿಸ್ವಾತಂತ್ರ್ಯವನ್ನಪಹರಿಸುವ, ಸ್ವಾಮಿಯಲ್ಲಿ ದರ್ಪಾಹಂಕಾರಗಳನ್ನೂ ಭೃತ್ಯನಲ್ಲಿ ದೈನ್ಯ ಹಾಗೂ ಸ್ವಾರ್ಥಾವಹೇಳನ ಮನೋಭಾವಗಳನ್ನೂ ಬಲಿಯಿಸುವ ಈ ಸಂಬಂಧ ಅಪಾಯಕಾರಿಯಾಗಿ ಕಾಣುವುದು ಸಹಜ. ರಾಜಪುರೋಹಿತಶಾಹಿಯಲ್ಲಿ ಈ ಸಂಬಂಧ ಸ್ವರ್ಗ ನರಕಗಳಷ್ಟು ಅಂತರವನ್ನು ಹೊಂದಿತ್ತು. ಹಣಗಾರ-ಬಡವ, ವರಿಷ್ಠಾಧಿಕಾರಿ-ಕನಿಷ್ಠಾಧಿಕಾರಿ, ಮಾಲೀಕ-ಕಾರ್ಮಿಕ ಇಂಥ ಸಂಬಂಧಗಳಲ್ಲೆಲ್ಲ ಸಾಮರಸ್ಯಕ್ಕಿಂತ ಭಿನ್ನತೆಯೇ ಅಧಿಕ. ಇಲ್ಲೆಲ್ಲ ಪಾಳೆಯಗಾರಿಕೆ ಮತ್ತು ಗುಲಾಮತನಗಳು ತಾಂಡವವಾಡುತ್ತವೆ. ಆತ್ಮಗೌರವಕ್ಕೆ ಭಂಗಬರದ ರೀತಿಯಲ್ಲಿ, ಸ್ವಕರ್ತವ್ಯನಿಷ್ಠೆಯಿಂದ ದುಡಿಯುವಂಥ ಸನ್ನಿವೇಶ ಸೃಷ್ಟಿಯಾಗುವುದಾದರೆ, ಮೇಲು ಕೀಳುಗಳ ಭಾವನೆ ಹರಿದುಹೋಗುವುದಾದರೆ ಮಾನವೀಯತೆಗೆ ಪಟ್ಟಕಟ್ಟಿದಂತಾಗುತ್ತದೆ. ಆದರೆ ಭೀಷ್ಮನಂಥ ಪಿತಾಮಹ ಮತ್ತು ದ್ರೋಣನಂಥ ಗುರು ಸಹ ಅಸ್ವತಂತ್ರರಾಗಿ ಅನ್ಯಾಯವನ್ನು ಪೋಷಿಸಬೇಕಾಗಿ ಬಂದದ್ದು, ಆ ಸಂಬಂಧದ ವೈಫಲ್ಯವನ್ನು ಹೊರಗೆಡಹುತ್ತದೆ. ಯುದ್ಧಪೂರ್ವದಲ್ಲಿ ಧರ್ಮರಾಯ ಆಶೀರ್ವಾದ ಪಡೆಯುವ ಸಲುವಾಗಿ ಮುತ್ತಾತನ ಬಳಿಸಾರಿದಾಗ, "ಆಳುಗೊಂಡನು ಕೌರವನು, ಪರರಾಳುತನವೆಮಗಾಯ್ತು, ಪರಸೇವಾ ಲಘುಸ್ಥಿತರು"[2] ಎಂದು ಭೀಷ್ಮನೂ, ಗುರುವನ್ನು ಸಂಧಿಸಿದಾಗ "ನಿರುತ ಕೌರವನರ್ಥದಲಿ ಕಿಂಕರತೆಯೆಮಗಾಯಿತ್ತು"[3] ಎಂದು ದ್ರೋಣನೂ ಹೇಳುವಲ್ಲಿ ಅಂಥ ಮಹಾನುಭಾವರೂ ತಮ್ಮ ಶರೀರವನ್ನು ಅರ್ಥಕ್ಕಾಗಿ ಮಾರಿಕೊಳ್ಳಬೇಕಾಯಿತೆ ಎನಿಸುತ್ತದೆ. ಸಲಹಿದೊಡೆಯನನ್ನು ಮರೆತವ ಕುಲಕೋಟಿಸಹಿತ ಮಹಾಂಧನರಕದಲ್ಲಿ ಬೀಳುತ್ತಾನೆಂದು ವಿದುರ ಹೇಳುವ ಮಾತು ಸತ್ಯ. ಯುದ್ಧಭೂಮಿಯಲ್ಲಿ ಸ್ವಾಮಿಭೃತ್ಯ ಸಂಬಂಧ ತಪ್ಪಿಹೋಗುವುದಾದರೆ ಒಡೆಯನಿಗೆ ಹಾನಿ ಸಂಭವಿಸುವುದು ಖಂಡಿತ. ಆದ್ದರಿಂದ ಈ ಸಂಬಂಧ ವೀರಯುಗದ ಆದರ್ಶವಾಗಿತ್ತೆಂಬುದನ್ನು ಮರೆಯಲಾಗದು. "ಸ್ವಾಮಿದ್ರೋಹರು ಹೊಕ್ಕ ಮನೆ ಹಾಳಹುದಲಾ"[4] ಎಂಬುದಾಗಿ ದ್ರೋಣಾದಿ ನಾಯಕರು ಮೇಲಿಂದ ಮೇಲೆ ಸಾರುತ್ತಾರೆ. ನಿಷ್ಠೆಯಿಂದ ಸೇವೆ ಸಲ್ಲಿಸುವ ಆಳಿನ ಯೋಗಕ್ಷೇಮಗಳನ್ನು ನೋಡಿಕೊಳ್ಳ

1 ಸ ೧೧-೧೯; 2 ಭೀ ೨-೨೬; 3 ಭೀ ೨-೩೩; 4 ದ್ರೋ ೫-೪೦

ಬೇಕಾದ್ದು ಆಳ್ದನನ ಕರ್ತವ್ಯ. "ಆಳಿನೊಂದಪಮಾನವಾಳ್ದಂಗೆ"[1] ಎಂಬ ಗಾದೆಯಂತೆ ಆಳಿಗೊದಗಿದ ಅಪಯಶಸ್ಸಿಗೆ ಒಡೆಯನೂ ಹೊಣೆಗಾರನಾಗಬೇಕಾಗುತ್ತದೆ.

ಜೋಳದ ಪಾಳಿ

ಹಂಗು, ಋಣ, ಜೋಳದ ಪಾಳಿ, ತಂಬುಲ ಎಂಬ ಮಾತುಗಳು ರಾಜ–ಮಂತ್ರಿ, ಸ್ವಾಮಿ–ಭೃತ್ಯ, ಧನಿಕ–ಬಡವ ಈ ಮೊದಲಾದ ಸಂಬಂಧಗಳಲ್ಲಿ ಮೇಲಿಂದ ಮೇಲೆ ಬಳಕೆಯಾಗುತ್ತವೆ. ಉಪಕಾರಕ್ಕೆ ಪ್ರತಿಯಾಗಿ ನಿರೀಕ್ಷಿಸುವ ಸೇವೆ ಹಂಗು; ಹಿಂದಿರುಗಿಸಬೇಕಾದ ಹಣವೇ ಋಣ; ಇಕ್ಕಿದ ಅನ್ನಕ್ಕೆ ಪ್ರತಿಯಾಗಿ ಸಲ್ಲಿಸಬೇಕಾದ ಸೇವಾಕಾರ್ಯವೇ ಜೋಳದ ಪಾಳಿ, ಅಥವಾ ಉಪ್ಪಿನ ಋಣ. ಉಪ್ಪುಕೊಟ್ಟವನಿಗೆರಡು ಬಗೆದವನು ಮಹಾಪಾಪಕ್ಕೆ ಗುರಿಯಾಗಬೇಕಾಗುತ್ತದೆಂಬ ನಂಬಿಕೆ ಇಂದಿಗೂ ಸಾಮಾನ್ಯ ಜನರಲ್ಲಿ ರೂಢಿಯಲ್ಲಿದೆ. ಜೋಳದ ಪಾಳಿ ಎಂಬ ಮಾತು ಶಾಸನ ಮತ್ತು ಕಾವ್ಯಗಳಲ್ಲಿ ಅನೇಕ ಕಡೆ ಬರುತ್ತದೆ. ಪ್ರಾಣಭಯ ಕಾರಣವಾಗಿ ರಣರಂಗದಿಂದ ಕಾಲ್ತೆಗೆಯುವ ಹೇಡಿಗಳಿಗೆ ಜೋಳಗಳ್ಳರೆಂಬ ಹೆಸರು ಶಾಸನಗಳಲ್ಲಿ ಸಿಗುತ್ತದೆ. ಜೋಳವೇ ಸಾಮಾನ್ಯ ಆಹಾರ ಸಾಮಗ್ರಿಯಾಗಿ ಬಳಕೆಯಲ್ಲಿರುವ ಕಡೆ ಈ ಮಾತು ಪ್ರಸಿದ್ಧಿಯಾಗಿದ್ದಿರಬೇಕು. ಜೋಳ ಎಂದರೆ ಅನ್ನ. ಪಾಳಿ ಎಂದರೆ ಕ್ರಮ ಅಥವಾ ಕರ್ತವ್ಯ. ತಾವು ಪಡೆಯುವ ಭತ್ಯಕ್ಕೆ ಬದಲಾಗಿ ಸೈನಿಕರು ರಾಜನ ಪರವಾಗಿ ಯುದ್ಧದಲ್ಲಿ ಹೋರಾಡಬೇಕಾದ್ದು ಪ್ರಥಮ ಕರ್ತವ್ಯವಾಗಿತ್ತು. ಪಾಂಡವ ಪಕ್ಷಕ್ಕೆ ಸೇರಿಕೊಳ್ಳುವಂತೆ ಪಂಪಭಾರತದ ಕುಂತಿ ಕರ್ಣನನ್ನು ಪ್ರೇರೇಪಿಸುವಾಗ ಈ ಮಾತು ಬರುತ್ತದೆ.[2] ಕುರುಕ್ಷೇತ್ರ ಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ "ಜೋಳದ ಪಾೞಿಯ ನೆರಪಿದಂ ಗಂಡಂ ಪೆಱಂ ಗಂಡನೇ"[3] ಎಂದು ಸೈನಿಕನೊಬ್ಬ ರಣೋತ್ಸಾಹದಿಂದ ಆರ್ಭಟಿಸುತ್ತಾನೆ. ವಿಷ್ಣುವರ್ಧನನ ಸೈನಿಕ ಬಾಸಯ ತಲಕಾಡಿನ ಮೇಲೆ ದಾಳಿ ಮಾಡಿ, ಜೋಳವಾಳಿಗಾಗಿ ಹೋರಾಡಿ ಮಡಿಯುತ್ತಾನೆಂದು ಶಾಸನವೊಂದು ಸಾರುತ್ತದೆ.[4] ರಾಜಭೃತ್ಯರ ಸಂಬಂಧದಲ್ಲಿ ಆಗಾಗ್ಗೆ ಪ್ರಯೋಗವಾಗುವ ವೇಳೆವಾಳಿ ಮತ್ತು ಲೆಂಕವಾಳಿ ಇಂಥದೇ ಪದ್ಧತಿಗಳನ್ನು ಸೂಚಿಸುವ ಪದಗಳು. ಈ ಮೂರು ಪದ್ಧತಿಗಳೂ ಕರ್ನಾಟಕದಲ್ಲಿ ಪ್ರಾಚೀನಕಾಲದಿಂದ ವ್ಯಾಪಕವಾಗಿ ರೂಢಿಯಲ್ಲಿರುವ ವಿಷಯ ಕಾವ್ಯ ಶಾಸನಗಳಿಂದ ತಿಳಿಯುತ್ತದೆ. ಆಗಿನ ಕಾಲದಲ್ಲಿ ಈ ಪದ್ಧತಿಗಳು ಸಾಮಾಜಿಕ ಜೀವನದ ಅವಿಭಾಜ್ಯಾಂಗವಾಗಿದ್ದುವೆಂಬುದನ್ನೂ, ಅವು ಎಲ್ಲ ಕಾಲಕ್ಕೂ ಅನುಸರಣೀಯವಾಗಬೇಕಾಗಿಲ್ಲವೆಂಬುದನ್ನೂ ಮರೆಯಬಾರದು.

ಜೋಳವಾಳಿಗಾಗಿ ಪ್ರಾಣತೆರುವುದೊಂದು ಪುಣ್ಯಕಾರ್ಯವೆಂದು ಕುಮಾರವ್ಯಾಸನ ಕಾಲದ ಸಮಾಜವೂ ಒಪ್ಪಿಕೊಂಡಿತ್ತು. "ಸಲಹಿದೊಡೆಯನ ಜೋಳವಾಳಿಗೆ ತಲೆಯ ಮಾರುವುದೊಂದು ಪುಣ್ಯದ ಫಲವು"[5] ಎಂದು ಕರ್ಣ ತನ್ನ ಕೊನೆಗಾಲದಲ್ಲಿ ನುಡಿಯು

[1] ಸ ೧೪–೧೩೧ ; [2] ಪಂಪ ಭಾರತ, ೯-೮೪ ; [3] ಅದೇ, ೧೦–೪೩ ; [4] ಎಂಎಆರ್ (೧೯೩೪) ; ಪು. ೯೮ ; [5] ಕ ೨೭-೯

ತ್ತಾನೆ. "ಮರಣದ ಹೊತ್ತು ಕೃಷ್ಣನ ಕಾಬ ಸುಕೃತಫಲ"ದಷ್ಟೇ ಅದು ಪವಿತ್ರವಾದುದು. ಆದ್ದರಿಂದ ಪ್ರತಿಯೊಬ್ಬ ಸೈನಿಕನೂ ತಂತನ್ನ ತಲೆಯನ್ನರ್ಪಿಸಲು ತಾ ಮುಂದು ನಾ ಮುಂದು ಎಂದು ಕಾಳಗದಲ್ಲಿ ಮುನ್ನುಗ್ಗುತ್ತಾರೆ. "ಜೋಳವಾಳಿಯೊಳುಂಡು ಮಾಡಿದ ಸಾಲವನು ತಲೆಗಳಲಿ ತಿದ್ದಿದರ್ ಆಳ ತರುಬುವ ಪತಿಗೆ ಹರುಷವ ಮಾಡಿ ತಮತಮಗೆ"[1] ಅಂಥವರಿಗೆ ಯಮಾಲಯ ಸಹ ಸಾಲದಾಗುತ್ತದಂತೆ.

ಸ್ತ್ರೀಸ್ವಾತಂತ್ರ್ಯ

"ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ಸ್ಮೃತಿಕಾರರ ಆದೇಶದ ಪ್ರಭಾವಮುದ್ರೆಯನ್ನು ಕನ್ನಡ ಭಾರತದಲ್ಲಿ ಕಾಣಬಹುದಾದರೂ, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳ ಮೇಲ್ಮಟ್ಟದಲ್ಲಿದ್ದುವೆಂದೇ ಹೇಳಬಹುದಾಗಿದೆ. ಅರಮನೆಯಲ್ಲಿ ತನ್ನ ಸ್ಥಾನಮಾನಗಳ ಭದ್ರತೆಗೆ ಭಂಗ ತರದಂಥ, ತನ್ನ ಮಕ್ಕಳ ಭವಿಷ್ಯ ರಕ್ಷಣೆಗನುವಾಗುವಂಥ ಶರತ್ತುಗಳನ್ನು ಯೋಜನಗಂಧಿಯಂಥ ಹೆಣ್ಣು ತನ್ನನ್ನು ಮದುವೆಯಾಗಲು ಬಂದ ವರನ ಮುಂದೆ ಮಂಡಿಸಬಹುದಿತ್ತೆಂದು ತೋರುತ್ತದೆ. ತನ್ನ ಮತ್ತು ಯೋಜನಗಂಧಿಯ ವಯಸ್ಸಿನಲ್ಲಿ ಬಹು ವ್ಯತ್ಯಾಸವಿಲ್ಲವಾದರೂ, ಅವನು ಮಲತಾಯಿಯನ್ನು ತಾಯಿಗಿಂತ ಮಿಗಿಲಾಗಿ ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಕೃಷ್ಣನಂತು ಸ್ತ್ರೀಸಮಾಜದಲ್ಲಿ ವಿಶಿಷ್ಟ ಪ್ರೀತಿ ಮರ್ಯಾದೆಗಳನ್ನಿರಿಸಿಕೊಂಡಿದ್ದಾನೆ; ದುಃಖಾರ್ತರಾದ ಸ್ತ್ರೀಯರಲ್ಲಿ ಅಪಾರ ಕನಿಕರವನ್ನು ವ್ಯಕ್ತಪಡಿಸುತ್ತಾನೆ; ಅವರ ಬಿಸುಗಂಬನಿಗೆ ಅವನ ಹೃದಯ ಕರಗುತ್ತದೆ. ನಾನಾ ಕೋಟಲೆಗೊಳಗಾದ ದ್ರೌಪದಿಯೆಂದರೆ ತನ್ನ ಸ್ವಂತ ತಂಗಿಗಿಂತ ಒಂದು ಕೈ ಹೆಚ್ಚು ಮೆಚ್ಚು; ಸಲುಗೆ. ಸೋದರತ್ತೆಯಾದ ಕುಂತಿಯಲ್ಲಿ ಅವನಿಗಪಾರ ಗೌರವ. ದುರ್ಯೋಧನನ ತಂಗಿಯನ್ನು ತನ್ನ ತಂಗಿಯೆಂದೇ ಭಾವಿಸಿ, ಅವಳಿಗೆ ವೈಧವ್ಯದೀಕ್ಷೆಯೊದಗಬಾರದೆಂದು ತಿಳಿದು ಭೀಮಾರ್ಜುನರ ಮಿತ್ತುಗೈಗಳಿಂದ ಧರ್ಮರಾಯ ಅವಳ ಗಂಡ ಜಯದ್ರಥನನ್ನು ಪಾರುಗೊಳಿಸುತ್ತಾನೆ.

ಪತಿವ್ರತಾಧರ್ಮದ ಮಹಿಮೆಯನ್ನು ಸಾರುವಲ್ಲಿ, ಅವಳ ಸ್ವಾತಂತ್ರ್ಯವನ್ನು ಮಿತಿಗೊಳಿಸುವಲ್ಲಿ ಭಾರತ ಹಿಂದಿನ ಸ್ಮೃತಿಗಳನ್ನನುಸರಿಸುತ್ತದೆ. ಕೇವಲ ಪತಿಪರಿಚರ್ಯೆಯ ಮಹತ್ವದಿಂದಲೇ ದಿವ್ಯದೃಷ್ಟಿಯನ್ನು ಸಂಪಾದಿಸಿದ ಸತಿಯೊಬ್ಬಳ ಕತೆಯೂ ಇಲ್ಲಿ ಬರುತ್ತದೆ. ಪತಿವ್ರತೆಯ ಶಾಪ ಹುಸಿಯಾಗುವುದಿಲ್ಲವೆಂದು ದುರ್ಯೋಧನನ ಊರುಭಂಗ ಸಮಯದಲ್ಲಿ ಕೃಷ್ಣ ಬಲರಾಮನಿಗೆ ತಿಳಿಸುತ್ತಾನೆ. ಪತಿ ಬದುಕಿರುವಾಗ ಸ್ತ್ರೀಗೆ ಸ್ವಾತಂತ್ರ್ಯವಿಲ್ಲವೆಂಬುದು[2] ವಿದುರನ ಮತ. ವಿಷಮ ಸಮಯದಲ್ಲಿ ಸತಿಯರು ಗಂಡಂದಿರಿಗೆ ವಿವೇಕ ಹೇಳುವುದೂ ಉಂಟು. ಘೋಷಯಾತ್ರೆಯ ಕಾಲದಲ್ಲಿ ಮುಖಭಂಗವಾಗಿ ಊರಿಗೆ ಹಿಂದಿರುಗಿದನಂತರ ವೈರಾಗ್ಯದ ಮುಸುಕು ಹೊದೆದು ಮಲಗಿದ

---

1 ಭೀ ೬-೧೦; 2 ಉ ೩-೨೭

ದುರ್ಯೋಧನನಿಗೆ ಭಾನುಮತಿ ಪಾಂಡವರ ಪರವಾಗಿ ಬುದ್ಧಿವಾದ ಹೇಳುತ್ತಾಳೆ. ತಾನು ಹೇಳಿದ್ದು ತಪ್ಪೋ ಸರಿಯೋ ಎಂಬ ಸಂದೇಹವುಂಟಾಗಿ ಮರುಕ್ಷಣದಲ್ಲಿಯೇ "ನುಡಿಯಲರ್ಮ್ಮೆನು ರಾಜಕಾರ್ಯವ"[1] ಎಂದು ತೆಪ್ಪಗಾಗುತ್ತಾಳೆ.

ಆದರೆ ದ್ರೌಪದಿ ಭಾನುಮತಿಯಷ್ಟು ಸಪ್ಪೆಯಲ್ಲ; ಸಪ್ಪೆಯಲ್ಲದ್ದರಿಂದಲೇ ಅವಳು ಮಾನವುಳಿಸಿಕೊಂಡು ತಲೆಯೆತ್ತಿಕೊಂಡು ಬಾಳುವಂತಾಗುತ್ತದೆ. ತನ್ನ ಪರವಾಗಿ ವಾದಿಸುವ ಜನವಿಲ್ಲದಿರುವಾಗ, ತನ್ನ ಗಂಡಂದಿರು ಮೂಕರಂತಿರುವಾಗ, ಅವಳೇ ವಕೀಲನಂತೆ ವಾದಿಸಬೇಕಾಗುತ್ತದೆ. "ತನ್ನ ಸೋತಾಗಲೆ ಮಹೀಪತಿಯನ್ಯನಾದನು ಸತಿಗೆ, ತನ್ನಿಂ ಮುನ್ನ ಸೋತರೆ ತನ್ನ ಧನವೈಸಲೆ ವಿಚಾರಿಸಲು; ಅನ್ಯನನ್ಯಳ ಸೋತಗಡ"[2] ಎಂಬ ಅವಳ ವಾದವನ್ನು ಬೆಂಬಲಿಸಿದವನು ವಿಕರ್ಣನೊಬ್ಬನೇ. ಸಭಾಸದರಾರೂ ಬಾಯಿತೆರೆಯದಿದ್ದಾಗ "ಹಿರಿಯರಿಲ್ಲದ ಸಭೆ ಮನುಷ್ಯರ ನೆರವಿಯದು ಸಭೆಯಲ್ಲ, ಮೂರ್ಖರು ಹಿರಿಯರಲ್ಲ ಯಥಾರ್ಥ ಭಾಷಣ ಭೀತಚೇತನರು"[3] ಎಂದವಳು ಕಠಿನವಾಗಿ ನುಡಿಯಲಿಕ್ಕೆ ಅಲ್ಲಿಯ ಸಭಿಕರೇ ಪರೋಕ್ಷವಾಗಿ ಪ್ರಚೋದನೆ ನೀಡಿದಂತಾಗಿದೆ. "ಪುಷ್ಪವತಿಯಾಗಲ್ಲಿ ಫಲವತಿಯಾಗು ನಡೆ ಕುರುರಾಜಭವನದಲಿ" ಎಂದು ಮರ್ಯಾದೆ ಮೀರಿ ಮಾತಾಡಿದ, ತನ್ನ ಮುಡಿಗೆ ಕೈಯಿಕ್ಕಿ ಸಭೆಗೆಳೆದುಕೊಂಡು ಬಂದ, ತನ್ನ ಸೀರೆಯನ್ನು ಸೆಳೆಯಲುಪಕ್ರಮಿಸಿದ ದುಶ್ಶಾಸನನ್ನು ಸಹ ಅವಳು ಗ್ರಾಮೀಣ ಸ್ತ್ರೀಯಂತೆ ಬಯ್ಯುವುದಿಲ್ಲ. "ಕ್ರೂರನಿವ ದುಶ್ಶಾಸನನು ಗಾಂಧಾರಿ ಬಿಡಿಸೌ ಸೆರಗ"[4] "ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು, ಭೀಷ್ಮ ಮೊದಲಾದತಿರಥರು ಪರಹಿತವ ಬಿಸುಟರು ವ್ಯರ್ಥಭೀತಿಯಲಿ"[5] ಎಂದಷ್ಟೇ ನುಡಿದು, ಕೃಷ್ಣನಾಮವನ್ನು ಮರೆಹೊಗುತ್ತಾಳೆ. ದುರ್ಯೋಧನ ತೊಡೆ ತೋರಿಸಿ ಅಶ್ಲೀಲ ರೀತಿಯಲ್ಲಿ ವರ್ತಿಸಿದಾಗಲೂ ಅವಳು ಸುಸಂಸ್ಕೃತ ಸ್ತ್ರೀಯಂತೆಯೇ ನಡೆದುಕೊಳ್ಳುತ್ತಾಳೆ. "ಮಾವ ನಿಮ್ಮಯ ನೇತ್ರವಂತರ್ಭಾವದಲಿ ಬೆರಸಿದೊಡೆ ವಿಜ್ಞಾನಾವಲಂಬನದಿಟ್ಟಬೆಂದುದೆ ನಿಮ್ಮ ಹೃದಯದಲಿ"[6] ಎಂದು ಅತ್ತು, "ಪ್ರಾಣವಿದಕೊಳಹೇಳಿರೌ ಸಾಕೂಣೆಯನ ಹೊರಲಾರೆ"[7] ಎಂದು ಭೀಷ್ಮ ದ್ರೋಣರಿಗೆ ಮೊರೆಯಿಟ್ಟುಕೊಳ್ಳುವಾಗ ಯಾರ ಕರುಳಾದರೂ ಕಿವಿಚಿದಂತಾಗದಿರಲಾರದು. ಕೀಚಕ ತನ್ನನ್ನು ಪೀಡಿಸಿದಾಗ, ಮಾನಭಂಗವನ್ನು ಸಹಿಸುವುದಕ್ಕಿಂತ ಆತ್ಮಹತ್ಯೆಯೇ ಶರಣು ಎಂದು ನಿರಾಶೆಯಿಂದ ನಿರ್ಧರಿಸಿಕೊಂಡಾಗ ಮಾತ್ರ, ಕಗ್ಗತ್ತಲೆಯ ಇರುಳಲ್ಲಿ ಭೀಮನೊಬ್ಬನೇ ಇರುವಾಗ "ಗಂಡರೋ ನೀವ್ ಭಂಡರೋ" ಎಂದವಳು ಹಿಡುಕಿದ್ದಲ್ಲದೆ, "ಕಾಮಿನಿಯ ಕೇಳಿಯಲಿ ನೆನೆವುದು" ಎಂದು ಗೋಳಿಡುತ್ತಾಳೆ. ಹೆಂಗಸರ ಹರಿಬವನ್ನು ನೆರವೇರಿಸದವನು ಗಂಡಸಲ್ಲ ಎಂದವಳು ಹೇಳಿದ್ದರಲ್ಲಿ ತಪ್ಪೇನಿಲ್ಲ. "ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು" ಎನ್ನುವಲ್ಲಿ ಎಲ್ಲ ಕಾಲದ ಅರಕ್ಷಿತ ಸ್ತ್ರೀಯರ ಕಟುಸಂಕಟ ಮರುದನಿಗೊಡುತ್ತಿದೆಯೆಂದು ತಿಳಿಯಬೇಕಾಗಿದೆ.

---

[1] ಆ ೨೧-೨೩; [2] ಸ ೧೪-೯೬; [3] ಸ ೧೪-೮೧; [4] ಸ ೧೪-೧೦೫; [5] ಸ ೧೪-೧೦೮; [6] ಸ ೧೪-೨೪; [7] ಸ ೧೪-೨೩

ಅರಮನೆಯಲ್ಲಿ ಬೆಳೆದ, ಪಾಂಡವರಂಥ ಗಂಡಂದಿರ ಕೈಹಿಡಿದ, ಶ್ರೀಕೃಷ್ಣನಂಥ ಅಣ್ಣನನ್ನು ಪಡೆದ, ಆಗಾಗ್ಗೆ ನಾರದಾದಿ ಋಷಿಗಳ ವಚನ ಪೀಯೂಷವನ್ನು ಸವಿಯುತ್ತಿದ್ದ, ಬಾಳಿನುದ್ದಕ್ಕೂ ಕಷ್ಟಪರಂಪರೆಗಳನ್ನನುಭವಿಸಿದ ದ್ರೌಪದಿಯ ತಿಳಿವಳಿಕೆ ಸಾಮಾನ್ಯವಾದದ್ದಲ್ಲ. ತನ್ನ ಗಂಡಂದಿರಿಗೆ ಆಗಾಗ್ಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ವಿವೇಕ ಹೇಳುವ, ಸಮಯ ಸಿಕ್ಕಿದಾಗ ಅವರೊಡನೆ ವಾದ ಮಾಡುವ ಸಾಮರ್ಥ್ಯವನ್ನೂ ದಿಟ್ಟತನವನ್ನೂ ಗಳಿಸಿಕೊಂಡಿದ್ದಾಳೆ. ಶ್ರೀಕೃಷ್ಣ ಹಸ್ತಿನಾವತಿಗೆ ಸಂಧಾನಕ್ಕೆಂದು ಹೊರಡುವ ಮುನ್ನ ಯುದ್ಧವನ್ನೇ ನಿಶ್ಚಯಿಸಿಕೊಂಡು ಬರುವಂತೆ ಅವಳು ಕಡ್ಡಿ ತುಂಡಾಗುವಂತೆ ಹೇಳಿಬಿಡುತ್ತಾಳೆ. ತನ್ನ ಪ್ರತಿಜ್ಞೆ ಪೂರೈಕೆಯಾಗುವ ತನಕ ಬಳಲು ಮುಡಿಯನ್ನು ಕಟ್ಟುವುದಿಲ್ಲವೆಂಬ ದಕ್ಕಡಿಕೆಯೂ ಅವಳಿಗಿದೆ. ಹೆಂಗಸರು ರಾಜಕೀಯ ಕ್ಷೇತ್ರದಿಂದ ದೂರವಾಗಿರಲಿಲ್ಲವೆನ್ನುವುದಕ್ಕೆ ದ್ರೌಪದಿಯೇ ಸಾಕ್ಷಿ.

ಜಾತಿ ಸಾಂಕರ್ಯ ಕುಲಶುದ್ಧಿಗಳ ಕಲ್ಪನೆ ಹಾಗೂ ಸಮಾಜ ಶಾಂತಿಗಳ ಹೆಸರಿನಲ್ಲಿ ಪುರುಷನೆನಿಸಿಕೊಂಡವನು ಹೆಣ್ಣಿನ ಚಲನವಲನಗಳ ಬಗ್ಗೆ ಕೆಲವು ನಿರ್ಬಂಧಗಳನ್ನು ಹೇರಿದಂತೆ ತೋರುತ್ತದೆ. ಆಗಿನ ಕಾಲಕ್ಕೆ ಅವು ಕೌಟುಂಬಿಕ ಅಥವಾ ಸಾಮಾಜಿಕ ಹಿತರಕ್ಷಣೆಯದೃಷ್ಟಿಯಿಂದಅವಶ್ಯವಾಗಿದ್ದುವೆಂದು ಕೆಲವರು ವಾದಿಸಬಹುದಾದರೂ ಅವಳನ್ನು ಕತ್ತಲೆಯ ಕೋಣೆಪಾಲುಮಾಡಿದ್ದು ಸರಿಯೆ ಎಂದು ಯೋಚಿಸಬೇಕಾಗಿದೆ. ಅರಮನೆ ಸಿರಿಮನೆಗಳ ಹೆಂಗಸರನ್ನು ಸಾಮಾನ್ಯಜನ ನೋಡುವಂತಿಲ್ಲ. ದುಃಖಾರ್ತೆಯರಾಗಿ ಯುದ್ಧಭೂಮಿಗೋ ರುದ್ರಭೂಮಿಗೋ ಹೋಗುವಾಗ ಮಾತ್ರ "ಚಾಂಡಾಲ ಜನ ಪರಿಯಂತ ಕಂಡುದು ರಾಯರಾಣಿಯರ"[1]

ಇರುಳು ಹಗಲನವರತ ಪತಿಪರಿ। ಚರುಪವನು ಮಾಡುತ್ತ ಪರಪುರು
ಷರನು ನೆನೆಯದೆ ಹಲವು ಸಂತತಿಗಳಿಗೆ ತಾಯಾಗಿ
ಇರುತ ದೇವ ಬ್ರಾಹ್ಮರನು ತಾ। ನಿರುತ ಸತ್ಕರಿಸುತ್ತಲಂತಃ
ಪುರದಲೆಸೆಯೆ ಗೃಹಸ್ಥೆಯೆನಿಸುವಳರಸ ಕೇಳ್[2]

ಎಂದು ಗೃಹಸ್ಥೆಯ ಕರ್ತವ್ಯವನ್ನು ವಿಶದಪಡಿಸಿದ ಸನತ್ಸುಜಾತಮುನಿ ವಿವಾಹವಿಚ್ಛೇದನ ವಿಧಾನವನ್ನೂ ಸೂಚಿಸಿದ್ದಾನೆ.

ಮಡದಿ ನಿಜನಿಳಯವನು ಬಿಟ್ಟಡಿ। ಗಡಿಗೆ ಪರಗೃಹದೊಳಗೆ ಬಾಯಸು
ಬಡಿದು ಮನೆಮನೆವಾರ್ತೆಯೆನ್ನದೆ ಬೀದಿಗಲಹವನು
ಒಡರಿಚುವ ಪತಿಯೊಬ್ಬನುಂಟೆಂ। ದೆಡಹಿ ಕಾಣದ ದಿಟ್ಟೆ ಹತ್ತಸು
ಹಡೆದೊಡೆಯು ವರ್ಜಿಸುವುದುತ್ತಮ ಪುರುಷರುಗಳೆಂದ[3]

ಶಯನದಲ್ಲಿ ವೇಶ್ಯೆಯಾಗಿ, ಶುಶ್ರೂಷೆಯಲ್ಲಿ ದಾಸಿಯಾಗಿ, ಪತಿಭಕ್ತಿಯಲ್ಲಿ ನಿರ್ದೋಷಿಯಾಗಿ, ಮೋಹದಲ್ಲಿ ತಾಯಿಯಾಗಿ, ರಾಜಕಾರ್ಯದಲ್ಲಿ ಮಂತ್ರಿಯಾಗಿ ಇರಬಲ್ಲಂಥವಳೇ ರಾಣಿಯಾಗಲು ಯೋಗ್ಯೆ ಎಂಬುದು ವಿದುರನ ಅಭಿಪ್ರಾಯ.[4] ಪುರುಷನ ವರ್ತನೆ ಸರಿ

---

[1] ಗ ೧೧-೨೦; [2] ಉ ೪-೭೯; [3] ಉ ೪-೮೮; [4] ಉ ೩-೮೦

ಯಿಲ್ಲದಿರುವಾಗ ಗರತಿ ಅನುಸರಿಸಬೇಕಾದ ಉಪಾಯವನ್ನು ಯಾವ ಕವಿಯೂ ಪ್ರಸ್ತಾ ಪಿಸಿದಂತಿಲ್ಲ.

ಸಹಗಮನ

ಪತಿ ಸ್ವರ್ಗಸ್ಥನಾದಾಗ ಅವನ ಜತೆ ಸೇರುವ ಸಲುವಾಗಿ, ವಿಧವೆಯಾದನಂತರ ಪರ ಪುರುಷನ ಕಡೆಗೆ ಗಮನ ಹರಿಸಬಾರದೆಂಬ ಕಾರಣದಿಂದ ಸತಿಯರ ಸಹಗಮನ ಪದ್ಧತಿ ರೂಢಿಯಲ್ಲಿದ್ದಿರಬೇಕು. ಈ ಪದ್ಧತಿ ಪ್ರಾಚೀನ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಆಚರಣೆಯಲ್ಲಿತ್ತೆಂದು ಹೇಳುತ್ತಾರೆ. ಈ ಹೊತ್ತಿಗೂ ಆ ಅನಾಗರಿಕ ಪದ್ಧತಿಯ ಸಂಕೇತಗಳಾಗಿ ಹಾಗೂ ಸಾಕ್ಷಿಗಳಾಗಿ ನಾಡಿನ ಮೂಲೆ ಮೂಲೆಗಳಲ್ಲಿ ಮಾಸ್ತಿಕಲ್ಲುಗಳು ಗೋಚರಿಸುತ್ತವೆ. ಈ ಪದ್ಧತಿ ಸಾರ್ವತ್ರಿಕವಾಗಿರದೆ, ಸಮಾಜದ ಯಾವುದೋ ವರ್ಗಕ್ಕೆ ಮಾತ್ರ ಸೀಮಿತವಾಗಿತ್ತೆಂದು ತೋರುತ್ತದೆ. ಸಾಮಾನ್ಯ ಜನತೆ ಈ ಪದ್ಧತಿಯನ್ನನುಸರಿಸುತ್ತಿದ್ದರೆನ್ನುವುದಕ್ಕೆ ದಾಖಲೆಗಳಿಲ್ಲ. ಅದು ಆಚರಣೆಯಲ್ಲಿದ್ದ ವರ್ಗಗಳಲ್ಲಿಯೂ ಸರ್ವಸಾಧಾರಣವಾಗಿತ್ತೆ ಎನ್ನುವ ವಿಷಯದಲ್ಲಿಯೂ ಸಂದೇಹವಿದೆ. ಶಂತನು ತೀರಿಕೊಂಡಾಗ ಯೋಜನಗಂಧಿಯಾಗಲಿ, ಪಾಂಡು ತೀರಿಕೊಂಡಾಗ ಕುಂತಿಯಾಗಲಿ ಸಹಗಮನಮಾಡುವುದಿಲ್ಲ. ಈ ಕಾವ್ಯದಲ್ಲಿ ಸಹಗಮನ ಮಾಡುವವಳು ಮಾದ್ರಿಯೊಬ್ಬಳೇ ಎಂದು ತೋರುತ್ತದೆ.

ಬಹುಪತ್ನೀಕತ್ವ

ಬಹುಪತ್ನೀಕತ್ವ ಇತ್ತೀಚಿನ ತನಕ, ಪ್ರಾಯಶಃ ಅಲ್ಲಲ್ಲೆ ಈಗಲೂ ರೂಢಿಯಲ್ಲಿರುವ ಪದ್ಧತಿ. ರಾಜರೆಲ್ಲ ಸಾಮಾನ್ಯವಾಗಿ ಬಹುವಲ್ಲಭರು. ಅವರಿಗೆ ಮತ್ತು ಸಿರಿವಂತರಿಗೆ ಅನೇಕ ಪತ್ನಿಯರ ಜತೆಗೆ ಹಲವು ಗಣಿಕೆಯರೂ ಬೇಕು. ಶ್ರೀಮಂತರ ಸುಖಕ್ಕಾಗಿ ವೇಶ್ಯೆಯರು ಬೇಕಾಗಿದ್ದುದರಿಂದ ವೇಶ್ಯಾಪದ್ಧತಿ ಹೀನವಾದುದೆಂದು ಯಾರೂ ಹೇಳಿದಂತಿಲ್ಲ. ವಿದುರ ದಾಸಿಯ ಪುತ್ರ ; ಯುಯುತ್ಸು ವೇಶ್ಯೆಯಲ್ಲಿ ಹುಟ್ಟಿದವನು ; ತಂತಮ್ಮ ಪತಿಯರ ಹೆಣಗಳನ್ನು ನೋಡುವ ಸಲುವಾಗಿ ರಣಭೂಮಿಗೆ ಬಂದ ಸ್ತ್ರೀ ಕದಂಬದಲ್ಲಿ ಹಲವು ಗಣಿಕೆಯರೂ ಇದ್ದಾರೆ. ಅರ್ಜುನ ಇಂದ್ರನಗರಿಯಲ್ಲಿದ್ದಾಗ ಇಂದ್ರನೇ ಊರ್ವಶಿಯನ್ನು ಅವನ ಬಳಿಗೆ ಕಳಿಸುತ್ತಾನೆ. ಬ್ರಾಹ್ಮಣರು ಮತ್ತು ಕ್ಷತ್ರಿಯರು—ವೈಶ್ಯರೆಂತೋ ಕಾಣೆ—ಯಾವ ವರ್ಣದಿಂದಲಾದರೂ ಗಣಿಕೆಯರನ್ನು ಚುನಾಯಿಸಿಕೊಳ್ಳಬಹುದು, ಇಲ್ಲವೆ ದ್ವಿತೀಯ ಅಥವಾ ತೃತೀಯ ಪತ್ನಿಯರನ್ನು ಸ್ವೀಕರಿಸುವ ಅವಕಾಶವುಂಟು. ಶೂದ್ರರಿಗಂತು ಅಂಥ ಅಧಿಕಾರವಿದ್ದಿರಲಾರದು. ಪರಾಶರ ಬೆಸ್ತರವಳನ್ನು ಕೂಡುತ್ತಾನೆ. ಭೀಮ ಕ್ಷತ್ರಿಯಳಲ್ಲದ ಹಿಡಿಂಬೆಯನ್ನು ಮದುವೆಯಾಗುತ್ತಾನೆ. ಅರ್ಜುನ ಬ್ರಾಹ್ಮಣ ವೇಷದಲ್ಲಿ ಧನುವೇರಿಸಿ ದ್ರೌಪದಿಯನ್ನು ಮದುವೆಯಾಗುವ ಹವಣಿಕೆಯಲ್ಲಿರುವಾಗ ಬ್ರಾಹ್ಮಣರು ಯಾವ ಜಾತಿಯ ಹೆಣ್ಣನ್ನಾದರೂ ಮದುವೆಯಾಗಬಹುದಿತ್ತೆಂದು ಅರ್ಥವಾಗುತ್ತದೆ. ಬಹುಪತಿತ್ವ ಹಿಮಾಲಯದ ಬಳಿಯ ಯಾವುದೋ ಬುಡಕಟ್ಟಿನಲ್ಲಿ

ಇಂದಿಗೂ ರೂಢಿಯಲ್ಲಿದೆಯಂತೆ. ಆ ಬುಡಕಟ್ಟಿನ ಪಳೆಯುಳಿಕೆಗಳು ಭಾರತದಲ್ಲಿ ಎಂದೋ ಸೇರಿಕೊಂಡದ್ದರಿಂದ ಅವು ಅನಿವಾರ್ಯವಾಗಿ ಈಚಿನ ರಚನೆಗಳಲ್ಲಿಯೂ ಉಳಿದುಬಂದಿವೆ ಎಂದಿಟ್ಟುಕೊಳ್ಳಬಹುದು. ಆ ಪದ್ಧತಿ ವೇದಬಾಹಿರವಲ್ಲವೆಂದು ವೇದವ್ಯಾಸ ಹರನ ಮುಖೇನ ಹೇಳುತ್ತಾನೆ.

ಲೈಂಗಿಕ ಸಂಬಂಧ ಹಾಗೂ ಸಂತಾನ ಪ್ರಾಪ್ತಿ

ಪರದಾರಗಮನ ಮತ್ತು ವಿಷಯಲಂಪಟತನಗಳನ್ನು ಶಾಸ್ತ್ರಗಳು ನಿಷೇಧಿಸುತ್ತಿದ್ದರೂ, ಕೆಲವು ಸಂದರ್ಭಗಳಲ್ಲಿ ಲೈಂಗಿಕ ಸಂಬಂಧವಾದ ಕಟ್ಟಳೆಗಳಲ್ಲಿ ಸಡಿಲಿಕೆ ಇದ್ದಂತೆಯೇ ತೋರುತ್ತದೆ. ಅಂಬಿಗಿತಿ ಕನ್ಯೆಯಾದರೂ ಲೆಕ್ಕಿಸದೆ, ಮಂಜುತೆರೆ ಸೃಷ್ಟಿಸಿ, ಪರಾಶರ ಮಹರ್ಷಿ ಅವಳನ್ನು ಕೂಡುತ್ತಾನೆ. ಅವನ ಮಗ ವೇದವ್ಯಾಸ ನಿಯೋಗ ಸಂಪ್ರದಾಯದ ಪ್ರಕಾರ, ತಾಯಿಯ ಬಯಕೆಗನುಗುಣವಾಗಿ ಭರತವಂಶದ ಕುಡಿಯನ್ನು ಬೆಳೆಸುವ ಸಲುವಾಗಿ, ತಮ್ಮಂದಿರ ಮಡದಿಯರಾದ ಅಂಬಿಕೆ ಅಂಬಾಲಿಕೆಯರಲ್ಲಿ ಗರ್ಭದಾನ ಕ್ರಿಯೆ ಪೂರೈಸುತ್ತಾನೆ. ಮತ್ತೆ ಧೃತರಾಷ್ಟ್ರನಿಗೆ ಮಕ್ಕಳಾಗದಿರಲು ವೇದವ್ಯಾಸಮುನಿ ಅವನನ್ನೂ ಕರೆದು ಕಟ್ಟೇಕಾಂತದಲ್ಲಿ ಮಂತ್ರ ಪಿಂಡಕವನ್ನು ಕರುಣಿಸಿ, ಗಾಂಧಾರಿಗೆ ಕೊಡುವಂತೆ ಹೇಳುತ್ತಾನೆ.[1] ಕನ್ನೆಯಾಗಿದ್ದಾಗಲೇ ಕುಂತಿ ದೂರ್ವಾಸ ಋಷಿ ಕೊಟ್ಟ ಐದು ಮಂತ್ರಗಳಲ್ಲೊಂದನ್ನು ನೆನೆದು ಸೂರ್ಯನನ್ನು ಬರಿಸಿಕೊಂಡು ಕರ್ಣನನ್ನು ಪಡೆಯುತ್ತಾಳೆ. ಮುನ್ನಿನ ಕನ್ನೆತನ ಕೆಡದಿರಲೆಂದು ಸೂರ್ಯ ಅವಳನ್ನು ಮುಟ್ಟಿ ಹರಸುತ್ತಾನೆ.[2] "ಭಗವದನುಗ್ರಹದಿಂದ ಸುತರುದ್ಭವಿಸಿದರೆ ಲೇಸನ್ಯಥಾ ಸಂಭವಿಸಿದರೆ ದುಷ್ಕೀರ್ತಿವಧುವೆಂಜಲಿಸಳೇ ಕುಲವ?"[3] ಎಂದು ಪುತ್ರಾಭಿವಾಂಛೆಯಿಂದ ಕುಂತಿ ತನ್ನಲ್ಲಿದ ಮಂತ್ರಗಳ ವಿಷಯವನ್ನು ಗಂಡನಿಗೆ ವಿವರಿಸುತ್ತಾಳೆ. ಪರಮ ವೈದಿಕ ಸಿದ್ಧವಿದು, ಧರಿಸು ಮುನಿ ಮಂತ್ರೋಪದೇಶವ, ಅದುವೆ ನಿರ್ದೋಷ ಎಂದು ಪಾಂಡು ಅನುಮತಿ ನೀಡುತ್ತಾನೆ. ಮಂತ್ರಾಕ್ಷರಗಳನ್ನುಚ್ಚರಿಸುತ್ತಿದ್ದಂತೆಯೇ ಕೃತಾಂತ ಅವಳ ಮುಂದೆ ಪ್ರತ್ಯಕ್ಷನಾಗುತ್ತಾನೆ. ಲಜ್ಜಾವನತೆಯೂ "ಭಯ ಪರಿವಿತತ ವಿಮಲ ಸ್ವೇದಜಲ ಕಂಪಿತೆಯೂ" ಆದ ಕುಂತಿಯನ್ನವನು ಮುಟ್ಟಿ ತಥಾಸ್ತು ಎಂದು ಹರಸಿ ಅವಳಿಂದ ಬೀಳ್ಕೊಳ್ಳುತ್ತಾನೆ. ಮುಂದಿನ ಮಕ್ಕಳು ಹುಟ್ಟಿದ್ದೂ ಹೀಗೆಯೇ. ಋಷಿಮೂಲವನ್ನರಸ ಕೂಡದೆಂದು ದೊಡ್ಡವರು ಹೇಳುವುದುಂಟು. ಒಬ್ಬ ಋಷಿಯ ತಂದೆ ಯಾರೆನ್ನುವುದು ತಿಳಿದಿದ್ದರೆ ತಾಯಿಯ ವಿಷಯ ಗೊತ್ತಿರುವುದಿಲ್ಲ. ಪರಮ ತಪೋಧನನಾದ ಶರವನ್ನು ಧನುಸಹಿತ ಅರಣ್ಯದಲ್ಲಿರುವಾಗ ಸುರವಧುವೊಬ್ಬಳನ್ನು ಕಾಣುತ್ತಾನೆ. ಅವಳನ್ನು ಕಂಡಾಕ್ಷಣವೇ ಅವನು ಕಾಮಜ್ವರಿತನಾಗುತ್ತಾನೆ; ಸ್ಖಲನೆಗೊಂಡ ವೀರ್ಯವನ್ನು ಶರಸ್ತಂಭದಲ್ಲಿ ರಕ್ಷಿಸಲು, ಕೃಪಕೃಪೆಯರುದಿಸುತ್ತಾರೆ. ಅಂತೆಯೇ ಭಾರದ್ವಾಜ ಋಷಿ ಮತ್ತೊಬ್ಬ

---

[1] ಆ ೪-೧೦; [2] ಆ ೩-೧೯; [3] ಆ ೪-೩೩

ದಿವಿಜಾಂಗನೆಯನ್ನು ಕಂಡಾಗ ಚಲಿಸಿದ ವೀರ್ಯವನ್ನು ಕನಕಕಲಶದಲ್ಲಿರಿಸಿ ಪೋಷಿಸಿದಾಗ ದ್ರೋಣ ಜನ್ಮ ತಾಳುತ್ತಾನೆ. ಈ ನಳಿಕೆಯ ಮಕ್ಕಳು ಮುಂದೆ ಲೋಕೋತ್ತರ ಸಿದ್ಧಿ ಪ್ರಸಿದ್ಧಿಗಳನ್ನು ಪಡೆಯುತ್ತಾರೆ.

ವಿವಾಹ

ಮದುವೆಯಿಲ್ಲದೆಯೂ ಮಕ್ಕಳಾಗಬಹುದಷ್ಟೆ. ಅದೊಂದು ಕಾಲ. ಸಮಾಜವನ್ನೊಟ್ಟುಗೂಡಿಸಲು, ಅದಕ್ಕೊಂದು ಭದ್ರತೆಯನ್ನು ತಂದುಕೊಡಲು, ಜತೆಗೆ ಶಾಂತಿಕ್ಷೇಮಗಳನ್ನು ಸಾಧಿಸಲು ಮದುವೆ ಅತ್ಯವಶ್ಯ. ಮದುವೆಯಿಂದ ಕುಟುಂಬ, ಕುಟುಂಬದಿಂದ ಸಮಾಜ. ಸ್ಮೃತಿಕಾರರು ಅಷ್ಟವಿಧವಿವಾಹ ಪದ್ಧತಿಗಳನ್ನು ಹೆಸರಿಸುತ್ತಾರೆ. ಅವುಗಳಲ್ಲಿ ಗಾಂಧರ್ವ ಸ್ವಯಂವರ ಪದ್ಧತಿಗಳು ಸರ್ವಸಾಮಾನ್ಯವಾದಂಥವು. ಬೇರೆ ರಾಜರನ್ನು ವರಿಸಲಿದ್ದ ಕಾಶಿರಾಜನ ಮಕ್ಕಳನ್ನು ಭೀಷ್ಮ ಬಲಾತ್ಕಾರವಾಗಿ ಎಳೆದು ತಂದು ತನ್ನ ತಮ್ಮಂದಿರಿಗೆ ಮದುವೆ ಮಾಡಿಸುತ್ತಾನೆ. ಸನ್ಯಾಸಿವೇಷದಲ್ಲಿದ್ದ ಅರ್ಜುನ ಕೆಲವು ಜನ ಹಿರಿಯರಿಗೆ ತಿಳಿಸದೆಯೆ ಸುಭದ್ರೆಯನ್ನು ಗುಟ್ಟಾಗಿ ಮದುವೆಮಾಡಿಕೊಂಡು ಇಂದ್ರಪ್ರಸ್ಥನಗರಕ್ಕೆ ಕರೆತರುತ್ತಾನೆ. ದೇಶಭ್ರಮಣ ಸಮಯದಲ್ಲಿ ಅವನು ಉಲೂಪಿ ಚಿತ್ರಾಂಗದೆಯರ ಪಾಣಿಗ್ರಹಣ ಮಾಡಿಕೊಳ್ಳುತ್ತಾನೆ. ಸ್ವಯಂವರ ಪದ್ಧತಿಯಲ್ಲಿ ಸಾಮಾನ್ಯವಾಗಿ ಬಾಲ್ಯ ವಿವಾಹಕ್ಕಿಂತ ಪ್ರೌಢವಿವಾಹವೇ ಹೆಚ್ಚು ಬಳಕೆ. ದ್ರೌಪದಿ ಸ್ವಯಂವರದ ಹೊತ್ತಿಗೆ ಅವಳಿಗೆ ೧೬–೧೭ ವರ್ಷಗಳೂ, ಧರ್ಮರಾಯನಿಗೆ ೩೫–೩೬ ವರ್ಷಗಳೂ ಆಗಿದ್ದಿರಬೇಕು.

ಹಿಂದಿನ ಕಾಲದಲ್ಲಿ ಸ್ವಯಂವರ ವ್ಯವಸ್ಥೆ ತುಂಬ ಅದ್ಧೂರಿಯಿಂದ ನಡೆಯುತ್ತಿದ್ದು, ಆಯಾಯ ರಾಜರ ಶ್ರೀಮಂತ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಿರುತ್ತಿತ್ತು. ದ್ರೌಪದಿಯ ವೈವಾಹಮಂಟಪದ ರಚನೆಯಲ್ಲಿ ಸುರಲೋಕದ ವೈಭವವನ್ನು ಭಟ್ಟಿಯಿಳಿಸಿದಂತಿದೆ.[1] ದೇಶದ ಮೂಲೆ ಮೂಲೆಯಿಂದ ಕವಿ ಗಮಕಿ ವಾದಿ ವಾಗ್ಮಿ, ಮಾಂತ್ರಿಕರು ಯಾಜ್ಞಿಕರು, ಗಾಯಕರು, ನರ್ತಕರು, ನಟ್ಟುವರು, ವೈಷ್ಣವ ಮಹೇಶ್ವರ ಜೈನ ಭೈರವ ಬುದ್ಧ ಲಿಂಗಿಗಳು, ವಿವಿಧ ವರ್ಣಾಶ್ರಮನಿಷ್ಠರು, ಚಾರಣರು, ಕೈವಾರಿಗಳು, ಬಂದು ವಿವಾಹಮಂಟಪದಲ್ಲಿ ನೆರೆಯುತ್ತಾರೆ. ಯಂತ್ರಭೇದನಾನಂತರ ಮದುವೆ ಬಹು ಕ್ಷಿಪ್ರದಲ್ಲಿ ಮುಗಿದುಹೋಗುತ್ತದೆ. ಮೆಟ್ಟಕ್ಕಿ ಗುಡಜೀರಿಗೆ ಹೋಮ ದಾನ ಪೂಜೆ ಓಕುಳಿ ಈ ಹೆಸರುಗಳ ಬರಿಯ ಉಲ್ಲೇಖನದಿಂದಲೇ ಕವಿ ಮದುವೆಗೆ ಮಂಗಳ ಹಾಡಿಬಿಡುತ್ತಾನೆ. ಲೈಂಗಿಕ ಸಂಬಂಧದಲ್ಲಿ ಸಂಯಮವನ್ನು ಸಾಧಿಸುವ ಸಲುವಾಗಿಯೂ ಮದುವೆ ಅನುಕೂಲವಾಯಿತು. ಇದರಿಂದ ಪರಸ್ತ್ರೀ ವ್ಯಸನಮಾತ್ರವಲ್ಲ, ಲಂಪಟತ್ವಕ್ಕೂ ಪೂರ್ಣ ವಿರಾಮ ಹಾಕುವಂತಾಯಿತು. ಆದರೂ ಅನೈಸರ್ಗಿಕಸಂಭೋಗದ ಚಾಳಿ ಬೆಳಸಿಕೊಂಡವರು ಇಲ್ಲದಿಲ್ಲ. ಅದನ್ನು ಕುಮಾರವ್ಯಾಸನೂ ಗಮನಿಸಿದ್ದಾನೆ :

[1] ಆ ೪-೭೪

ಯೋನಿಯಲ್ಲದ ಠಾವುಗಳಲಿ ವಿಯೋನಿಯುಹ ವಿಷಯಂಗಳಲಿ ಪಶು
ಯೋನಿಯಲಿ ಸಂಭೋಗಿಸುವ ಪಾತಕರ ಪರಿವಿಡಿಯ
ಏನ ಹೇಳಲುಬಹುದು ನರಕವಿ! ತಾನದೊಳಗೋಲಾಡಿ ಬಳಿಕಾ
ಶ್ವಾನಯೋನಿಯೊಳವರು ಜನಿಸುವರೆಂದನಾ ಮುನಿಪ[1]

ಇದನ್ನು ಹೇಳಿದ ಮುನಿಪ ಸನತ್ಸುಜಾತ. ಸಮಾಜದಲ್ಲಿರುವ ಲೋಪದೋಷಗಳನ್ನೆಣಿಸಲು ಆದಿಶೇಷನಿಗೂ ಕಷ್ಟವೆಂದು ತೋರುತ್ತದೆ.

ಸಭಾಸ್ಥಾನ

ದಸರೆಯ ದರ್ಬಾರು ನೋಡಿದವರು ಹಿಂದಿನಕಾಲದ ಸಭಾಸ್ಥಾನಗಳ ವೈಭವವನ್ನು ತಕ್ಕಮಟ್ಟಿಗಾದರೂ ಊಹಿಸಿಕೊಳ್ಳಬಹುದು. ಮಾವುತರು, ಮಲ್ಲರು, ಶಿಲ್ಪಿಗಳು, ಮಾಯಾಕೋವಿದರು, ಜೂಜಾಳಿಗಳು, ವಿದೇಶಿಗಳು, ಮೃಗಜೀವಿಗಳು, ಶಾಕುನಿಕರು, ರಥಿಕರು, ರಾಹುತರು, ಜೋದರು, ಪದಾತಿಗಳಿಂದ[2], ಕರಣಿಕರು, ವೈದ್ಯರು, ಭರತ ನಿಪುಣರು, ಪಾಠಕರು, ಕುರಿತುರಗ ಶಿಕ್ಷಕರು, ಲಕ್ಷಣ ಪರಿಣತರು, ಸಾಮಂತರು, ಪರಿಹಾಸಕರು, ವೈತಾಳಿಕರು, ಕವಿ ಗಮಕಿ ವಾದಿ ವಾಗ್ಮಿಗಳಿಂದ[3] ಸಭಾಸ್ಥಾನ ಕಿಕ್ಕಿರಿದಿರುತ್ತದೆ. ಒಂದು ಕಡೆಯಲ್ಲಿ ಕವಡಿಕೆಯ ಜೂಜು, ಮತ್ತೊಂದು ಕಡೆ ಗದ್ಯಪದ್ಯಗಳ ರಚನೆ, ಮಗುದೊಂದು ಕಡೆ ವಾರವಧುಗಳ ಸಂಗೀತ, ಪಕ್ಕದಲ್ಲಿಯೇ ತರ್ಕಗೋಷ್ಠಿ, ನಡುವಣಂಗಳದಲ್ಲಿ ರಾಜರ ಜೂಜು ಸಾಗುತ್ತವೆ.[4] ದೊರೆ ಬೀಡುಬಿಟ್ಟಲ್ಲಿಯೇ ಸಭಾಸ್ಥಾನವೇರ್ಪಡುತ್ತದೆ. ದುರ್ಯೋಧನ ಘೋಷಯಾತ್ರೆಗೆ ಹೊರಟಾಗ ಕಂಚುಕಿಗಳು, ಗಣಿಕೆಯರು, ಯುವತಿಯರು, ವಂದಿ ಪಾಠಕರು, ಕವಿವಿದ್ವಾಂಸರು, ಕಥಕಸುನರ್ತಕರು, ಮಲ್ಲರು, ಬೇಟೆಗಾರರು ಗುಂಪು ಗುಂಪಾಗಿ ಜತೆಗೂಡುತ್ತಾರೆ. ಕಾಡೆನ್ನದೆ ಆಶ್ರಮವೆನ್ನದೆ ಸ್ವೇಚ್ಛಾಚಾರಿಣಿಯರಾಗಿ ಓಡಾಡುತ್ತಿದ್ದ ರಾಜಪರಿವಾರದ ಯುವತಿಯರ ಅಂಗಭಂಗಿಗಳು ಆಧುನಿಕ ಯುವತಿಯರನ್ನು ನಾಚಿಸುವಂತಿವೆ.

ಬಲುಮೊಲೆಗಳಳ್ಳಿರಿಯಲೇಕಾ! ವಳಿಗಳನು ಕೆಲಕೊತ್ತಿ ಮೇಲುದ
ಕಳಚಿ ನಡುಗಿಸಿ ನಡುವವನಂಜಿಸಿ ಜಘನ ಮಂಡಲಪ
ಅಳಕನಿಕರವ ಕುಣಿಸಿ ಮಣಿಕುಂ! ಡಲವನಲುಗಿಸಿ ಹಣೆಯ ಮುತ್ತಿನ
ತಿಲಕವನು ತನಿಗೆದರಿ ನಡೆದುದು ಕೂಡೆ ಸತಿನಿವಹ[5]

ಅಷ್ಟೇ ಅಲ್ಲ, ಉಪಾಧ್ಯರ ಮೋರೆಗಳನ್ನು ಬೆರಲಿನಿಂದ ಅಣಕಿಸುತ್ತಾರೆ, ದೀಕ್ಷಿತರ ಚಂಡಿಕೆಗಳನ್ನು ಹಿಡಿದುಕೊಳ್ಳುತ್ತಾರೆ: ಅವರ ಮೌಂಜಿಮೇಖಲೆಗಳನ್ನು ಸೆಳೆಯುತ್ತಾರೆ, ಯಜ್ಞೋಪವೀತಕ್ಕೆ ಎಂಜಲನ್ನು ಸವರುತ್ತಾರೆ. ದೊರೆ ಎಂತೋ ಅವನ ಸಭಾಸ್ಥಾನದ

---

[1] ಆ ೧೨ನೆಯ ಸಂಧಿ, ಪದ್ಯಗಳು ೭೮ರಿಂದ ೮೯ರ ವರೆಗೆ; [2] ಉ ೨-೨೭; [3] ಉ ೨-೨೬; [4] ಸ ೧೩-೩೩; [5] ಆ ೧೮-೨೨

ಜನರೂ ಅಂತೆಯೇ. ಕೃಷ್ಣಸಂಧಾನಕ್ಕೆಂದು ಬಂದಾಗಿನ ದುರ್ಯೋಧನ ಆಸ್ಥಾನ ವರ್ಣನೆ ಸರ್ವಾಂಗಸುಂದರವಾಗಿದೆ. ಯಾರಾರು ಎಲ್ಲೆಲ್ಲಿ ಕುಳಿತುಕೊಳ್ಳಬೇಕೆಂಬ ವಿವರಗಳು ಕಣ್ಣಿಗೆ ಕಟ್ಟಿದಂತಿವೆ. ಶಶಿವದನೆಯರು, ರಾಜಕುಮಾರರು, ಕಲಾವಿದರು, ಮಂತ್ರಿಗಳು, ನಿಗಮತರ್ಕ ಪುರಾಣ ಕೋವಿದರಾದ ಗಡ್ಡದುಪಾಧ್ಯರು ಸಾಲಾಗಿ ಮೆರೆದಿದ್ದರು. "ಸಲೆಸಮುಸ್ಯದನಂತ ಪದ್ಯದ ಘಳಿಲನನ್ವಯಸುವ ಸುಕಾಂತಿಯ....ಹಲವುಪಮೆ ಉತ್ಪ್ರೇಕ್ಷೆ ....ಚಮತ್ಕೃತಿಗಳ ಚತುರ್ಭಾಷಾ ವಿಶಾರದರಾದ" ಕವಿಗಳು, ಗಮಕಿಗಳು, ತಾರ್ಕಿಕರು ರಾರಾಜಿಸುತ್ತಿದ್ದರು. ಇವರೆಲ್ಲರಿಗೆ ಶಿಖರಪ್ರಾಯವಾಗಿ "ಕರಗುಪಿತಲೋಲುಪರು, ಲಂಚದ ಪರಮಜೀವನ ಜಾಣರಾ ಸಿರಿಕರಣದವರೊಪ್ಪಿದರು" ಆ ಸಭೆಯಲ್ಲಿ. ಹೀಗೆಯೇ ಆ ಸಭೆಯ ವೈಭವದ ವರ್ಣನೆ ಬೆಳೆಯುತ್ತದೆ.[1] ಮಯ ನಿರ್ಮಿತ ಸಭಾಸ್ಥಾನ ಹಾಗೂ ಅದಕ್ಕೆ ಪ್ರತಿಸ್ಪರ್ಧಿಯೆಂಬಂತೆ ರಚನೆಗೊಂಡ ದುರ್ಯೋಧನನ ಸಭಾಸ್ಥಾನಗಳು ಆಗಿನ ಶಿಲ್ಪವೈಭವಕ್ಕೂ ಕಲಾಭಿರುಚಿಗೂ ಸಾಕ್ಷಿಯಾಗಿವೆ.

ವಿವಿಧ ವೃತ್ತಿಗಳು—ವೃತ್ತಿದ್ವೇಷ

ರಾಜನ ಸುತ್ತಮುತ್ತಣ ಅಧಿಕಾರಿಗಳ ಮತ್ತು ವೃತ್ತಿಜೀವಿಗಳ ಆದರ್ಶಗುಣಗಳನ್ನು ನಾರದ ವಿದುರನೀತಿಗಳಲ್ಲಿ ಪಟ್ಟಿಮಾಡಿದೆ. ಮಂತ್ರಿ, ಛತ್ರಧಾರಕ, ಕಾಲಾಳು, ರಾವುತ, ಜೋದ, ರಥಿಕ, ಸೇವಕ, ಸೇನಾಪತಿ, ಸಂಧಿವಿಗ್ರಹಿ, ಭಂಡಾರರಕ್ಷಕ, ತಾಂಬೂಲ ಧಾರಕ, ಸೂಪಕಾರ, ಪಡಿಹಾರಿ, ಗಾಯಕ, ವಿದ್ವಾಂಸ, ಮಲ್ಲ, ಚಮರಧಾರಕ, ವಾಹಕ, ಬೆಸವನ, ಇತ್ಯಾದಿ ವೃತ್ತಿಕಾರರಿಗೆ ಎಂಥ ಅರ್ಹತೆಯಿರಬೇಕು, ಅವರು ಯಾವ ರೀತಿಯಲ್ಲಿ ವರ್ತಿಸಬೇಕು ಎಂಬ ವಿವರಗಳು ಅಲ್ಲಿ ಸಿಗುತ್ತವೆ. ಉದಾರ ಧರ್ಮೋದ್ಧಾರಸಾರ ಮಂತ್ರವಿಚಾರ, ಭುವನಾಧಾರ, ಸುಜನಸ್ವಾಮಿ ಕಾರ್ಯಾಗಾರ ನೆನಿಸುವನೇ ಮಂತ್ರಿ.[2] ಮತಿವಿದನ, ಭಾಷಾವಳಿಲಿಪಿಜ್ಞನ, ಮಾಂಡಳಿಕ ಸಾಮಂತರ ವಿಶೇಷದಲಸರವನರಿದು ಸಲೆಕರೆವ ಕಳುಹಿಸುವ ನಿಲಿಸುವ ಬಲುಹನುಳ್ಳನವನೆ ಸಂಧಿ ವಿಗ್ರಹಿ[3] ಎಂದು ಮುಂತಾಗಿ ಅನೇಕ ವಿಚಾರಗಳು ಇಲ್ಲಿ ಉಲ್ಲೇಖಗೊಂಡಿವೆ. ಈ ಅಧಿಕಾರಿ ಮತ್ತು ವೃತ್ತಿಕಾರರೊಳಗೆ ಮಾತ್ಸರ್ಯ ಮಸೆಯುತ್ತಿದ್ದಿರಬೇಕೆಂಬ ಸಂಗತಿ ಮುಂದಿನ ಪದ್ಯದಿಂದ ವಿದಿತವಾಗುತ್ತದೆ.

> ಕರಣಿಕರು ಕರಣಿಕರೊಡನೆ ಸಹ। ಚರರು ಸಹಚರರೊಡನೆ ಸಾಮಂ
> ತರಲಿ ಸಾಮಂತರುಗಳಾ ಮಂತ್ರಿಯಲಿ ಮಂತ್ರಿಗಳು
> ತರುಣಿಯರು ತರುಣಿಯರೊಡನೆ ಪರಿ। ಕರರು ಪರಿಕರರೊಡನೆಯಿರದೊರ
> ಸೊರಸು ಮಿಗೆ ಮಸೆವುದು ಕಣಾ[4]

---

[1] ಉ. ಪರ್ವ, ಸಂಧಿ ೬, ಪದ್ಯಗಳು ೨೮ರಿಂದ ೪೬ರ ವರೆಗೆ; [2] ಸ ೧-೭೨; [3] ಉ ೩-೮೯; [4] ಆ ೮-೫೦

ಎಂದು ಶಕುನಿ ದುರ್ಯೋಧನನಿಗೆ ವಿವರಿಸುತ್ತಾನೆ. ಕೆಲವು ವೃತ್ತಿಕಾರರನ್ನು ಮೇಲೆ ಹಾಕಿಕೊಂಡರೆ, ಹಾಕಿಕೊಂಡವರ ಹಣೆಬರಹ ಮುಗಿದಂತೆಯೇ ಎಂದು ವಿದುರ ಹೇಳುತ್ತಾನೆ. ಅವನ ಆ ಮಾತು ಇಂದಿನ ಪರಿಸ್ಥಿತಿಗೂ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ.

ಕರಣಿಕನ ಹಗೆಗೊಂಡವಂಗೈ। ಶ್ವರಿಯ ಹಾನಿ ಚಿಕಿತ್ಸಕನನಾ
ದರಿಸದಾತಂಗಾಗದಾಯುಷ್ಯಾಭಿವೃದ್ಧಿಗಳು
ಅರಸ ಕೇಳಾಯುಷ್ಯಭಾಗ್ಯಗ। ಳೆರಡು ಕೆಡುವವು ತಪ್ಪದವನಿ
ಸುರರ ಬದ್ಧದ್ವೇಷ ಲೇಸಲ್ಲೆಂದನಾ ವಿದುರ[1]

ಕೃಷಿ

ರಾಟೆಮೇಟಿಗಳಿದ್ದರೆ ರಾಜದಂಡ ನಡೀತದೆ ಎಂದು ಹೇಳುವುದುಂಟು. ಈ ಹೊತ್ತಿಗೂ ಅಷ್ಟೆ, ಕೃಷಿ ನಡೆದರೆ ಕೋಶ, ಇಲ್ಲದಿದ್ದರೆ ಎಲ್ಲವೂ ಮೋಸ. ಬೇಸಾಯ ನಿಂತು ಹೋದರೆ ಕೈಗಾರಿಕೆಗಳಿಗೆ ಗ್ರಹಣ, ವಿಜ್ಞಾನಕ್ಕೆ ಅರ್ಧಚಂದ್ರ. ಅಧಿಕಾರಿಗಳ ದರ್ಬಾರಿಗೆ ಕೃಷಿಯ ಕಾರುಬಾರೇ ಕಾರಣ. ಈ ಬಗ್ಗೆ ಸರ್ವಜ್ಞ ಸ್ಪಷ್ಟವಾಗಿ ನುಡಿದಿದ್ದಾನೆ:

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯವೆ ಮೇಲು
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ
ದಾಟವೆ ಕೆಡುಗು ಸರ್ವಜ್ಞ

ಎಂದು. ವಿಜ್ಞಾನಿ ಅಂಗಾರಗ್ರಹವನ್ನು ಮರೆಹೊಕ್ಕರೂ ಬೇಸಾಯದಿಂದಾದ ಅನ್ನದಿಂದಲೇ ಹರಣ ಹೊರೆಯಬೇಕು. ಭಾರತಕಾರ ಕೃಷಿಯ ಮಹತ್ವವನ್ನು ಮತ್ತಷ್ಟು ಸ್ಪಷ್ಟಪಡಿಸಿದ್ದಾನೆ.

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ। ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
ವಸು ತೆರಳುವುದು ವಸುವಿನಿಂ ಸಾ। ಧಿಸುವಡಾವುದಸಾಧ್ಯವದರಿಂ
ಕೃಷಿ ವಿಹೀನರ ದೇಶವದು ಮರ್ದೀಶ ಕೇಳೆಂದ[2]

ಬೇಸಾಯಗಾರರ ಹಿತವನ್ನು ರಕ್ಷಿಸದಿದ್ದರೆ ದೇಶಕ್ಕೆ ಕೇಡೊದಗುತ್ತದೆಂಬುದು ಎಲ್ಲ ಕಾಲಕ್ಕೂ ಸತ್ಯವಾದ ಮಾತು. "ಕೃಷಿ ಕೆಡುಗುಪೇಕ್ಷೆಯಲಿ" ಎನ್ನುವ ಮಾತು ರೈತ ಮತ್ತು ಸರ್ಕಾರಗಳೆರಡಕ್ಕೂ ಅನ್ವಯಿಸುತ್ತದೆ. ರೈತನಿಗಿರುವ ಒಂದೇ ಒಂದು ಆಸೆಯೆಂದರೆ ನೆಲ. ಉಳುವಾಗ ಒಂದು ಗೆರೆಯನ್ನಾದರೂ ಒತ್ತರಿಸದಿದ್ದರೆ ಅವನಿಗೆ ತೃಪ್ತಿಯಿಲ್ಲ, ಉಂಡನ್ನ ಮೈಹತ್ತುವುದಿಲ್ಲ. ಈ ಚಾಳಿ ಯಾವ ಕಾಲದಲ್ಲಿಯೂ ಇದ್ದದ್ದೇ ಎಂಬ ಸಂಗತಿ ನಾನಾ ಮೂಲಗಳಿಂದ ತಿಳಿಯುತ್ತದೆ. "ಬಲುಕರಿಸಿ ಭೂಮಿಯೊಳಗೊಂದಂಗುಲವನೊತ್ತಿದವಂಗೆ, ಪಶುಸಂಕುಲದಲೊಂದೇ ಗೋವನಪಹರಿಸಿದ ದುರಾ

---

[1] ಉ ೩-೧೮ ; [2] ಸ ೧-೬೪

ತ್ಮಂಗೆ....ನರಕದೊಳಿಳಿವುದಲ್ಲದೆ ಬೇರೆ ಗತಿಯಿಲ್ಲ"[1] ಎಂಬ ಸೂಕ್ತಿ ಪ್ರಚಾರದಲ್ಲಿರಬೇಕಾದರೆ ಆ ಚಾಳಿ ವ್ಯಾಪಕವಾಗಿ ಹರಡುತ್ತಿದ್ದಿರಬೇಕೆಂದು ತೋರುತ್ತದೆ. "ಮಸಗೆ ಮೂಡಿದ ಹೊಲನು, ದುಷ್ಟಪ್ರಸರದೇಳಿಗೆ....ಹುದುವಿನಾರಂಭದ ಫಲೋದಯವು ನಸಿದು ಹೋಗದೆ ಲೋಕದೊಳಗವು ಹೆಸರುವಡೆವವೆ?"[2] ಎಂಬ ಪ್ರಶ್ನೆಯನ್ನು ಕೇಳುವವನು ಶಕುನಿಯಾದರೂ, ಅವನ ಮಾತಿನಲ್ಲಿ ತಥ್ಯಾಂಶವಿಲ್ಲದಿಲ್ಲ. ಸಂಸ್ಕೃತಿಯ ಪ್ರಾದುರ್ಭಾವ ಮತ್ತು ಪ್ರಗತಿಗೆ ಕೃಷಿಯೇ ಆಧಾರವೆನ್ನುವ ಸಂಗತಿಗೆ ಈ ಉಲ್ಲೇಖಗಳು ಪುಷ್ಟಿ ನೀಡುತ್ತವೆ.

ವಿದ್ಯಾಭ್ಯಾಸ

ಗದುಗಿನ ಭಾರತದಲ್ಲಿ ಬಾಲ್ಯವಿದ್ಯಾಭ್ಯಾಸದ ವಿವರಗಳೆಲ್ಲಿಯೂ ಕಾಣುವುದಿಲ್ಲ. ಕ್ಷತ್ರಿಯ ಸುತರಿಗೆ ಬಿಲ್ವಿದ್ಯೆ ಗರಡಿ ಸಾಧನೆಗಳು ಮುಖ್ಯವಾದರೂ ಅಕ್ಷರವಿದ್ಯೆಯನ್ನು ಬಿಡುವಂತಿಲ್ಲ. ವೇದಾಧ್ಯಯನ ಹಾಗೂ ಸಕಲಶಾಸ್ತ್ರ ಪರಿಣತಿ ಪುರೋಹಿತರಿಗೆ ಮಾತ್ರ ಮೀಸಲಾಗಿದ್ದಂಥ ಸವಲತ್ತುಗಳು. ಇತರರಿಗೆ ಅವುಗಳ ಆಳವಾದ ಅಧ್ಯಯನದ ಆವಶ್ಯಕತೆಯಿರಲಿಲ್ಲವಾದರೂ ಲೌಕಿಕ ವ್ಯವಹಾರಗಳ ಚಾಲನೆಗಾಗಿ ವಿದ್ಯಾಭ್ಯಾಸ ಅಗತ್ಯವಾಗುತ್ತದೆ. "ನಿವಡಿಸಿದ ವಿದ್ಯಕ್ಕೆ ಸಮಬಂಧುವನು"[3] ಕಾಣಲಾಗದೆನ್ನುವಾಗ, "ವಿದ್ಯೆಯೇ ವಿಪ್ರರಿಗಲಂಕಾರ"[4] ಎಂಬ ಸೂಕ್ತಿಯಿರುವಾಗ, "ವಿದ್ಯೆಯಿಲ್ಲದ ನರನು ನರಪಶುವವನ ಜನ್ಮ ನಿರರ್ಥಕರ"[5] ಎಂಬ ಒಳ್ನುಡಿ ಪ್ರಸಿದ್ಧವಾಗಿರುವಲ್ಲಿ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿದ್ದಿರಬೇಕು. ಅರಣ್ಯದಲ್ಲಿ ತಂದೆಯೊಡನೆ ಬಾಲ್ಯವನ್ನು ಕಳೆದು ಹಸ್ತಿನಾವತಿಗೆ ಬರುವ ಹೊತ್ತಿಗೆ ಧರ್ಮರಾಯನಿಗೆ ಹದಿನಾರು ವರ್ಷ. ಆ ಹೊತ್ತಿಗೆ ಅವರಿಗೆ ಅಕ್ಷರಾಭ್ಯಾಸ ಮಾಡಿಸಿದ ಪ್ರಸ್ತಾಪ ಎಲ್ಲಿಯೂ ಬರುವುದಿಲ್ಲ. ಆದರೆ ಮುನಿಗಳ ಸಂಪರ್ಕವಿದ್ದುದರಿಂದ ಅವರು ಶಿಕ್ಷಣ ಪಡೆದಿರಬೇಕೆಂದು ಊಹಿಸಬಹುದಾಗಿದೆ. ಅರಮನೆಯಲ್ಲಿದ್ದ ಕೌರವರಿಗಾದರೂ ಶಿಕ್ಷಣವನ್ನು ವ್ಯವಸ್ಥೆಗೊಳಿಸಿದ್ದಿರಬಹುದೆಂದು ಊಹಿಸಲಿಕ್ಕೆ ಸ್ಪಷ್ಟವಾದ ಸಾಕ್ಷಿಗಳಿಲ್ಲ. ಕಾಲಾಟಗಳನ್ನು ನಿಲ್ಲಿಸಿ ಮಕ್ಕಳ ಒಳತೋಟಿಗಳನ್ನು ತಡೆಯುವ ಸಲುವಾಗಿ ಅವರನ್ನು ಶಸ್ತ್ರಾಸ್ತ್ರ ಪ್ರಸಂಗದಲ್ಲಿ ನಿಲ್ಲಿಸುವುದಾಗಿ ಭೀಷ್ಮ ಕಾತರಿಸುತ್ತಾನೆ. ದ್ರೋಣ ಹಸ್ತಿನಾವತಿಯಲ್ಲಿ ನಿಂತನಂತರ ಕೌರವ ಪಾಂಡವರ ಶಿಕ್ಷಣ ಪ್ರಾರಂಭವಾಗುತ್ತದೆ. ಅವರು ಸರಹಸ್ಯ ಸಾಂಗೋಪಾಂಗ ವಿದ್ಯೆಗಳನ್ನು ಕಲಿಯುತ್ತಾರೆ. ಅವರು ಸಕಲ ಶಸ್ತ್ರಾಸ್ತ್ರಗಳಲ್ಲಿ, ಗಜಹಯನಿಕರದೇರಾಟದಲ್ಲಿ. ಲೋಕಪ್ರಕಟಮಾರ್ಗೀಕೃತ ಚತುರ್ದಶ ವಿಮಲವಿದ್ಯೆಯಲ್ಲಿ, ಸಕಲ ಲಕ್ಷಣ ಗಣಿತ ಗಾರುಡವಿಕಟ ಭರತಾದ್ಯಖಿಲಕಳೆಗಳಲ್ಲಿ ಪಾರಂಗತರಾಗುತ್ತಾರೆ. ಶಿಕ್ಷಣದ ಕೊನೆಯಲ್ಲಿ ಮೌಲ್ಯಮಾಪನ ಅನಿವಾರ್ಯವಷ್ಟೆ. ಬಯಲು ರಂಗಮಂಟಪದಲ್ಲಿ ಸಾರ್ವಜನಿಕರೆದುರಿಗೆ ಪರೀಕ್ಷೆ ನಡೆಯುತ್ತದೆ. ಪರೀಕ್ಷೆಯ

[1] ಉ ೪-೧೦೪ ; [2] ಅ ೮-೪೮ ; [3] ಉ ೩-೩೩ ; [4] ದ್ರೋ ೫-೩೧ ; [5] ಉ ೩-೧೧೫.

ನಂತರ ಶಿಷ್ಯರು ಗುರುದಕ್ಷಿಣೆ ನೀಡಬೇಕಾಗುತ್ತದೆ. ದ್ರೋಣ ದೊಡ್ಡ ದಕ್ಷಿಣೆಯನ್ನು ಕೇಳುತ್ತಾನೆ. ಸುರಗಿ, ಸಬಳ, ಕಠಾರಿ, ಪರಿಘ, ಚಕ್ರ, ಮುಸುಂಡಿ, ತೋಮರ, ಭಿಂಡಿವಾಳ, ಪರಶು, ಮುಸಲಗಳಲ್ಲಿ ಕೌಶಲವನ್ನು ಪಡೆಯುವುದರ ಜತೆಗೆ ಭರತನಾಟ್ಯದಲ್ಲಿಯೂ ಪರಿಣತಿ ಪಡೆಯುತ್ತಾರೆ. ಭೀಮಸಂಭವರು ಪಾಕಕಲೆಯನ್ನು ಅಭ್ಯಾಸ ಮಾಡುತ್ತಿದ್ದಂತೆ ತೋರುತ್ತದೆ. ಮಕ್ಕಳಿಗೆ ಯಾವಾಗ ಹೇಗೆ ತರಬೇತಿ ಕೊಡಬೇಕೆಂಬುದನ್ನು ವಿದುರ ತಿಳಿಸುತ್ತಾನೆ. "ವರುಷವೈದರೊಳರಸಿನಿಸಿ, ದಶವರುಷದಾಸತ್ವವನು ಭಾವಿಸಿ, ವರುಷ ಹದಿನಾರರಲಿ ಪುತ್ರನ ಮಿತ್ರನೆಂದೆನಿಸಿ ಪರಿವಿಡಿಗಳಲಿ ನಡಸಿ" ಮುಂದುವರಿಸದೆ "ನರನೃಗವ ಮಾಡುವರೆ"[1] ಎಂದವನು ಧೃತರಾಷ್ಟ್ರನಿಗೆ ಬೋಧಿಸುತ್ತಾನೆ.

ಹಿಂದಿನಿಂದಲೂ ಸಮರವಿದ್ಯೆ ಕಲೆಯಾಗಿ ವಿಜ್ಞಾನವಾಗಿ ಬಹುಸಂಕೀರ್ಣವಾಗಿ ಬೆಳೆದುಬಂದಿದೆ. ಪ್ರಾಚೀನ ಯುದ್ಧಗಳಿಗೂ ಆಧುನಿಕ ಯುದ್ಧಗಳಿಗೂ ಕಲೆಗಾರಿಕೆಯಲ್ಲಿ ತಾಂತ್ರಿಕವಿಧಾನದಲ್ಲಿ ಶಸ್ತ್ರಾಸ್ತ್ರ ಸಾಧನಗಳಲ್ಲಿ ಏನೇನೂ ಹೋಲಿಕೆಯಿಲ್ಲವಾದರೂ, ಆಗಲೂ ಸಮರವಿಜ್ಞಾನದಲ್ಲಿ ಪರಿಣತಿ ಪಡೆಯಲು ದೀರ್ಘಕಾಲದ ಅಭ್ಯಾಸ ತರಬೇತಿಗಳು ಅತ್ಯವಶ್ಯವಾಗಿದ್ದುವೆನ್ನುವುದರಲ್ಲಿ ಸಂಶಯವಿಲ್ಲ. ಯುದ್ಧದಲ್ಲಿ ಬಳಕೆಯಾಗುತ್ತಿದ್ದ ಶಸ್ತ್ರಾಸ್ತ್ರಗಳ ವೈವಿಧ್ಯವೇ ಅನಂತ. ಒಂದು ಯುದ್ಧ ಮತ್ತೊಂದರಂತಿಲ್ಲ. ಪ್ರತಿಯೊಂದು ಆಯುಧದ ಸ್ವರೂಪರಹಸ್ಯಗಳನ್ನರಿಯುವುದರ ಜತೆಗೆ, ಆನೆ ತೇರು ಕುದುರೆ ಮೊದಲಾದ ವಾಹನ ಸೌಕರ್ಯಗಳ ಬಳಕೆಯಲ್ಲಿ ವಿಶೇಷ ಮಾಹಿತಿ ಪಡೆದುಕೊಂಡಿರಬೇಕು; ಆದ್ದರಿಂದ ಸಮರಶಿಕ್ಷಣ ಪ್ರತ್ಯೇಕವಾಗಿ ಬಹುದೀರ್ಘಕಾಲ ಸಾಗುತ್ತಿದ್ದಿರಬಹುದು. ಪ್ರತಿನಿತ್ಯ ಯುದ್ಧಕ್ಕೆ ಹೊರಡುವ ಮುನ್ನ ಸೇನಾನಿಗಳು ವಾಹನಾದಿಗಳಿಗೆ ಪೂಜೆ ಸಲ್ಲಿಸಿ ನಮಸ್ಕರಿಸುತ್ತಾರೆ; ಯಥೇಚ್ಛವಾಗಿ ಯಾಚಕರಿಗೆ ಮಣಿಕನಕರತ್ನ ವಸ್ತ್ರಭೂಷಣಾದಿಗಳನ್ನು ದಾನ ಮಾಡುತ್ತಾರೆ; ನಾರಿಯರು ಸೇಸೆಯಿಕ್ಕಿ ರತುನಾರತಿಯ ತಳಿಗೆಗಳನ್ನು ಬೆಳಗುತ್ತಾರೆ. ಸೈನಿಕರ ಮತ್ತು ವಾಹನಗಳ ಅಲಂಕರಣವೇ ಒಂದು ಕಲೆ. ಸೈನಿಕರು ವೀರಕಂಕಣಗಳನ್ನು ತೊಡುತ್ತಾರೆ.

ಕುಡಿತೆಯಲಿ ಕರ್ಪುರದ ಸುರಿಸುರಿ। ದೊಡನೆ ಸಾದು ಜವಾಜಿಲೇಪದ
ಮುಡಿದ ಹೊಸ ಹೂಗಳನು ವರಗಂಧಾನುಲೇಪನದ
ಉಡುಗೊರೆಯ ವೀಳೆಯದ ರತ್ನದ। ತೊಡಿಗೆಗಳಲಾ ಪಟುಭಟರವಂ
ಗಡದ ಮನ್ನಿಸಿ ನಿನ್ನ ಮಗವಸುವಾದನಾಹವಕೆ[2]

ನಾಯಕರೆಲ್ಲರೂ ಇದೇ ಸಂಪ್ರದಾಯವನ್ನು ತಪ್ಪದೆ ಆಚರಿಸುತ್ತಾರೆ. ಇಲ್ಲೆಲ್ಲ ವೀಳೆಯಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಸರ್ವಸಮ್ಮತವಾದ ಸಂಗ್ರಾಮ ನಿಯಮಗಳನ್ನು ಎರಡು ಕಡೆಯವರೂ ಸಾಮಾನ್ಯವಾಗಿ ಗಮನಿಸುತ್ತಾರೆ. ಯುದ್ಧ ಎಲ್ಲಿ ಯಾವಾಗ ಶುರುವಾಗಬೇಕೆನ್ನುವುದನ್ನು ದೌತ್ಯ ವಿನಿಮಯದ ಮೂಲಕ ನಿಗದಿಗೊಳಿಸುತ್ತಾರೆ. ಶಸ್ತ್ರವಿಹೀನರು

1 ಉ ೩-೪೦; 2 ಕ ೧೯-೪

ವಾಹನರಹಿತರು ಮೂರ್ಛಾಗತರು, ಇನ್ನೂ ಇಂಥವರ ಮೇಲೆ ಕೈಮಾಡಬಾರದೆಂಬ ನಿಯಮವಿದೆ. ವೈದ್ಯರು ವಂದಿಮಾಗಧರು ಹಾಗೂ ಇತರ ಕರ್ಮಚಾರಿಗಳು ರಣಭೂಮಿಯಲ್ಲೆಲ್ಲಿ ಬೇಕಾದರೂ ಪ್ರಾಣಭಯವಿಲ್ಲದೆ ಓಡಾಡಬಹುದು. ಯುದ್ಧ ರಾಜಕೀಯದ ಒಂದು ಭಾಗವೆಂದ ಮೇಲೆ ನಿಯಮಪಾಲನೆಗಿಂತ ನಿಯಮಭಂಗವೇ ಸಾಧಾರಣಕ್ರಮವಾದಂತೆಯೂ ತೋರುವುದುಂಟು. ನಾಯಕರ ಪರಸ್ಪರ ಮೂದಲೆಗಳು ಕಾವ್ಯಕ್ಕೆ ನಾಟಕೀಯತೆಯ ಸೊಗಸನ್ನು ದಾನಮಾಡುತ್ತವಲ್ಲದೆ, ಅವರ ಸ್ಫೂರ್ತಿ ಚೋದನೆಗಳಿಗೆ ಸಹಾಯಕವಾಗುತ್ತವೆ.

ಕ್ರಮಬದ್ಧವಾದ ಸಮರಶಿಕ್ಷಣ ಕ್ಷತ್ರಿಯರ ಮಕ್ಕಳಿಗೆ ಮಾತ್ರ ಮುಡಿಪಾಗಿದ್ದಂತೆ ತೋರುತ್ತದೆ. ಕರ್ಣ ಏಕಲವ್ಯರಂಥ ಶೂದ್ರರಿಗೆ ಅದು ದಕ್ಕುವಂತಿಲ್ಲ. ಕೋಲಗುರುಗಳೆಲ್ಲ ಸಾಮಾನ್ಯವಾಗಿ ದ್ರೋಣ ಪರಶುರಾಮರಂಥ ಗರಡಿಯಲ್ಲಿ ಸಾಮುವನ್ನು ಕಲಿಸುವ ಬ್ರಾಹ್ಮಣರೇ ಆಗಿದ್ದಿರಬೇಕು. ಅಂದಮೇಲೆ ಬ್ರಾಹ್ಮಣರಿಗೂ ಶಸ್ತ್ರವಿದ್ಯೆ ಲಭಿಸುತ್ತಿತ್ತು. ಅವರು ಯುದ್ಧದಲ್ಲಿಯೂ ಭಾಗವಹಿಸುತ್ತಿದ್ದರು. ಯುದ್ಧ ತಮ್ಮ ವಿಶಿಷ್ಟವೃತ್ತಿಯೆಂದು ಕ್ಷತ್ರಿಯರು ತಿಳಿದುಕೊಂಡಿರಬೇಕು. ರಣಭೂಮಿಯಲ್ಲಿ ಆಗಾಗ್ಗೆ ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವೆ ನಡೆಯುತ್ತಿದ್ದ ವಾಕ್ಕಲಹದಿಂದ ಈ ಸಂಗತಿ ಸ್ಪಷ್ಟವಾಗುತ್ತದೆ. ಜತೆಗೆ ಮತ್ಸ್ಯಯಂತ್ರಭೇದನಕ್ಕೆಂದು ಮೇಲೆದ್ದ ವಿಪ್ರವೇಷದ ವಿಜಯನನ್ನು ಕುರಿತು "ಅಂಗವಿದು ಗಜತುರಗ ಶಸ್ತ್ರಾಸ್ತ್ರಂಗಳರಿತವು ನಮಗೆ, ವಿಪ್ರಂಗಂಗವೇದಪುರಾಣ ತರ್ಕಸ್ಮೃತಿ ಸುವಿದ್ಯೆಗಳು"[1] ಎಂದು ನೃಪರು ಪರಿಹಾಸಮಾಡುತ್ತಾರೆ. ಏನೇ ಇರಲಿ, ಶಸ್ತ್ರಾಭ್ಯಾಸ ಕ್ಷತ್ರಿಯರಿಗೆ ಮಾತ್ರವೇ ಮೀಸಲಾದ ವಿಶಿಷ್ಟ ಶಿಕ್ಷಣವೆಂದು ತಿಳಿಯಬಹುದು. ಅವರಿಗೆ ಸಾಮಾನ್ಯ ಶಿಕ್ಷಣವೊದಗುವ ದಾರಿಗಳು ಹಲವಾರಿದ್ದುವು. ಅದು ನಾಲ್ಕು ಗೋಡೆಗಳ ನಡುವೆಗೆ ಸೀಮಿತವಾದದ್ದಲ್ಲ. ಸಭಾಸ್ಥಾನಗಳಲ್ಲಿ, ಮೃಗಯಾವಿಹಾರ ಮತ್ತು ಯಾತ್ರಾಸಮಯಗಳಲ್ಲಿ, ಬಿಡದಿಗಳಲ್ಲಿ, ಇಂತೆಯೇ ಇನ್ನೂ ಹಲವು ಮಾರ್ಗಗಳಿದ್ದುವು. ನಾರದ ಮಾರ್ಕಂಡೇಯ ವಿದುರ ಸನತ್ಸುಜಾತ ಮೊದಲಾದ ಸಾಧು ವಿದ್ವಾಂಸರುಗಳ ಸಂಪರ್ಕದಿಂದ, ಅವರೊಡನೆ ನಡಸುತ್ತಿದ್ದ ಚರ್ಚೆಗಳಿಂದ ಶ್ರೇಷ್ಠ ಶಿಕ್ಷಣ ದೊರೆಯುತ್ತಿತ್ತು. ಆದರೆ ಕಾವ್ಯದಲ್ಲೆಲ್ಲಿಯೂ ಗುರುಕುಲದ ಪ್ರಸಕ್ತಿ ಬಂದಂತಿಲ್ಲ.

ಆಟಪಾಟಗಳು

ಆಟಪಾಟಗಳೂ ಶಿಕ್ಷಣದ ಒಂದಂಗವಷ್ಟೆ. ತನ್ನ ಕಾಲದಲ್ಲಿ ಚಾಲ್ತಿಯಲ್ಲಿದ್ದ ಹಲವಾರು ಆಟಗಳನ್ನು ಕುಮಾರವ್ಯಾಸ ಉಲ್ಲೇಖಿಸುತ್ತಾನೆ.

> ಆಳಿನೇರಿಕೆ ಹಿಡಿಗವಡೆಗುರಿ। ಯಾಳು ಚೆಂಡಿನ ಹೊಣಕೆ ಚಿಣಿಕೋ
> ಲಾಳು ಗೊತ್ತಿನ ವಂಡೆ[2]

---

[1] ಆ ೧೫-೧೮; [2] ಆ ೬-೧

> ಗುಜುಗುಗುತ್ತಿನ ಚೆಂಡು ಗುಮ್ಮನ। ಬಡಿವಕತ್ತಲೆ ಗುದ್ದುಗಂಬಡ
> ಗಡಣೆ। ಕಣ್ಮುಚ್ಚಸಗಪರಿ ಹರಿಹಲಗೆ ನಿಜುಗವಣೆ
> ಕೆಡಹು ಕುಟ್ಟಿಗ[1]

ವ್ಯಾಯಾಮ ಶಿಕ್ಷಕರು ಈ ಆಟಗಳ ಬಗ್ಗೆ ಸಂಶೋಧನೆ ನಡಸಿ, ಅವುಗಳ ಉಗಮ ಸ್ವರೂಪ ವಿಕಾಸಾದಿ ವಿಷಯಗಳ ಬಗ್ಗೆ ಬೆಳಕು ಚೆಲ್ಲಬೇಕಲ್ಲದೆ, ಆಧುನಿಕ ರುಚಿಗೆ ಒಗ್ಗುವಂಥವನ್ನು ಪರಿಷ್ಕರಿಸಿ ಮುಂದುವರಿಸಬೇಕಾದ್ದು ಅವರ ಆದ್ಯ ಕರ್ತವ್ಯವಾಗ ಬೇಕು.

ಬಯಲಾಟ

ನಾರಣಪ್ಪನ ಕಾಲದಲ್ಲಿ ಅನೇಕ ಜನಪದ ಕಲೆಗಳು ರೂಢಿಯಲ್ಲಿದ್ದಿರಬೇಕು. ಅವು ಗಳಲ್ಲಿ ಬಯಲಾಟವೂ ಒಂದು. ಅದರಲ್ಲಿ ಭಾಗವಹಿಸುತ್ತಿದ್ದವರೆಲ್ಲ ಹಳ್ಳಿಯ ಜನ ಅಥವಾ ನಾಡಾಡಿಗಳು. ವ್ಯಂಗ್ಯಾರ್ಥದಲ್ಲಿ ಅವುಗಳ ಹೋಲಿಕೆಯನ್ನು ಬಳಸಿಕೊಳ್ಳುತ್ತಾನೆ. "ಭುವನದ ಗೂಡು ಕೃಷ್ಣನ ದೇಹವಿದು ನಾಡಾಡಿಗಳ ನಾಟಕವಲ್ಲೈ"[2] ಎಂದು ಕರ್ಣ ಹೇಳುವಲ್ಲಿ ಕೃಷ್ಣ ಬಯಲಾಟದ ಪಾತ್ರವಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ತನ್ನ ಸಭಾಸ್ಥಾನದಲ್ಲಿ ರಾಜ ಕೂರುವ ಕಡೆ ಕುಳಿತಿದ್ದ ಪಾಂಡವರನ್ನು ಕಂಡಾಗ ವಿರಾಟ ನೃಪತಿ "ಮನುಜರ ಹೋಲುವೆಯ ನಾಟಕದ ನಿರ್ಜರ ಮಂಡಲೇಶ್ವರರು"[3] ಎಂದು ಉದ್ಗಾರ ತೆಗೆಯುತ್ತಾನೆ. ಪಾಂಡವರು ಮಾನವರೀತಿಯಲ್ಲಿ ವೇಷಭೂಷಣಗಳನ್ನು ತೊಟ್ಟುಕೊಂಡಿದ್ದರೂ ಅವರು ನಿಜವಾಗಿ ನಿರ್ಜರರು ಎಂದವನು ಭಾವಿಸಿಕೊಳ್ಳುತ್ತಾನೆ. ನಾಟಕ ಕೇವಲ ಅನುಕರಣವೇ ಹೊರತು, ಅನುಭವವಲ್ಲ. ನಾಟಕದಲ್ಲಿ ಯೋಧನ ಪಾತ್ರವಹಿಸಿದವರೆಲ್ಲ, ಸಂಗ್ರಾಮ ವೀರರಾಗಲು ಎಂಬ ಅರ್ಥ "ಹುಲು ಬೃಹನ್ನಳೆಯಾದ ನಿನಗೀ ಕದನ ನಾಟಕ ವಿದ್ಯೆಯಲ್ಲ"[4] ಎನ್ನುವ ಉತ್ತರನ ಮಾತಿನಿಂದ ಸ್ಪಷ್ಟಗೊಳ್ಳು ತ್ತದೆ. ಶ್ರೀಕೃಷ್ಣ ಮಾನವನಂತೆ ನಟಿಸುತ್ತಿದ್ದರೂ, ಅವನು ಭಗವಂತ ಎಂಬುದು ದೂರ್ವಾಸನ ಅಚಲ ವಿಶ್ವಾಸ. "ಮಾಣು ಮಾಧವ ನಿಲ್ಲು ಮಾನವನಾಹೆಯದ ನಾಟಕದ ನುಡಿಯಿದು ಜಾಣನೀನಹೆ"[5] ಎನ್ನುವ ಮಾತು ಆ ವಿಶ್ವಾಸಕ್ಕೆ ಸಾಕ್ಷಿ ಯಾಗಿದೆ. ಸಂಧಾನ ಸಮಯದಲ್ಲಿ ವಿದುರನ ಮನೆಯಲ್ಲಿದ್ದ ಕೃಷ್ಣನನ್ನು ನೋಡುವ ಸಲುವಾಗಿ ಕುಂತಿ ಬಂದಾಗ ಕೃಷ್ಣ ಜಗ್ಗನೆದ್ದು "ನರಾಚರಣೆಗಳ ನಾಟಕವ ತಾನೇ ನಟಿಸಿ"[6] ತೋರುತ್ತಾನೆ. ಆ ಕಾಲಕ್ಕೆ ಜನಪದ ನಾಟಕಗಳ ಜತೆಗೆ ಶಿಷ್ಟಪದ ನಾಟಕ ಗಳೂ ಚಾಲ್ತಿಯಲ್ಲಿದ್ದುವೆಂದು ತೋರುತ್ತದೆ. ಶಿಷ್ಟಪದ ನಾಟಕಗಳ ಭಾಷೆ ಸಂಸ್ಕೃತವೋ ಕನ್ನಡವೋ ಸ್ಪಷ್ಟವಿಲ್ಲ. ಆದರೆ ಶಿಷ್ಟಪದರಿಗೆಲ್ಲ ಸಂಸ್ಕೃತ ಬರುತ್ತಿರಲಿಲ್ಲ. ರಾಜರಿಗೂ ಸಂಸ್ಕೃತದ ಪರಿಚಯವಿರುತ್ತಿರಲಿಲ್ಲ. ರಾಜರ ಮುಂದೆ ಆಡುವ ನಾಟಕಗಳು ಸಹ

---

[1] ಆ ೬-೨; [2] ಕ ೨೪-೩; [3] ವಿ ೧೦-೧೧; [4] ವಿ ೬-೨೮; [5] ಅ ೧೬-೪೩;
[6] ಉ ೮-೧೭

ಕನ್ನಡ ಭಾಷೆಯಲ್ಲಿಯೇ ಇದ್ದಿರಬೇಕು. ಅಂದಮೇಲೆ, ಈ ಎರಡು ವಿಧವಾದ ನಾಟಕಗಳ ನಡುವೆ ಅಗಾಧಾಂತರವಿದ್ದಿರಲಾರದು. ಅವುಗಳನ್ನು ಎರಡು ಗುಂಪಿನವರೂ ನೋಡುತ್ತಿದ್ದಿರಬೇಕು; ಅಷ್ಟೇ ಅಲ್ಲ, ಎರಡು ಗುಂಪಿನ ಕಲಾವಿದರೂ ಅವುಗಳಲ್ಲಿ ಪಾತ್ರವಹಿಸುತ್ತಿದ್ದಿರಬೇಕು. ಒಟ್ಟಿನ ಮೇಲೆ ಜನಪದ ನಾಟಕಗಳು ಬಹು ಜನಪ್ರಿಯವಾಗಿದ್ದುವೆಂಬ ಸಂಗತಿಯಂತು ಖಚಿತ. ಅವು ಆಗ ಸಂಸ್ಕೃತಿ ಪ್ರಸಾರದ ಹಾಗೂ ಮನರಂಜನೆಯ ಮಾಧ್ಯಮಗಳಾಗಿದ್ದುವು. ಈ ನಾಟಕಗಳಲ್ಲಿ ತೆರೆಯನ್ನು ಸಹ ಬಳಸುತ್ತಿದ್ದರೆನ್ನುವ ವಿಚಾರ "ವಿಜಯೋಪಚಿತ ರಣನಾಟಕಕೆ ಜವನಿಕೆಯಾಯ್ತಲೇ ರಜನಿ" ಎಂಬ ವಾಕ್ಯದಿಂದ ಸುವೇದ್ಯವಾಗುತ್ತದೆ.

ಉಡುಗೆ–ತೊಡುಗೆಗಳು

ಇಂತೆಯೇ ಆಗಿನ ಕಾಲದ ಉಡುಗೆ ತೊಡುಗೆಗಳನ್ನು ಅಧ್ಯಯನ ಮಾಡುವಲ್ಲಿ ಕಲೆಯ ಇತಿಹಾಸಕ್ಕೆ, ಹಾಗೂ ಮಾನವ ಕುಲವಿಜ್ಞಾನಕ್ಕೆ ತೋರವಾದ ಮಾಹಿತಿಯನ್ನೊದಗಿಸಿದಂತಾಗುತ್ತದೆ. ಮೂವತ್ತು ನಲವತ್ತು ವರ್ಷಗಳ ಹಿಂದೆ ಗಂಡಸರೂ ಅರೆತಲೆಗೂದಲು ಬೆಳೆಸುತ್ತಿದ್ದರು. ಬಾಚಿ ಗಂಟುಹಾಕಿ ಹೂಮುಡಿಯುತ್ತಿದ್ದರೆಂದರೆ ಆಧುನಿಕ ರಸಿಕರಿಗೆ ನಗು ಬರಬಹುದು. ಆದರೆ ರಸಿಕತೆಯಲ್ಲಿ ಅಂದಿನವರು ಇಂದಿನವರನ್ನು ಮೀರಿಸುತ್ತಿದ್ದರೆಂಬುದು ಹಲವರಿಗೆ ಈಗ ಅರ್ಥವಾಗುವ ವಿಷಯವಲ್ಲ. ದ್ರೌಪದಿಯ ಭೇಟಿಗಾಗಿ ನಾಟಕಶಾಲೆಗೆಂದು ಹೊರಟ ಕೀಚಕ ಮಲ್ಲಿಗೆಯ ಮೊಗ್ಗೆಯನ್ನು ಮುಡಿದುಕೊಳ್ಳುತ್ತಾನಂತೆ. ದ್ರೌಪದಿಯ ವೇಷದ ಭೀಮ ಅವನ ಮುಂದಲೆಯನ್ನು ತುಡುಕುತ್ತಾನೆ. ಕೀಚಕ ಭೀಮನ ಮೇಲೆ ಹಾಯ್ದಾಗ, ಭೀಮ "ಅಪರಭಾಗಕೆ ಹಾಯ್ದು ಹಿಡಿದನು ಕೀಚಕನ ತುರುಬ."[1] ದುಶ್ಶಾಸನನ ವಧಪ್ರಸಂಗದಲ್ಲಿ ಭೀಮ ಅವನನ್ನು "ಹೊಯ್ದು ತುರುಬನು ಹಿಡಿದು ತಡೆಗಾಲ್ಬೊಯ್ದು ಕೆಡಹಿದನಸಬಡಿದು"[2] ಗಂಡಸರು ತಲೆ ಬೆಳಸುವ, ತುರುಬುಕಟ್ಟುವ, ಜಡೆಹಾಕಿಕೊಳ್ಳುವ ಪದ್ಧತಿ ಆರ್ಷೇಯವಾದುದೆಂದು ತೋರುತ್ತದೆ. ರಾಜನ ಮತ್ತು ಅವನ ಪರಿವಾರದ ವೇಷಭೂಷಣಗಳ ಮಾಹಿತಿ ದೊರೆಯುತ್ತದೆಯೇ ಹೊರತು ಸಾಮಾನ್ಯ ಜನರ ಉಡುಪುಗಳ ಬಗ್ಗೆ ಏನೇನೂ ಬೆಳಕು ಬೀಳುವುದಿಲ್ಲ. ಆಗಿನ ಕಾಲದ ಋಷಿಗಳು ಭಸ್ಮವಿಭೂಷಿತಾಂಗರು. ಜಡಿವಕೆಂಜೆಡೆಯವರು, ಪುಲಿದೊಗಲು ಮುಕ್ತಾವಳಿಗಳನ್ನು ಧರಿಸಿದವರು, ಮಣಿಜಪಮಾಲಿಕೆಯನ್ನು ಹಿಡಿದವರು.[3] ಸನ್ಯಾಸಿಗಳು ಬೋಳುಗಳು; ಏಕದಂಡಿಗಳು.[4] ಯೋಗಿಗಳು ದಂಡಹೀನರು. ಅರಣ್ಯದಲ್ಲಿದ್ದಾಗ ಪಾಂಡವರು ರುದ್ರಾಕ್ಷಿಗಳನ್ನು ಧರಿಸುತ್ತಿದ್ದರು.[5] ಮತ್ಸ್ಯಯಂತ್ರವನ್ನು ಭೇದಿಸುವ ಸಲುವಾಗಿ ಮೇಲೆದ್ದ ವಿಪ್ರವೇಷದ ಅರ್ಜುನನ ವರ್ಣನೆಯಲ್ಲಿ ಬ್ರಾಹ್ಮಣರ ವೇಷಭೂಷಣಗಳ ವಿವರವಿದೆ.

---

[1] ವಿ ೩-೮೮; [2] ಕ ೧೯-೪೮; [3] ದ್ರೋ ೧೮-೫೨; [4] ಉ ೯-೩೫; [5] ಅ ೨೧-೭

ತೊಟ್ಟ ಹೊಸಯಜ್ಞೋಪವೀತದ। ಮುಟ್ಟನೊಸಲಲಿ ಕುಶೆಯುಕರಡಿಗೆ
ಕಟ್ಟಿಯಿರುಕಿದ ಕಕ್ಷೆ ಬೆರಳಲಿ ಮುರಿದ ದರ್ಭೆಗಳ
ಉಟ್ಟ ಭಾಸರ ಬಳಲುಗಚ್ಚೆಯ[1]

ಹೆಗಲ ಧೋತ್ರದ ಪಾರ್ಥ ಬ್ರಾಹ್ಮಣರ ಗುಂಪಿನಿಂದ ಬರುತ್ತಾನೆ. ಅವನು ಮುಟ್ಟಿಯ ಮದನ, ದರ್ಭೆಯತಿಲದ ಮನ್ಮಥ, ವಿಮಲ ಧೋತ್ರದ ತಳಿರುಗಾಸೆಯ ಕಾಮ, ಕೃಷ್ಣಾಜಿನದ ಕಂದರ್ಪ,[2] ಗಡ್ಡದುಪಾಧ್ಯ. "ಹಣೆಗೆ ಮಟ್ಟಿಯ ಬಡಿದು, ದರ್ಭೆಯ ಹಣಿದು ಬೆರಳಲಿ ಸೆಕ್ಕಿ, ಧೋತ್ರದ ದಣಿಬವನು ನಿರಿವಿಡಿದು ಮಹಳದ ಮನೆಯ ಚೌಕದಲಿ ಮಣೆಗೆ ಮಂಡಿಸಿ"[3] ಕುಳಿತುಕೊಳ್ಳುತ್ತಾರೆಂದು ಭೋಜನಸಮಯದ ಅವರ ರೀತಿಯ ವರ್ಣನೆ ಬರುತ್ತದೆ. ದ್ರೌಪದಿ ಸ್ವಯಂವರದ ಸಮಯದಲ್ಲಿ ಸ್ತ್ರೀಯರ ವೇಷ ಭೂಷಣಗಳ ಮೆರವಣಿಗೆಯನ್ನು ಕಾಣಬಹುದು.[4] ಯುದ್ಧಕ್ಕೆ ಹೊರಡುವಾಗ ಕ್ಷತ್ರಿಯ ವೀರರು ಸನಗವೊಚ್ಚೆಯ ಕವಚಜೋಡು ಶಿರಸ್ತ್ರಾಣ ಗವಸು ಮೊದಲಾದ ವಿಶಿಷ್ಟ ವಸ್ತ್ರಗಳನ್ನು ತೊಡುತ್ತಿದ್ದಂತೆ ಬ್ರಾಹ್ಮಣರೂ ತಮ್ಮ ನಿತ್ಯದ ಉಡುಪುಗಳನ್ನು ಬದಲಾಯಿಸುತ್ತಾರೆ. "ಕನಕ ಕವಚವ ತೊಟ್ಟು, ಗಡ್ಡದ ಘನತೆಯನ್ನು ಗಂಟಿಕ್ಕಿ, ವರಕಾಂಚನ ಮಯದ ಯಜ್ಞೋಪವೀತವನಿಳುಹಿ, ಸಿರಿಯುಡಿಗೆಯಲಿ ಮಲ್ಲಗಂಟಿನ ಸೆರಗ ಮೋಹಿಸಿ, ಬೆರಳ ದರ್ಭೆಯ ಹರಿದು ಬಿಸುಟು, ಜೋಡುಸೀಸಕ ಬಾಹುರಕ್ಷೆಗಳ ಮುರುಹಿ ಬಿಗಿದು"[5] ದ್ರೋಣ ರಥವೇರುತ್ತಾನೆ. ಇಂತೆಯೇ ಕರ್ಣನ ಅಲಂಕಾರವನ್ನೂ ಗಮನಿಸಬಹುದು.[6]

ಪಾಂಡವರು ಏಕಚಕ್ರನಗರದಲ್ಲಿದ್ದಾಗ ವಿಪ್ರರ ವೇಷವನ್ನು ತೊಟ್ಟು, ವಿಪ್ರರಂತೆಯೇ ಪ್ರತಿದಿನ ನಿತ್ಯಕರ್ಮಗಳನ್ನಾಚರಿಸುತ್ತಾರೆ.

ಉದಯವಾಗದ ಮುನ್ನ ಸುಬ್ರಾ। ಹ್ಮ್ಯದ ಮುಹೂರ್ತದಲೆದ್ದು ಜನನಿಯ
ಪದಯುಗಕ್ಕಭಿನಮಿಸಿ ಸಂಧ್ಯಾಮುತಕೆ ನಡೆತಂದು
ವಿದಿತ ಸಂಧ್ಯೋಪಾಸ್ತಿ ಜಪನಿಯ। ಮದ ಪುರಾಣಶ್ರವಣ ಮಧ್ಯಾ
ಹ್ನದಲಿ ಭಿಕ್ಷಾಟನಗಳಿವರಿಗೆ ನಿತ್ಯವಿಧಿಯೆಂದ[7]

ಭೋಜನೋತ್ತರ ವೇಳೆಯಲ್ಲಿ ಮಹಾಜನರೊಡನೆ ಕಲೆತು ನೃಪರಾಜವಾರ್ತೆಗಳ ಕಥನದಲ್ಲಿ ಅವರು ಕಾಲ ಕಳೆಯುತ್ತಿದ್ದರು. ರಾತ್ರಿಯ ವೇಳೆ ಕ್ಷತ್ರಿಯರಿಗುಚಿತವಾದ ಚರ್ಚೆಗಳಲ್ಲಿ ತಲ್ಲೀನರಾಗುತ್ತಿದ್ದರು. ಆನೆ ಕುದುರೆಗಳ ಶಿಕ್ಷೆಯ ಸಹಸ್ಯ, ರಥಕೌಶಲ, ದಿವ್ಯಾಸ್ತ್ರ ಪ್ರಯೋಗ, ಆಯುಧ ಲಕ್ಷಣಚಿಂತನೆ—ಇವು ಅವರ ಸಂವಾದದ ವಿಷಯವಾಗುತ್ತಿದ್ದುವು.[8]

ಆಹಾರ ಪದ್ಧತಿ

ಆಹಾರ ಪದ್ಧತಿಯ ಬಗ್ಗೆ ಸಾಕಷ್ಟು ಮಾಹಿತಿಗಳು ಕಾವ್ಯದಲ್ಲಿ ದೊರೆಯದಿದ್ದರೂ

---

1 [illegible] ೧೫-೧೫ ; 2 ಆ ೧೫-೨೧ ; 3 ವಿ ೭-೧೨ ; 4 ಅ ೧೩-೩೨, ೩೩ ಇತ್ಯಾದಿ ;
5 ದ್ರೋ ೯-೧೪, ೧೫ ; 6 [illegible] ಕ ೮-೧೭ ; 7 ಆ ೧೦-೬ ; 8 ಅ ೧೬-೧೯, ೨೦

ಮಾಂಸಾಹಾರ ಬಹುಜನರ ವಾಡಿಕೆಯಾಗಿತ್ತೆಂದು ಊಹಿಸಲವಕಾಶವಿದೆ. ಕೌರವ ಪಾಂಡವರಾದಿಯಾದ ಕ್ಷತ್ರಿಯರಂತು ನಿಸ್ಸಂಶಯವಾಗಿ ಮಾಂಸಾಹಾರಿಗಳು. ನೃಪರ ಸಪ್ತವ್ಯಸನಗಳಲ್ಲಿ ಬೇಟೆಯೂ ಒಂದು. ಅದೊಂದು ಶೋಕಿಯ ಹವ್ಯಾಸವಾಗಿತ್ತು, ನಿಜ. ಜತೆಗೆ ಪ್ರಜೆಗಳಿಗೆ ಹಿಂಸೆ ಕೊಡುತ್ತಿದ್ದ ದುಷ್ಟಮೃಗಗಳ ಕೊಲೆ ಮತ್ತು ಮಾಂಸಾಹಾರ ಸಂಪಾದನೆ ಅವರ ಗುರಿಯಾಗಿತ್ತು. ಪಾಂಡವರು ಅರಣ್ಯವಾಸ ಸಮಯ ದಲ್ಲಿ ಒಂದು ಕಡೆ ಬೇರೂರಿ ನಿಂತವರಲ್ಲ. ಆಗಾಗ್ಗೆ ಸಂಗಡದಲ್ಲಿದ್ದ ಮುನಿಜನರೊಡನೆ ವನದಿಂದ ವನಕ್ಕೆ ತಾರಾಡುತ್ತಿದ್ದರು. "ಸಮೆದುದೀ ವನವಿಲ್ಲಿ ಫಲಮೃಗನಿವಹ ಬೀತುದು, ನಮ್ಮ ಕಾಲಾಟವನು ಸೈರಿಸಿ ನಿಲುವ ವನವನು ಕಾಣೆ"[1] ಎಂದು ಧರ್ಮ ರಾಯ ವನಾಂತರಕ್ಕೆ ಕಾರಣ ಕೊಡುತ್ತಾನೆ. ಶಾಕಾಹಾರವೊಂದೇ ಸಾಕಾಗಿದ್ದರೆ ಅವರ ಬಳಿಯಿದ್ದ ಅಕ್ಷಯಪಾತ್ರೆಯೇ ಅವರ ಬೇಕುಗಳನ್ನೆಲ್ಲ ಪೂರೈಸುತ್ತಿತ್ತು. ಮಾಂಸಾಹಾರಕ್ಕಾಗಿ ಮೃಗಗಳೆಲ್ಲ ಮುಗಿದುಹೋದದ್ದರಿಂದ ಅವರು ಮುಂದೆ ಮುಂದೆ ಬಿಡಾರವನ್ನೊಯ್ಯಬೇಕಾಗಿತ್ತು. ವಿರಾಟನಗರಿಯಲ್ಲಿ ವಲಲವೇಷದಲ್ಲಿದ್ದ ಭೀಮನ ಪಾಕಕಲಾನೈಪುಣ್ಯವನ್ನು ದ್ರೌಪದಿ ಮೆಚ್ಚುವಾಗ ಮಾಂಸಾಹಾರದ ಪ್ರಸ್ತಾಪವೂ ಬರುತ್ತದೆ.

> ತರಿದ ಕುರಿಗಳ ಹಂದಿಯಡಗಿನ। ಜುರಿತ ರಕುತದ ಮೊಲನ ಖಂಡದ
> ತಿರಿದ ಗುಬ್ಬಿಯ ಕೀಸಿ ಸೀಳಿದ ನವಿಲ ಲಾವುಗೆಯ
> ತುರುಗಿದೆಲುವಿನ ಸಾಲಸುಂಟಿಗೆ। ಮೆರೆವ ಮಾಂಸದ ರಾಸಿಗಳ ಹರ
> ದೆರಕೆಗಳ ಕಂಪಬಲೆ ಹೊಗಳಿದಳಡಬಳದ ಮನೆಯ[2]

ಮಾಂಸಾಹಾರದ ರುಚಿಯನ್ನರಿಯದಿದ್ದರೆ ಭೀಮ ಸೂವಾರವಿದ್ಯೆಯಲ್ಲಿ ಪರಿಣತನಾಗು ತ್ತಿರಲಿಲ್ಲ, ದ್ರೌಪದಿ ಮೆಚ್ಚಿ ಹೊಗಳುವುದು ಸಾಧ್ಯವಾಗುತ್ತಿರಲಿಲ್ಲ.

ನಂಬಿಕೆಗಳು

ಸಮಕಾಲೀನ ಸಂಪ್ರದಾಯ ನಂಬಿಕೆಗಳು ಈ ಕಾವ್ಯದಲ್ಲಿ ಅಲ್ಲಲ್ಲಿ ಸುಳುಹುದೋರು ತ್ತವೆ. ಅವುಗಳಲ್ಲಿ ಕೆಲವಂತು ಜಾನಪದ ಕ್ಷೇತ್ರದ ಪಳೆಯುಳಿಕೆಗಳು. ರಾಜನಾಗಲಿ ಸೇನಾನಿಯಾಗಲಿ ಜೋಯಿಸರನ್ನು ಮುಂದಿಟ್ಟುಕೊಂಡೇ ಕಾರ್ಯಾರಂಭಮಾಡುತ್ತಿದ್ದದ್ದು. ಗರಡಿಮನೆಗೆ ಗುದ್ದಲಿಪೂಜೆ ಮಾಡುವಾಗ, ಬೇಟೆಗೆ ಹೋಗುವಾಗ, ಜೂಜಿಗೆ ಕೂರು ವಾಗ, ಯುದ್ಧರಂಗಕ್ಕೆ ತೆರಳುವಾಗ, ಏನೇ ಕೆಲಸ ಕೈಗೊಳ್ಳಲಿ ಪುರೋಹಿತರನ್ನು ಕೇಳದೆ ಅವರು ಕೈಹಾಕುತ್ತಿರಲಿಲ್ಲ. ಶಕುನಗಳಿಗೆ ತುಂಬ ಬೆಲೆಕೊಡುತ್ತಿದ್ದರು; ಉತ್ಪಾತಗಳನ್ನು ಕಂಡರೆ ಹೆದರುತ್ತಿದ್ದರು. ಧರ್ಮರಾಯ ಜೂಜಿಗೆಂದು ಹೊರಟ ಸಮಯದಲ್ಲಿ ದ್ರೌಪದಿಯ ದಕ್ಷಿಣಾಕ್ಷಿ ಅದುರುತ್ತದೆ; ಭೀಮ ಪಾರ್ಥರ ವಾಮಭುಜಾಕ್ಷಿ

---

[1] ಆ ೧೪-೩; [2] ವಿ ೩-೩೭

ಗಳು ಕೆತ್ತುತ್ತವೆ.[1] ದ್ರೌಪದಿಯ ವಸ್ತ್ರಾಪಹರಣದ ನಂತರ ಭೀಮಾರ್ಜುನರು ಪ್ರತಿಜ್ಞೆ ಮಾಡುವ ಕಾಲದಲ್ಲಿ ಗಜಪುರದ ನೆಲ ಬಾಯಿಬಿಡುತ್ತದೆ, ಪುರದ ನಡುವೆ ರಕ್ತದ ಮಳೆ ಸುರಿಯುತ್ತದೆ, ನರಿಗಳೂಳುತ್ತವೆ, ದೇವತಾಪ್ರತಿಮೆಗಳು ಹೂಂಕರಿಸುತ್ತವೆ, ಪಟ್ಟದಾನೆ ಕುದುರೆಗಳು ಕಂಬನಿ ಹರಿಸುತ್ತವೆ, ಧೂಮಕೇತುಗಳು ಕಾಣಿಸಿಕೊಳ್ಳುತ್ತವೆ, ಬಿರುಗಾಳಿ ಬೀಸುತ್ತದೆ, ದೇವತಾಭವನಗಳ ಶಿಖರ ಮುರಿಯುತ್ತವೆ, ರಾಹು ಸೂರ್ಯನನ್ನು ಹಿಡಿಯುತ್ತದೆ, ರಾಜದ್ವಾರ ಹೊಗೆಯಾಡುತ್ತದೆ, ಇಳೆ ನಡುಗುತ್ತದೆ, ಆಗಸದಲ್ಲಿ ಹಗಲು ಕತ್ತಲೆ ಕವಿಯುತ್ತದೆ, ಕೆರೆತೊರೆಗಳ ನೀರು ಉಕ್ಕುತ್ತದೆ, ಒಟ್ಟಿನಲ್ಲಿ ಎಲ್ಲೆಲ್ಲಿಯೂ ಭೂತಕ್ಷೋಭೆಯಾಗುತ್ತದೆ.[2] ದುರ್ಯೋಧನನ ಘೋಷಯಾತ್ರಾರಂಭದಲ್ಲಿ ಎರಡು ಕಾಗೆ ಜಗಳವಾಡುತ್ತ ಎಡಗಡೆಗೆ ಬರುತ್ತವೆ; "ಹಸುಬನ ಸರುಪುವಾಮದಿ ಗರ್ದಭನ ಬಲಕರಿಯ ಹಕ್ಕಿಯ ತಡೆಯ"[3]ನ್ನು ದೊರೆ ಲಕ್ಷಿಸುವುದಿಲ್ಲ. ಇವೆಲ್ಲವೂ ದಶ್ಯಕುನ ಗಳು. ಮುಂದಿನ ಕೇಡುಗಳನ್ನು ಸೂಚಿಸುತ್ತವೆ. ಅವನ್ನು ಲೆಕ್ಕಿಸದೆಯೆ ಮುಂದೆ ಹೆಜ್ಜೆ ಯಿಟ್ಟದ್ದರಿಂದ ಆ ಆ ಜನರಿಗೆ ತೊಂದರೆಗಳೊದಗುತ್ತವೆ; ಅರ್ಜುನ ತಪಸ್ಸಿಗೆ ಹೋಗು ವಾಗ ಹರಡೆ ಎಡಭಾಗದಲ್ಲಿ ಉಲಿಯುತ್ತದೆ, ಸೂರ್ಯೋದಯ ಸಮಯದಲ್ಲಿ ಹಸುಬನ ಸ್ವರ ಅಪಸವ್ಯದಲ್ಲಿ ಕೇಳಿಸುತ್ತದೆ; ನವಿಲು ಬಲಕ್ಕೆ ಹಾರುತ್ತದೆ.[4] ಅವನು ಶ್ರೀ ಕೃಷ್ಣನ ಸಹಾಯವನ್ನು ಬೇಡುವುದಕ್ಕಾಗಿ ದ್ವಾರಕಿಗೆ ಹೋಗುವಾಗ ದಾರಿಯಲ್ಲಿ ನರ್ತಿ ಸುವ ನವಿಲನ್ನೂ, ಬಲಗಡೆ ಹಂಗನನ್ನೂ, ಎಡಗಡೆ ಜಿಂಕೆಗಳ ಗುಂಪನ್ನೂ ಕಾಣು ತ್ತಾನೆ.[5] ಇವು ಶುಭಶಕುನಗಳು. ಇವು ಬಯಸಿದ ಕಾರ್ಯದ ಜಯವನ್ನು ಸೂಚಿಸು ತ್ತವೆ. ತಪಸ್ಸಿಗೆ ಹೋದ ಅರ್ಜುನ ಬರುವುದು ವಿಳಂಬವಾದಾಗ, ಧರ್ಮರಾಯ ವ್ಯಾಕುಲಚಿತ್ತನಾಗುತ್ತಾನೆ. ಆಗ ದ್ರೌಪದಿಯ ಎಡಗಣ್ಣು ಎಡಭುಜಗಳು ಮತ್ತು ಭೂಪತಿಯ ಬಲಗಣ್ಣು ಬಲಭುಜಗಳು ಅದುರುತ್ತವೆ.[6] ಇವೆಲ್ಲ ಶುಭಶಕುನಗಳು. ಕೌರವನ ಪತನಕಾಲದಲ್ಲಿ ಇಳೆ ನಡುಗುತ್ತದೆ, ಬರಸಿಡಿಲು ಬಡಿಯುತ್ತದೆ, ಅರೆ ಸಿಡಿ ಯುತ್ತವೆ, ಐದಾರು ಗ್ರಹ ರವಿಯೊಡನೆ ಸೇರುತ್ತವೆ, ಹಗಲು ಉಲ್ಕಾಪಾತವಾಗುತ್ತದೆ, ಆನೆ ಕುದುರೆಗಳ ಕಣ್ಣಲ್ಲಿ ನೀರೂರುತ್ತದೆ.[7] ರಾಜಮಹಾರಾಜರು ನಿಧನಹೊಂದುವಾಗ ಭೂತಕ್ಷೋಭೆಯಾಗುತ್ತದೆಂಬ ನಂಬಿಕೆ ತುಂಬ ಪ್ರಾಚೀನವಾದುದು, ಅಂತೆಯೇ ಲೋಕವ್ಯಾಪಿಯಾದುದು.[8]

ಕನಸುಗಳು

ಕನಸುಗಳು ಸಹ ಶುಭಾಶುಭಗಳನ್ನು ಸೂಚಿಸುತ್ತವೆಂಬ ನಂಬಿಕೆ ಆದಿಮಾನವನ

---

[1] ಸ ೧೪-೪೩ ; [2] ಸ ೧೫-೪೦, ೪೧, ೪೩, ೪೭ ; [3] ಆ ೧೭-೩೨ ; [4] ಆ ೪-೩೨, ೩೪ ; [5] ಉ ೧-೧೮ ; [6] ಆ ೧೧-೧೮ ; [7] ಗ೩-೪, ೫ ; [8] When beggars die there are no comets seen ; The heavens themselves blaze forth the death of princess —*Julius Caesar II*, ii. 30–31.

ಕಾಲದಿಂದ ನಡೆದುಬಂದಿದೆ. ಜೂಜಿಗೆಂದು ಧರ್ಮರಾಯ ಹಸ್ತಿನಾವತಿಯನ್ನು ತಲುಪಿದ ರಾತ್ರಿ ಸ್ವಪ್ನ ಕಾಣುತ್ತಾನೆ. "ದಿನಾದಿಯಲಿ ಕಂಡನು ಕನಸ ಪ್ರಾಸಾದ ಶಿಖರವು ಮುರಿದು ಬಿದ್ದುದನಡವಿಯಲಿ"[1] ಆ ಸ್ವಪ್ನ ಕೆಟ್ಟದ್ದೆಂದು ನುಡಿದು, ಧೌಮ್ಯ ಶಾಂತಿ ಮಾಡಿಸುತ್ತಾನೆ. ಆದರೂ ಧರ್ಮರಾಯ ಜೂಜಿನಲ್ಲಿ ಸೋಲುತ್ತಾನೆ.

ಆಣೆ–ಮಂತ್ರ–ಮಾಟ–ಕ್ಷುದ್ರ ದೇವತೆಗಳು

ಸತ್ಪಥವೋ ದುಷ್ಪಥವೋ ಯಾವ ಪಥದಿಂದಾದರೂ ಶತ್ರುಗಳನ್ನು ವಶಪಡಿಸಿಕೊಳ್ಳ ತಕ್ಕದ್ದೆಂದು ಶಕುನಿ ದುರ್ಯೋಧನನಿಗೆ ರಾಜನೀತಿಯನ್ನು ಬೋಧಿಸುವಾಗ "ದೈವವ ಮುಟ್ಟಿ ದಿವ್ಯಾಜ್ಞೆಗಳಲೊಡಬಡಿಸಿ ಹೇಸದರಿ ಭೂಪಾಲರನು ನಿಶ್ಶೇಷವೆನಿಸುವುದು"[2] ಎಂದು ನುಡಿಯುತ್ತಾನೆ. ದೇವರ ಮೇಲಾದರೂ ಆಣೆಯಿಟ್ಟು ಹಗೆಯನ್ನು ಮೋಸಗೊಳಿಸಿ ಗೆಲ್ಲಬೇಕಾದ್ದು ನೃಪಧರ್ಮ ಎಂಬುದವನ ಮತ. ವಶ್ಯತಿಲಕಾದಿಗಳಿಂದ ಹೆಣ್ಣುಗಳನ್ನು ವಶಪಡಿಸಿಕೊಳ್ಳಬಹುದೆಂದು ಕೆಲವರು ತಿಳಿದಿದ್ದರು.[3] ದ್ರೌಪದೀ ಸ್ವಯಂವರಕ್ಕೆಂದು ಹೊರಟ ರಾಜರು "ಹರಸಿಕೊಂಡರು....ಮಾಯಾಪುರದ ಕಾಂಚೀಪುರದ ಜಾಳಾಂಧರದ ವಿವಿಧ ಸ್ಥಾನ ದೇವರಿಗೆ" ಮತ್ತು "ಕರಿಮುಖನ ಕಜ್ಜಾಯದಲಿ" ಸತ್ಕರಿಸಿದರು. ಹರಕೆ ಮುಡಿಪುಗಳ ಮೂಲಕ ತಮ್ಮ ಇಷ್ಟಾರ್ಥವನ್ನು ಈಡೇರಿಸಿಕೊಳ್ಳಲು ಹವಣಿಸುವ ಜನ ಎಲ್ಲ ಸಮಾಜಗಳಲ್ಲಿಯೂ ತುಂಬಿಕೊಂಡಿದ್ದಾರೆ.

ಭಾರತದಲ್ಲಿ ಹಿಂದೂ ಮತದ ಸರ್ವಶಾಖೆಗಳ ತತ್ವದರ್ಶನ ಮತ್ತು ಸಂಪ್ರದಾಯಗಳ ವಿವರಣೆಗೆ ಸ್ಥಾನವಿರುವಂತೆಯೇ ಸಾಮಾನ್ಯ ಜನ ನಂಬಿಕೊಂಡಿರುವ ಕ್ಷುದ್ರದೇವತೆಗಳ ಪೂಜಾವಿಧಾನಗಳಿಗೂ ಮಾಟಮಂತ್ರಗಳಿಗೂ ಸ್ಥಾನವುಂಟು. ಯುದ್ಧ ಎಂದರೆ ಭೂತ ಭೇತಾಳ ಶಾಕಿನಿ ಪೂತನಿಯರಿಗೆ ಹಬ್ಬ. ಭೀಷ್ಮ ದ್ರೋಣನಿಂದ ಮೊಮ್ಮಕ್ಕಳಿಗೆ ಶಸ್ತ್ರಾಭ್ಯಾಸ ಮಾಡಿಸುವ ಸಲುವಾಗಿ ನೂರು ಯೋಜನ ವಿಸ್ತಾರದ ಗರುಡಿಯನ್ನು ಕಟ್ಟಿಸುತ್ತಾನೆ. ಅದನ್ನು ಪ್ರವೇಶಿಸುವಾಗ ಸಾವಿರ ಕುರಿಗಳನ್ನು ಹೊಯ್ದು ಚದುರ ಚಂಡಿಕೆಯನ್ನು ಪೂಜಿಸುತ್ತಾರೆ.[4] ಶಸ್ತ್ರಾಭ್ಯಾಸ ಮುಗಿದನಂತರ ಆ ಮಕ್ಕಳನ್ನು ಪರೀಕ್ಷಿಸುವ ಸಲುವಾಗಿ ನಿರ್ಮಿಸಿದ ರಂಗಸ್ಥಲವನ್ನು ಹೊಗುವಾಗ "ಹೊಯ್ದ ಕೋಣನ, ಕುರಿಯ ಹಿಂಡಿನ, ತೊಯ್ದ ರಕ್ತೋದನದ ರಾಶಿಯನ್ನೆಡೆ ದೆಸೆದೆಸೆಗಳಲಿ ಬಲಿದರು ಭೂತ ತುಷ್ಟಿಗಳ"[5] ಪಾಂಡವರು ತಮ್ಮ ಧನುರ್ಬಾಣಗಳನ್ನು ಮೂಟೆಕಟ್ಟಿ ವಿರಾಟನಗರಿಯ ಬಳಿಯ ಬನ್ನಿಮರದ ಮೇಲೇರಿಸುವಾಗ ಕಾಳಿಯನ್ನು ಸ್ತುತಿಸುತ್ತಾರೆ.[6] ಯುದ್ಧಕ್ಕೆ ಹೊರಡುವ ಮುನ್ನ ಶಸ್ತ್ರಪೂಜೆ ಭಯಂಕರ ರೀತಿಯಲ್ಲಿ ನಡೆಯುತ್ತದೆ. ಶಸ್ತ್ರಾಸ್ತ್ರಗಳು ಯುದ್ಧ ಮಾರಿಯ ಸಂಕೇತ ತಾನೆ. ಅಂದ ಮೇಲೆ ಅವಳಿಗೆ ಸಲ್ಲುವ ಪೂಜೆ ಅವಳ ಯೋಗ್ಯತೆಗೆ ತಕ್ಕಂತಿರಬೇಕು.

---

[1] ಸ ೧೩-೧೬ ; [2] ಆ ೮-೪೬ ; [3] ಆ ೧೩-೩ ; [4] ಆ ೬-೪೦ ; [5] ಆ ೭-೧೯ ; [6] ವಿ ೧-೧೧

ಕುರಿಯ ಹಣಿದಡ ಕೋಳಿಕೋಣನ। ಮುರಿದಲೆಯ ಮಾಸಲಿನ ರಕುತದ
ದುರಿದುರಿಪ ದಂಡೆಯಲಿ ಕಲಸಿದ ಕೂಳ ಮುದ್ದೆಗಳ
ಹೊರಗೆ ಬಡಿಸಿದ ಭೂತಬಲಿ ಬೊಬ್ಬಿರಿತದೊಡನುಬ್ಬೇಳ್ವ ಲಗ್ಗೆಯ
ಹರೆಗಳಬ್ಬರವಾಯ್ತು ಕರ್ಣನ ಶಸ್ತ್ರಪೂಜೆಯಲಿ[1]

ಕಾಪಟ್ಯವಿರುವೆಡೆಯಲ್ಲೆಲ್ಲ ಮಾಮಾಚಾರಗಳ ಆಟೋಪವೇ ಜಾಸ್ತಿ. ದ್ಯೂತಕ್ಕೆ ಮುನ್ನ ದುರ್ಯೋಧನ ಕೃತ್ರಿಮದ ಹಾಸಂಗಿಗಳ ರಚಿಸಿ "ಹರಸಿಕೊಂಡರು ಗಣಪ ಯಕ್ಷೇಶ್ವರಿ ಕಳಾವತಿ ದುರ್ಗಿ ಭುವನೇಶ್ವರಿಗಳಿಗೆ ವಿವಿಧೋಪಚಾರದ ಬಲಿವಿದಾನದಲಿ"[2] ಅಷ್ಟೇ ಅಲ್ಲ, ಮಂತ್ರಯಂತ್ರಗಳನ್ನು ಸಹ ಮಾಡಿಸುತ್ತಾರೆ. "ದ್ಯೂತಸಿದ್ಧಿಯ ಮಂತ್ರವರ ವಿದ್ಯಾತಿಶಯ ವಿಚ್ಛೇದ ರಕ್ತವಿಧೂತ ರಿಪುನುತಿ ಯಂತ್ರ ಪರಸನ್ಮೋಹನೌಷಧಿಯ"[3] ನ್ನವರು ಮೇಳವಿಸುತ್ತಾರೆ. ಐದು ಮಂದಿ ಪತಿಗಳನ್ನು ವಶಪಡಿಸಿಕೊಂಡಿರಬೇಕಾದರೆ ಯಾವುದೋ ವಶೀಕರಣವಿದ್ಯೆ ಅವಳಿಗೆ ದಕ್ಕಿರಬೇಕೆಂದು ಸತ್ಯಭಾಮೆ ದ್ರೌಪದಿಯನ್ನು ವಿನೋದಕ್ಕಾಗಿ ಕೇಳುತ್ತಾಳೆ. "ಮಂತ್ರಸಿದ್ಧಿಯೊ, ಮೇಣು ಶಾಬರ ಯಂತ್ರರಕ್ಷೆಯೊ, ಮೇಣ್ ವನೌಷಧ ತಂತ್ರತಿಲಕವೊ, ರಮಣರಿವರ್ಕೈವರ ವಶೀಕರಣ"[4] ಎಂದು ಸಂದೇಹಿಸುವಾಗ ಕವಿ ಸಮಾಜದಲ್ಲಿ ಚಾಲ್ತಿಯಲ್ಲಿದ್ದ ವಶೀಕರಣಯಂತ್ರ, ಮದ್ದು, ಕಾಡಿಗೆಗಳನ್ನು ನೆನಪಿನಲ್ಲಿಟ್ಟುಕೊಂಡಿರುವಂತೆ ಕಾಣುತ್ತದೆ.

ಪವಾಡಗಳು

ಪ್ರಾಚೀನ ಕಾವ್ಯಗಳಲ್ಲಿ ಪವಾಡಗಳ ಬೆಳಸು ಹುಲುಸಾಗಿದೆ. ಪ್ರತಿನಿತ್ಯ ನಡೆಯುವ ಸಾಮಾನ್ಯ ಘಟನೆಗಳು ಮನುಷ್ಯನಿಗೆ ನೀರಸವಾಗಿ ಕಾಣುತ್ತವೆ. ಆ ಘಟನೆಗಳಲ್ಲೊಂದು ತಿರುವು, ಒಂದು ವೈಶಿಷ್ಟ್ಯ ಅಥವಾ ಒಂದು ವೈಚಿತ್ರ್ಯ ತೋರಿದ್ದಾದರೆ ಅವನಿಗೆ ಮನೋರಂಜನೆಯೊದಗುತ್ತದೆ. ಆಧುನಿಕ ವಿಜ್ಞಾನ ಮಾನವಕಲ್ಪನೆಗೂ ರೋಮಾಂಚನವಾಗುವ ರೀತಿಯಲ್ಲಿ ಸೃಷ್ಟಿ ರಹಸ್ಯಗಳನ್ನು ಬೆದಕಲು ಪ್ರಯತ್ನಿಸಿದೆ, ಸಫಲವಾಗಿದೆ. ಆದರೂ ಸಾಗರದ ದಡದಲ್ಲಿ ಕುಳಿತು ಕಪ್ಪೆಚಿಪ್ಪುಗಳನ್ನಾಯುವ ಮಕ್ಕಳ ಆಟದಂತಾಗಿದೆ, ಈತನಕದ ವೈಜ್ಞಾನಿಕ ಸಂಶೋಧನೆ. ಈಗಿನ ವೈಜ್ಞಾನಿಕ ಸಿದ್ಧಿಗಳ ಹಿನ್ನೆಲೆಯಲ್ಲಿ ಬ್ರಹ್ಮಾಂಡವನ್ನು ಕಲ್ಪಿಸಿಕೊಂಡಾಗ ವೈಜ್ಞಾನಿಕಮಾನವ ಇನ್ನೂ ಶೈಶವಾವಸ್ಥೆಯಲ್ಲಿದ್ದಾನೆಂದು ಹೇಳಬೇಕಾದೀತು. ಬುದ್ಧಿಯೊಂದೇ ಪರಮಪ್ರಮಾಣ, ಅದಕ್ಕೆ ನಿಲುಕದುದೆಲ್ಲ ಮಿಥ್ಯೆಯೆನ್ನುವ ದೃಷ್ಟಿ ಒಂದು ಕಡೆಗಿದೆ. ಬುದ್ಧಿಯನ್ನು ಮೀರಿದ, ಅಂತರ್ಬೋಧೆಯೆನ್ನಬಹುದಾದ ದಿವ್ಯಶಕ್ತಿಯೊಂದಿದೆ, ಅದಕ್ಕೆ ಸೃಷ್ಟಿಯ ಅನೇಕ ರಹಸ್ಯಗಳು ಹೊಳೆಯುತ್ತವೆನ್ನುವ ಮತ್ತೊಂದು ದೃಷ್ಟಿಯೂ ಇದೆ. ದ್ರವ್ಯ ಮತ್ತು ಶಕ್ತಿಗಳು ಪರಸ್ಪರ ಪರಿವರ್ತನೀಯವಾದುವೆಂದು ವಿಜ್ಞಾನಿಗಳೇ ಹೇಳುವಾಗ, ಅತೀಂದ್ರಿಯಶಕ್ತಿ

---

[1] ಕ ೮-೮ ; [2] ಸ ೧೩-೨೧ ; [3] ಅದೇ, ೨೨ ; [4] ಆ ೧೫-೨೨

ಯುಳ್ಳ ಸಿದ್ಧಪುರುಷನಿಂದ ಆ ಪರಿವರ್ತನೆ ಸಾಧ್ಯ ಎಂದು ಸಮರ್ಥಿಸುವವರೂ ವಿರಳ ವೇನಲ್ಲ. ಅಂಥ ಅಮಾನುಷ ಅಥವಾ ಸಾಮಾನ್ಯನ ಊಹೆಗೂ ಮೀರಿದ ಘಟನೆಗಳನ್ನು ಪವಾಡಗಳೆಂದು ಕರೆಯುತ್ತಾರೆ. ಯಾವ ಯೋಗಸಿದ್ಧಿಯೂ ಇಲ್ಲದೆ, ಕೇವಲ ಕೈಚಳಕ ದಿಂದ ವೈಚಿತ್ರ್ಯಗಳನ್ನು ಸೃಷ್ಟಿಸಿ ಸಾಮಾನ್ಯರನ್ನು ಬೆರಗುಗೊಳಿಸುವ ಇಂದ್ರಜಾಲಿಗರೂ ಇದ್ದಾರೆ. ಅವರ ಮಾಟಗಳನ್ನು ಕಣ್ಕಟ್ಟು ಮೋಡಿ ಜಾದು ಎಂದು ನಾನಾ ವಿಧವಾಗಿ ಹೆಸರಿಸುತ್ತಾರೆ. ಪವಾಡಗಳೆಂದೋ ಇಂದ್ರಜಾಲವೆಂದೋ ಕರೆಯಬಹುದಾದ ಅನೇಕ ಸಂಗತಿಗಳೂ ಭಾರತದಲ್ಲಿ ಹೆಜ್ಜೆಹೆಜ್ಜೆಗೂ ಸಿಗುತ್ತವೆ. ದ್ರೋಣ ಕೃಪ ಕರ್ಣರಂಥ ಕೆಲವು ವ್ಯಕ್ತಿಗಳ ಹುಟ್ಟು ಅಸಾಧಾರಣರೀತಿಯಲ್ಲಿ ಘಟಿಸುತ್ತದೆ. ಭಕ್ತರು ನೆನೆದ ಕೂಡಲೇ ಶ್ರೀಕೃಷ್ಣ ಹಾಜರಾಗುತ್ತಾನೆ. ವಸ್ತ್ರಾಪಹರಣ ಸಂದರ್ಭದಲ್ಲಿ ದ್ರೌಪದಿಯ ಮೊರೆ ದ್ವಾರಾವತಿಯಲ್ಲಿ ಹೆಂಡತಿಯರೊಡನೆ ನೆತ್ತವಾಡುತ್ತಿದ್ದ ಶ್ರೀಕೃಷ್ಣನಿಗೆ ಮುಟ್ಟಿ, ಸೀರೆ ಅಕ್ಷಯವಾಗಲಿ ಎಂದು ಹರಸುತ್ತಾನೆ. ದುಶ್ಶಾಸನ ಬಳಲಿದರೂ ಸೀರೆ ಮುಗಿಯು ವುದಿಲ್ಲ. ಅರಣ್ಯವಾಸದ ಸಮಯದಲ್ಲಿ ದ್ರೌಪದಿಯ ಬಳಿಯಿದ್ದ ಅಕ್ಷಯಪಾತ್ರೆ ಸಹಸ್ರಾರು ಜನರಿಗೆ ಅನ್ನವೊದಗಿಸುತ್ತದೆ. ದೂರ್ವಾಸಾತಿಥ್ಯ ಪ್ರಸಂಗದಲ್ಲಿ ಪಾತ್ರೆಯ ತಳದಲ್ಲಿದ್ದ ಒಂದಗುಳು ಅನ್ನವನ್ನು ಶ್ರೀಕೃಷ್ಣ ತಿಂದು ತೇಗಿದಾಗ ಅದು ಅಕ್ಷಯವಾಗು ತ್ತದೆ. ಅವನು ವಿದುರನ ಮನೆಯಲ್ಲಿ ಕುಡಿದ ಒಂದು ಕುಡಿಕೆ ಹಾಲು ಅಕ್ಷಯವಾಗಿ ದುರ್ಯೋಧನನ ಅರಮನೆಯ ಮುಂದೆ ಹೊನಲಾಗಿ ಹರಿಯುತ್ತದೆ. ತನ್ನ ಮಗಳನ್ನು ಐವರಿಗೆ ಮದುವೆಮಾಡಿಕೊಡಲು ಹೆದರಿದ ದ್ರುಪದನಿಗೆ ವೇದವ್ಯಾಸ ದಿವ್ಯದೃಷ್ಟಿ ನೀಡಿ, ಪೂರ್ವಜನ್ಮದಲ್ಲಿ ದ್ರೌಪದಿ ಐವರಿಗೂ ಮಡದಿಯೆಂಬುದನ್ನು ತೋರಿಸುತ್ತಾನೆ. ತನ್ನ ವಿಶ್ವರೂಪವನ್ನು ನೋಡಲನುಕೂಲವಾಗಲೆಂದು ಶ್ರೀಕೃಷ್ಣ ಧೃತರಾಷ್ಟ್ರನಿಗೆ ಕಣ್ಣು ಕರುಣಿ ಸುತ್ತಾನೆ. ರಣಭೂಮಿಯಲ್ಲಿದ್ದ ಮಕ್ಕಳ ನೆನಹು ಪೀಡಿಸಿದಾಗ "ದೃಗುವಿಹೀನರಬಾಳಿಕೆಯ ಸುಡ"ಲೆಂದು ಧೃತರಾಷ್ಟ್ರ ಚಿಂತಿಸುತ್ತಾನೆ. ಆಗ ವೇದವ್ಯಾಸ ಮುನಿಯ ಕರುಣದಿಂದ ಸಂಜಯನಿಗೆ ಮಹಾಸಂಗ್ರಾಮ ಗೋಚರವಾಗಲು, ಅವನು ಧುರವಾರ್ತೆಯನ್ನು ಧೃತ ರಾಷ್ಟ್ರನಿಗೆ ವಿಸ್ತರಿಸುತ್ತಾನೆ. ಗೀತೋಪದೇಶ ಸಮಯದಲ್ಲೊಮ್ಮೆ ಅರ್ಜುನ ಶ್ರೀಕೃಷ್ಣ ನಲ್ಲಿ ವಿಶ್ವರೂಪವನ್ನು ದರ್ಶಿಸುತ್ತಾನೆ. ಸಂಧಾನಸಮಯದಲ್ಲಿ ದುರ್ಯೋಧನ ತನ್ನನ್ನು ಕಟ್ಟಲೆಳಸಿದಾಗ ಕೃಷ್ಣ ವಿಶ್ವರೂಪಿಯಾಗುತ್ತಾನೆ. ಸೌಗಂಧಿಕಾಪುಷ್ಪವನ್ನು ತರಲು ಹೋದ ಭೀಮನಿಗೆ ಆಂಜನೇಯ ತನ್ನ ಹಿಂದಿನ ರೂಪವೈಭವವನ್ನು ತೋರಿಸುತ್ತಾನೆ. ಶ್ರೀಕೃಷ್ಣ ರಾಯಭಾರಿಯಾಗಿ ಸಭಾಸ್ಥಾನವನ್ನು ಪ್ರವೇಶಿಸಿದಾಗ, ದುರ್ಯೋಧನ ಅವನ ಕಡೆ ನೋಡದೆಯೆ ನಿರ್ಲಕ್ಷ್ಯದಿಂದ ಸಿಂಹಾಸನಾಸೀನನಾಗಿರುತ್ತಾನೆ. ಆಗ ಶ್ರೀಕೃಷ್ಣ ಉಂಗುಟದಿಂದ ಭೂಮಿಯನ್ನೊತ್ತಲು, ಸಿಂಹಾಸನ ಕಂಪಿಸಿ, ದುರ್ಯೋಧನ ಅವನ ಚರಣದಲ್ಲಿ ಮಣಿಯುತ್ತಾನೆ. ಸೈಂಧವವಧಪ್ರಸಂಗದಲ್ಲಿ ಕೃಷ್ಣ ಸುದರ್ಶನವನ್ನು ಸೂರ್ಯನಿಗಡ್ಡಲಾಗಿ ಹಿಡಿದು ಕತ್ತಲು ಕವಿಸುತ್ತಾನೆ. ದಿವ್ಯಾಸ್ತ್ರ ದಿವ್ಯಮಂತ್ರಗಳಂತು ನಿಗೂಢವಾದುವು. ಕಾಲಕೇಯನಿವಾತಕವಚರ ಕದನದಲ್ಲಿ ದೈತ್ಯರು ಬಿರುಗಾಳಿಯಾಗಿ

ಬೀಸುತ್ತಾರೆ, ಅಗ್ನಿಯಾಗಿ ಸುತ್ತುತ್ತಾರೆ, ರವಿಶತದಾಸರಿನ ಬಿಸಿಯಾಗಿ ಸುಳಿಯುತ್ತಾರೆ. ಅಶ್ವತ್ಥಾಮ ಶಸ್ತ್ರಸನ್ಯಾಸ ಸ್ವೀಕರಿಸಿದನಂತರ, ಶಸ್ತ್ರಕ್ಕೆ ಬದಲಾಗಿ ತೃಣವನ್ನು ಮಂತ್ರಿಸಿ ಕಳಿಸಿ ಉತ್ತರೆಯ ಗರ್ಭದ ಮಗುವನ್ನು ಕೊಲ್ಲಲು ಪ್ರಯತ್ನಿಸುತ್ತಾನೆ. ಜಲಸ್ತಂಭನ ವಿದ್ಯೆಯ ಪ್ರಭಾವದಿಂದ ದುರ್ಯೋಧನ ನೀರಿನಲ್ಲಿ ದೀರ್ಘಕಾಲ ಮುಳುಗಿರುತ್ತಾನೆ. ಯುದ್ಧಾಂತ್ಯದಲ್ಲಿ ಅರ್ಜುನನನ್ನು ಮೊದಲು ರಥದಿಂದಿಳಿಸಿ, ಅನಂತರ ಶ್ರೀಕೃಷ್ಣ ಕೆಳಗಿಳಿಯುತ್ತಾನೆ. ಅವನು ಇಳಿಯುತ್ತಿದ್ದಂತೆಯೇ ರಥ ಸುಟ್ಟುಹೋಗುತ್ತದೆ. ಮುನಿಗಳ ಶಾಪಾನುಗ್ರಹಶಕ್ತಿಯಲ್ಲಿಯೂ ಅಮಾನುಷ ಪರಿಣಾಮಗಳನ್ನು ಕಾಣಬಹುದು. ಪರಾಶರನ ವರದಿಂದ ಮತ್ಸ್ಯಗಂಧಿನಿ ಮಗುವನ್ನು ಪಡೆದೂ ಕನ್ಯೆಯಾಗಿಯೇ ಉಳಿದದ್ದಲ್ಲದೆ, ಯೋಜನಗಂಧಿಯೂ ಆಗುತ್ತಾಳೆ. ಪರಶುರಾಮನ ಶಾಪದಿಂದ ಕರ್ಣನ ಮಂತ್ರಶಕ್ತಿ ಅಣಿಯಾದ ಸಮಯದಲ್ಲಿ ಮರೆತುಹೋಗುತ್ತದೆ. ಇಂತೆಯೇ ಊರ್ವಶೀ ಶಾಪ, ಪಾಂಡು ಪಡೆದ ಶಾಪ ಇತ್ಯಾದಿ, ಇತ್ಯಾದಿ. ಜಂಬೂಫಲಪ್ರಕರಣವೂ ಪವಾಡದಿಂದ ಕೂಡಿದ್ದುದೇ ಆಗಿದೆ.

ನಡತೆ

ಒಬ್ಬ ವ್ಯಕ್ತಿಯ ಶೀಲ ಸಂಸ್ಕೃತಿಗಳನ್ನು ಅಥವಾ ಆತನ ದುಸ್ಸ್ವಭಾವವನ್ನು ಆತನ ಚರ್ಯೆ ಅಥವಾ ನಡತೆಯಿಂದ ಸುಲಭವಾಗಿ ಗ್ರಹಿಸಬಹುದು. ನಡತೆಯೇ ಆತನ ಹೃದಯಕ್ಕೆ ಕನ್ನಡಿಯಾಗುತ್ತದೆ. ಕ್ರಿಯೆ, ಅಂಗಭಂಗಿ, ಮುಖಮುದ್ರೆ ಮತ್ತು ಭಾಷೆಗಳು ಆ ನಡತೆ ಹೊರಹೊಮ್ಮುವ ಮಾಧ್ಯಮವಾಗುತ್ತವೆ. ವಿನಯ ಔದಾರ್ಯ ಭೂತದಯೆ ಲೋಕಹಿತಾಕಾಂಕ್ಷೆ ಮತ್ತು ಲೋಕಾನುಭವಗಳಿಂದ ಮಾಗಿದ ವ್ಯಕ್ತಿತ್ವದ ಕ್ರಿಯಾರೂಪವೇ ಒಳ್ನಡತೆ.[1] ಇದು ಸಾಮಾಜಿಕ ಸಂಪ್ರದಾಯ ಮತ್ತು ವ್ಯಕ್ತಿಪರಿಷ್ಕಾರಗಳಿಂದ ಸಿದ್ಧವಾಗುವ ಗುಣ. ಮಹಾಭಾರತದ ಕೃಷ್ಣ ಭೀಷ್ಮರ ವ್ಯಕ್ತಿತ್ವ ಒಳ್ನಡತೆಗೆ ಅತ್ಯುತ್ತಮ ನಿದರ್ಶನ. ಭರತವಂಶವನ್ನು ನಿಸ್ವಾರ್ಥತೆಯಿಂದ ಬೆಳೆಯಿಸಿ, ಅದರ ಕೀರ್ತಿಯನ್ನು ಬೆಳಗಿ, ಕೌರವ ಪಾಂಡವರನ್ನು ಸಾಕಿ ಸಲಹಿದ ಪಿತಾಮಹ ಭೀಷ್ಮ. ಭಾರತದಲ್ಲೆಲ್ಲ ಸರ್ವರೀತಿಯಲ್ಲಿಯೂ ಹಿರಿಯನೆಂದರೆ ಅವನೇ. ಆದರೂ ತನ್ನ ಸುತ್ತಮುತ್ತಿನ ಜನರ ಸ್ಥಾನಮಾನ ಉಚಿತಾನುಚಿತಗಳನ್ನರಿತು ಮರ್ಯಾದೆ ಸಲ್ಲಿಸುವುದರಲ್ಲಿ ಅವನೇ ಮೊದಲಿಗ. ಮೊಮ್ಮಗ ದುರ್ಯೋಧನನೇ ರಾಜನಾದರೂ ಸಾಮಾನ್ಯಪ್ರಜೆಯಂತೆ ಸಿಂಹಾಸನಕ್ಕೆ ಉಚಿತ ಗೌರವವನ್ನು ಸಲ್ಲಿಸುತ್ತಾನೆ. ಕೌರವ ಸೇನಾನಿಪದವಿಯನ್ನೊಪ್ಪಿಸುವ ಸಲುವಾಗಿ ರಾತ್ರಿಯ ವೇಳೆ ತನ್ನ ಮನೆಗೆ ಬಂದಾಗ ಅವನು "ಏನಿರುಳು ನೀ ಬಂದ ಹದನೆಲೆ ಮಾನನಿಧಿ, ಬೇಕಾದರೆಮ್ಮನು ನೀನು ಕರೆಸುವುದರುಪುವುದು ನಿಜಕಾರ್ಯ ಸಂಗತಿಯ"[2] ಎಂದು ನುಡಿಯುತ್ತಾನೆ. ದುರ್ಯೋಧನ ತನ್ನ ಮುತ್ತಯ್ಯನೆಂಬ

---

[1] ಆಂಗ್ಲ ಭಾಷೆಯ Manners ಎಂಬ ಪದಕ್ಕೆ ಸಂವಾದಿಯಾಗಿ ಈ ಪದವನ್ನು ಬಳಸಿದೆ;

[2] ಭೀ: ೧–೧೮

ಸಲುಗೆಯಿಂದ ಆತನ ಬಳಿ ಬಂದರೆ, ರಾಜ ತನ್ನೆಡೆಗೆ ಬರಬಾರದು, ತಾನೇ ಅವನೆಡೆಗೆ ಹೋಗಬೇಕಾದ್ದು ತನ್ನ ಧರ್ಮ ಎಂದು ಹೇಳುವಲ್ಲಿ ಅವನ ಹಿರಿಮೆ ಪ್ರಕಟಗೊಳ್ಳುತ್ತದೆ. ಭೀಷ್ಮ ಕೃಷ್ಣನಿಗಿಂತ ತುಂಬ ಹಿರಿಯ. ಅವನು ಅವತಾರಪುರುಷನೆಂಬಂಶವನ್ನು ಮರೆತರೆ, ಭೀಷ್ಮನೇ ರಾಜಸೂಯಯಾಗ ಸಮಯದ ಸಭೆಯಲ್ಲಿ ಅತ್ಯಂತ ಹಿರಿಯ. ಆದರೂ "ಮಾನನೀಯರದಾರು ಜಗದಲಿ ಕೃಷ್ಣನಲ್ಲದೆ ಪೂಜ್ಯತಮರು" ಎಂದವನು ಅಗ್ರ ಪೂಜೆಗೆ ಕೃಷ್ಣನೇ ತಕ್ಕನೆಂದು ಹೆಸರಿಸುತ್ತಾನೆ. ಶಿಶುಪಾಲ ಆ ಬಗ್ಗೆ ಕೊಂಕು ತೆಗೆದು ಕೊಸರಿದಾಗ ಭೀಷ್ಮ ಮೇಲೆದ್ದು "ಯಶೋದಾಬಾಲಕಂಗಭಿನಮಿಸಿ, ನಿಮಿಷ ನಿಮಿಷಾಲಿ ತಾಕ್ಷನು ಕಂದೆರೆದು ಮುನಿಜನಕೆ ಕೈಮುಗಿದು" ತನ್ನ ನಿರ್ಧಾರವನ್ನು ದೊಡ್ಡಸ್ತಿಕೆ ಯಿಂದ ಸಮರ್ಥಿಸಿಕೊಳ್ಳುತ್ತಾನೆ. ಶ್ರೀಕೃಷ್ಣ ವಿದುರನ ಮನೆಯಿಂದ ದುರ್ಯೋಧನನ ಒಡ್ಡೋಲಗಕ್ಕೆ ಬಂದಾಗ ಭೀಷ್ಮ ಅವನ "ಚರಣಯುಗಳವ ತೊಳೆದು, ತೀರ್ಥವ ಶಿರದೊಳಿಟ್ಟು, ಮಹಾನುಭಾವನ ದರುಶನದಿ ಮಜ್ಜನ್ಮ ಸಫಲವೆನುತ್ತ"[1] ಕೈಮುಗಿಯು ತ್ತಾನೆ. ಇಲ್ಲಿ ಕಾಣುವುದು ದಾಸ್ಯಭಾವವಲ್ಲ; ಮಹಿಮೆ ಮಹಿಮೆಗೆರಗುವ ಒಂದು ರೀತಿಯ ಸಾಯುಜ್ಯಭಾವ. ಅವನಲ್ಲಿ ಹೇಡಿತನವೂ ಇಲ್ಲ, ಕೃತ್ರಿಮತೆಯೂ ಇಲ್ಲ. ಸಮಯ ಬಂದರೆ ಗುರುಪರಶುರಾಮನ ಮೇಲೆ, ಅಂತೆಯೇ ಶ್ರೀಕೃಷ್ಣನ ಮೇಲೆ ಸರಳು ಹೂಡುವಂಥ ಪರಾಕ್ರಮಿ ಅವನು. ಆದರೆ ಎಂಥ ವಿಷಮ ಸನ್ನಿವೇಶದಲ್ಲಿಯೂ ಔಚಿತ್ಯ ಮೀರದ, ವಿನಯ ಬಿಡದ ಧೀರನವನು.

ಶ್ರೀಕೃಷ್ಣ ಸರ್ವಶಕ್ತ, ಸರ್ವಜ್ಞ, ಸರ್ವಾಂತರ್ಯಾಮಿಯಾಗಿಯೂ ಆದರ್ಶಮಾನವ ನಂತೆ ನಡೆದುಕೊಂಡ ಮಹಾನುಭಾವ. ಅವನ ಪವಾಡಗಳನ್ನು ಮರೆತದ್ದಾದರೆ ಅವನೆಂಥ ಸ್ಥಿತಪ್ರಜ್ಞ, ಗುಣನಿಧಿ, ಸನ್ಮಿತ್ರ, ರಾಜಕಾರಣಿ, ಶಿಷ್ಟಬಂಧು, ಧರ್ಮಿಷ್ಠ, ಕರುಣಾಮಯಿ ಎಂಬ ಸಂಗತಿ ವೇದ್ಯವಾಗುತ್ತದೆ. ಆದರ್ಶಮಾನವನ ಸಕಲ ಗುಣ ನಡತೆಗಳು ಅವನಲ್ಲಿ ಕೊಳಗೊಂಡಿವೆ. ಶ್ರೀಕೃಷ್ಣ ಪಾಂಡವರ ಪ್ರಥಮ ಸಮಾಗಮ ಸಂಭವಿಸಿದ್ದು ದ್ರುಪದ ನಗರಿಯಲ್ಲಿ. ತಾನೇ ಪಾಂಡವರಿದ್ದಲ್ಲಿಗೆ ಯಾದವಬಂಧು ಸಮೇತ ಹೋಗಿ, ವಸ್ತ್ರ ಭೂಷಣಗಳನ್ನು ಕಾಣಿಕೆಯಿತ್ತು, ಅವರ ಯೋಗಕ್ಷೇಮವನ್ನು ವಿಚಾರಿಸಿದ್ದರಲ್ಲಿ ಅವನ ವಿನಯಶ್ರೀ ಅಭಿವ್ಯಕ್ತಗೊಳ್ಳುತ್ತದೆ. ಅಭಿಮನ್ಯುವಿನ ಮದುವೆಗೆಂದು ವಿರಾಟನಗರಿಯನ್ನ ವನು ಪ್ರವೇಶಿಸಿದಾಗ, ದ್ರುಪದ ವಿರಾಟ ಪಾಂಡವರು ತಂತಮ್ಮ ಅಂದಣಗಳಿಂದಿಳಿದು, ಮೆಯ್ಯಿಕ್ಕಿ, ಕಾಲು ನಡೆಯಲ್ಲಿ ಮುಂದುವರಿಯುತ್ತಾರೆ. ಆಗ ಶ್ರೀಕೃಷ್ಣ ಆನೆಯಿಂದಿಳಿದು ಅವರೊಡನೆ ನಡೆದು ಹೋಗುತ್ತಾನೆ. "ಘನತೆಯ ಮೇಲೆ ತನ್ನದು ಘನತೆಯೆಂಬುದನತ್ತ ಬೇರಿಸಿ, ಕಾಲಿಗೆರಗುವನಾ ಯುಧಿಷ್ಠಿರನ್ ಏಳಲೊಡನೇಳುವನು"[2] ಅವನು ವಿದುರನ ಮನೆಯಲ್ಲುಳಿದಿದ್ದಾಗ ತನ್ನನ್ನು ನೋಡುವ ಸಲುವಾಗಿ ಸೋದರತ್ತೆ ಕುಂತಿ ಬರುತ್ತಾಳೆ. "ಬರಲು ಕಂಡಸುರಾರಿ ಮಂಚದೊಳಿರದೆ ಧಿಮ್ಮನೆನಿಂದು ನರರಾಚರಣೆಗಳ ನಾಟಕವ

---

[1] ಉ ೮-೬೨ ; [2] ಉ ೧-೨

ತಾನೇ ನಟಿಸಿ ತೋರು"ತ್ತಾನೆ; "ಹಿರಿಯರಿಗೆ ತಾ ಹಿರಿಯನೆಂಬೀ ಗರುವತನವನು ಬಿಸುಟು ಕುಂತಿಗೆ ಕರವ"[1] ಮುಗಿಯುತ್ತಾನೆ.

ರಾಜಸೂಯಯಾಗಕ್ಕೆ ಬಂದ ಗುರುಹಿರಿಯರನ್ನೂ ನಾನಾ ದೇಶದ ದೊರೆಗಳನ್ನೂ ಧರ್ಮರಾಯ ಅವರವರ ಸ್ಥಾನಮಾನಗಳನ್ನರಿತು ಗೌರವಿಸುತ್ತಾನೆ. ಅವರು ಬರುವುದನ್ನೇ ಕಾಯುತ್ತಿದ್ದು ಭೀಷ್ಮ ದ್ರೋಣ ಕೃಪ ಧೃತರಾಷ್ಟ್ರರಿಗೆ ನಮಿಸಿ, ವಂದನೀಯರಿಗೆರಗಿ, ಸಮರಿಗೆ ನಿಂದು ಕುಶಲಕ್ಷೇಮ ಸಂಗತಿಗಳನ್ನು ವಿಚಾರಿಸಿ ಸ್ವಾಗತಿಸುತ್ತಾನೆ.[2] ಒಂದೊಂದು ಕಾರ್ಯವಿಭಾಗದ ಮೇಲ್ವಿಚಾರಣೆಗೆ ಒಬ್ಬೊಬ್ಬರು ಯುಕ್ತರನ್ನು ನೇಮಿಸಲಾಗಿದೆ. ಸವನ ಸಾಧನ ಸರ್ವಸಂಭಾರಗಳನ್ನು ತರಿಸಿ ಕೊಡುವುದು ಧೌಮ್ಯನ ಹೊಣೆ; ಅವನಿಪತಿಗಳ ಪಾರುಪತ್ಯದ ನೋಟ ಸಂಜಯನದು; ವಿವಿಧ ಋಷಿಯಾಜ್ಞಿಕ ಮಾಂತ್ರಿಕರ ಜವಾಬ್ದಾರಿ ಸಹದೇವನದು; ಭೋಜ್ಯಪ್ರಸರದಧಿಕಾರ ಯುಯುತ್ಸುವಿನದು.[3] ಭೂಸುರರನ್ನು ಕರೆದು ಕುಳ್ಳಿರಿಸುವವನು ಸಾತ್ಯಕಿ; ಭರದಿನೆಂಜಲ ತೆಗೆಸಿ ಸಾರಿಸುವುದು ವಿಕರ್ಣನಿಗೆ ಗಂಟುಬಿದ್ದ ಕೆಲಸ, ಭೋಜನಾಂತರದಲ್ಲಿ ವೀಳೆಯಗಂಧಮಾಲ್ಯಾಂಬರಗಳನ್ನು ಕೊಟ್ಟು ಸತ್ಕರಿಸುವ ಅಧಿಕಾರ ದುಶ್ಶಾಸನದು.[4] ಇಂತೆಯೇ ಇತರ ಕೆಲಸಗಳನ್ನು ಕೃಪ ವಿದುರ ಮೊದಲಾದವರಿಗೆ ಹಂಚುತ್ತಾರೆ. ಇಷ್ಟು ಅಚ್ಚುಕಟ್ಟಾಗಿ ಕಾರ್ಯವ್ಯವಸ್ಥೆ ಮಾಡಿದ್ದರೂ ಧರ್ಮರಾಯ ಭೀಷ್ಮನಿಗೆರಗಿ "ಬಾಲಕರು ನಾವ್, ಅಧ್ವರವಿದಗ್ಧದ ರಾಜಸೂಯ, ಮಹೀಶ್ವರರು ನೆರೆದುದಖಿಳ ದ್ವೀಪಜನ, ಆದರಿಸಲರಿಯೆನು, ಹೆಚ್ಚುಕುಂದಿನ ಕುರುಡ ನೀಕ್ಷಿಸಲಾಗದು"[5] ಎಂದು ಕರಗಳನ್ನು ಮುಗಿಯುತ್ತಾನೆ. ಯಾಗ ಮುಗಿದನಂತರ ಆಹ್ವಾನಿತರು ತಂತಮ್ಮ ಊರುಗಳಿಗೆ ತೆರಳುತ್ತಾರೆ. ಶ್ರೀಕೃಷ್ಣ ಅವರಿಂದ ಬೀಳ್ಕೊಳ್ಳುವಾಗ ದುಗುಡ ಧರ್ಮರಾಯನನ್ನು ದಹಿಸುತ್ತದೆ; ಅಗಲಿಕೆಯನ್ನು ಸಹಿಸಲಾರದೆ ಗೋಳಾಡುತ್ತಾನೆ.

ಇಂಥ ಸಭ್ಯನಡತೆಯನ್ನು ಪ್ರಕಟಿಸುವ ಸಂಸ್ಕೃತಿ ಹಿರಿದಾದುದೆಂದು ಹೇಳಬೇಕಾಗಿಲ್ಲ. ಆದರೆ ಇಂಥ ಸನ್ನಡತೆಯನ್ನು ದುರ್ಯೋಧನ ದುಶ್ಶಾಸನರಿಂದ ನಿರೀಕ್ಷಿಸುವಂತಿಲ್ಲ. ಕೊನೆಗೆ ನಿರ್ಲಜ್ಜರಾಗಿ, ಸಭಾಮರ್ಯಾದೆಯನ್ನು ಸಹ ತೊರೆದು, ದ್ರೌಪದಿಯನ್ನು ಅಶಿಷ್ಟರಂತೆ, ಬೀದಿಯ ತುಂಡಾಡಿಗರಂತೆ ಅವಮಾನಗೊಳಿಸುತ್ತಾರೆ. ದುರ್ಯೋಧನನಂತು ಗದ್ದುಗೆಗೆ ಸಲ್ಲದ ರೀತಿಯಲ್ಲಿ ವರ್ತಿಸುತ್ತಾನೆ; ದ್ರೌಪದಿಗೆ ತನ್ನ ತೊಡೆ ತೋರಿಸುತ್ತಾನೆ. ಬೀದಿಯ ಜನ ಸಹ ಇಂಥ ವರ್ತನೆಯನ್ನೊಪ್ಪಲಾರರು. ದುಶ್ಶಾಸನನ ಬಾಯಿಂದ ಅವಾಚ್ಯಶಬ್ದಗಳುದುರುವಾಗ ಶಿಷ್ಟರು ಕಿವಿಮುಚ್ಚಿಕೊಳ್ಳಬೇಕಾಗುತ್ತದೆ. ಅನಾಗರಿಕತೆಯೇ ಮೂರ್ತಿವೆತ್ತಂತಿದ್ದ ವ್ಯಕ್ತಿಯವನು. ಹಿಂದಿನ ಅವಮಾನಪರಂಪರೆ ನೆನಪಿಗೆ ಬಂದು, ಕೋಪವುಕ್ಕಿದಾಗ ಭೀಮನೂ ಮರ್ಯಾದೆಯ ಮಟ್ಟದಿಂದ ಕೆಳಗಿಳಿಯುತ್ತಾನೆ. ಈ ಹಿಡಿಂಬಾರಮಣ ದುಶ್ಶಾಸನವಧೆಯ ಸಂದರ್ಭದಲ್ಲಿ ರಾಕ್ಷಸನಂತೆ ವರ್ತಿಸಿದ್ದು ಅಚ್ಚರಿ

1 ಉ ೮-೧೭ ; 2 ಸ ೭-೭ ; 3 ಸ ೭-೧೫ ; 4 ಸ ೭-೧೬ ; 5 ಸ ೭-೧೩

ಯೇನಲ್ಲ. ಅದೇ ಸಮಯದಲ್ಲಿ ದ್ರೌಪದಿ ದುಶ್ಶಾಸನನ ಮಸ್ತಕವನ್ನೊದೆಯುತ್ತಾಳೆ. ಅವಳು ಪಟ್ಟ ಪಾಡಿನ ಹಿನ್ನೆಲೆಯಲ್ಲಿ ಈ ವರ್ತನೆ ಕ್ಷಮ್ಯವೆನ್ನಬಹುದಾದರೂ, ದುರ್ಯೋಧನನ ಮಕುಟವನ್ನೊದ್ದುದಲ್ಲದೆ, ಹಲ್ಲು ಕಳಚುವ ಹಾಗೆ ಅವನ ವದನವನ್ನೊದ್ದ ಭೀಮನ ವರ್ತನೆ ಅಸಹ್ಯವೆಂದು ಕೌರವನ ವೈರಿಯೂ ಹೇಸದಿರಲಾರ. ಆ ದೃಶ್ಯವನ್ನು ಕಣ್ಣಾರೆ ಕಂಡ ಧರ್ಮರಾಯ ದುರ್ಯೋಧನನನ್ನು ಲೋಕೈಕಮಾನ್ಯನೆಂದು ಕರೆದು, ತಮ್ಮ ಅಪರಾಧವನ್ನು ಕ್ಷಮಿಸುವಂತೆ ದುಗುಡದಿಂದ ಪ್ರಾರ್ಥಿಸುತ್ತಾನೆ. ಭೀಮ ಧರ್ಮರಾಯರ ಈ ನಡತೆಯಲ್ಲಿ ಅವರ ಸಂಸ್ಕೃತಿಯ ಅಂತರವೂ ವೇದ್ಯವಾಗುತ್ತದೆ.

೫. ಭಾಷಿಕ ಸಂಸ್ಕೃತಿ

ಸಂಸ್ಕೃತಿ ಉಳಿಯುವಲ್ಲಿ ಮತ್ತು ಬೆಳೆಯುವಲ್ಲಿ ಭಾಷೆ ಪ್ರಧಾನಪಾತ್ರ ವಹಿಸುತ್ತದೆ. ಸಂಸ್ಕೃತಿಯ ಹರಳುಗಳೇ ಪದಗಳು; ಅದು ಸಾಕಾರತೆ ಪಡೆದಾಗ ಭಾಷೆಯಾಗುತ್ತದೆ. ಅವೆರಡೂ ಪರಸ್ಪರ ಪೋಷಕಶಕ್ತಿಗಳು. ಸಂಸ್ಕೃತಿ ವಿಕಾಸಗೊಂಡಂತೆಲ್ಲ ಭಾಷೆ ಬೆಳೆಯುತ್ತದೆ; ಸಂವರ್ಧನೆಯಾಗುತ್ತದೆ. ಭಾಷೆ ಸಂಸ್ಕೃತಿಯ ಪ್ರಕಾಶನಕ್ಕೆ ಪ್ರಬಲ ಮಾಧ್ಯಮವಾಗುತ್ತದೆ. ಮನುಷ್ಯನ ಮನೋಧರ್ಮ ಮತ್ತು ಅವನ ನಡತೆ ಅಥವಾ ಚಾಲುಗಳನ್ನು ಪ್ರತಿಬಿಂಬಿಸುವ ದರ್ಪಣವದು. ಕವಿ ಒಂದು ಭಾಷೆಯ ಸರ್ವಸತ್ವವನ್ನು ಜೀರ್ಣಿಸಿಕೊಂಡಾಗ ಮಾತ್ರ, ಸಂಸ್ಕೃತಿಯ ವಿಶ್ವರೂಪವನ್ನು ಪ್ರದರ್ಶಿಸಲು ಸಾಧ್ಯವಾಗುತ್ತದೆ. ಮಾನವಲೋಕದ ಗುಣಧರ್ಮಗಳು, ಬೆಡಗುಬಿನ್ನಾಣಗಳು, ವಿಲಾಸ ಚಮತ್ಕಾರಗಳು, ಅನಂತಾನಂತ. ಅವನಲ್ಲಿ ನಯವಿದೆ ಒರಟಿದೆ; ಶೀಲವಿದೆ ಅಶ್ಲೀಲವಿದೆ; ಮಾಧುರ್ಯವಿದೆ ಕರ್ಕಶತೆಯಿದೆ. ಅವನ್ನೆಲ್ಲ ಭಾಷೆಯ ಮೂಲಕ ಸಮರ್ಪಕವಾಗಿ ಬಿಂಬಿಸಬಲ್ಲವನೇ ಸಮರ್ಥಕವಿ. ಕುಮಾರವ್ಯಾಸನ ವ್ಯಕ್ತಿತ್ವವೇ ಭಾಷೆಯಾಗಿ ಅರಳುವುದರಿಂದ ಅವನ ಮನೋಧರ್ಮವನ್ನರಿಯಲು ಅದು ಸಾನುಕೂಲ ಸಾಧನವಾಗುತ್ತದೆ. ನಿಷ್ಕಾಪಟ್ಯ ಅವನ ಮನೋಧರ್ಮದ ಪ್ರಮುಖ ಲಕ್ಷಣ. ಮನಸ್ಸಿನಲ್ಲಿದ್ದದ್ದನ್ನು ಮುಚ್ಚದೆ ಮುರಿಯದೆ ತಡೆಯದೆ ನಿಸ್ಸಂಕೋಚವಾಗಿ ನೇರವಾಗಿ ಹೇಳಿಬಿಡುವ ಸ್ವಭಾವ ಆತನದು. ಭಾವಾಲೋಚನೆಗಳು ಮೂಡುವುದೆ ತಡ ಅವುಗಳಿಗೆ ರೂಪದಾನಮಾಡಲು ನೂರಾರು ಮಾತುಗಳು ಒಟ್ಟೊಟ್ಟಿಗೆ ಮುನ್ನುಗ್ಗುವಂತೆ ತೋರುತ್ತದೆ. ಅವನ ಪ್ರತಿಭಾಸಂಸ್ಪರ್ಶದಿಂದ ಭಾಷೆ ರೂಪಕತ್ವವನ್ನು ಪಡೆಯುತ್ತದೆ. ಅವನ ಮಾತಿನ ಮೋಡಿಗೆ ಮರುಳಾಗದವರಿಲ್ಲ. ನಾಗರಿಕಾಭಿರುಚಿಗೊಗ್ಗದ, ಅಶ್ಲೀಲವೆನ್ನಬಹುದಾದ ಮಾತುಗಳು ಒಮ್ಮೊಮ್ಮೆ ಸುಳಿಯುವುದುಂಟು. "ಓಟವೇ ಅಪಜಯದ ಬೊಡ್ಡಿಯ ಬೇಟವೇ"[1] "ಕಡೆಬೀಡ ಕೋಟೆಯ ಗುಡಿಯ ಬೊಡ್ಡಿಯರ"[2] "ಇಬ್ಬರಿಗೆ ಘಡ ಹುಬ್ಬನಿಕ್ಕುವಳೊಬ್ಬಳೇ ಜಯಲಕ್ಷ್ಮಿ ಬೊಡ್ಡಿಯ ಕೊಬ್ಬ ನಿಲಿಸುವೆ"[3] ಎಂಬ ಮಾತುಗಳು ದ್ರೋಣಾರ್ಜುನಕರ್ಣರ ಬಾಯಿಂದ ನಿರೀಕ್ಷಿಸುವಂಥವೇ ಎಂಬ ಭಾವನೆಯುಂಟಾಗದಿರದು. 'ಭಂಡರು' ಎನ್ನುವ ಪದಕ್ಕೆ ಅರ್ಥವೆ ಇಲ್ಲವೇನೋ ಎಂಬಂತೆ ಕವಿ ಆಗಾಗ್ಗೆ ಅದನ್ನು ಬಳಸುತ್ತಾನೆ. ಮಗನನ್ನು ತಂದೆ "ನಿನ್ನೊಂದ್ಸಾರ್ಕ್ ಬಿಡ್ತೀನಿ" ಎನ್ನುತ್ತಾನೆ, ಕೋಪದ ಭರದಲ್ಲಿ. ಇಲ್ಲಿ 'ಕೊಲ್' ಎನ್ನುವ ಮಾತಿನ ಅರ್ಥವೇನು? ಭಾವಾವೇಗವನ್ನು ಪ್ರದರ್ಶಿಸುವ ಪದವಷ್ಟೆ ಅದು. "ನುಡಿಯ ಭಂಡರು ಕೆಲರು, ಕೆಲರು ಸಿಂಧದ ಗುಡಿಯ ಭಂಡರು....ವಿಪತ್ತಿನೊಳೊಡೆಯನಿರೆ ಕೈದು

---

1 ವಿ ಅ ೨೯ ;   2 ಅ ೭.೧೬ ;   3 ಕ ೨೩-೨೬

ಗಳ ಹೊರೆತಲೆಯೊಡನೆ ಬಿಟ್ಟೆಯ ಭಂಡರಾವ್"[1] ಎಂಬ ಮಾತುಗಳಲ್ಲಿ ಕೇವಲ ಸಾಮಾನ್ಯಾರ್ಥವಿದೆ. "ಗಂಡರೋ ನೀವ್ ಭಂಡರೋ" ಎಂದು ದ್ರೌಪದಿ ಭೀಮನನ್ನು ತರಾಟೆಗೆ ತೆಗೆದುಕೊಳ್ಳುವಲ್ಲಿ ಜೋರಿನ ಅರ್ಥವೇ ಇದೆ. ಭೀಮನ ಬಿರುಬನ್ನಾನಲಾರದೆ ಹಿಂದು ಹಿಂದಕ್ಕೆ ಸರಿಯುತ್ತಿದ್ದ ಸೈನಿಕರನ್ನು ಕುರಿತು "ಏತಕೀ ಸೂಳೆಯರು ಕ್ಷತ್ರಿಯ ಜಾತಿಯಲಿ ಜನಿಸಿದರು"[2] ಎಂದು ವಂದಿಜನ ಮೂದಲಿಸುತ್ತಾರೆ. ಈ ಬಯ್ಗುಳಗಳು ಯಾವ ಕಾಲದಲ್ಲಿಯೂ ಇದ್ದಂಥವೇ. ಸ್ವಾಮಿದ್ರೋಹಿಗಳ ಬಗೆಗೆ ಬಳಸಿರುವ ಈ ಪದ ಮೊದುವಾಯಿತೆಂದೇ ಹೇಳಬೇಕು. ಅಭಿಮನ್ಯುವಿನ ಪರಾಕ್ರಮವಹ್ನಿಯ ಮುಂದೆ ನಿಲ್ಲಲಾರದೆ ದ್ರೋಣ ಕೃಪಾದಿವೀರರು ಹಿಮ್ಮೆಟ್ಟಿದಾಗ ದುರ್ಯೋಧನ "ಭಂಡರೆಂಬೆವೆ ಜಗದ ಗುರುಗಳು, ಗಂಡುಗಲಿಗಳು, ವೈರಿಭಟರಿಂಗೆ ಹೆಂಡಿರಾಗಲು ಹೋಗಿರ್ಪೈ"[3] ಎಂದು ಬೊಬ್ಬಿರಿಯುತ್ತಾನೆ. ಕೌರವ ಸೈನ್ಯವನ್ನು ನೋಡಿ, ಹೆದರಿ, ರಥದಿಂದ ದುಮುಕಿ ಓಡಿ ಹೋಗುತ್ತಿದ್ದ ಉತ್ತರ ಕುಮಾರನನ್ನು ಪಾರ್ಥ ಅಟ್ಟಿಸಿಕೊಂಡು ಹೋಗಿ ಹಿಡಿದು "ಹುಟ್ಟಿದೆಯೊ ಹಾದರಕೆ ಕ್ಷತ್ರಿಯ ಬೀಜವ್ಹೋ ನೀನು"[4] ಎಂದು ಭಂಗಿಸುವಾಗ ಆ ಮಾತು ಅವನ ಯೋಗ್ಯತೆಗೆ ತುಸು ಅತಿಯಾಯಿತೇನೋ ಎನಿಸುತ್ತದೆ. ಮೇಲಾಗಿ ಉತ್ತರ ತನ್ನ ಆಶ್ರಯದಾತನ ಮಗನೆಂಬುದನ್ನವನು ಮರೆಯಬಾರದಷ್ಟೆ. "ಹಾದರ" ಎನ್ನುವ ಮಾತು ಬೇರೆಡೆಯಲ್ಲಿಯೂ ಬರುತ್ತದೆ. ವನವಾಸದ ಪ್ರಾರಂಭದಲ್ಲಿ ತನ್ನನ್ನು ನೋಡಲು ಬಂದ ವೇದವ್ಯಾಸನೊಡನೆ ಧರ್ಮರಾಯ "ಸತ್ಯದ ನುಡಿಗೆ ಹಾದರವಿಲ್ಲದಂತಿರೆ ಕರುಣಿಸುವುದು"[5] ಎಂದು ವಿನಂತಿಸಿಕೊಳ್ಳುತ್ತಾನೆ. ಇಲ್ಲಿ ಆ ಪದ ಹೀನತ್ವವನ್ನು ಕಳೆದುಕೊಂಡು ವಿಶಿಷ್ಟ ರೂಪಕಶಕ್ತಿಯನ್ನು ಪಡೆಯುತ್ತದೆ. ರಾಜಸೂಯಯಾಗದಲ್ಲಿ ಕೃಷ್ಣನಿಗೆ ಅಗ್ರಪೂಜೆ ಸಲ್ಲಕೂಡದೆಂದು ಶಿಶುಪಾಲ ಅಸಭ್ಯರೀತಿಯಲ್ಲಿ ವರ್ತಿಸುತ್ತಾನಷ್ಟೆ. ಆಗ ಭೀಷ್ಮ ಅವನ ನಿಂದೆಯನ್ನಲ್ಲಗಳೆದು ಕೃಷ್ಣನ ಯೋಗ್ಯತೆಯನ್ನು ಪ್ರಶಂಸಿಸುತ್ತಾನೆ. ಆ ಪ್ರಶಂಸೆ ಹಿಡಿಸದ ನೃಪರು "ಗಂಗಾಸುತನ ಹೊಯ್ ಕಟುವಾಯ ಕೊಯ್" ಎಂದು ಬೊಬ್ಬಿರಿಯುತ್ತಾರೆ. ಆಗ ಭೀಷ್ಮ "ಇರಿದು ನೀವ್ ಕೊಲಲಾರದಿದ್ದರೆ, ನೆರೆ ಘಟಾಗ್ನಿಯೊಳುರುಹದಿದ್ದರೆ ಕೆರಹು ನಿಮ್ಮಯ ಬಾಯಲಿ"[6] ಎಂದು ಕೆರಳುತ್ತಾನೆ. ಅವನೆಂದೂ ಮರೆತು ಸಹ ಕಠಿನವಾಗಿ ಮಾತಾಡಿದ್ದಿಲ್ಲ. ಕೃಷ್ಣನಿಂದೆ ಅವನನ್ನಂತು ಕೆರಳಿಸಿತೆಂದು ತೋರುತ್ತದೆ.

ರಣರಂಗದಲ್ಲಿ ಪಕ್ಷ ಪ್ರತಿಪಕ್ಷಗಳ ನಾಯಕರ ಮತ್ತು ಯೋಧರ ನಡುವೆ ಪರಸ್ಪರ ಮೂದಲಿಕೆಯ ಮಾತುಗಳು ಅನೈಚ್ಛಿಕವಾಗಿಯೆಂಬಂತೆ ಲೀಲಾಜಾಲವಾಗಿ ಬಿರುಸಾಗಿ ಮೊರೆಯುತ್ತವೆ. ನಾಯಿ ಕುನ್ನಿ ಖೂಳ ನಪುಂಸಕ ಷಂಡ ಮೂರ್ಖ ಮಿಂಡ ಮೊದಲಾದ ಪದಗಳು ಅಡೆತಡೆಯಿಲ್ಲದೆ, ಲಂಗು ಲಗಾಮಿಲ್ಲದೆ ಎರಚಾಡುತ್ತವೆ. ಕರ್ಣನನ್ನು ಕುರಿತ ಶಲ್ಯನ ಮೂದಲಿಕೆ ಮರ್ಯಾದೆಯ ಮೇರೆಯನ್ನು ಮೀರುತ್ತದೆ. "ನಿನ್ನಯ ನಾಲಗೆಯ ಹೆಡತಲೆಯಲುಗಿವರ್ಜುನನನೀಗಳೆ ತೋರಿಸುವೆ"[7] "ಮರುಳುತನ ಗುಣಹೀನನಲಿ ಗುಣವರ

---

[1] ಕ ೧೩ ೫; [2] ಕ ೧೫-೩೭; [3] ದ್ರೋ ೬ ೨೩; [4] ವಿ ೬-೧೭; [5] ಅ ೪-೧೨; [6] ಸ ೧೦ ೫೨; [7] ಕ ೯ ೩

ಸಲೇಕೆ"[1] ಈ ಬಯ್ಗುಳಗಳು, ಈ ಮೂದಲಿಕೆಗಳು ಆಯಾಯ ಸನ್ನಿವೇಶಗಳಲ್ಲಿ, ಆಯಾಯ ಪಾತ್ರಗಳ ಬಾಯಿಂದ ಬಂದಿರುವುದು ಅನುಚಿತವೆಂದು ತೋರುವುದಿಲ್ಲ. ಆದರೂ ಅವು ಆಡುವ ವ್ಯಕ್ತಿಗಳ ತಾತ್ಕಾಲಿಕ ಮನೋಭಾವವನ್ನು ಪ್ರತಿಬಿಂಬಿಸುತ್ತವೆ, ಎಂಥ ಹಿರಿಯ ವ್ಯಕ್ತಿಯಾದರೂ ಅವನ ಸುಪ್ತಪ್ರಜ್ಞೆಯಲ್ಲಿ ಹುದುಗಿರುವ ಎಳತನದ ಅಪಕ್ವಭಾವಗಳು ಎಂದಾದರೊಮ್ಮೆ ಹೊರಗಿಣುಕುತ್ತವೆಂಬುದಕ್ಕೆ ಇಲ್ಲಿ ನಿದರ್ಶನಗಳು ವಿಪುಲವಾಗಿ ದೊರೆಯುತ್ತವೆ. ಇಂಥ ಮಾತುಗಳಿಂದಾಗಿ ಒಂದು ಕಾಲದ ಸಮಾಜದ ಯಥಾವತ್ತಾದ ಚಿತ್ರ ಈಗಿನವರಿಗೆ, ಅಂತೆಯೇ ಮುಂದಿನವರಿಗೆ ದೊರಕುವಂತಾಗುತ್ತದೆ.

ಕುಮಾರವ್ಯಾಸನ ಹೃದಯದ ಮೂಲೆ ಮೊಡಕುಗಳನ್ನು ಎಷ್ಟು ಜೋಕೆಯಿಂದರಸಿದರೂ ಕೃತ್ರಿಮತೆಯ ದೋಷ ಎಳ್ಳಷ್ಟೂ ಗೋಚರಿಸುವುದಿಲ್ಲ. ಅವನದು ತೆರೆದಿಟ್ಟ ಹೃದಯ. ಜಾತಿಯ ವಿಷಯವಾಗಲಿ ಮತದ ವಿಚಾರವಾಗಲಿ, ರಾಜರ ಸಂಗತಿಯಾಗಲಿ ಪರಿವಾರದವರ ಪ್ರಸಂಗವಾಗಲಿ, ಗಂಡಸರ ಸಮಾಚಾರವಾಗಲಿ ಹೆಂಗಸರ ವೃತ್ತಾಂತವಾಗಲಿ ಎಲ್ಲವನ್ನು ನಿರ್ಭೀತಿಯಿಂದ ಹೊರಹಾಕುವ ನಿರ್ದಾಕ್ಷಿಣ್ಯ ಪ್ರವೃತ್ತಿ ಅವನದು. ಪ್ರಿಯವಾಗಲಿ ಅಪ್ರಿಯವಾಗಲಿ ಸತ್ಯವನ್ನೇ ನುಡಿಯಬೇಕೆನ್ನುವ ಛಲ ಅವನದು. ಈ ಸತ್ಯನಿಷ್ಠೆಗೆ ಒರಟುತನವೆಂದು ನಾಮಕರಣಮಾಡುವ ಜನ ಯಾವ ಕಾಲದಲ್ಲಿಯೂ ಇರುವಂಥವರೆ. ಆದರೆ ಸೂಕ್ತಸಮಯದಲ್ಲಿ ನವುರಾಗಿ, ಮೆದುವಾಗಿ, ಹೊಳಪಾಗಿ ಮಾತಾಡುವ ಸಾಮರ್ಥ್ಯವೂ ಅವನಲ್ಲಿದೆ. ಸಭ್ಯತೆಯಲ್ಲಿ ಅವನು ಯಾರಿಗೂ ಕಡಮೆಯಲ್ಲ ಎನ್ನುವುದಕ್ಕೆ ಭೀಷ್ಮ ಕೃಷ್ಣ ಧರ್ಮರಾಯ—ಅವರೇ ಏಕೆ—ಅಪರ ವಯಸ್ಸಿನ ಕರ್ಣನ ಮಾತುಕತೆಗಳೇ ಸಾಕ್ಷಿ. ಕವಿಯಂತೆ ಅವನ ಪಾತ್ರಗಳೂ ಮನಬಿಚ್ಚಿ ಮಾತಾಡುತ್ತವೆಂಬ ಸಂಗತಿ ಮಾತ್ರ ಸರ್ವಸತ್ಯ.

1 ಕ ೨೫-೪೨

೬. ಉಪಸಂಹಾರ

ಪೂರ್ವೋಕ್ತ ಧರ್ಮ ಹಾಗೂ ನೀತಿ ಸೂತ್ರಗಳ ಹರಹನ್ನು, ನಾನಾತ್ವವನ್ನು ಗಮನಿಸಿದಾಗ ಜೀವನ ಅದೆಷ್ಟು ಸಂಕೀರ್ಣವಾದದ್ದು, ಜಟಿಲವಾದದ್ದು, ಅಂತೆಯೇ ಕ್ಲೇಶದಾಯಕವಾದದ್ದು ಎನಿಸಬಹುದು. ಇವನ್ನು ಕಲಿಯುವುದಾಗಲೀ, ಅಭ್ಯಾಸಮಾಡುವುದಾಗಲೀ ಸುಲಭಸಾಧ್ಯವಾದ ಸಂಗತಿಯಲ್ಲ; ಇವನ್ನು ಕಲಿಯಲು ತೊಡಗಿದ್ದಾದರೆ ಜೀವನ ಯಾಪನೆಯಾಗುತ್ತದೆಯೇ? ಇವನ್ನು ಅಭ್ಯಾಸಮಾಡಿದ್ದಾದರೆ ಐಹಿಕವನ್ನು ಮರೆಯುವ ಪ್ರಮೇಯ ಒದಗಬಹುದಲ್ಲವೆ? ಇವುಗಳಲ್ಲಿಯೇ ಮಗ್ನಚಿತ್ತವುಳ್ಳವರಾದರೆ ಇತಿಹಾಸ ಭೂಗೋಳ ವಿಜ್ಞಾನಾದಿ ಲೌಕಿಕ ಪ್ರಯೋಜನವುಳ್ಳ ಜೀವನಕ್ಕಾಧಾರವಾಗಿರುವ ವಿಷಯಗಳ ವ್ಯಾಸಂಗಕ್ಕೆ ಅಡಚಣೆಯಾಗುತ್ತದಲ್ಲವೆ? ಎಂಬೀ ಮೊದಲಾದ ಸಂದೇಹ ಪ್ರಶ್ನೆಗಳು ಸಹಜವಾಗಿ ಮೂಡಬಹುದು ನಿಜ. ಜಠರ ಪೋಷಣೆಯೊಂದೇ ಮಾನವ ಜೀವಿತದ ಪರಮಗಂತವ್ಯವಲ್ಲ. ಅವೇ ಆಗಿದ್ದ ಪಕ್ಷದಲ್ಲಿ ಕಲೆ, ವಿಜ್ಞಾನ ಸಾಹಿತ್ಯಾದಿ ಪ್ರಕಾರಗಳು ಬೆಳೆಯುತ್ತಿರಲಿಲ್ಲ. ತಮ್ಮ ಸುಖಭೋಗಗಳನ್ನು ತೊರೆದು ಶರೀರ ತ್ಯಾಗಕ್ಕೂ ಸಿದ್ಧರಾಗಿ ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿಯೇ ತಮ್ಮ ಬಾಳನ್ನು ಸವೆಸಬೇಕಾಗಿರಲಿಲ್ಲ; ಗಾಂಧೀಜಿಯಂಥವರು, ಜಯಪ್ರಕಾಶ ನಾರಾಯಣರಂಥವರು ಸ್ವಾತಂತ್ರ್ಯದ ಹೆಸರಿನಲ್ಲಿ ಜೈಲಿನಲ್ಲಿ ಸವೆಯಬೇಕಾಗಿರಲಿಲ್ಲ. ಭೌತಿಕ ಭೋಗವನ್ನು ಮೀರಿದ ಅಧ್ಯಾತ್ಮಸುಖ ಮಾನವನ ಮಹಾಧ್ಯೇಯ. ತನಗರಿವಿಲ್ಲದಂತೆಯೇ ಅವನು ಅದರ ಸಾಧನೆಯಲ್ಲಿ ನಿರತನಾಗಿದ್ದಾನೆ. ಅದು ಪ್ರಕೃತಿ ನಿಯಮ. ವಿಕಾಸವಾದದ ಗುಟ್ಟೂ ಅದೇಯೇ. ನೀತಿ ಅಥವಾ ಧರ್ಮ ಎಂಬುದು ಸಹ ಮಾನವನ ಸಹಜಗುಣ. ಅದೊಂದು ಸುಪ್ತಶಕ್ತಿ. ತಾಯಿಯ ಹೊಟ್ಟೆಯಲ್ಲಿದ್ದಾಗಲೇ ಆ ಗುಣಗಳೆಲ್ಲ ಅವನ ರಕ್ತದಲ್ಲಿ ಸೇರಿಕೊಳ್ಳುತ್ತವೆ. ಅವನು ಸಮಾಜವೆಂಬ ಶರೀರದ ಒಂದು ಅಂಗವಾದದ್ದರಿಂದ, ಅವು ಅಪ್ರಯತ್ನಪೂರ್ವಕವಾಗಿ ಸ್ವಾಭಾವಿಕವಾಗಿ ಅವನ ಜೀವನದ ಒಂದು ಭಾಗವಾಗಿ ವಿಕಾಸಗೊಳ್ಳುತ್ತವೆ. ಇರುವೆಗೆ ಒಗ್ಗಟ್ಟಿನ ಮಹಿಮೆ ಹೇಳಿಕೊಟ್ಟವರಾರು? ಪಕ್ಷಿಗೆ ಹಾರುವುದನ್ನು ಕಲಿಸಿದವರಾರು? ಈ ಗುಣಗಳಲ್ಲಿ ಕೆಲವು ಸಹಜವಾಗಿ ಪ್ರಕಟವಾಗುವಂಥವು, ಕೆಲವು ಮಾಡಿ ಕಲಿಯುವಂಥವು, ಕೆಲವು ನೋಡಿ ಕೇಳಿ ಕಲಿಯುವಂಥವು. ಮಾನವನ ಶ್ರೇಯಸ್ಸಿಗೆ, ಸಮಾಜದ ಭದ್ರತೆಗೆ, ಲೋಕದ ಶಾಂತಿಗೆ ಈ ಎಲ್ಲ ಗುಣಗಳ ಅನುಷ್ಠಾನ ಅತ್ಯವಶ್ಯ. ಅವು ನಮ್ಮಲ್ಲಿಯೇ ಇವೆ. ಇಂಥ ಕಾವ್ಯವನ್ನೋದಿದಾಗ, ಸತ್ಪುರುಷರನ್ನು ಕಂಡಾಗ ಮಾನವ ಹೃದಯದಲ್ಲಿ ಸುಪ್ತಸ್ಥಿತಿಯಲ್ಲಿರುವ ಸದ್ಗುಣಗಳು ತಾವಾಗಿಯೇ, ಜಾಗೃತಗೊಳ್ಳುತ್ತವೆ. ಅವು ಕ್ರಮೇಣ ಅವನ ಎಲ್ಲ ಕರ್ಮ ವಿಧಾನ

ಗಳನ್ನೂ ರೂಪಿಸುತ್ತವೆ, ಹಸನುಗೊಳಿಸುತ್ತವೆ. ಹೀಗೆ ಜೀವನವನ್ನು ರೂಪಿಸಿಕೊಳ್ಳುವ ವ್ಯಕ್ತಿ ಶೀಲವಂತ ಸಜ್ಜನ ಎಂಬ ಬಿರುದಿಗೆ ಪಾತ್ರನಾಗುತ್ತಾನೆ. ಈ ನೀತಿ ಸೂತ್ರಗಳ ಅನುಷ್ಠಾನದಿಂದ ಶಿಸ್ತು ಸಂಯಮಗಳು ಪ್ರಾಪ್ತವಾಗುತ್ತವೆ. ವ್ಯಕ್ತಿಯ, ಸಮಾಜದ ಹಾಗೂ ನಾಡಿನ ಏಳ್ಗೆ ಶಿಸ್ತು ಸಂಯಮಗಳಿಂದ ಮಾತ್ರ ಸಾಧ್ಯ. ಅವುಗಳ ಬೋಧೆಯೇ ಮಹಾಕಾವ್ಯಗಳ ಗುರಿ, ಅವೇ ಅವುಗಳ ಶಾಶ್ವತ ಸಂದೇಶ ಹಾಗೂ ಮೌಲ್ಯ. ಈ ಅರ್ಥದಲ್ಲಿ ಗದುಗಿನ ಭಾರತ "ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು" ; "ಈ ಕೃತಿಯನವಧರಿಸಿ ಕೇಳ್ದಾ ನರರ ದುರಿತಾಂಕುರದ ಬೇರಿನ ಬೇಗೆ" ಎಂಬ ಮಾತು ಸತ್ಯ.

ಭಾರತದಲ್ಲಿ ಚಿತ್ರಿತವಾಗಿರುವ ಸಮಾಜ ಅರಮನೆಯ ಸುತ್ತಮುತ್ತಿನದು ; ಮುಖ್ಯವಾಗಿ ಬ್ರಾಹ್ಮಣಕ್ಷತ್ರಿಯ ವರ್ಗಗಳಿಗೆ ಸಂಬಂಧಿಸಿದ್ದು, ಎನ್ನುವ ವಿಷಯ ಗಮನೀಯವಾದದ್ದು. ಅದು ಕನ್ನಡಿಸುವ ಸಂಸ್ಕೃತಿ ಬಹುತೇಕವಾಗಿ ಸಮಾಜದ ಒಂದು ಭಾಗಕ್ಕೆ ಸೀಮಿತವಾದದ್ದೆಂದು ಹೇಳುವಲ್ಲಿ ದೋಷವಿರಲಾರದು. ಸಮಾಜದ ತಳಹದಿಯಂತಿರುವ ಜನಸಾಮಾನ್ಯದ ಜೀವನ ನಿರೂಪಣೆಯಾಗಲಿ ಸಾಂಸ್ಕೃತಿಕ ವಿವರಣೆಯಾಗಲಿ ಗ್ರಾಮೀಣ ಜೀವನದ ಮೌಲ್ಯಗಳಾಗಲಿ ಇಲ್ಲಿ ದೊರೆಯುವಂತಿಲ್ಲ. ಆದರೂ ಕಾವ್ಯ ಮಾತ್ರ ಶ್ರೀಸಾಮಾನ್ಯನ ಹೃದಯಕ್ಕೆ ತೀರ ಹತ್ತಿರವಿರುವ, ಅವನ ಹೃದಯವನ್ನು ಸೂರೆಗೊಂಡಿರುವ ಸಂಜೀವಿನೀಶಕ್ತಿಯೆಂದರೆ ತಪ್ಪಾಗಲಾರದು.